ಕಲಬುರ್ಗಿ ಭಾಗದ

ರಾಷ್ಟ್ರಕೂಟರ ದೇವಾಲಯಗಳ ಅಧ್ಯಯನ

(ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ 2015/16ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ ಯೋಜನೆಯಡಿಯಲ್ಲಿ ಸಂಶೋಧನಾ ಫೆಲೋಶಿಪ್‌ಗಾಗಿ ಸಲ್ಲಿಸುತ್ತಿರುವ ಸಂಶೋಧನಾ ಪ್ರಬಂಧ)



ಸಂಶೋಧಕರು

ಬಸವರಾಜ ಮೇತ್ರಿ

ಮಾರ್ಗದರ್ಶಕರು

ಪ್ರೊ. ಎಸ್.ಸಿ.ಪಾಟೀಲ
ವಿಶೇಷಾಧಿಕಾರಿಗಳು
ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ
ಪ್ರಾದೇಶಿಕ ಕಛೇರಿ, ಬೆಂಗಳೂರು

ಕರ್ನಾಟಕ ಶಿಲ್ಪಕಲಾ ಅಕಾಡೆಮಿ
ಮೇಲ್ಮನೆ ಚಾಲುಕ್ಯ ವಿಭಾಗ
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು

ಕಲಬುರ್ಗಿ ಭಾಗದ ರಾಷ್ಟ್ರಕೂಟರ ದೇವಾಲಯಗಳ ಅಧ್ಯಯನ

(ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ 2015-16ನೇ ಸಾಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕ ಯೋಜನೆಯಡಿಯಲ್ಲಿ ಸಂಶೋಧನಾ ಫೆಲೋಷಿಪ್‌ಗಾಗಿ ಸಲ್ಲಿಸುತ್ತಿರುವ ಸಂಶೋಧನಾ ಪ್ರಬಂಧ)

ಸಂಶೋಧಕರು

ಬಸವರಾಜ ಮೇತ್ರಿ

ಮಾರ್ಗದರ್ಶಕರು

ಪ್ರೊ. ಎಸ್.ಸಿ.ಪಾಟೀಲ

ವಿಶೇಷಾಧಿಕಾರಿಗಳು

ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ

ಪ್ರಾದೇಶಿಕ ಕಛೇರಿ

ಬೆಂಗಳೂರು

ಕರ್ನಾಟಕ ಶಿಲ್ಪಕಲಾ ಅಕಾಡೆಮಿ

ಮೇಲ್ಮನೆ ಚಾಲುಕ್ಯ ವಿಭಾಗ

ಕನ್ನಡ ಭವನ, ಜೆ.ಸಿ.ರಸ್ತೆ ಬೆಂಗಳೂರು

ಪ್ರಮಾಣ ಪತ್ರ

ಬಸವರಾಜ ಮೇತ್ರಿ ಎಂಬ ನಾನು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಿಶೇಷ ಘಟಕ ಯೋಜನೆಯ ಫೆಲೋಷಿಪ್ ಅಂಗವಾಗಿ ಸಂಶೋಧನಾ ಪ್ರಬಂಧವನ್ನು ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯದ ವಿಶೇಷಾಧಿಕಾರಿಯವರಾದ ಪ್ರೊ. ಎಸ್.ಸಿ.ಪಾಟೀಲರವರ ಮಾರ್ಗದರ್ಶನದಲ್ಲಿ "**ಕಲಬುರ್ಗಿ ಭಾಗದ ರಾಷ್ಟ್ರಕೂಟರ ದೇವಾಲಯಗಳ ಅಧ್ಯಯನ**" ಎಂಬ ಪ್ರಬಂಧವನ್ನು ಸಿದ್ಧಪಡಿಸಿದ್ದೇನೆ.

ಇದು ನನ್ನ ಮೂಲ ಸಂಶೋಧನಾ ಕೃತಿಯಾಗಿದ್ದು, ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಇನ್ನಿತರ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣಿಕರಿಸುತ್ತೇನೆ.

ವಂದನೆಗಳೊಂದಿಗೆ

ಸಂಶೋಧನಾ ವಿದ್ಯಾರ್ಥಿ

(ಬಸವರಾಜ ಮೇತ್ರಿ)

ಸ್ಥಳ : ಬೆಂಗಳೂರು

ದಿನಾಂಕ : 07.06.2017

ದೃಢೀಕರಣ ಪತ್ರ

ಬಸವರಾಜ ಮೇತ್ರಿ ಎಂಬ ವಿದ್ಯಾರ್ಥಿಯು ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ವಿಶೇಷ ಘಟಕ ಯೋಜನೆಯ, ಫೆಲೋಷಿಪ್ ಅಂಗವಾಗಿ ಸಂಶೋಧನಾ ಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ "**ಕಲಬುರ್ಗಿ ಭಾಗದ ರಾಷ್ಟ್ರಕೂಟರ ದೇವಾಲಯಗಳ ಅಧ್ಯಯನ**" ಎಂಬ ಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಇದು ಅವರ ಮೂಲ ಸಂಶೋಧನಾ ಕೃತಿಯಾಗಿದ್ದು, ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ, ಇನ್ನಿತರ ಯಾವುದೇ ಉದ್ದೇಶಗಳಿಗಾಗಿ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

13/6/17

(ಪ್ರೊ. ಎಸ್.ಸಿ.ಪಾಟೀಲ)
ವಿಶೇಷಾಧಿಕಾರಿಗಳು
ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ
ಪ್ರಾದೇಶಿಕ ಕಛೇರಿ, ಬೆಂಗಳೂರು

ಪರಿವಿಡಿ

ಅಧ್ಯಾಯ – 1

ಅಧ್ಯಯನದ ಅಗತ್ಯ

ಅಧ್ಯಾಯ – 1

ಅಧ್ಯಾಯನದ ಅಗತ್ಯ

ಒಂದು ಪ್ರದೇಶದ ಒಂದು ಕಾಲದ ಸಂಸ್ಕೃತಿಯನ್ನು ಅಭ್ಯಸಿಸುವ ಸಂದರ್ಭದಲ್ಲಿ ಅಲ್ಲಿ ಉಳಿದ ಕಲಾಪ್ರಕಾರಗಳಿಗೆ ಚಿತ್ರಕಲೆಯನ್ನು ಅವಶ್ಯಕವಾಗಿ ಪರಿಗಣಿಸಬೇಕಾಗುತ್ತದೆ. ಸಂಕೃತಿಯ ಒಂದು ಭಾಗವೇ ಆಗಿರುವ ಚಿತ್ರಕಲೆ ಮತ್ತು ಶಿಲ್ಪಕಲೆಯು ಇತರ ಆಕರಗಳಿಂದ ಬೇರೆಯಾಗಿ ನಮ್ಮ ಸಂಸ್ಕೃತಿಕ ಇತಿಹಾಸವನ್ನು ಪುನರ್ ರಚಿಸಲು ಈ ಅಧ್ಯಯನದ ಅಗತ್ಯ ಅವಶ್ಯಕವಾಗಿದೆ. ಕರ್ನಾಟಕದ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಯ ಬೆಳವಣಿಗೆಗೆ ರಾಷ್ಟ್ರಕೂಟರ ಮನೆತನದ ಕೊಡುಗೆಯು ಗಮನಾರ್ಹವಾಗಿದೆ. ಹಾಗೆಯೇ ಕಾಲಮಾನದ ಪ್ರಭಾವದಿಂದ ವಿವಿಧ ರೀತಿಯ ಆಪತ್ತುಗಳಿಂದ ವಿನಾಶ ಹೊಂದುತ್ತಿರುವ ದೇವಾಲಯಗಳು ಮತ್ತು ಶಿಲ್ಪಗಳು ರಾಷ್ಟ್ರಕೂಟರ ವಾಸ್ತುಶಿಲ್ಪ ಕಲೆಯನ್ನು ಒಂದು ವ್ಯವಸ್ಥಿತ ಅಧ್ಯಯನಕ್ಕೆ ಒಳಪಡಿಸಿಕೊಂಡು ಅವುಗಳ ಮಹತ್ವವನ್ನು ಕಲಾಕ್ಷೇತ್ರಕ್ಕೆ ಮನವರಿಕೆ ಮಾಡಿಕೊಡುವ ಉದ್ದೇಶವನ್ನೂ ಸಹ ಹೊಂದಲಾಗಿದೆ.

ರಾಷ್ಟ್ರಕೂಟರ ಕಾಲದ ಶಿಲ್ಪಕಲೆಯ ವಸ್ತು ವಿಷಯ ಶೈಲಿಯು ಕಾಲದಿಂದ ಕಾಲಕ್ಕೆ ಬದಲಾದ ರೀತಿ ಅವುಗಳ ಮೇಲಾದ ಪ್ರಭಾವ ಪ್ರೇರಣೆ ಮುಂತಾದ ಮಹತ್ವದ ರಚನೆಗಳು ಮತ್ತು ಶಿಲ್ಪರಚನೆಯ ಸಂದರ್ಭದಲ್ಲಿ ಅನುಸರಿಸಬಹುದಾದ ದೃಶ್ಯಾತ್ಮಕ ನೆಲೆಯ ಅಧ್ಯಯನ

ಸಮಗ್ರವಾಗಿ ಇದುವರೆಗೆ ಆಗದೇ ಇರುವುದನ್ನು ಗಮನಿಸಿ "**ಕಲಬುರ್ಗಿ ಭಾಗದ ರಾಷ್ಟ್ರಕೂಟರ ದೇವಾಲಯಗಳ ಅಧ್ಯಯನ**"ವನ್ನು ಕುರಿತು ವಿಶೇಷವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಕರ್ನಾಟಕದಲ್ಲಿ ಬೆಳೆದು ಬಂದ ರಾಷ್ಟ್ರಕೂಟರ ಶಿಲ್ಪಕಲೆಯನ್ನು ಒಂದು ವ್ಯಾಪ್ತಿಗೆ ಸೀಮಿತಗೊಳಿಸಿಕೊಂಡು ವಿಶೇಷ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ. ರಾಷ್ಟ್ರಕೂಟರ ಶಿಲ್ಪಕಲೆಯ ಸಂಸ್ಕೃತಿಯನ್ನು ಅಧ್ಯಯನ ಮಾಡುವಲ್ಲಿ ಬಹುಮುಖ್ಯ ಅಂಗವಾಗಿರುವ ಶಿಲ್ಪಕಲೆ ಮತ್ತು ವಾಸ್ತುಶಿಲ್ಪಕಲೆಗಳ ಪಾತ್ರ ತುಂಬ ಮುಖ್ಯವಾದುದು. ಯಾವುದೇ ಒಂದು ಕಲೆಯ ಪರಂಪರೆಯು ಬೆಳವಣಿಗೆಯ ಹಿಂದೆ ಆ ಸಂಸ್ಕೃತಿಯ ತಾಯಿ ಬೇರುಗಳಿರುತ್ತವೆ.

ಈ ಹಿನ್ನೆಲೆಯಲ್ಲಿ ನಮ್ಮ ಕರ್ನಾಟಕ ರಾಜ್ಯದ ಮತ್ತು ಗುಲಬರ್ಗಾ ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯ ಇತಿಹಾಸವನ್ನು ಅರಿಯುವಲ್ಲಿ ಚಿತ್ರ, ಶಿಲ್ಪ, ಸಂಗೀತ, ನೃತ್ಯ, ನಾಟಕ ಮುಂತಾದ ಕ್ಷೇತ್ರಗಳ ಕೊಡುಗೆಗಳು ಅನನ್ಯವಾದವು. ಹಾಗೆಯೇ ಈ ಶಿಲ್ಪಕಲೆಯನ್ನು ಮತ್ತು ವಾಸ್ತುಶಿಲ್ಪಕಲೆಯ ಮಾರ್ಗವನ್ನು ನಿರ್ಮಿಸಲು ದುಡಿದ ಕಲಾವಿದರ ಸೇವೆ ಮುಖ್ಯವಾದುದಾಗಿರುತ್ತದೆ. ಭಾರತದ ಸಂಸ್ಕೃತಿಯ ಅಂಗವಾಗಿರುವ ಶಿಲ್ಪಕಲೆಯ ಅಧ್ಯಯನವನ್ನೂ ಸರಿಯಾದ ರೀತಿಯಲ್ಲಿ ನಡೆಸಬೇಕಾದ ಹೊಣೆಗಾರಿಕೆಯು ನಮ್ಮದಾಗಿದೆ. ಕನ್ನಡನಾಡು ಕಲೆಗಳ ತವರು ಎಂದು ಲೋಕಪ್ರಸಿದ್ಧಿಯನ್ನೂ ಪಡೆದುಕೊಂಡಿದೆ. ನಮ್ಮ ಕಲಾವಿದರು ನಾನಾ ಪ್ರಕಾರಗಳಲ್ಲಿ ಅತ್ಯುತ್ತಮ ಕೌಶಲ್ಯ ಮೆರೆದ ನಿದರ್ಶನಗಳು ಹೇರಳವಾಗಿವೆ. ಶಿಲ್ಪಕಲೆಯು ಒಂದು ಸೀಮೆಗೆ ಮತ್ತು ವರ್ಗದವರಿಗೆ ಸೀಮಿತವಲ್ಲ. ಅಪಾರ ಜನತೆಯ ಸ್ವತ್ತಾಗಿ ಮಾನವರನ್ನು ಉನ್ನತಮಟ್ಟಕ್ಕೇರಿಸುವಂತಹ ಚೈತನ್ಯವೇ ಕಲೆ. ಹೀಗೆ ಭಾರತೀಯ ಪರಂಪರೆ ಹಾಗೂ ಪಾಶ್ಚಾತ್ಯ ತಂತ್ರಗಳ ಅತ್ಯುತ್ತಮ ಸಮನ್ವಯವನ್ನು ಚಿತ್ರಕೃತಿಗಳಲ್ಲಿ ಸಾಧಿಸಿದ ಕಲಾವಿದರು ನಮ್ಮಲ್ಲಿ ಆಗಿ ಹೋಗಿದ್ದಾರೆ. ಪೌರಾಣಿಕ ಹಾಗೂ ಐತಿಹಾಸಿಕ ಕಥಾನಕ ಚಿತ್ರಗಳಲ್ಲಿ ಅನನ್ಯ ಕಲಾಸಿದ್ಧಿ ಪಡೆದ ಸಂಪ್ರದಾಯ ನಿಷ್ಠ ಕಲಾವಿದರಿದ್ದಾರೆ.

ಕಲಾವಿದ ಹೇಗೆಲ್ಲಾ ಜೀವಿಸಬಹುದು ಎಂಬುದನ್ನು ತೋರಿಸಿ ಸುಖದ ಬಾಳನ್ನು ಕಂಡ ಹಿರಿಯ ಕಲಾವಿದರಿದ್ದಾರೆ. ಹಾಗೆಯೇ ರಾಜಾಶ್ರಯದಲ್ಲಿ ದುಡಿದ ಅತ್ಯುತ್ತಮ ಕಲಾವಿದರಿದ್ದಾರೆ. ಕಲಾವಿದರ ಅಮೂಲ್ಯ ರಚನೆಗಳು ನಮ್ಮ ನಾಡಿಗೆ ಕೀರ್ತಿಯನ್ನು ಗಳಿಸಿಕೊಟ್ಟಿವೆ. ಒಂದು ಚಿತ್ರ ಇಲ್ಲವೇ ಶಿಲ್ಪಕೃತಿ ಸಾವಿರಾರು ವರ್ಷಗಳ ಇತಿಹಾಸವನ್ನು ನಮ್ಮ ಕಣ್ಮುಂದೆ ನಿಲ್ಲಿಸುವ ಶಕ್ತಿಯನ್ನು ಪಡೆದಿದೆ. ಶಿಲ್ಪಕಲಾ ಕ್ಷೇತ್ರದಲ್ಲಿ ಶಿಲ್ಪಿಯ ಸಾಧನೆಗಳು

ಶಾಶ್ವತವಾಗಿ ನಿಂತಿರುವುದು ಹೆಮ್ಮೆಯ ಸಂಗತಿಯಾಗಿದೆ. ತಮ್ಮ ವ್ಯಾಪ್ತಿಯಲ್ಲಿ ಅನೇಕ ರೀತಿಯ ಸಾಧನೆ ಮಾಡಿ ಕನ್ನಡ ನೆಲದ ಸುವಾಸನೆಯನ್ನು ದೇಶದೆಲ್ಲೆಡೆ ಪಸರಿಸಿದ್ದಾರೆ.

ಮಾನವನೂ ಆದಿಯಿಂದಲೂ ತನ್ನ ಸುತ್ತಮುತ್ತಲಿನ ಪ್ರಕೃತಿಯನ್ನು ನೋಡಿ ಉಂಟಾದ ಆನಂದವನ್ನು ವಿವಿಧ ಕಲೆಗಳಲ್ಲಿ ವ್ಯಕ್ತಪಡಿಸುತ್ತಿರುವನು. ನಾಟಕ, ಸಂಗೀತ, ಚಿತ್ರ, ಶಿಲ್ಪ ಮುಂತಾದ ಕಲೆಗಳೆಲ್ಲವೂ ಈ ಆನಂದದ ಪ್ರತಿಬಿಂಬಗಳು, ಭೂಮಿಯ ಮೇಲೆ ಜನನವಾಗಿ ಸುಮಾರು ಹತ್ತು ಇಪ್ಪತ್ತು ಲಕ್ಷ ವರ್ಷಗಳಾಗಿರಬಹುದೆಂದು ಮಾನವಶಾಸ್ತ್ರಜ್ಞರ ಮತ್ತು ಇದರಲ್ಲಿ ಮನುಷ್ಯನು ನಾಗರೀಕತೆಯ ಹಂತವನ್ನು ಏರಿದುದು. ಇಂದಿಗೆ ಸುಮಾರು ಐದಾರು ಸಾವಿರ ವರ್ಷಗಳಿಂದೀಚೆಗೆ, ಈ ಐದಾರು ಸಾವಿರ ವರ್ಷಗಳ ನಾಗರೀಕ ಇತಿಹಾಸದ ನಂತರದಲ್ಲಿಯೂ ಇನ್ನು 'ಕಲೆ' ಎಂದರೇನೆಂಬುದನ್ನು ಚರ್ಚಾಸ್ಪದವಾಗಿಯೇ ಉಳಿದಿದೆ. ಸ್ಥೂಲವಾಗಿ ನೋಡಿದಲ್ಲಿ ಕಲೆಯೂ ನಮ್ಮ ಭಾವಗಳ ಪ್ರಕೃತಿಯಾಗಿದ್ದು, ನಾವು ನಮ್ಮ ಯಾವ ಪ್ರಶ್ನೆಗಳನ್ನು ಬಿಡಿಸಿ ಯೋಚಿಸಿದರು ಅದರ ಬೇರು ನಮ್ಮ ಭಾವಗಳ ಮೇಲೆಯೇ ಪಸರಿಸುವುದು ಕಾಣುತ್ತದೆ. ನೈಸರ್ಗಿಕವಾದ ಪ್ರಾಣಿಗಳ ಸಹಜ ಸ್ವಭಾವಗಳು ನಮ್ಮಲ್ಲಿಯು ಬಲವಾಗಿ ಕೆಲಸ ಮಾಡುತ್ತವೆ. ಆದರೆ ನಾವು ಸಂಪಾದಿಸಿಕೊಂಡ ಮನಸ್ಸಿನಿಂದಾಗಿ ಮನಸ್ಸಿನ ಊಹೆ, ಭಾವ, ಸ್ಮರಣಾ, ವಿಚಾರ ಶಕ್ತಿಗಳಿಂದಾಗಿ ನಮ್ಮ ನಡುವಳಿಕೆಗೆ ಸಾವಿರಾರು ಬಣ್ಣಗಳು ಬರುತ್ತವೆ. ಅದೇ ಕಲೆಯಾಗಿ ಹೊರಹೊಮ್ಮುತ್ತಿದೆ. ಅದು ಮನುಷ್ಯನ ಸೌಂದರ್ಯಾನುಭವದ ಪ್ರತಿಬಿಂಬ ಈ ಆನಂದವನ್ನು ಕವಿ ಅಕ್ಷರಗಳಲ್ಲಿ ಸಂಗೀತಕಾರನು ಇಂಪಾದ ಸಂಗೀತದಲ್ಲಿ ಶಿಲ್ಪಿಯು ಉತ್ತಮವಾದ ಶಿಲ್ಪದಲ್ಲಿ ಚಿತ್ರಕಲಾವಿದರು ರಮ್ಯವಾದ ವರ್ಣಗಳು ಹಾಗೂ ರೇಖೆಗಳಲ್ಲಿ ಅಭಿವ್ಯಕ್ತಿಸುವನು. ಹೀಗೆ ಮಾಧ್ಯಮಗಳು ಬದಲಾದರೂ ಅದರ ಹಿಂದೆ ಇರವು ಮೂಲನೆಲೆ ಒಂದೆ.

ಎಲ್ಲಾ ಕಲೆಗಳ ಮೂಲ ಉದ್ದೇಶವು ಸಂವಹನವೇ. ನಮ್ಮ ಸುತ್ತಮುತ್ತಲು ನಡೆಯುವ ಬದಲಾವಣೆಗಳನ್ನು ನೋಡಿದಾಗ ಪ್ರತಿಯೊಬ್ಬರಲ್ಲಿಯೂ ಸಂವೇಧನೆಯುಂಟಾಗುತ್ತದೆ. ತನ್ನ ಅನಿಸಿಕೆಗಳಲ್ಲಿ ಹೇಗಾದರೂ ಅಭಿವ್ಯಕ್ತಿಸಬೇಕೆಂಬ ಆ ಉದ್ವೇಗದಿಂದ ಬಿಡುಗಡೆ ಹೊಂದಬೇಕು ಎನ್ನುವ ಆಕಾಂಕ್ಷೆ ಆ ಅನುಭವಗಳು ಪ್ರಜ್ಞೆಯ ವಸ್ತುವಾದಾಗ ಅದು ಮಹತ್ವದಾಗುತ್ತದೆ. ಅದರಿಂದ ಮನುಷ್ಯನ ಸಂವಹನ ಸಾಧ್ಯತೆಗಳಿಗಾಗಿ ಅನೇಕ ಪ್ರಕಾರಗಳನ್ನು ಕಲಿತುಕೊಂಡು ವಿಶೇಷವಾದ ಮಾಧ್ಯಮಗಳ ಮೂಲಕ ತನ್ನ ಅನುಭವಗಳನ್ನು ಹೊರಹಾಕುವ ಕೌಶಲ್ಯವನ್ನು ಪಡೆದುಕೊಳ್ಳುತ್ತಾರೆ. ಸಂಗೀತ, ಸಾಹಿತ್ಯಾದಿ, ಲಲಿತ ಕಲೆಗಳನ್ನು ಮೆಚ್ಚದಿದ್ದವರು ಸಂಪೂರ್ಣವಾದ ಮನುಷ್ಯನೆ ಅಲ್ಲ ಎಂದಂತಹ ಅನೇಕ

ವಿದ್ವಾಂಸರ ಅಭಿಪ್ರಾಯವನ್ನು ಕೇಳಿದ್ದೇವೆ. ಶಿಲ್ಪಕಲೆಯೂ ತನ್ನ ಮಾಂತ್ರಿಕ ಶಕ್ತಿಯಿಂದ ಮಾನವಕುಲವನ್ನು ಪಶು ಸ್ವಭಾವದಿಂದ ಗಂಭೀರ ಸ್ವಭಾವದೆಡೆಗೆ ವರ್ಗಾಯಿಸುವ ಯೋಗ್ಯತೆಯುಳ್ಳದ್ದಾಗಿದೆ. ಆದುದರಿಂದಲೇ ಕಲೆಯಿಲ್ಲದ ಸಂಸ್ಕೃತಿ ಕಲೆಯಲ್ಲ. ಧರ್ಮಗಳು ಪ್ರಪಂಚದ ಯಾವುದೇ ಭಾಗಗಳಲ್ಲಿಯೂ ನಮಗೆ ಕಾಣಸಿಗುವುದಿಲ್ಲ.

ಗುಲ್ಬರ್ಗಾ ಜಿಲ್ಲೆಯ ಐತಿಹಾಸಿಕ ಘಟನೆಗಳನ್ನು ಅವಲೋಕಿಸಿದಾಗ ರಾಜಕೀಯ ಸ್ಥಿತ್ಯಂತರದಲ್ಲಿ ರಾಜಧಾನಿ ಪಟ್ಟಣಗಳ ಸ್ಥಳಾಂತರದ ವಿಷಯವನ್ನು ಇಲ್ಲಿ ಪರಾಮರ್ಶಿಸಲಾಗಿದೆ. ಮಹಾರಾಷ್ಟ್ರದ ಎಲೆಚಪುರ (ಎಲ್ಲೋರ) ರಾಷ್ಟ್ರಕೂಟರ ಮೊದಲ ರಾಜಧಾನಿ. ಅವರ ಮತ್ತೊಂದು ರಾಜಧಾನಿ ಮಾನ್ಯಖೇಟ (ಈಗಿನ ಮಳಖೇಡ) ಇನ್ನುಳಿದವುಗಳು ಮಯೂರಖಂಡಿಯಾದರೆ ಲತ್ತಲೂರು ನೆರೆಯ ಮಹಾರಾಷ್ಟ್ರದ ಲಾತೂರುಗಳಾಗಿವೆ. ಈ ಎರಡೂ ಸ್ಥಳಗಳೂ ಮಾನ್ಯಖೇಟದ ದಕ್ಷಿಣದ ನೆರೆಯಲ್ಲಿವೆ. ಆಗಿನ ಮಾನ್ಯಖೇಟವು ಇಂದಿನ ಗುಲಬರ್ಗಾ ಜಿಲ್ಲೆಯ ಸೇಡಂ ತಾಲೂಕಿನ ಮತ್ತು ಕಾಗಿಣ ನದಿ ದಂಡೆ ಮೇಲಿನ ಮಳಖೇಡವಾಗಿದೆ. ಈ ಮಾನ್ಯಖೇಟ ನಗರವು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಲು ಸುರಕ್ಷಿತವಲ್ಲದ ಕಾರಣ ಅದರ ರಾಜಧಾನಿಯನ್ನು ನೆರೆಯಲ್ಲಿರುವ ಎತ್ತರ ಬೆಟ್ಟವುಳ್ಳ 'ಏತಗಿರಿ' ಅಂದರೆ ಈಗಿನ ಯಾದಗಿರಿಗೆ ವರ್ಗಾಯಿಸಿದರು. ಅನಂತರ ಆ ಪ್ರದೇಶಕ್ಕೆ ಹತ್ತಿರವಾದ ಮತ್ತೊಂದು ರಾಜಧಾನಿ ಸ್ಥಳ ಕಲ್ಯಾಣವು ಇಂದಿನ ಬಸವಕಲ್ಯಾಣವಾಗಿದೆ. ಹೀಗಾಗಿ ಒಟ್ಟಾರೆ ಈ ಎಲ್ಲ ರಾಜಧಾನಿ ಪಟ್ಟಿಗಳು ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಲುಕ್ಯರ ಆಳ್ವಿಕೆಯಲ್ಲಿ ಬೀದರ, ಗುಲ್ಬರ್ಗಾ ಪ್ರದೇಶಗಳಲ್ಲಿ ಮತ್ತು ಅದರ ನೆರೆಹೊರೆಗಳಲ್ಲಿರುವುದು ಸ್ಪಷ್ಟವಾಗಿ ಕಾಣುತ್ತದೆ. ಹೀಗಾಗಿ ಮಳಖೇಡವೇ ರಾಷ್ಟ್ರಕೂಟರ ರಾಜಧಾನಿ ಮಾನ್ಯಖೇಟವಾಗಿದ್ದಿತ್ತೆಂದು ಸ್ಪಷ್ಟವಾಗುತ್ತದೆ. ರಾಷ್ಟ್ರಕೂಟರ ಕಾಲದ ಅನೇಕ ದೇವಾಲಯ ಶಿಲ್ಪಶಾಸನ ಇತ್ಯಾದಿ ಸ್ಮಾರಕಗಳು ಈಗ ಗುಲಬರ್ಗಾ ಜಿಲ್ಲೆಯ ಶಿರವಾಳ, ಜೇವರ್ಗಿ, ಭೀಮರಾಯನಗುಡಿ, ಶಹಾಪುರ, ಮುದನೂರು, ನಿಡಗುಂದಾ, ದಿಗ್ಗಾವಿ, ಇಂಗಳಗಿ, ಕಾವೂರು, ಕುಳಗೇರಿ, ಕಾಳಗಿ, ಹಂದರಕಿ, ಕೇಶ್ವಾರ, ಉಡಗಿ, ಸೇಡಂ, ಗಂವ್ಹಾರ, ಕೊಲ್ಲೂರು, ಸನ್ನತಿ, ತಡಕಲ್ಲು, ದೋರನಹಳ್ಳಿ, ಮಾಗಣಗೇರಿ ಮುಂತಾದ ಸ್ಥಳಗಳಲ್ಲಿ ಪತ್ತೆಯಾಗಿವೆ. ಈ ಸ್ಥಳಗಳಲ್ಲಿರುವ ಸ್ಮಾರಕ ಶಿಲ್ಪಕಲೆಯು ಈ ಕಾಲದ ವಾಸ್ತುಶಿಲ್ಪಕಲೆಯ ಅಧ್ಯಯನಕ್ಕೆ ಹೊಸ ಚೈತನ್ಯವನ್ನು ನೀಡುತ್ತದೆ. ವಿಭಿನ್ನ ರೀತಿಯ ರಾಷ್ಟ್ರಕೂಟರ ಕಾಲದ ಶಿಲ್ಪ, ದೇವಾಲಯ, ಬಸದಿ, ಪುಷ್ಕರಣಿ ಇತ್ಯಾದಿ ಸ್ಮಾರಕಗಳು ಮತ್ತು ಹೆಸರನ್ನು ಗುರುತಿಸಿಕೊಳ್ಳದಂತಹ ದೇವಾಲಯಗಳು, ಶಿಲ್ಪಗಳ ಬಗ್ಗೆ ಹೆಚ್ಚಿನ ಸಂಶೋಧನೆ ಅಗತ್ಯವಿದೆ.

[illegible]

ಅಧ್ಯಾಯ – 2

ರಾಷ್ಟ್ರಕೂಟರ ಇತಿಹಾಸ ಮತ್ತು ಪರಂಪರೆ

ಅಧ್ಯಾಯ – 2

ರಾಷ್ಟ್ರಕೂಟರ ಇತಿಹಾಸ ಮತ್ತು ಪರಂಪರೆ

ಕ್ರಿ.ಶ 757ರಲ್ಲಿ ಬಾದಾಮಿ ಚಾಲುಕ್ಯರ ಸಂತತಿಯನ್ನು ಸೋಲಿಸಿ ಕ್ರಿ.ಶ. 973ರವರೆಗೆ ಸುಮಾರು ಎರಡೂ ಕಾಲು ಶತಮಾನದವರೆಗೆ ವಿಶಾಲ ಸಾಮ್ರಾಜ್ಯವನ್ನಾಳಿದ ರಾಷ್ಟ್ರಕೂಟರು ಭಾರತದ ಇತಿಹಾಸದಲ್ಲಿ ಸ್ಮರಣೀಯರೆನಿಸಿಕೊಂಡಿದ್ದಾರೆ. ರಾಷ್ಟ್ರಕೂಟರ ಸಾಮ್ರಾಜ್ಯವು ಉತ್ತರದ ರಾಷ್ಟ್ರಕೂಟರ ಸಾಮ್ರಾಜ್ಯವು ಉತ್ತರದಲ್ಲಿ ನರ್ಮದಾ ನದಿಯಿಂದ ದಕ್ಷಿಣದಲ್ಲಿ ಕಾವೇರಿಯವರೆಗೂ, ಪಶ್ಚಿಮದಲ್ಲಿ ಅರಬ್ಬಿ ಸಮುದ್ರ ಮತ್ತು ಮಾಳವದಿಂದ, ಪೂರ್ವದಲ್ಲಿ ಆಂದ್ರಪ್ರದೇಶದ ವಾರಂಗಲ್ ಮುತ್ತು ಕಡಪ ಜಿಲ್ಲೆಗಳವರೆಗೂ ವಿಸ್ತರಿಸಿಕೊಂಡಿತ್ತು. ಇಂತಹ ವಿಶಾಲ ಸಾಮ್ರಾಜ್ಯವನ್ನು ಸ್ಥಾಪಿಸಿ ಕನ್ನಡ ಸಂಸ್ಕೃತಿ, ನಾಡು, ನುಡಿಗೆ ರಾಷ್ಟ್ರಕೂಟರು ನೀಡಿದ ಕೊಡುಗೆ ಅಮೋಘವಾದುದಾಗಿದೆ.

ಮೂಲ: ರಾಷ್ಟ್ರಕೂಟ ಸಂತತಿಯ ಮೂಲ ಹಾಗೂ ಮೂಲ ನಿವಾಸದ ಬಗ್ಗೆ ಸಂಬಂಧಿಸಿದಂತೆ ಅನೇಕ ಜಿಜ್ಞಾಸೆಗಳಿವೆ. ರಾಜರ ಶಾಸನಗಳಲ್ಲಿ ರಾಷ್ಟ್ರಕೂಟರು ಯದು ವಂಶಕ್ಕೆ ಸೇರಿದವರೆಂದು ಉಲ್ಲೇಖಿಸಲಾಗಿದೆ. ಫ್ಲೀಟ್ ಮುಂತಾದ ವಿದ್ವಾಂಸರು ರಾಷ್ಟ್ರಕೂಟರು ರಾಥೋಢ್ ಎಂಬ ಉತ್ತರ ಭಾರತದ ಪಂಗಡಕ್ಕೆ ಸೇರಿದವರೆಂದೂ, ಮತ್ತೆ ಕೆಲವು ವಿದ್ವಾಂಸರು

ರಾಷ್ಟ್ರಕೂಟರು ಆಂಧ್ರಪ್ರದೇಶದ ರೆಡ್ಡಿ ಎಂಬ ಪದ ಬಳಕೆಗೆ ಬಂದಿರಬೇಕೆಂದು ತಿಳಿಸಿದ್ದಾರೆ. ಪ್ರಾಚೀನ ಪ್ರಾಕೃತ ಮತ್ತು ಸಂಸ್ಕೃತ ಭಾಷೆಗಳಲ್ಲಿ ರಾಷ್ಟ್ರಿಕ, ರಥಿಕ, ರಥಿ ಮೊದಲಾದ ಪದಗಳು ಬಳಕೆಯಲ್ಲಿ ಬಂದಿವೆ. ಹಾಗೆಯೇ ಅಶೋಕನ, ಶಾತವಾಹನರ ಶಾಸಗಳಲ್ಲೂ ಈ ಪದಗಳ ಉಲ್ಲೇಖ ಕಂಡು ಬರುತ್ತದೆ. ಮಧ್ಯಯುಗದ ಕನ್ನಡ ಶಾಸಗಳಲ್ಲಿ ಕಂಡು ಬರುವ ಗ್ರಾಮು, ಹೆಗ್ಗಡೆ, ನಾಡ ಹೆಗ್ಗಡೆ ಮೊದಲಾದ ಅಧಿಕಾರಿಗಳಂತೆ ರಾಷ್ಟ್ರಕೂಟ ಸಂತತಿಯ ಪೂರ್ವಿಕರು ಕೃಷಿಯಲ್ಲಿ ನಿರತರಾಗಿದ್ದು, ರಾಷ್ಟ್ರೀಕ ಮಹಾರಾಷ್ಟ್ರಕ ಎಂಬ ಹೆಸರುಗಳಿಂದ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದ್ದು ಅಂತಹ ಒಂದು ಶಾಖೆಯು ಬಾದಾಮಿ ಚಾಳುಕ್ಯರ ಕಾಲದಲ್ಲಿ ಸಾಮಂತ ಪ್ರಭುತ್ವವನ್ನು ಗಳಿಸಿ ಪ್ರಭಲ ರಾಷ್ಟ್ರಕೂಟ ಸಾಮ್ರಾಜ್ಯವಾಗಿ ಉದಯಿಸಿತೆನ್ನಲಾಗಿದೆ. ರಾಷ್ಟ್ರಕೂಟ ಎನ್ನುವುದು ಮೊದಲು ಒಂದು ಅಧಿಕಾರ ಸೂಚಕ ಪದವಾಗಿದ್ದಿತ್ತೆಂದು ನಂತರ ಕಾಲಾನುಕ್ರಮದಲ್ಲಿ ಅದು ಅವನ ವಂಶದ ಹೆಸರಾಗಿರಬೇಕೆಂದು ಹೇಳಲಾಗಿದೆ.

ರಾಷ್ಟ್ರಕೂಟ ಸಂತತಿಯ ಮೂಲ ಸ್ಥಳದ ಬಗ್ಗೆಯೂ ಭಿನ್ನಾಭಿಪ್ರಾಯವಿದೆ. ಆ ಪ್ರಕಾರ ರಾಷ್ಟ್ರಕೂಟ ಮುನೆತನದವರು ಲಟ್ಟಲೂರುಪುರವರಾಧೀಶ್ವರೆಂಬ ಬಿರುದನ್ನು ಹೊಂದಿದ್ದರು. ಆದ್ದರಿಂದ ಪ್ರಾರಂಭದಲ್ಲಿ ಲಟ್ಟಲೂರು ಅವರ ಮೂಲ ವಾಸಸ್ಥಾನವಾಗಿತ್ತೆನ್ನಲಾಗಿದೆ. ಅಂದಿನ ಲಟ್ಟಲೂರು ಎಂಬ ಸ್ಥಳವೇ ಎಂದಿನ ಮಹಾರಾಷ್ಟ್ರ ಪ್ರದೇಶದ ಉಸ್ಮಾನಾಬಾದ್ ಜಿಲ್ಲೆಯಲ್ಲಿರುವಳ ಪ್ರದೇಶದಲ್ಲಿ ಕನ್ನಡ ಭಾಷೆ ಬಳಕೆಯಲ್ಲಿದ್ದು ರಾಷ್ಟ್ರಕೂಟರು ಕನ್ನಡ ನಾಡಿನವರಾಗಿದ್ದು ದೇಶದ ವಿವಿಧ ಭಾಗಗಳಿಗೆ ಹೋಗಿ ರಾಜ್ಯವಾಳಿದರೆನ್ನಲಾಗಿದೆ. ಜಬ್ಬಲ್‌ಪುರದಲ್ಲಿ ದೊರಕಿರುವ ಮುಮ್ಮಡಿ ಕೃಷ್ಣನ ಜ್ಯೂರಾ ಪ್ರಶಸ್ತಿಯು ಕನ್ನಡ ಲಿಪಿಯಲ್ಲಿ ಬರೆಯಲ್ಪಟ್ಟಿರುವುದರಿಂದ ರಾಷ್ಟ್ರಕೂಟರು ಕನ್ನಡಿಗರಾಗಿದ್ದು ಗರುಡ ಮತ್ತು ಪಾಳಿಧ್ವಜ ಅವರ ರಾಜ ಲಾಂಛನಗಳಾಗಿದ್ದವು. ಡಾ ಅಲ್ಟಕರ್‌ರವರು ರಾಷ್ಟ್ರಕೂಟರ ಮೂಲತಃ ಕರ್ನಾಟಕದವರು, ಇವರ ಮಾತೃಭಾಷೆ ಕನ್ನಡವಾಗಿದ್ದು, ದಂತಿದುರ್ಗ ರಾಷ್ಟ್ರಕೂಟ ಸಾಮ್ರಾಜ್ಯದ ಸ್ಥಾಪಕನೆಂದು ತಿಳಿಸಿದ್ದಾರೆ.

ರಾಜಕೀಯ ಇತಿಹಾಸ

ದಂತಿದುರ್ಗ:

ದಂತಿದುರ್ಗನು ರಾಷ್ಟ್ರಕೂಟ ಸಾಮ್ರಾಜ್ಯದ ಸ್ಥಾಪಕ. ಈತನ ಪೂರ್ವಿಕರು ಬಾದಾಮಿ ಚಾಲುಕ್ಯರ ಸಾಮಂತರಾಗಿ ಚಿಕ್ಕ ಸಂಸ್ಥಾನದಲ್ಲಿ ಆಳುತ್ತಿದ್ದರು. ಚಾಳುಕ್ಯರ ಇಮ್ಮಡಿ ವಿಕ್ರಮಾದಿತ್ಯನ ಕಾಲದಲ್ಲಿ ತನ್ನ ಶೌರ್ಯ, ಸಾಹಸಗಳಿಂದ ದಂತಿದುರ್ಗ ಪ್ರಸಿದ್ಧಿಗೆ ಬಂದನು. ಚಾಳುಕ್ಯ ಸಾಮ್ರಾಜ್ಯದ ಉತ್ತರ ಭಾಗದ ಶತ್ರುಗಳ ಮೇಲೆ ಕ್ರಿ.ಶ. 743ರಿಂದ ವಿಕ್ರಮಾದಿತ್ಯನು

ನಡೆಸಿದ ಯುದ್ಧಗಳಲ್ಲಿ ದಂತಿದುರ್ಗ ಸಾಹಸದಿಂದ ಹೋರಾಡಿದ. ವಿಕ್ರಮಾದಿತ್ಯನ ಮರಣದ ನಂತರ ತನ್ನ ಬಲ ವೃದ್ಧಿಸಿಕೊಂಡು ಮಾಳ್ವ,ಗುಜರಾತ್,ಕಂಚಿಯ ಪಲ್ಲವರು, ಮಧುರೆಯ ಪಾಂಡ್ಯರು, ಲಾಟ, ಕಳಿಂಗ, ಕೋಸಲದ ರಾಜರನ್ನುಸೋಲಿಸಿದನು. ಕ್ರಿ.ಶ 753ರಿಂದ 757ರವರೆಗೆ ನಿರಂತರ ಹೋರಾಟದಲ್ಲಿ ತೊಡಗಿದ ದಂತಿದುರ್ಗ ಕ್ರಿ.ಶ 756ರಿಂದ ಬಾದಾಮಿಯನ್ನು ಮುತ್ತಿ ಚಾಳುಕ್ಯರ ಕೊನೆ ಅರಸ ಎರಡನೇ ಕೀರ್ತಿವರ್ಮನನ್ನು ಸೋಲಿಸಿ ತಾನೇ ಸಾಮ್ರಾಟನಾದನು. ಈ ವಿಜಯದಿಂದ ನಾಸಿಕ್, ಸತಾರ, ಪುಣೆ, ಮತ್ತು ಕೊಲ್ಲಾಪುರಗಳು ದಂತಿದುರ್ಗನ ವಶವಾದವು. ಇದರಿಂದ ಈತನ ಸಾಮ್ರಾಜ್ಯ ಮತ್ತಷ್ಟು ವಿಶಾಲವಾಯಿತು. ಮಹಾರಾಜಾಧಿರಾಜ, ಪೃಥ್ವಿವಲ್ಲಭ ಎಂಬ ಬಿರುದುಗಳನ್ನು ಹೊಂದಿದ್ದ ದಂತಿದುರ್ಗನು ಕ್ರಿ.ಶ 756ರಲ್ಲಿ ತನ್ನ 37ನೇ ವಯಸ್ಸಿನಲ್ಲಿ ಮರಣ ಹೊಂದಿದ ಎಂದು ನಂಬಲಾಗಿದೆ.ದಂತಿದುರ್ಗನಿಗೆ ಮುಕ್ಕಳಿರಲಿಲ್ಲವಾದ್ದರಿಂದ ಆತನ ಮುರಣದ ನಂತರ ಚಿಕ್ಕಪ್ಪನಾದ ಕೃಷ್ಣ ಅಧಿಕಾರಕ್ಕೆ ಬಂದನು.

ಒಂದನೇ ಕೃಷ್ಣ (ಕ್ರಿ.ಶ. 756–775) : ಈತನು ಅದಿಕಾರರೂಢನಾದ ತಕ್ಷಣವೇ ತನ್ನ ರಾಜ್ಯಕ್ಕೆ ಇನ್ನೂ ಕಂಟಕಪ್ರಾಯನಾಗಿದ್ದ ಚಾಳುಕ್ಯ ದೊರೆ ಎರಡನೇ ಕೀರ್ತಿವರ್ಮನನ್ನು ಸಂಪೂರ್ಣವಾಗಿ ನಿರ್ನಾಮವಾಗುವಂತೆ ಮಾಡಿ ರಾಷ್ಟ್ರಕೂಟ ಸಾಮ್ರಾಜ್ಯವನ್ನು ಬದ್ರಬುನಾದಿಯ ಮೇಲೆ ನಿಲ್ಲಿಸಿದನು. ಕೀರ್ತಿವರ್ಮನನ್ನು ಸೋಲಿಸಿದ ನಂತರ ಕೃಷ್ಣನು ಕೊಂಕಣದ ಕಡೆ ದಂಡೆತ್ತಿ ಹೋಗಿ ಅಲ್ಲಿನ ಪ್ರದೇಶವನ್ನು ಗೆದ್ದುಕೊಂಡು ಶಿಲಾಹಾರ ಮುನೆತನದ ಸಣಪುಲ್ಲನನ್ನು ಅಲ್ಲಿ ತನ್ನ ಮಾಂಡಲಿಕನಾಗುವಂತೆ ಮಾಡಿದನು.ನಂತರ ಗಂಗರಾಜ ಶ್ರೀಪುರುಷನನ್ನು ಸೋಲಿಸಿ ಕ್ರಿ.ಶ. 769ರಲ್ಲಿ ವೆಂಗಿಯ ಚಾಳುಕ್ಯ ರಾಜನಾದ ನಾಲ್ಕನೇ ವಿಷ್ಣುವರ್ಧನನ್ನು ಸೋಲಿಸಲು ತನ್ನ ಕುಮಾರ ಗೊವಿಂದನನ್ನು ಕಳುಹಿಸಿದನು. ವಿಷ್ಣುವರ್ಧನನು ಯುದ್ಧದಲ್ಲಿ ಗೋವಿಂದನಿಗೆ ಶರಣಾದುದಲ್ಲದೆ ತನ್ನ ಮುಗಳಾದ ಶೀಲಭಟ್ಟಾರಿಕೆಯನ್ನು ರಾಷ್ಟ್ರಕೂಟ ರಾಜಕುಮಾರ ಧ್ರುವನಿಗೆ ವಿವಾಹ ಮಾಡಿಕೊಟ್ಟನು. ಈ ವಿಜಯಗಳಿಂದ ರಾಷ್ಟ್ರಕೂಟ ಸಾಮ್ರಾಜ್ಯವು ಅಪಾರವಾಗಿ ವಿಸ್ತಾರವಾಯಿತು.

ಒಂದನೇ ಕೃಷ್ಣನು ಕೇವಲ ಯುದ್ದೋತ್ಸಾಹಿ ಮಾತ್ರವಾಗಿರದೆ ಕಲಾ ಪೋಷಕನೂ ಸಹ ಆಗಿದ್ದನು. ಎಲ್ಲೋರಾದಲ್ಲಿ ಕೈಲಾಸ ದೇವಾಲಯ ಎಮದು ಕರೆಯಲ್ಪಡುವ ಜಗತ್ಪ್ರಸಿದ್ಧ ಏಕಶಿಲಾ ಗುಹಾಂಥರ ದೇವಾಲಯವನ್ನು ಕೊರೆಯಿಸಿದನು. ಕೃಷ್ಣನು ಈ ದೇವಾಲಯವನ್ನು ಪಾಶುಪಥ ಶೈವ ಪಂಥದ ಗುರುವಾರ ಮಹಾವೃತ್ತಿ ಎಂಬುವವನಿಗೆ ಸಮರ್ಪಿಸಿದನು. ಈ ದೇವಾಲಯದ ಕೆತ್ತನೆಯನ್ನು ಅಲ್ಲಿರುವ ಶಾಸನವೊಂದು ಈ ರೀತಿ ವರ್ನಿಸಿದೆ. “ಈ ದೇವಾಲಯ ಮಾನವರಿಂದ ನಿರ್ಮಿತವಾದುದಲ್ಲ ಅದು ದೈವಶಿಲ್ಪಿಗಳಿಂದ ರಚಿತವಾಗಿದೆ”

ಕೈಲಾಸ ದೇವಾಲಯವನ್ನು ಕುರಿತು ವಿ.ಎ ಸ್ಮಿತ್‌ರವರು "ಇದು ಬಾರತದಲ್ಲಿ ಅದ್ಭುತವಾದ ವಾಸ್ತುಶಿಲ್ಪದ ವಿಚಿತ್ರ, ಮಾತ್ರವಲ್ಲ ಬಂಡೆಯಲ್ಲಿ ಕಡಿದು ನಿರ್ಮಿಸಿದ ದೇವಾಲಯಗಳಲ್ಲಿ ಇದು ವಿಶಾಲವಾದದ್ದು ಮತ್ತು ಬೆರಗುಂಟುಮಾಡುವಂತಹದ್ದು. ಇಂತಹ ವಸ್ತು ಯಾವ ದೇಶದ್ದೇ ಆದರೂ ಅಭಿಮಾನ ಪಡಬೇಕಾದದ್ದು ಮುತ್ತು ಯಾರು ನಿರ್ಮಿಸಿದರೂ ಅವರು ಸುತ್ಯಾರ್ಹರು" ಎಂದು ಅಭಿಪ್ರಾಯಪಟ್ಟಿದ್ದಾರೆ. ನಾಸಿಕ್ ಮುತ್ತು ಅಮರಾವತಿ ಬಳಿ ದೊರೆತಿರುವ ನಾಣ್ಯಗಳ ಮೇಲಿನ "ಕೃಷ್ಣರಾಜ ಪರಮ ಮಹೇಶ್ವರ" ಎಂಬ ಬಿರುದು ಈ ಒಂದನೇ ಕೃಷ್ಣನದೆಂದು ಹೇಳಲಾಗಿದೆ.

ಸುಮಾರು 18 ವರ್ಷಗಳ ಕಾಲ ಆಳ್ವಿಕೆ ನಡೆಸಿದ ಒಂದನೇ ಕ್ರಷ್ಣನು ರಾಷ್ಟ್ರಕೂಟ ರಾಜರಲ್ಲಿ ಅತ್ಯಂತ ಪ್ರಸಿದ್ದನಾಗಿದ್ದು 'ಅಕಳವರ್ಷ' ಮತ್ತು 'ಶುಭತುಂಗ' ಎಂಬ ಬಿರುದನ್ನು ಹೊಂದಿದ್ದನು. ಒಂದನೇ ಕ್ಷಷ್ಣನಿಗೆ ಗೋವಿಂದ ಮುತ್ತು ಧ್ರುವ ಎಂಬ ಗಂಡು ಮಕ್ಕಳಿದ್ದು ಆತನ ಮುರಣದ ನಂತರ ಹಿರಿಯ ಮುಗನಾದ ಗೋವಿಂದನು ರಾಷ್ಟ್ರಕೂಟರ ರಾಜನಾದನು.ಈತನನ್ನು ಇರಡನೇ ಗೋವಿಂದ ಎಂದೂ ಸಹ ಕರೆಯಲಾಗಿದೆ. ಈತನು ತನ್ನ ತಂದೆಯ ಆಳ್ವಕೆಯ ಕಾಲದಲ್ಲಿ ಸಮರ್ಥ ಯೋಧನಾಗಿದ್ದು ವೆಂಗಿ ಚಾಳುಕ್ಯರ ದೊರೆ ನಳ್ಕನೆ ವಿಷ್ಣುವರ್ದನನ್ನು ಸೋಲಿಸಿ ತಂದೆಗೆ ಪ್ರೀತಿ ಪಾತ್ರನಾಗಿದ್ದನು. ಆದರೆ ತನ್ನ ತಂದೆಯ ಮರಣದ ನಂತರ ಕ್ರಿ.ಶ. 755ರಲ್ಲಿ ಪಟ್ಟಕ್ಕೆ ಬಂದ ಎರಡನೇ ಗೋವಿಂದ ಜನತೆಗೆ ಉತ್ತಮ ಉತ್ತಮು ಆಡಳಿತ ಕೊಡುವಲ್ಲಿ ವಿಫಲನಾಗಿ ಕೇವಲ ಭೋಗ ಲಾಲಸೆಯಲ್ಲಿ ಯನ್ನ ಜೀವನವನ್ನು ಕಳೆಯಲು ಪ್ರಾರಂಭಿಸಿದನು. ಇದರಿಂದ ಬೇಸತ್ತ ತಮ್ಮನಾದ ದ್ರುವ ಅಣ್ಣನನ್ನು ಮೂಲೆಗೊತ್ತಿ ತಾನೇ ರಾಷ್ಟ್ರಕೂಟ ರಾಜನಾನು.

ಧ್ರುವ(ಕ್ರಿ.ಶ 780–793): ಇವನು ಪ್ರಥಮವಾಗಿ ತಾನು ಅಧಿಕಾರರೂಡನಾಗುವ ಉದ್ಭವಿಸಿದ ಅಂತಃ ಕಲಹದ ಸಮಯದಲ್ಲಿ ತನ್ನ ಅಣ್ಣನ ಪಕ್ಷ ವಹಿಸಿದ್ದ ರಾಜರನ್ನು ಸಂಪೂರ್ಣವಾಗಿ ಸೋಲಿಸಿದನು. ನಂತರ ಪಲ್ಲವ ರಾಜ ದಂತಿವರ್ಮನನ್ನು ಸೋಲಿಸಿ ಅವನಿಂದ ಹೇರಳವಾದ ಕಪ್ಪಕಾಣಿಕೆಯನ್ನು ಪಡೆದನು. ವೆಂಗಿಯ ನಾಲ್ಕನೆ ವಿಷ್ಣವರ್ದನನನ್ನು ತಾನು ಯುವರಾಜನಾಗಿದ್ದಾಗಲೇ ಸೋಲಿಸಿದ್ದರಿಂದ ಆತನು ಸಹ ಈಗ ಧ್ರುವನ ಪರಮಾಧಿಕಾರವನ್ನು ಒಪ್ಪಿಕೊಂಡಿದ್ದನು. ಧ್ರುವನು ಗಂಗರ ರಾಜ ಶ್ರೀಪುರುಷನನ್ನು ಸೋಲಿಸಿ ಆತನ ಮುಗ ಶಿವಮಾರನನ್ನು ಯುದ್ಧ ಬಂದಿಯನ್ನಾಗಿಸಿಮಾನ್ಯಖೇಟದಲ್ಲಿ ಸೆರೆಯಲ್ಲಿಟ್ಟನು. ತನ್ನ ಮುಗನಾದ ಸ್ತಂಭ ಅಥವಾ ಕಂಬನನ್ನು ಗಂಗವಾಡಿಯ ರಾಜಪಾಲನನ್ನಾಗಿ ನೇಮಿಸಿದನು. ಇದರಿಂದ ಗಂಗವಾಡಿ ಸಂಪೂರ್ಣವಾಗಿ ರಾಷ್ಟ್ರಕೂಟ ಸಾಮ್ರಾಜ್ಯದಲ್ಲಿ ವಿಲೀನವಾಗಿ ಕಾವೇರಿ ನದಿ ರಾಷ್ಟ್ರಕೂಟರ ದಕಷಿಣದ ಎಲ್ಲೆಯೆನಿಸಿತೊಡಗಿತು.ಕ್ರಿ.ಶ. 783ರ

[illegible]

ವೇಳೆಗೆ ಧ್ರುವನು ದಕ್ಷಿಣದ ರಾಜಮನೆತನಗಳನ್ನೆಲ್ಲಾ ಸೋಲಿಸಿದ್ದನು. ನಂತರ ಉತ್ತರದತ್ತ ತನ್ನ ದಂಡಯಾತ್ರೆಯನ್ನು ಕೈಗೊಂಡನು. ಆ ಸಮಯದಲ್ಲಿ ಕನೂಜ್ ಪ್ರಾಂತ್ಯವನ್ನು ಆಯುಧ ಮನೆತನದ ಅರಸು ಇಂದ್ರಾಯುಧನೆಂಬುವವನು ರಾಜ್ಯಭಾರ ಮಾಡುತ್ತಿದ್ದು ಅಲ್ಲಿನ ಸಾಮ್ರಾಜ್ಯದಲ್ಲಿ ಸೋದರರಿಬ್ಬರ ದ್ವೇಷದಿಂದ ಅಂತಃಕಲಹ ಉದ್ಭವಿಸಿತ್ತು. ಈ ಸಮಯದ ಸದುಪಯೋಗ ಪಡೆದ ಗೂರ್ಜರ ಪ್ರತಿಹಾರರ ರಾಜ ವತ್ಸರಾಜನು ಇಂದ್ರಾಯುಧನನ್ನು ಸಂಪೂರ್ಣವಾಗಿ ಸೋಲಿಸಿ ಕನೂಜನ್ನು ವಶಪಡಿಸಿಕೊಂಡನು. ಇದರಿಂದ ಅಸಂತುಷ್ಟಗೊಂಡ ಬಂಗಾಳದ ಧರ್ಮಪಾಲ ಇಂದ್ರಾಯುಧನ ಮೇಲೆ ಯುದ್ಧ ಸಾರಿದನಾದರೂ ಅವನಿಂದ ಸಂಪೂರ್ಣವಾಗಿ ಸೋಲಲ್ಪಟ್ಟನು. ಇದೇ ಸಮಯದಲ್ಲಿ ಧ್ರುವನು ತನ್ನ ಕುಮಾರರಾದ ಗೋವಿಂದ ಮತ್ತು ಇಂದ್ರನ ನೆರವಿನಿಂದ ನರ್ಮದಾ ನದಿಯನ್ನು ದಾಟಿ ವತ್ಸರಾಜನನ್ನು ಝಾನ್ಸಿ ಹತ್ತಿರ ಸೋಲಿಸಿದನು. ಸೋತ ವತ್ಸರಾಜ ರಾಜಸ್ಥಾನದ ಮರಳು ಗಾಡಿನಲ್ಲಿ ಅವಿತುಕೊಂಡನು. ನಂತರ ಧ್ರುವನು ಧರ್ಮಪಾಲನನ್ನು ತನಗೆ ಶರಣಾಗುವಂತೆ ಮಾಡಿ ಅವನ ರಾಜ ಚಿಹ್ನೆಗಳಾದ ಎರಡು ಶ್ವೇತ ಛತ್ರಗಳನ್ನು ತನ್ನದಾಗಿಸಿಕೊಂಡನು.

ಧ್ರುವನು ಈ ರೀತಿ ವಿಜಯದ ಮೇಲೆ ವಿಜಯ ಸಾಧಿಸಿದರೂ ಸಹ ಕನೂಜನ್ನು ತನ್ನ ಅಧೀನದಲ್ಲಿರಿಸಿಕೊಳ್ಳದೆ, ಗಂಗಾ-ಯಮುನಾ ನದಿಗಳ ಹತ್ತಿರ ಸ್ವಲ್ಪ ಕಾಲ ತಂಗಿದ್ದು ಧನಕನಕ ರಾಶಿಗಳೊಡನೆ ರಾಜಧಾನಿಗೆ ಹಿಂತಿರುಗಿದನು. ಇದರಿಂದ ಧ್ರುವನ ರಾಜಾಧಿಪತ್ಯ ಇಡೀ ಭರತ ಖಂಡದಲ್ಲೆಲ್ಲಾ ಹರಡಿ ಆತನಿಗೆ ಕೀರ್ತಿಯನ್ನು ತಂದುಕೊಟ್ಟಿತು. ಇದರಿಂದ ರಾಷ್ಟ್ರಕೂಟರ ಗೌರವ ಮತ್ತು ಪ್ರತಿಷ್ಠೆ ಅತಿ ಉನ್ನತ ಮಟ್ಟಕ್ಕೇರಿದವು. ಧ್ರುವನ ಸಾಧನೆಯನ್ನು ಪ್ರಶಂಸಿಸುತ್ತಾ ಡಾ॥ ಅಲ್ಟೇಕರ್‌ರವರು "ಧ್ರುವ ಸಾಯುವ ತನಕ ಇಡೀ ಭಾರತದಲ್ಲಿ ರಾಷ್ಟ್ರಕೂಟರನ್ನು ಎದುರಿಸುವವರು ಯಾರು ಇರಲಿಲ್ಲ" ಎಂದು ಅಭಿಪ್ರಾಯಪಟ್ಟಿದ್ದಾರೆ. ಧ್ರುವನಿಗೆ ಧಾರಾವರ್ಷ, ನಿರುಪಮ, ಶ್ರೀವಲ್ಲಭ, ನರೇಂದ್ರದೇವ, ಕಲ್ಲಿವಲ್ಲಭ ಎಂಬ ಬಿರುದುಗಳಿದ್ದವು. ವೆಂಗಿಯ ಸಾಮಂತ ರಾಜನಾದ ನಾಲ್ಕನೆ ವಿಷ್ಣುವರ್ಧನನ ಮಗಳಾದ ಶೀಲಾಭಟ್ಟಾರಿಕೆ ಈತನ ಪತ್ನಿಯಾಗಿದ್ದಳು. ಧ್ರುವನಿಗೆ ಕರ್ಕ, ಸ್ತಂಭ, ಗೋವಿಂದ ಮತ್ತು ಇಂದ್ರ ಎಂಬ ನಾಲ್ವರು ಗಂಡು ಮಕ್ಕಳಿದ್ದರು. ಹಿರಿಯ ಮಗನಾದ ಕರ್ಕ ಮರಣ ಹೊಂದಿದ್ದರಿಂದ ಉಳಿದ ಮೂವರಲ್ಲಿ ಗೋವಿಂದನು ತಂದೆಗೆ ಪ್ರೀತಿ ಪಾತ್ರನಾಗಿದ್ದನಲ್ಲದೆ ಶೌರ್ಯ ಸ್ತಂಭನನ್ನು ಗಂಗವಾಡಿಯ ರಾಜ್ಯಪಾಲನನ್ನಾಗಿಯೂ, ಇಂದ್ರನನ್ನು ಮಾಳವದ ರಾಜ್ಯಪಾಲನನ್ನಾಗಿ ನೇಮಿಸಿ ಕ್ರಿ.ಶ. 793ರಲ್ಲಿ ಕಾಲವಶನಾದನು.

ಮೂರನೆ ಗೋವಿಂದ (ಕ್ರಿ.ಶ. 793–814) : ರಾಷ್ಟ್ರಕೂಟ ಸಾಮ್ರಾಟರಲ್ಲೆಲ್ಲಾ ಅತ್ಯಂತ ಪರಾಕ್ರಮಿಯೂ ದಕ್ಷನೂ ಆದ ಮುಮ್ಮಡಿ ಗೋವಿಂದನು ಕ್ರಿ.ಶ. 793ರಲ್ಲಿ ಸಾಮ್ರಾಟನಾದನು. ಸಿಂಹಾಸನಾಧಿ ಪತ್ಯಕ್ಕಾಗಿ ತನ್ನ ಹಿರಿಯ ಸಹೋದರ ಕಂಬನ ಜೊತೆ ಗೋವಿಂದನು ಹೋರಾಟ ಮಾಡಬೇಕಾಯಿತು. ಇದೆ ಸಮಯದಲ್ಲಿ ಗೋವಿಂದನು ಸರೆಯಲ್ಲಿದ್ದ ಗಂಗರ ಎರಡನೆ ಶಿವಮಾರನನ್ನು ಬಿಡುಗಡೆ ಮಾಡಿ ಆತನನ್ನು ಪುನಃ ಗಂಗವಾಡಿಯ ರಾಜನನ್ನಾಗಿ ನೇಮಿಸಿ ಸ್ನೇಹತ್ವದಿಂದಿರುವಂತೆ ತಿಳಿಸಿದ್ದನು. ಆದರೆ ಶಿವಮಾರನು ಕಂಬನ ಜೊತೆ ಸೇರಿ ಮೂರನೇ ಗೋವಿಂದನ ಮೇಲೆ ಯುದ್ಧ ಸಾರುವಂತಾದನು.

ಈ ಸಮಯದಲ್ಲಿ ಮೂರನೇ ಗೋವಿಂದನು ತನ್ನಿಂದ ಸೋಲಲ್ಪಟ್ಟು ಅಧೀನ ರಾಜರೆನಿಸಿಕೊಂಡಿದ್ದ ಪಲ್ಲವ, ಗಂಗಾ, ಚೇರ, ಪಾಂಡ್ಯ ಮೊದಲಾದ ದಕ್ಷಿಣ ರಾಜರ ಬೆಂಬಲದಿಂದ ಕಂಬನನ್ನು ಸುಲಭವಾಗಿ ಸೋಲಿಸಿದನು. ಆದರೆ ಆತನನ್ನು ಶಿಕ್ಷಿಸದೆ ಆತನಿಗೆ ತನ್ನ ಉದಾರತೆಯನ್ನು ತೋರಿಸಿ ಗಂಗವಾಡಿಯ ರಾಜ್ಯಪಾಲನಾಗಿ ನೇಮಿಸಿ ಶಿವಮಾರನನ್ನು ಪುನಃ ಸೆರೆಯಲ್ಲಿಟ್ಟನು. ಈ ದಂಗೆಯನ್ನಡಗಿಸಲು ನೆರವು ನೀಡಿದ ತನ್ನ ಸಹೋದರ ಇಂದ್ರನನ್ನು ಗುಜರಾತಿನ ರಾಜ್ಯಪಾಲನನ್ನಾಗಿ ಮಾಡಿದನು. ಶಿವಮಾರನು ಸೆರೆಯಲ್ಲಿಟ್ಟ ಸುದ್ದಿ ತಿಳಿದ ನೊಳಂಬವಾಡಿಯ ಅರಸ ಚಾರುಪೊನ್ನೇರ ಮೂರನೆ ಗೋವಿಂದನ ಸಾರ್ವಭೌಮತ್ವಕ್ಕೆ ತಾನಾಗಿಯೇ ಶರಣಾದನು. ನಂತರ ಪಲ್ಲವ ರಾಜ ದಂತಿಗನನ್ನು ಸೋಲಿಸಿ, ಅನಂತರ ಮೂರನೆ ಗೋವಿಂದನು ಉತ್ತರ ಭಾರತ ದಿಗ್ವಿಜಯ ಕೈಗೊಂಡು ವಿಂಧ್ಯ ಪ್ರಾಂತ್ಯದಲ್ಲಿ ಸೈನ್ಯ ಸ್ಥಾಪಿಸಿ ಝೂನ್ಸಿ, ಕನೂಜ್, ಭೂಪಾಲ್‌ನಲ್ಲಿ ತನ್ನ ಪರಮಾಧಿಕಾರ ಸ್ಥಾಪಿಸಲು ಸಿದ್ಧತೆ ಮಾಡಿದನು. ಹಿಂದಿನಂತೆಯೇ ಕನೂಜಿನ ಆಕ್ರಮಣಕ್ಕಾಗಿ ಪ್ರತಿಹಾರ ಪಾಲರ ನಡುವೆ ಘರ್ಷಣೆ ಮುಂದುವರೆದಿದ್ದವು.

ಧ್ರುವನು ಕನೂಜ್‌ನಿಂದ ಹಿಂತಿರುತಿದ್ದ ಬಳಿಕ ಧರ್ಮಪಾಲನೂ ಮತ್ತೊಮ್ಮೆ ಕನೂಜ್‌ಗೆ ಧಾವಿಸಿ ಇಂದ್ರಾಯುಧನನ್ನು ಸೋಲಿಸಿ ತನ್ನ ಅಧೀನನೂ ಆತನ ಪ್ರತಿಸ್ಪರ್ಧಿಯೂ ಆಗಿದ್ದ ಚಕ್ರಾಯುಧನನ್ನು ಕನೂಜ್ ಸಿಂಹಾಸನದಿಂದ ಹೊರದೂಡಿದನು. ಇಂತಹ ಸಮಯದಲ್ಲಿ ಮೂರನೇ ಗೋವಿಂದನು ಕನೂಜ್‌ನ ಮೇಲೆ ಆಕ್ರಮಣ ನಡೆಸಲು ಮುಂದಾಗಿ ನಾಗಭಟ್ಟನನ್ನು ಬುಂದೇಲ್ ಖಂಡದ ಬಳಿ ಸೋಲಿಸಿದನು. ಸೋತ ನಾಗಭಟ್ಟ ಗಂಗಾ ಬಯಲಿನಿಂದ ಓಡಿ ಹೋಗಿ ರಜಪುಟಾಣದ ಮರುಭೂಮಿಯಲ್ಲಿ ಅವಿತುಕೊಂಡನು. ರಾಷ್ಟ್ರಕೂಟರ ಸೈನ್ಯದ ಶಕ್ತಿಯನ್ನರಿತ ಚಕ್ರಾಯುಧ ಮತ್ತು ಧರ್ಮಪಾಲರು ಮೂರನೆ ಗೋವಿಂದನಿಗೆ ಶರಣಾಗತರಾದರು. ಹಿಮಾಲಯದ ತಪ್ಪಲಿನವರೆಗೂ ಅನಿರ್ಬಂಧಿತವಾಗಿ ಮುಂದುವರೆದ ಮೂರನೆ ಗೋವಿಂದನ ಅಶ್ವಪಡೆಗಳು, ಗಜ ಸೈನ್ಯ ಗಂಗಾನದಿಯ ಪವಿತ್ರ

ನೀರನ್ನು ಕುಡಿದವೆಂದು ಅಮೋಘವರ್ಷನ ಸಂಜಾತ ತಾಮ್ರಶಾಸನ ಉಲ್ಲೇಖಿಸಿದೆ. ಅಲ್ಲಿಂದ ಹಿಂತಿರುಗುವಾಗ ವಿಂಧ್ಯ ಪರ್ವತದ ತಪ್ಪಲು ಪ್ರದೇಶದಲ್ಲಿ ಶ್ರೀಭವನ(ಈಗಿನ ಬ್ರೋಚ್ ಜಿಲ್ಲೆಯ ಸರ್ಭಾನ)ದಲ್ಲಿ ರಾಜಶರ್ವನು ಮೂರನೆ ಗೋವಿಂದನನ್ನು ಸ್ವಾಗತಿಸಿ ಆತನಿಗೆ ಶರಣಾಗತನಾದನು. ಈ ವಿಜಯೋತ್ಸವದ ಸಮುಯದಲ್ಲಿ ಮೂರನೆ ಗೊವಿಂದನಿಗೆ ಪುತ್ರೋತ್ಸವವಾದ ಸುದ್ದಿ ತಲುಪಿತು. ಆತನೇ ಅಮೋಘವರ್ಷ ನೃಪತುಂಗ. ನಂತರ ಹಾಗೆಯೇಬರುತ್ತಿರುವಾಗ ಕಳಿಂಗ, ಕೋಸಲ ರಾಜರಿಂದ ಮೂರನೇ ಗೊವಿಂದನು ಕಾಣಿಕೆ ಸ್ವೀಕರಿಸಿ ಅಲ್ಲಿಯೇ ದೇವಾಲಯಗಳನ್ನು ನಿರ್ಮಿಸಿ ಧಾನ-ಧರ್ಮು ಮಾಡಿದನು. ಮೂರನೇ ಗೋವಿಂದನ ಉತ್ತರ ಭಾರತದ ದಂಡೆಯಾತ್ರೆಯು ಕ್ರಿ.ಶ 796ರಿಂದ 800ರ ಮಧ್ಯೆ ನಡೆಯಿತೆಂದು ತಿಳಿದುಬಂದಿದೆ.

ಮೂರನೆ ಗೋವಿಂದನು ಉತ್ತರದ ದಿಗ್ವಿಜಯದಲ್ಲಿ ನಿರತನಾಗಿದ್ದ ವೇಳೆಯಲ್ಲಿ ದಕ್ಷಿಣದಲ್ಲಿ ಗಂಗ, ಪಲ್ಲವ, ಪಾಂಡ್ಯ, ಕೇರಳರು ಸ್ವತಂತ್ರರಾಗಲು ಒಂದು ಒಕ್ಕೂಟವನ್ನು ರಚಿಸಿಕೊಂಡು ಕ್ರಿ.ಶ. 803-804ರಲ್ಲಿ ಆತನ ವಿರುದ್ದ ದಂಗೇಯೆದ್ದರು. ಆದರೆ ಮೂರನೆ ಗೋವಿಂದನು ಇವರೆಲ್ಲರನ್ನು ಯುದ್ಧದಲ್ಲಿ ಸೋಲಿಸಿ ಆಯಾ ರಾಜರುಗಳ ರಾಜ ಲಾಂಛನವನ್ನು ಕಸಿದುಕೊಂಡನು.ಈತನ ಈ ರೋತಿಯ ಸಾಹಸ ಧೈರ್ಯವನ್ನು ಕಂಡು ಹೆದರಿದ ಸಿಂಹಳದ ಅರಸ ತಾನು ರಾಷ್ಟ್ರಕೂಟ ಸಾಮ್ರಾಧಿಪತ್ಯಕ್ಕೆ ಶರಣಾಗಿರುವುದಾಗಿ ತನ್ನ ಹಾಗೂ ಮಂತ್ರಿಯೊಬ್ಬನ ವಿಗ್ರಹಗಳನ್ನುಮೂರನೆ ಗೋವಿಂದನ ಆಸ್ಥಾನಕ್ಕೆ ಕಳುಹಿಸಿದನು. ಅವುಗಳನ್ನು ಕಾಂಚಿಯ ಶಿವಾಲಯದಲ್ಲಿ ಸ್ಥಾಪಿಸಲಾಯಿತು. ಯುದ್ದಗಳಲ್ಲಿ ಪ್ರಚಂಡ ವಿಜಯಿಯಾಗಿದ್ದಂತೆ, ರಾಜತಂತ್ರ ಪರಿಣಿತನು, ದೂರದೃಷ್ಟಿಯುಳ್ಳವನು ಆಗಿದ್ದ ಮೂರನೆ ಗೋವಿಂದನು ರಾಷ್ಟ್ರಕೂಟ ಸಾಮ್ರಾಟರಲ್ಲಿ ಅತ್ಯಂತ ಸಮುರ್ಥ ಆಡಳಿತ ನೀತಿ ದಿಗ್ವಿಜಯಗಳಿಂದ ರಾಷ್ಟ್ರಕೂಟರ ಕೀರ್ತಯನ್ನು ಇಡೀ ಭಾರತದಲ್ಲೆಲ್ಲಾ ವ್ಯಾಪಿಸುವಂತೆ ಮಾಡಿದ್ದನು. ಈತನು ಪರಾಕ್ರಮಿಯಾಗಿದ್ದಂತೆ ಜ್ಞಾನ ಮುತ್ತು ಕಲೆಯ ಪೋಷಕನೂ ಆಗಿದ್ದನು. ಅವನ ಆಸ್ಥಾನವು ಕವಿಗಳಿಂದ ವಿದ್ವಾಂಸರುಗಳಿಂದಲೂ ಕೂಡಿತ್ತು "ಲಿಂಗಾನು ಶಾಸನ"ದ ಕರ್ತೃ ವಾಮುನು ಗೋವಿಂದನ ಆಸ್ಥಾನವನ್ನು "ಜಗತ್ತುಂಗಸಭೆ" ಎಂದು ಕರೆದಿದ್ದಾನೆ. ಅಪಬ್ರಂಶ ಮುಹಾಪುರಾಣದ ಕತೃ ಪುಷ್ಪದಂತ ತನ್ನ ಗ್ರಂಥವನ್ನು ಮಾನ್ಯಖೇಟದಲ್ಲಿ ಪೂರ್ಣಗೊಳಿಸಿದನು. ಮಹಾತಾರ್ಕಿಕ ವಿದ್ಯಾ ನಂದಿನ್, ಒಂದನೇ ಜಿನಸೇನ, ಲೋಕಸೇನಾ ಮೊದಲಾದ ವಿದ್ವಾಂಸರು ಈತನ ಸಮಕಾಲಿನರು. ತನ್ನ ಮಗನಾದ ನೃಪತುಂಗನಿಗೆಗೋವಿಂದನು ಮಹಾವೀರಾಚಾರ್ಯ ಎಂಬ ಜೈನ ವಿದ್ವಾಂಸನನ್ನು ಗುರುವಾಗಿ ನೇಮಿಸಿದ್ದನು. ಗೋವಿಂದನು ವೈದಿಕಮತಾವಲಂಬಿಯಾಗಿದ್ದರೂ ಜೈನ ವಿದ್ವಾಂಸರಿಗೂ,

ದಾರ್ಶನಿಕರಿಗೂ ಉದಾರ ಪ್ರೋತ್ಸಾಹ ನೀಡಿದ್ದನು. ಶ್ರೀವಲ್ಲಭ, ನರೇಂದ್ರ ಜಗತ್ತುಂಗ, ಪ್ರಭೂತ ವರ್ಷ, ಜಿನವಲ್ಲಭ, ಕೀರ್ತನಾರಾಯಣ, ತ್ರಿಭುವನದವಳ ಮುಂತಾದ ಬಿರುದುಗಳು ಮೂರನೆ ಗೋವಿಂದನಿಗಿದ್ದವು. ಗಾಮುಂಡಬ್ಬೆ ಇಂಬುವವಳು ಈತನ ಪತ್ನಿಯಾಗಿದ್ದಳೆಂದು ತಾಮ್ರ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಹೀಗೆ ರಾಷ್ಟ್ರಕೂಟ ಸಮ್ರಾಜ್ಯವನ್ನು ಕನ್ಯಕುಮಾರಿಯಿಂದ ಹಿಮಾಲಯವರೆಗೂ, ಸೌರಾಷ್ಟ್ರದಿಂದ ಬಂಗಾಳದವರೆಗೂ ವಿಸ್ತರಿಸಿದ್ದ ಮೂರನೇ ಗೋವಿಂದನು ಕ್ರಿ.ಶ. 814ರಲ್ಲಿ ಮರಣ ಹೊಂದಿದನು.

ಅಮೋಘವರ್ಷ ನೃಪತುಂಗ(ಕ್ರಿ.ಶ. 814–878): ಮೂರನೇ ಗೋವಿಂದನ ಪುತ್ರನಾದ ಅಮೋಘರ್ಷ ನೃಪತುಂಗ ಕ್ರಿ.ಶ. 814 ರಲ್ಲಿ ಅಧಿಕಾರಕ್ಕೆ ಬಂದು ಸುಮಾರು 62 ವರ್ಷಗಳ ದೀರ್ಘಕಾಲ ಆಳ್ವಿಕೆ ನಡೆಸಿದನು. ಈತನು ಅಧಿಕಾರಕ್ಕೆ ಬಂದಾಗ ಕೇವಲ 14 ವರ್ಷದ ಬಾಲಕನಾಗಿದ್ದನು. ಇದರಿಂದ ಆಡಳಿತದ ಜವಾಬ್ದಾರಿಯನ್ನು ಚಿಕ್ಕಪ್ಪನಾದ ಕಕ್ಕನು ನಿರ್ವಹಿಸುತ್ತಿದ್ದು ಕ್ರಿ.ಶ 821 ರ ತನಕ ಆಡಳಿತದ ಸಂಕಷ್ಟಗಳನ್ನು ನಿವಾರಿಸಿ ಆ ವರ್ಷ ಅಮೋಘವರ್ಷನನ್ನು ಸಿಂಹಾಸನದಲ್ಲಿ ಕೂರಿಸಿದನು. ಆರಂಭದಲ್ಲಿ ಈತ ಅವಿಧೇಯ ಸಾಮಂತರುಗಳನ್ನು, ಅನೇಕ ದಂಗೆಗಳನ್ನು ಅಡಗಿಸಿದನು. ಕ್ರಿ.ಶ 830 ರಲ್ಲಿ ಅಮೋಘವರ್ಷನು ವೆಂಗಿ ಚಾಲುಕ್ಯ ದೊರೆ ಗುಣಗ ವಿಜಯಾದಿತ್ಯನನ್ನು ವಿಂಗವಳ್ಳಿ ಎಂಬಲ್ಲಿ ತನ್ನ ಬಲಯುತವಾದ ಸೈನ್ಯದಿಂದ ಸೋಲಿಸಿದನು. ಸೋತ ಗುಣಗ ವಿಜಯಾದಿತ್ಯನು ರಾಷ್ಟ್ರಕೂಟರ ಸಾಮಂತಿಕೆಯನ್ನು ಒಪ್ಪಿದನಲ್ಲದೆ ಮುಂದೆ ಅಮೋಘವರ್ಷನು ಗಂಗರ ವಿರುದ್ಧ ಕೈಗೊಂಡ ಯುದ್ಧದಲ್ಲೂ ಆತನ ಸಹಾಯಕನಾಗಿ ನಿಂತನು.ಇತ್ತ ದಕ್ಷಿಣ ಕರ್ನಾಟಕದಲ್ಲಿ ಗಂಗರ ದೊರೆ ರಾಚಮಲ್ಲನು ಗಂಗವಾಡಿಯನ್ನು ಆಳುತ್ತಿದ್ದಾಗಆತನ ರಾಜ್ಯದ ಉತ್ತರ ಪ್ರದೇಶ ರಷ್ಟ್ರಕೂಟರ ಅಧೀನದಲ್ಲಿದ್ದು.

ಆ ಪ್ರದೇಶದಲ್ಲಿ ಮಂತ್ರಿ ಬಂಕೇಶ ಆಡಳಿತ ನಡೆಸುತ್ತಿದ್ದನು. ರಾಚಮಲ್ಲನು ರಾಷ್ಟ್ರಕೂಟರ ಅಧೀನದಲ್ಲಿದ್ದ ಆ ಭಾಗವನ್ನು ಪುನಃ ವಶಪಡಿಸಿಕೊಳ್ಳಲು ಪ್ರಯತ್ನಿಸಿದನಾದರೂ ಸಹ ಅದು ಸಾಧ್ಯವಾಗಲಿಲ್ಲ.ರಾಚಮಲ್ಲನ ನಂತರ ಅಧಿಕಾರಕ್ಕೆ ಬಂದ ಗಂಗರ ದೊರೆ ನೀತಿಮಾರ್ಗ ಎರೆಗಂಗನು ಸಹ ಉತ್ತರ ಪ್ರದೇಶದ ಮೇಲೆ ಆಕ್ರಮಣ ಮಾಡಲು ಸಿದ್ದನಾದನು.ಅದೇ ಸಮುಯದಲ್ಲಿ ಗುಜರಾತಿನಲ್ಲಿ ಕಾಣಿಸಿಕೊಂಡ ದಂಗೆಯೊಂದನ್ನು ಅಡಗಿಸಲು ಅಮೋಘವರ್ಷನು ಬಂಕೇಶನನ್ನು ಗಂಗವಾಡಿಯಿಂದ ಹಿಂದಕ್ಕೆ ಕರೆಯಿಸಿಕೊಂಡನು.ಇದೇ ಸಮಯವನ್ನು ಕಾಯುತ್ತಿದ್ದ ನೀತಿಮಾರ್ಗ ಎರೆಗಂಗ ಗಂಗವಾಡಿಯ ಉತ್ತರ ಪ್ರದೇಶದ ಮೇಲೆ ಆಕ್ರಮಣ ಮಾಡಿದನು. ಆದರೆ ತಕ್ಷಣವೇ ಸಾಮ್ರಾಜ್ಯಕ್ಕೊದಗಿದ ಅಪಾಯವನ್ನರಿತ ಬಂಕೇಶನು ಗಂಗರ ಮೇಲೆ ತಾನೇ ಯುದ್ಧ ಸಾರಿ ನೀತಿ ಮಾರ್ಗ

ಎರೆಗಂಗನನ್ನು ಸೋಲಿಸಿದುದಲ್ಲದೆ ಇಂದಿನ ತುಮಕೂರು ಜಿಲ್ಲೆಯವರೆಗೂ ರಾಷ್ಟ್ರಕೂಟ ರಾಜ್ಯ ವಿಸ್ತರಿಸುವಂತೆ ಮಾಡಿದನು. ಆದರೆ ಬಂಕೇಶನನ್ನು ಹಿಂದಕ್ಕೆ ಕರೆಯಿಸಿಕೊಂಡ ನೃಪತುಂಗ ಆತನನ್ನು ಗುಜರಾತಿನ ಕಡೆ ಕಳುಹಿಸಿದನು. ಆದರೆ ಗಂಗರು ಪುನಃ ರಾಷ್ಟ್ರಕೂಟರ ಗಡಿಗಳನ್ನು ಮುತ್ತಿದರು ಇದರಿಂದ ಸಿಟ್ಟಿಗೆದ್ದ ಅಮೋಘವರ್ಷನು ತನ್ನ ಸಾಮಂತ ದೊರೆ ವೆಂಗಿ ಚಾಲುಕ್ಯರ ಗುಣಗ ವಿಜಯಾದಿತ್ಯನ ನೆರವಿನಿಂದ ನೀತಿಮಾರ್ಗ ಎರೆಗಂಗನನ್ನು ಕ್ರಿ.ಶ. 856ರಲ್ಲಿ ಕೋಲಾರ ಜಿಲ್ಲೆಯ ರಾಜರಮಡು ಎಂಬಲ್ಲಿ ಸೋಲಿಸಿದನು.

ಅಮೋಘವರ್ಷ ನೃಪತುಂಗನ ಆಳ್ವಿಕೆಯ ಪ್ರಾರಂಭದ ಇಪ್ಪತ್ತು ವರ್ಷಗಳ ಕಾಲ ಗಂಗರಿಗೂ ರಾಷ್ಟ್ರಕೂಟರಿಗೂ ನಿರಂತರವಾಗಿ ಯುದ್ಧಗಳು ನಡೆದವು. ಶಾಂತಿಪ್ರಿಯನಾದ ಅಮೋಘವರ್ಷನು ತಲಕಾಡು ಗಂಗರೊಡನೆ ಹಗೆತನ ಮುಂದುವರೆಸಲು ಬಯಸದೇ ತನ್ನ ಮಗಳಾದ ಚಂದ್ರೋಬಲಬ್ಬೆಯನ್ನು ಗಂಗರ ಯುವರಾಜ ಒಂದನೇ ಬೂತುಗನಿಗೆ ಧಾರೆಯೆರೆದು ಕೊಟ್ಟನು.ಈ ವಿವಾಹಗಳಿಂದ ಎರಡು ಮನೆತನಗಳ ಮಧ್ಯೆ ನೂರಾರು ವರ್ಷಗಳ ಕಾಲ ಮುಂದುವರೆದು ಕೊಂಡು ಬಂದಿದ್ದ ಹಗೆತನ ಈ ಸಂಬಂಧದ ಮೂಲಕ ಕೊನೆಗೊಂಡಿತ್ತು. ಮುಂದೆ ಯುದ್ಧ ಕಾರ್ಯಾಚಣೆಯಲ್ಲಿ ಹೆಚ್ಚಿನ ವಲವಿಲ್ಲದ್ದರಿಂದ ಅಮೋಘವರ್ಷ ತನ್ನ ಮತ್ತೊಬ್ಬ ಮುಗಳಾದ ಶೀಲ ಮಹಾದೇವಿಯನ್ನು ತನ್ನ ಸಾಮಂತ ದೊರೆ ವೆಂಗಿಯ ವಿಜಯಾದಿತ್ಯನ ಮುಗನಾದ ವಿಷ್ಣುವರ್ಧನನಿಗೆ ಧಾರೆಯೆರೆದು ಕೊಟ್ಟನೆಂದು ಪಂಚಮುಖಿಯವರು ತಿಳಿಸುತ್ತಾರೆ. ಹಾಗೆಯೇ ಹುಲ್ಸರವರು ತಿಳಿಸಿರುವಂತೆ "ಅಮೋಘವರ್ಷನು ತನ್ನ ಮುತ್ತೊಬ್ಬ ಮಗಳಾದ ಶಂಬಾಳನ್ನು ಕಂಚಿಯ ಪಲ್ಲವ ರಾಜ ನಂದಿವರ್ಮನಿಗೆ ವಿವಾಹ ಮಾಡಿಕೊಟ್ಟಿದ್ದನು". ನೀಲಗುಂದ ಮತ್ತು ಶಿರೂರಿನ ಶಾಸನಗಳು ಉಲ್ಲೇಖಿಸಿರುವಂತೆ "ಅಮೋಘವರ್ಷನು ಅಂಗ, ವಂಗ, ಮಗದ, ಮಾಳ್ವ, ವೆಂಗಿ ಮತ್ತಿತರ ಅಕ್ಕಪಕ್ಕದ ರಾಷ್ಟ್ರಗಳಿಂದಲೂ ಗೌರವಾನ್ವಿತನಾಗಿದ್ದನು"

ಅಮೋಘವರ್ಷ ನೃಪತುಂಗ ತನ್ನ ಆಳ್ವಿಕೆಯ ಕೊನೆಯ ದಿನಗಳಲ್ಲಿ ತನ್ನ ಮಗನಾದ ಕೃಷ್ಣನ ದಂಗೆಯನ್ನೆದುರಿಸಬೇಕಾಯಿತು. ಹಲವು ಶ್ರೀಮಂತ ಸಾಮಂತರೊಡಗೂಡಿದ ಕೃಷ್ಣ ತನ್ನ ತಂದೆಯ ವಿರುದ್ಧವೇ ದಂಗೆಯೆದ್ದು ತಲಕಾಡಿಗೆ ಪಲಾಯನಗೈದ, ಮಗನನ್ನು ಒಳ್ಳೆಯ ದಾರಿಗೆ ತರುವ ಸದುದ್ದೇಶದಿಂದ ನೃಪತುಂಗನು ಆತನನ್ನು ಕರೆತರಲು ತನ್ನ ನೆಚ್ಚಿನ ಸೇನಾನಿ ಬಂಕೇಶನನ್ನು ಕಳುಹಿಸಿದನು. ಸೈನ್ಯ ಸಮೇತನಾಗಿ ಹೋಗುತ್ತಿರುವಾಗ ಬಂಕೇಶನು ಕೈದಾಳ ಕೋಟೆಯನ್ನು ವಶಪಡಿಸಿಕೊಂಡನು.ನಂತರ ಕಾವೇರಿ ನದಿಯನ್ನು ದಾಟಿ ತಲಕಾಡಿನಲ್ಲಿದ್ದ ಕೃಷ್ಣನನ್ನು ಕರೆತಂದು ಅಮೋಘವರ್ಷ ನೃಪತುಂಗನಿಗೆ ಒಪ್ಪಿಸಿದ. ಇದರಿಂದ ಅಪಾರ ಸಂತಸನಾದ ದೊರೆ ಬಂಕೇಶನನ್ನು ಬನವಾಸಿ ಪ್ರದೇಶದ ಆಡಳಿತದ ಮುಖ್ಯಾಧಿಕಾರಿಯನ್ನಾಗಿ

ಬಂಕೇಶನ ಹೆಸರಿನಲ್ಲಿ ಬಂಕಾಪುರ ನಗರವನ್ನು ನಿರ್ಮಾಣ ಮಾಡಿಸಿದನು. ಅಮೋಘವರ್ಷನ ಆಳ್ವಿಕೆಯ ಕೊನೆಯ ದಿನಗಳಲ್ಲಿ ಸಮ್ರಾಜ್ಯಕ್ಕೆ ಮತ್ತೊಂದು ಆಪತ್ತು ಬಂದೊದಗಿತು. ಸಾಂಕ್ರಾಮಿಕ ರೋಗವೊಂದುರಾಜ್ಯದಾದ್ಯಂತ ಹರಡಿದ್ದರಿಂದ ಜನತೆ ವಿಪತ್ತಿನಲ್ಲಿ ಸಿಲುಕಿಸಿಕೊಳ್ಳುವಂತಾದರು ಇದರಿಂದ ಪಾರಾಗಲು ಅರಸ ತನ್ನ ಕೈ ಬೆರಳಿನ ರಕ್ತವನ್ನು ದೇವಿಗೆ ಸಮರ್ಪಿಸಿದರೆಸಾಮ್ರಾಜ್ಯಕ್ಕೊದಗಿದ ಸಂಕಟ ಪಾರಾಗುವದೆಂದು ಬೇರೊಬ್ಬರು ಅರಸನಿಗೆತಿಳಿಸಿದರು. ಇದರಿಂದ ಸಂತಸಗೊಂಡ ನೃಪತುಂದ ಕೊಲ್ಲಾಪುರದ ಮುಹಾಲಕ್ಷಿಗೆ ತನ್ನ ಎಡಗೈ ಬೆರಳನ್ನು ಕತ್ತರಿಸಿ ಅರ್ಪಿಸಲು ರಾಜ್ಯದ ಪ್ರಜೆಗಳು ವಿಪತ್ತಿನಿಂದ ಪಾರಾಗಲು. ಅಮೋಘವರ್ಷನ ಆಳ್ವಿಕೆಯ ದಿನಗಳಲ್ಲಿ ಸಾಮ್ರಾಜ್ಯಕ್ಕೆ ಆಪತ್ತು ಬಂದಿದ್ದಿತ್ತು. ಆದ್ದರಿಂದ ದೊರೆ ತನ್ನ ತ್ಯಾಗದಿಂದ ಜನತೆಗೆ ಅನುಕೂಲವಾಗುವಂತೆ ಮಾಡಿದ್ದ ಎಂದು ಶಾಸನವೊಂದರಲ್ಲಿ ಉಲ್ಲೇಖಿಸಿದರೆ ಪಂಜಾಬ್ ಶಾಸನದಲ್ಲಿ ನೃಪತುಂಗ ಕೊಲ್ಲಾಪುರದ ಮುಹಾಲಕ್ಷಿಗೆ ಪ್ರಜೆಗಳ ಹಿತಕ್ಕಾಗಿ ತನ್ನ ಎಡಗೈ ಬೆರಳನ್ನು ಅರ್ಪಣೆ ಮಾಡಿದುದನ್ನು ಉಲ್ಲೇಖಿಸಿದೆ.

ನೃಪತುಂಗ ಅಮೋಘವರ್ಷ ಜೈನ ಮತಾವಲಂಬಿಯಾಗಿದ್ದಂತೆ ಕಂಡು ಬರುತ್ತದೆ. ಜೈನ ಮತದ ಕಡೆಗೆ ಅವನ ಮನಸ್ಸು ಹೆಚ್ಚಿದ್ದು ಅವನ ಕಾಲದ ಪರಿಸರ ಕಾರಣವಾಗಿತ್ತು. ಮೇದಾವಿಗಳು ಜ್ಞಾನಿಗಳು ಆದ ಅನೇಕ ಮುಂದಿ ಜೈನ ತಪೋಧರರು ಅವನ ಸಮಕಾಲಿನವರು. ಧರ್ಮನ್ನಿಟನು, ಶಾಂತಿಪ್ರಿಯನು ಮತ್ತು ಜ್ಞಾನ ಪಕ್ಷಪಾತಿಯೂ ಆಗಿದ್ದು ಸ್ವತಃ ಕವಿಯಾಗಿ ಗ್ರಂಥ ರಚನೆ ಮಾಡಿದ್ದಲ್ಲದೆ ಕವಿಗಳಿಗೆ ವಿಶೇಷ ಪ್ರೋತ್ಸಾಹ ನೀಡಿದನು. ಅವನ ಪ್ರೋತ್ಸಾಹದಿಂದ ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಅನೇಕ ಗ್ರಂಥಗಳು ರಚನೇಯಾದವು. ಅತಿ ಪ್ರಾಚೀನ ಕನ್ನಡ ಕೃತಿ ಎಂದು ಹೇಳಲಾದ 'ಕವಿರಾಜ ಮಾರ್ಗವು' ಶ್ರೀ ವಿಜಯನಿಂದ ರಚಿಸಲ್ಪಟ್ಟಿತು. ದಂಡಿಯ 'ಕಾವ್ಯದರ್ಶನದ' ಆಧಾರದ ಮೇಲೆ ರಚಿತವಾಗಿರುವ ಕವಿರಾಜ ಮಾರ್ಗ ಹಳಗನ್ನಡದಲ್ಲಿದೆ. ಪ್ರಥಮ ಬಾರಿಗೆ ಕರ್ನಾಟಕವು ಗೋದಾವರಿಯಿಂದ ಕಾವೇರಿಯವರೆಗೂ ವಿಸ್ತರಿಸಿದ್ದ ಸಂಗತಿ ಕವಿರಾಜ ಮಾರ್ಗದಲ್ಲಿ ಕಂಡು ಬರುತ್ತದೆ. ಸಂಸ್ಕೃತದಲ್ಲಿ ಪ್ರಶ್ನೋತ್ತರ ಮಾಲಾವನ್ನು ನೃಪತುಂಗವನ್ನು ರಚಿಸಿರುವನು.

ಅಮೋಘವರ್ಷನ ಗುರುವಾಗಿದ್ದ ಜಿನ ಸೇನಾಚಾರ್ಯರು 'ಆದಿಪುರಾಣ' 'ಪಾರ್ಶ್ವಾಭ್ಯುದಯ' 'ಜಯಧವಳ'ಎಂಬ ಗೃಂಥವನ್ನು ರಚಿಸಿರುವರು. ಇವನ ಶಿಷ್ಯನಾದ ಗುಣಭದ್ರನೆಂಬುವವನು ಕುಮಾರ ಕೃಷ್ಣನ ಗುರುವಾಗುದ್ದರು. ಮಗಾ ವೀರಾಚಾರ್ಯನು. 'ಗಣಿತಸಾರ ಸಂಗ್ರಹ' ಜೈನ ಮುನಿ ಕುಮುಂದೇಂದು 'ಸಿರಿಭೂವಲಯ' ಎಂಬ ಗಣಿತ ಗ್ರಂಥವನ್ನುಬರೆದರು. ಮಾಣಿಕ್ಯ ನಂದಿನ್ ವಿದ್ವಾಂಸನು 'ಪರೀಕ್ಷಾ ಮುಖ ಸೂತ್ರ' ಮತ್ತು ಪ್ರಬಾಚಂದ್ರ ಇಂಬುವವನು 'ನ್ಯಾಯ ಕುಮುದ ಚಂದ್ರೋದಯ' ಎಂಬ ಗ್ರಂಥವನ್ನು,

ಶಾಕಟಾಯನ ಎಂಬ ಜೈನ ಪಂಡಿತರನು 'ಶಬ್ದಾನುಶಾಸನ' ಎಂಬ ಸಂಸ್ಕೃತ ವ್ಯಾಕರಣ ಗ್ರಂಥವನ್ನು 'ಅಮೋಘ ವೃತ್ತಿ' ಎಂಬ ಟೀಕಾ ಗ್ರಂಥವನ್ನು ಬರೆದಿದ್ದಾರೆ. ಉಗ್ರಾದಿತ್ಯನು 'ಕಲ್ಯಾಣಕಾರಕ' ಎಂಬ ಗ್ರಂಥವನ್ನು, ಪಾತ್ರಕೇಸರಿ ವಿದ್ಯಾನಂದಿನ್ ಎಂಬ ಆಚಾರ್ಯನು ತತ್ವಾರ್ಥ ಶ್ಲೋಕವಾರ್ಧಿಕ, ಆಪ್ತಪರೀಕ್ಷ, ಪಾತ್ರಪರಿಕ್ಷ ಎಂಬ ಗ್ರಂಥಗಳನ್ನು ರಚಿಸಿರುವರು. ಇವುಗಳೆಲ್ಲವೂ ಅಮೋಘವರ್ಷನ ಕಾಲದಲ್ಲಿ ರಚನೆಗೊಂಡ ಸಾಹಿತ್ಯ ಕೃತಿಗಳಾಗಿವೆ.

ಅಮೋಘವರ್ಷನಿಗೆ ಶರ್ವ ಎಂಬ ವೈಯಕ್ತಿಕವಾದ ಹೆಸರಿದ್ದು ಆತನಿಗೆ ನೃಪತುಂಗ, ಅತಿಶಯದವಳ, ವೀರನಾರಾಯಣ, ಶ್ರೀವಲ್ಲಭ, ರಟ್ಟ, ಮಾರ್ತಾಂಡ ಎಂಬ ಬಿರುದುಗಳಿದ್ದವು. ಅಗಸವ್ವೆ ಎಂಬುವವಳು ನೃಪತುಂಗನ ರಾಣಿಯಾಗಿದ್ದಳು. ರಾಷ್ಟ್ರಕೂಟರ ಹೊಸ ರಾಜಧಾನಿಯಾದ ಮಾನ್ಯಖೇಟವು ನೃಪತುಂಗನಿಂದಲೇ ನಿರ್ಮಾಣವಾಯಿತು. ಈ ಹೊಸರಾಜಧಾನಿ ದೇವಲೋಕದ ಇಂದ್ರನ ರಾಜಧಾನಿಯನ್ನು ಸಹ ನಾಚಿಸುವಂತಹದ್ದಾಗಿತ್ತೆಂದು ಶಾಸನಗಳು ವರ್ಣಿಸಿವೆ. ಸುಮಾರು 64 ವರ್ಷಗಳ ಸುದೀರ್ಘ ಕಾಲ ರಾಜ್ಯಭಾರ ಮಾಡಿದ ನೃಪತುಂಗ ಕ್ರಿ.ಶ. 880ರಲ್ಲಿ ವಿಧಿವಶನಾದನು. ಕ್ರಿ.ಶ. 815ರಲ್ಲಿ ಅಮೋಘವರ್ಷನ ಆಸ್ಥಾನಕ್ಕೆ ಭೇಟಿ ನೀಡಿದ್ದ ಅರೇಬಿಯಾದ ವರ್ತಕ ಸುಲೇಮಾನ್ ನೃಪತುಂಗನ ರಾಜಧಾನಿಯ ವೈಭವ ಹಾಗೂ ಆತನ ಉದಾರ ಗುಣಗಳನ್ನು ಮೆಚ್ಚಿ ಆತನನ್ನು ಬಾಗ್ದಾದಿನ ಖಲೀಫ, ಚೀನಾ, ಕಾನ್‌ಸ್ಟಾಂಟಿನೋಪಲ್ ಸಾಮ್ರಾಟರೊಡನೆ" ಹೋಲಿಸಿದ್ದಾನೆ.

ಎರಡನೆ ಕೃಷ್ಣ (ಕ್ರಿ.ಶ. 880–914): ನೃಪತುಂಗನ ಮಗನಾದ ಎರಡನೆ ಕೃಷ್ಣನು ಅಧಿಕಾರರೂಡನಾದ ತಕ್ಷಣವೇ ಪೂರ್ವದ ಚಾಲುಕ್ಯರು, ಗುರ್ಜರ ಪ್ರತಿಹಾರರು ಹಾಗೂ ಚೋಳರ ಪ್ರತಿರೋಧವನ್ನು ಎದುರಿಸಬೇಕಾಯಿತು. ಗೋವಿಂದನ ನಂತರ ಬಹುಕಾಲ ಉತ್ತರದ ರಾಜಕೀಯ ವ್ಯವಸ್ಥೆಯಲ್ಲಿ ಹಸ್ತಕ್ಷೇಪ ಮಾಡದಿದ್ದ ಗುರ್ಜರ ಪ್ರತಿಹಾರನು ಎರಡನೆ ಕೃಷ್ಣನ ಆಳ್ವಿಕೆಯಲ್ಲಿ ಆತನ ವಿರುದ್ಧ ಹೋರಾಡುವಂತಾದರು. ಗೂರ್ಜರ ರಾಜನಾದ ಭೋಜನು ಉಜ್ಜೈನಿಯನ್ನು ಮತ್ತು ರಾಷ್ಟ್ರಕೂಟರ ಗಡಿ ಪ್ರದೇಶಗಳನ್ನು ಆಕ್ರಮಿಸಿದನು. ನರ್ಮದಾನದಿ ತೀರದಲ್ಲಿ ರಾಷ್ಟ್ರಕೂಟರಿಗೂ ಗುರ್ಜರರಿಗೂ ಹೋರಾಟ ನಡೆದು ಎರಡನೆ ಕೃಷ್ಣನು ಭೋಜನಿಂದ ಸೋಲನ್ನನುಭವಿಸಿದನು. ಆದರೆ ತಕ್ಷಣವೇ ಗುಜರಾತಿನಲ್ಲಿದ್ದ ರಾಷ್ಟ್ರಕೂಟರ ರಾಜ್ಯಪಾಲ ಕೃಷ್ಣನ ಸಹಾಯಕ್ಕೆ ಧಾವಿಸಿ ಬಂದು ಭೋಜನನ್ನು ಸೋಲಿಸಿ ಉಜ್ಜೈನಿಯನ್ನು ವಶಪಡಿಸಿಕೊಂಡುದಲ್ಲದೆ ರಾಷ್ಟ್ರಕೂಟ ಗಡಿಗಳನ್ನು ಸಂರಕ್ಷಿಸಿದನು. ಇದೇ ಸಮಯದಲ್ಲಿ ವೆಂಗಿಯ ಚಾಳುಕ್ಯ ದೊರೆ ಗುಣಗ ವಿನಯಾದಿತ್ಯನು ತನ್ನ ಸೇನಾನಿ ಪಾಂಡುರಂಗನೊಡನೆ ಗೂಡಿ ಎರಡನೆ ಕೃಷ್ಣನ ವಿರುದ್ಧ ಯುದ್ಧ ಸಾರಿದನು. ಎರಡನೆ ಕೃಷ್ಣನು ತನ್ನ ಬಾವಮೈದುನನಾದ ಚೇದಿ ಮನೆತನದ ಶಂಕರಗಣನೊಡಗೂಡಿ ವಿನಯಾದಿತ್ಯನ ವಿರುದ್ಧ

ಹೋರಾಡಿದನಾದರು ಅಂತಿಮವಾಗಿ ವಿನಯಾದಿತ್ಯನಿಂದ ಸೋಲನ್ನನುಭವಿಸಿದನು. ಗುಣಗ ವಿನಯಾದಿತ್ಯನ ಮರಣದ ನಂತರ ಆತನ ಮಗ ಎರಡನೇ ಭೀಮ ವೆಂಗಿ ಚಾಳುಕ್ಯರ ರಾಜನಾದನು. ಹಿಂದಿನ ಸೋಲಿನ ಸೇಡನ್ನು ತೀರಿಸಿಕೊಳ್ಳಲು ಭೀಮನ ವಿರುದ್ಧ ಕೃಷ್ಣನು ಬದ್ದೆಗನೆಂಬುವವನನ್ನು ಕಳುಹಿಸಿದನು. ಭೀಮನು ಯುದ್ಧದಲ್ಲಿ ಸೋತು ತನ್ನ ರಾಜ್ಯವನ್ನೆಲ್ಲಾ ಬಿಟ್ಟುಕೊಟ್ಟನು. ಆದರೆ ತಕ್ಷಣವೇ ಹಲವಾರು ಸಾಮಂತರೊಡಗೂಡಿ ಭೀಮನು ಕೃಷ್ಣನ ವಿರುದ್ಧ ಕಾರ್ಯಾಚರಣೆ ಕೈಗೊಂಡನು. ಇದರಿಂದ ಪುನಃ ಸಿಟ್ಟಿಗೆದ್ದ ಎರಡನೆ ಕೃಷ್ಣ ತನ್ನ ಸೇನಾನಿಯಾದ ಗುಂಡಯ್ಯನೆಂಬುವವನನ್ನು ಭೀಮನ ವಿರುದ್ಧ ಯುದ್ಧಕ್ಕೆ ಕಳುಹಿಸಿದನು. ನಿರವದ್ಯಪುರ (ಈಗಿನ ಪೂರ್ವಗೋದಾವರಿ ಜಿಲ್ಲೆಯ ನಿಡದವೋಲು) ಎಂಬಲ್ಲಿ ಭೀಮನು ರಾಷ್ಟ್ರಕೂಟರ ಸೈನ್ಯವನ್ನು ಸೋಲಿಸಿ ತನ್ನ ರಾಜ್ಯವನ್ನು ಹಿಂದಕ್ಕೆ ಪಡೆದನು.

ಹೀಗೆ ಯುದ್ಧಗಳಲ್ಲಿ ಹೆಚ್ಚಾಗಿ ಸೋಲನ್ನೇ ಅನುಭವಿಸಿದ ಎರಡನೆ ಕೃಷ್ಣ ದಕ್ಷಿಣದಲ್ಲಿ ಪ್ರಾಬಲ್ಯಕ್ಕೆ ಬರುತ್ತಿದ್ದ ಚೋಳರ ಜೊತೆ ಸಂಬಂಧವೇರ್ಪಡಿಸಿಕೊಳ್ಳಲು ಮುಂದಾದನು. ಅವರ ಸ್ನೇಹ ಬಯಸಿದ ಕೃಷ್ಣ ಆ ಮನೆತನದ ಒಂದನೆ ಆದಿತ್ಯನೆಂಬುವವನಿಗೆ ತನ್ನ ಮಗಳನ್ನು ಧಾರೆಯೆರೆದುಕೊಟ್ಟನು. ಎರಡನೆ ಕೃಷ್ಣನು ತನ್ನ ಮಗನಾದ ಜಗತ್ತುಂಗನೆಂಬುವವನಿಗೆ ಚೇದಿಯ ಶಂಕರಗಣನ ಮಕ್ಕಳಾದ ಲಕ್ಷ್ಮೀ ಮತ್ತು ಗೋವಿಂದಾಂಬೆಯರನ್ನು ವಿವಾಹ ಮಾಡಿಸಿದ್ದನು. ತನ್ನ ಜೀವಿತದ ಕೊನೆಯ ತನಕ ಬಹುಪಾಲು ಯುದ್ಧಗಳಲ್ಲಿ ಸೋಲನ್ನೇ ಕಂಡ ಎರಡನೆ ಕೃಷ್ಣ ಅಕಾಲ ವರ್ಷ, ಶುಭಾತುಂಗ, ಪೃಥ್ವಿವಲ್ಲಭ ಎಂಬ ಬಿರುದನ್ನು ಧರಿಸಿದ್ದನು. ಈತನು ಜೀವಿಸಿದ್ದಾಗಲೇ ಮಗನಾದ ಜಗತ್ತುಂಗ ಮರಣ ಹೊಂದಿದ್ದರಿಂದ ಮೊಮ್ಮಗನಾದ ಇಂದ್ರ ರಾಷ್ಟ್ರಕೂಟರ ರಾಜನಾದನು.

ಮೂರನೆ ಇಂದ್ರ (ಕ್ರಿ.ಶ. 914–928) : ತನ್ನ ತಾತ ಎರಡನೆ ಕೃಷ್ಣನ ನಂತರ ಮೂರನೇ ಇಂದ್ರನು ರಾಷ್ಟ್ರಕೂಟರ ರಾಜನಾದನು. ಈತನು ತನ್ನ ವಂಶದ ಮೂರನೆ ಗೋವಿಂದನಂತೆ ಹೆಚ್ಚು ಸಮರ್ಥನೂ ಧೈರ್ಯಶಾಲಿಯೂ ಆಗಿದ್ದನು. ಈತನ ಆಳ್ವಿಕೆಯ ಅತಿ ಮುಖ್ಯ ಘಟನೆಯೆಂದರೆ ಉತ್ತರ ಭಾರತದ ದಿಗ್ವಿಜಯ. ಕ್ರಿ.ಶ.916–17ರಲ್ಲಿ ಮೂರನೆ ಇಂದ್ರ ತನ್ನ ಸಾಮಂತನಾದ ಚಾಲುಕ್ಯ ವಂಶದ ನರಸಿಂಹನೊಡಗೂಡಿ ಗುರ್ಜರ ಪ್ರತಿಹಾರ ಪ್ರಾಂತ್ಯವನ್ನು ಆಕ್ರಮಣ ಮಾಡಿದನು. ಸೈನ್ಯವು ಯಮುನಾ ನದಿಯನ್ನು ದಾಟಿ ಕನೂಜನ್ನು ವಶಪಡಿಸಿಕೊಂಡಿತು. ಪ್ರತಿಹಾರ ರಾಜ ಮಹಿಪಾಲನು ಶತ್ರುವಿಗೆ ಹೆದರಿ ಓಡಿ ಹೋದನು. ಪಂಪಕವಿಯು ಮಹಿಪಾಲನು ಸೋಲನು ಈ ರೀತಿ ವರ್ಣಿಸಿದ್ದಾನೆ "ಉಂಡೆಡೆಯೊಳುಣ್ಣದೆ ಕೆಡೆದೆಡೆಯೊಳ್ಕೆಡೆಯದೆ ನಿಂದೆಡೆಯೊಳ್ನಿಲ್ಲದೆ ಓಡಿದನು". ನಂತರ ಮೂರನೆ ಇಂದ್ರನು ಆಂಧ್ರ ಮಂಡಲದ ಪಶ್ಚಿಮ ಭಾಗವನ್ನಾಳುತ್ತಿದ್ದ ಬಾಣರನ್ನು ಸೋಲಿಸಿ ರಾಷ್ಟ್ರಕೂಟ ಸಾಮ್ರಾಜ್ಯಕ್ಕೆ

ಅಧೀನರನ್ನಾಗಿಸಿದನು. ಕ್ರಿ.ಶ. 928ರಲ್ಲಿ ಮೂರನೆ ಇಂದ್ರನು ವೆಂಗಿ ಚಾಳುಕ್ಯರ ರಾಜಕೀಯ ಘರ್ಷಣೆಯಲ್ಲಿ ಮಧ್ಯೆ ಪ್ರವೇಶಿಸಿ ಒಂದನೆ ತಡಪನ ಮಗ ಎರಡನೆ ಯುದ್ಧಮಲ್ಲನಿಗೆ ಸಿಂಹಾಸನ ದೊರಕಿಸಿಕೊಟ್ಟು, ಅವನೂ ಸಹ ರಾಷ್ಟ್ರಕೂಟರ ಅಧೀನವಾಗಿರುವಂತೆ ಮಾಡಿದನು. ನಿತ್ಯವರ್ಷ, ರಟ್ಟಕಂದರ್ಪ ಎಂಬ ಬಿರುದುಗಳನ್ನು ಹೊಂದಿದ್ದ ಮೂರನೆ ಇಂದ್ರನು ಚೇದಿ(ಕಲಚೂರಿ) ಮನೆತನದ ಅಮ್ಮಣದೇವನ ಮಗಳಾದ ವಿಜಾಂಬೆಯನ್ನು ವರಿಸಿದ್ದನು. ಈತನಿಗೆ ಎರಡನೆ ಅಮೋಘವರ್ಷ ಮತ್ತು ನಾಲ್ಕನೆ ಗೋವಿಂದ ಎಂಬ ಇಬ್ಬರು ಮಕ್ಕಳಿದ್ದು ಕ್ರಿ.ಶ. 928ರಲ್ಲಿ ಮೂರನೆ ಇಂದ್ರ ಕೀರ್ತಿಶೇಷನಾದನು. ಈತನ ನಂತರ ಎರಡನೆ ಅಮೋಘವರ್ಷ ಪಟ್ಟಕ್ಕೆ ಬಂದರೂ ಸಹ ಕೇವಲ ಒಂದು ವರ್ಷದೊಳಗೆ ತನ್ನ ತಮ್ಮನಾದ ನಾಲ್ಕನೆ ಗೋವಿಂದನ ಕ್ರೂರ ದೃಷ್ಟಿಗೆ ಬಲಿಯಾಗಿ ಅಧಿಕಾರ ಕಳೆದುಕೊಂಡನು.

ನಾಲ್ಕನೆ ಗೋವಿಂದ (ಕ್ರಿ.ಶ.931–936) : ತನ್ನ ಅಣ್ಣನನ್ನು ಮೋಸದಿಂದ ಸಿಂಹಾಸನದಿಂದ ಹೊರದೂಡಿ ರಾಜನಾದ ನಾಲ್ಕನೆ ಗೋವಿಂದ ತನ್ನ ಆಡಳಿತಾವಧಿಯಲ್ಲಿ ಯಾವುದೇ ರೀತಿಯ ಗಮನಾರ್ಹ ಸಾಧನೆಗೈಯಲಿಲ್ಲ. ಈತನ ಅಧಿಕಾರಾವಧಿಯಲ್ಲಿ ವೆಂಗಿ ಚಾಳುಕ್ಯರಲ್ಲಿ ಅಧಿಕಾರಕ್ಕಾಗಿ ಘರ್ಷಣೆ ಸಂಭವಿಸಿತ್ತು. ನಾಲ್ಕನೆ ಗೋವಿಂದನು ಅನವಶ್ಯಕವಾಗಿ ವೆಂಗಿಯ ಚಾಲುಕ್ಯ ಕುಲದ ಅರಿಕೇಸರಿಯ ಪಕ್ಷವಹಿಸಿದನು. ಅಂತಿಮವಾಗಿ ಅರಿಕೇಸರಿ ಯುದ್ಧದಲ್ಲಿ ಗೆದ್ದು ನಾಲ್ಕನೆ ಗೋವಿಂದ ರಣರಂಗದಲ್ಲಿ ಸಾವನ್ನಪ್ಪಿದನು. ನಂತರ ಮುಮ್ಮಡಿ ಇಂದ್ರನ ಮಲಸೋದರನಾದ ಮುಮ್ಮಡಿ ಅಮೋಘವರ್ಷನನ್ನು ರಾಜನನ್ನಾಗಿ ಮಾಡಲಾಯಿತು. ಮುಮ್ಮಡಿ ಅಮೋಘವರ್ಷನು ಕ್ರಿ.ಶ. 936ರಲ್ಲಿ ರಾಜನಾದರೂ ಸಹ ಆ ವೇಳೆಗಾಗಲೆ ಆತನು ವೃದ್ಧಾಪ್ಯನಾಗಿದ್ದು ಧಾರ್ಮಿಕ ಪ್ರವೃತ್ತಿಳ್ಳವನಾಗಿದ್ದನು. ಕೇವಲ 3 ವರ್ಷ ಆಳ್ವಿಕೆ ನಡೆಸಿದ ಮುಮ್ಮಡಿ ಅಮೋಘವರ್ಷನು ಕ್ರಿ.ಶ. 939ರಲ್ಲಿ ಮರಣ ಹೊಂದಿದನು. ಈತನಿಗೆ ತ್ರಿಪುರದ ರಾಜಕುಮಾರಿ ಕುಂದದೇವಿ ಪತ್ನಿಯಾಗಿದ್ದಳು. ಅಮೋಘವರ್ಷನಿಗೆ ಕೃಷ್ಣ, ಖೊಟ್ಟಿಗ, ಜಗತ್ತುಂಗ ಮತ್ತು ನಿರುಪಮ ಎಂಬ ಮಕ್ಕಳಿದ್ದು ತಂದೆಯ ಮರಣದ ನಂತರ ಹಿರಿಯವನಾದ ಮುಮ್ಮಡಿ ಕೃಷ್ಣ ಅಧಿಕಾರಕ್ಕೆ ಬಂದನು.

ಮೂರನೆ ಕೃಷ್ಣ (ಕ್ರಿ.ಶ. 939–967) : ಮೂರನೆ ಕೃಷ್ಣನು ರಾಷ್ಟ್ರಕೂಟ ಸಂತತಿಯ ಅತ್ಯಂತ ಸಮರ್ಥ ಚಕ್ರವರ್ತಿಗಳಲ್ಲೊಬ್ಬನು. ಇವನ ಪರಾಕ್ರಮದಿಂದ ಪುನಃ ರಾಷ್ಟ್ರಕೂಟ ಪ್ರಭುತ್ವವು ಇಡೀ ಭಾರತದಲ್ಲಿ ಅಜೇಯ ಶಕ್ತಿಯುಳ್ಳದ್ದಾಗಿ ಮಾರ್ಪಟ್ಟಿತು. ಕೃಷ್ಣನು ಸಿಂಹಾಸನಾರೂಢನಾದ ಕೂಡಲೆ ಲಲ್ಲೆಯನೆಂಬುವವನು ದಂಗೆಯೆದ್ದು ಮಾನ್ಯಖೇಟವನ್ನು ಆಕ್ರಮಿಸಿ ರಾಷ್ಟ್ರಕೂಟ ರಾಜ ಲಾಂಛನಗಳನ್ನು ವಶಪಡಿಸಿಕೊಂಡನು. ಈ ಸಮಯದಲ್ಲಿ ಮೂರನೆ ಕೃಷ್ಣನ ಸಹಾಯಕ್ಕೆ ಗಂಗರ ಬೂತುಗನು ಬಂದು ರಾಷ್ಟ್ರಕೂಟ ಸಿಂಹಾಸನಕ್ಕೆ

ಅನಿರೀಕ್ಷಿತವಾಗಿ ಒದಗಿದ್ದ ವಿಪತ್ತನ್ನು ಕೊನೆಗಾಣಿಸಿದನು. ಈ ವೇಳೆಗೆ ರಾಷ್ಟ್ರಕೂಟ ಮತ್ತು ಗಂಗ ಸೈನ್ಯಗಳು ತಮಿಳುನಾಡನ್ನು ಕ್ರಿ.ಶ. 947ರಲ್ಲಿ ಪ್ರವೇಶಿಸಿದವು. ದಾಯಾದಿ ಮನೆತನದ ಪೃಥ್ವಿಪತಿಗೆ ಚೋಳರು ನೀಡಿದ್ದ ಬೆಂಬಲದಿಂದ ಭೂತುಗನು ಸಹಜವಾಗಿಯೇ ಸಿಟ್ಟಿಗೆದ್ದಿದ್ದನು. ರಾಷ್ಟ್ರಕೂಟ ಮತ್ತು ಗಂಗರ ಈ ಸಹಜ ಮೈತ್ರಿ ಆಕ್ರಮಣವನ್ನು ಪರಾಂತಕನು ನಿರೀಕ್ಷಿಸಿಯೇ ಇದ್ದನು. ಉತ್ತರ ಅರ್ಕಾಟ್ ಜಿಲ್ಲೆಯ ತೆಕ್ಕೋಲಂ ಎಂಬಲ್ಲಿ ರಾಷ್ಟ್ರಕೂಟ ಗಂಗರ ಸೈನ್ಯ ಚೋಳರನ್ನು ಎದುರಿಸಿತು. ಯುವರಾಜ ರಾಜಾದಿತ್ಯ ಹಾಗೂ ಅರಿಕುಲ ಕೇಸರಿ ಎಂಬುವವರು ಚೋಳ ಸೈನ್ಯದ ನಾಯಕತ್ವವನ್ನು ವಹಿಸಿ ಹೋರಾಡಿದರು. ಭೂತುಗನು ರಾಜಾದಿತ್ಯವನ್ನು ಮತ್ತು ಅವನ ಆನೆಯನ್ನು ರಣರಂಗದಲ್ಲಿ ಕೊಂದು ಹಾಕಿದನು. ಮೂರನೆ ಕೃಷ್ಣನು ಕಂಚಿಯಿಂದ ತಂಜಾವೂರುವರೆಗಿನ ಚೋಳ ರಾಜ್ಯವನ್ನು ವಶಪಡಿಸಿಕೊಂಡು 'ಕಂಚ್ಚಿಯಂ ತಂಜೈಯುಂ ಕೊಂಡ' ಎಂಬ ಬಿರುದನ್ನು ಧರಿಸಿದನು. ತನಗೆ ಯುದ್ದದಲ್ಲಿ ಸಹಕಾರ ನೀಡಿದ್ದಕ್ಕಾಗಿ ಬೂತುಗನನ್ನು ಬನವಾಸಿ, ಪನ್ನಿರ್ಚ್ಛಾಸಿರ ಬೆಳ್ವೊಲ, ಪುರಿಗೆರೆ ಪ್ರಾಂತ್ಯಗಳ ಅಧಿಪತಿಯನ್ನಾಗಿ ಮಾಡಿದನು. ವಿಜಯೋತ್ಸವದಿಂದ ಮುನ್ನುಗಿದ್ದ ಮೂರನೆ ಕೃಷ್ಣ ದಕ್ಷಿಣದ ರಾಮೇಶ್ವರದವರೆಗೂ ಹೋಗಿ ಅಲ್ಲಿ ತನ್ನ ಹೆಸರಿನಲ್ಲಿ ಕೃಷ್ಣೇಶ್ವರ ಮತ್ತು ಗಂಡಮಾರ್ತ್ತಂಡಾದಿತ್ಯ ದೇವಾಲಯಗಳನ್ನು ನಿರ್ಮಿಸಿದುದಲ್ಲದೆ ಅಲ್ಲಿ ವಿಜಯಸ್ತಂಭವೊಂದನ್ನು ನಿರ್ಮಿಸಿದನು.

ತಮಿಳುನಾಡಿನ ದಿಗ್ವಿಜಯದ ನಂತರ ಮೂರನೇ ಕೃಷ್ಣನು ತನ್ನ ಸಾಮ್ರಾಜ್ಯದ ಉತ್ತರಕ್ಕೆ ಸೈನ್ಯವನ್ನು ಕಳಿಹಿಸಬೇಕಾದ ಪ್ರಮೇಯವೊದಗಿತು. ಈ ವೇಳೆಗೆ ಕೃಷ್ಣನ ಆಪ್ತ ಸ್ನೇಹಿತನು ಪರಾಕ್ರಮಿಯು ಆದ ಇಮ್ಮಡಿ ಭೂತುಗನು ಕಾಲವಾಗಿದ್ದು ಅನಂತರ ಮಾರಸಿಂಹನಿಗೆ ಉತ್ತರದ ಶತ್ರುಗಳನ್ನು ಶಿಕ್ಷಿಸುವ ಜವಾಬ್ದಾರಿಯನ್ನು ವಹಿಸಿದನು. ಗಂಗ ಮಾರಸಂಹನು ತನ್ನ ಮತ್ತು ರಾಷ್ಟ್ರಕೂಟ ಸೈನ್ಯಗಳ ಮುಖಂಡನಾಗಿ ಮುಂದುವರೆದು ಕ್ರಿ.ಶ. 963ರಲ್ಲಿ ಉಜ್ಜೈನಿಯನ್ನು ಮುತ್ತಿ ಪರಮಾರ ರಾಜನನ್ನು ಸೋಲಿಸಿದನು. ನಂತರ ಚಕ್ರಕೂಟ ಕಲಂಜರರನ್ನು, ಸೀಯರ ಹರ್ಷನನ್ನು ಸೋಲಿಸಿ ರಾಷ್ಟ್ರಕೂಟರ ಪರಮಾದಿಕಾರವನ್ನು ಒಪ್ಪಿಕೊಳ್ಳುವಂತೆ ಮಾಡಿದನು. ಈ ವಿಜಯದಿಂದ ರಾಷ್ಟ್ರಕೂಟರು ತಮ್ಮ ಪರಮಾಧಿಕಾರವನ್ನು ಉತ್ತರದಲ್ಲೂ ಸ್ಥಾಪಿಸಿದರು. ಇದರಿಂದ ಸುಪ್ರೀತಗೊಂಡ ಮೂರನೆ ಕೃಷ್ಣ ಮಾರಸಿಂಹನಿಗೆ "ಗೂರ್ಜ ರಾಧಿರಾಜ" ಇಂಬ ಬಿರುದನ್ನು ನೀಡಿದನಲ್ಲದೆ ಯುದ್ದದಲ್ಲಿ ಸಹಕರಿಸಿದ ಮಾರಸಿಂಹನ ದಂಡನಾಯಕರಾದ ಶೂದ್ರಕಯ್ಯ ಮತ್ತು ಗೊಗ್ಗಿಮಯ್ಯರಿಗೆ "ಉಜನಿ ಭುಜಂಗ"ರೆಂಬ ಬಿರುದು ನೀಡಿ ವಿಶೇಷವಾಗಿಸನ್ಮಾನಿಸಿದನು. ಮಧ್ಯಪ್ರದೇಶದ ಜಬ್ಬರ್‌ಪುರದ ಬಳಿಯ 'ಜೂರಾ' ಎಂಬಲ್ಲಿ ದೊರೆತಿರುವ ಮೂರನೆ ಕೃಷ್ಣನ ಕನ್ನಡ ಶಾಸನ ಮೇಲ್ಕಂಡ ವಿಜಯಗಳನ್ನು ಕುರಿತು ಸ್ಪಷ್ಟ ವಿವರಣೆ ನೀಡುತ್ತದೆ. ಮೂರನೆ ಕೃಷ್ಣನು ಸಾಹಿತ್ಯ ಮತ್ತು ಧರ್ಮಕ್ಕೆ ವಿಶೇಷ ಪ್ರೋತ್ಸಾಹ

ನೀಡಿದ್ದು ಅವನ ಕಾಲದಲ್ಲಿ ಕನ್ನಡ, ಸಂಸ್ಕೃತ ಭಾಷೆಗಳಲ್ಲಿ ಅನೇಕ ಶ್ರೇಷ್ಠ ಗ್ರಂಥಗಳು ರಚನೆಯಾದವು. 'ಶಾಂತಿಪುರಾಣದ' ಕರ್ತೃ ಪೋನ್ನನು ಮೂರನೆ ಕೃಷ್ಣನ ಆಸ್ಥಾನ ಕವಿಯಾಗಿದ್ದನು.ಕನ್ನಡದ ಪ್ರಸಿದ್ಧ ಕವಿಯಾದ ಪಂಪನು ವೇಮುಲವಾಡ ಅರಿಕೇಸರಿಯ ಆಸ್ಥಾನವಲ್ಲಿದ್ದು 'ಆದಿಪುರಾಣ' ಮತ್ತು ವಿಕ್ರಮಾರ್ಜುನ ವಿಜಯ ಗ್ರಂಥಗಳನ್ನು ರಚಿಸಿದನು. ಮೂರನೆ ಕೃಷ್ಣನು ಹಿಂದೂ ಮತಾವಲಂಬಿಯಾಗಿದ್ದು ಶ್ರೀಶೈಲ ಕಂಚಿಯ ಅನೇಕ ದೇವಾಲಯಗಳಿಗೆ ಉದಾರ ದಾನಗಳನ್ನು ನೀಡಿದ್ದನು. ಇವನಿಗೆ ಅಕಾಲವರ್ಷ ಎಂಬ ಬಿರುದಿತ್ತು. ಕ್ರಿ.ಶ 967ರಲ್ಲಿ ಮೂರನೆ ಕೃಷ್ಣನು ಮರಣ ಹೊಂದಿದನು.ಈತನ ನಂತರ ಆಳ್ವಿಕೆಗೆ ಬಂದ ಇವನ ತಮ್ಮ ಕೊಟ್ಟಿಗ ಅವನ ಸೋದರನ ಮಗ ಇಮ್ಮಡಿ ಕರ್ಕ ಇವರಿಬ್ಬರೂ ಅಸಮರ್ಥರಾಗಿದ್ದರು. ಕ್ರಿ.ಶ. 972ರ ಕೊಟ್ಟಿಗನ ಆಳ್ವಿಕೆಯ ಸಮಯದಲ್ಲಿ ಪರಮಾರ ಪ್ರಭು ಸೀಯಕ ರಾಷ್ಟ್ರಕೂಟ ಪ್ರಾಂತ್ಯಗಳ ಮೇಲೆ ದಾಳಿ ಮಾಡಿ ಮಾನ್ಯಖೇಟವನ್ನು ಆಕ್ರಮಿಸಿ ಅಲ್ಲಿನ ಸಂಪತ್ತನ್ನೆಲ್ಲಾ ಸೂರೆಗೊಂಡನು. ಕ್ರಿ.ಶ 973ರಲ್ಲಿ ಚಾಲುಕ್ಯರ ದೊರೆ ಎರಡನೆ ತೈಲಪನು ಕೊಟ್ಟಿಗನ ನಂತರ ಆಳ್ವಿಕೆ ನಡೆಸಿತ್ತಿದ್ದ ಇಮ್ಮಡಿ ಕರ್ಕನನ್ನು ಮೂಲೆಗೊತ್ತಿ ರಾಷ್ಟ್ರಕೂಟ ಸಾಮ್ರಾಜ್ಯಕ್ಕೆ ತಿಲಾಂಜಲಿಯನ್ನಿತ್ತು ಕಲ್ಯಾಣಿ ಚಾಲುಕ್ಯರಸಾಮ್ರಾಜ್ಯದ ಅಸ್ಥಿತ್ವಕ್ಕೆ ಜ್ಯೋತಿ ಬೆಳಗಿದನು.

ರಾಷ್ಟ್ರಕೂಟ ಆಡಳಿತ ಪದ್ಧತಿ: ಸುಮಾರು ಎರಡು ಶತಮಾನಗಳಿಗೂ ಹೆಚ್ಚುಕಾಲ ಇಡೀ ದಕ್ಷಿಣ ಭಾರತವನ್ನಾಳಿ ಉತ್ತರ ಭಾರತದ ಮೇಲೂ ತಮ್ಮ ಪ್ರಭಾವ ಬೀರಿ ಕರ್ನಾಟಕಕ್ಕೆ ಕೀರ್ತಿಯನ್ನು ತಂದ ರಾಷ್ಟ್ರಕೂಟರು ಕೇವಲ ಸಾಮ್ರಾಜ್ಯವನ್ನು ವಿಸ್ತರಿಸಿದಷ್ಟೇ ಅಲ್ಲದೆ ಉತ್ತಮ ಆಡಳಿತಗಾರನೂ ಆಗಿದ್ದರು. ತಮ್ಮ ಹೆಚ್ಚು ಸಮಯವನ್ನು ಇವರು ಯುದ್ಧದಲ್ಲೇ ಕಳೆದುದರಿಂದ ಆಡಳಿತ ವ್ಯವಸ್ಥೆಯಲ್ಲಿ ಹೆಚ್ಚಿನ ಬದಲಾವಣೆಯನ್ನೇನು ಮಾಡಲಾಗಲಿಲ್ಲ. ಆದರೂ ಸಹ ಇವರು ತಮ್ಮ ಹಿಂದಿನ ಚಾಳುಕ್ಯರ ಆಡಳಿತ ಪದ್ಧತಿಯನ್ನೇ ಮುಂದುವರೆಸಿದರೂ ಜನತೆಯ ಪ್ರೀತಿ ಪಾತ್ರರಾಗಿ ಅವರಿಗೆ ಉತ್ತಮ ಆಡಳಿತ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟಿದ್ದರು.

ರಾಜ ಮತ್ತು ಅವನ ಮಂತ್ರಿಮಂಡಳಿ: ರಾಜರು ಧರ್ಮಶಾಸ್ತ್ರಕ್ಕನುಗುಣವಾಗಿ ಕಾರ್ಯನಿರ್ವಹಿಸುತ್ತಾ, ರಾಜನು ರಾಜ್ಯದಲ್ಲಿ ಕೈಗೊಳ್ಳಬೇಕಾದ ಕಾರ್ಯಗಳನ್ನು ಮಂತ್ರಾಲೋಚನಾ ಸಭೆಯಲ್ಲಿ ಚರ್ಚಿಸಿ ನಂತರ ನಿರ್ಧರಿತ್ತಿದ್ದನು. ಸಚಿವರುಗಳು, ದಂಡನಾಯಕರು, ಯುವರಾಜರುಗಳು, ಬಂಡಾರಿಗಳು, ಪುರೋಹಿತರು ಮಂತ್ರಾಲೋಚನ ಸಭೆಯ ಸದಸ್ಯರಾಗಿರುತ್ತಿದ್ದರು.ಪ್ರಜೆಗಳ ಅಭಿಪ್ರಾಯಕ್ಕೆ ರಾಜನ ಆಸ್ಥಾನದಲ್ಲಿ ಮನ್ನಣೆಯಿದ್ದಿತು. ರಾಷ್ಟ್ರಕೂಟರ ಆಡಳಿತದಲ್ಲಿ ಮಂತ್ರಿಮಂಡಳ ಅತಿ ಮುಖ್ಯ ಪಾತ್ರ ವಹಿಸುತ್ತಿತ್ತು. ಮಂತ್ರಿಮಂಡಲದಲ್ಲಿದ್ದ ಒಟ್ಟು ಸಚಿವರ ಸಂಖ್ಯೆ ಎಷ್ಟೆಂಬುದು ತಿಳಿದುಬಂದಿಲ್ಲ. ಆದರೆ ಡಾ.

ಆಲ್ಟೇಕರ್‌ರವರು ಒಟ್ಟು 20 ಮಂದಿ ಸಚಿವರಿದ್ದರೆಂದು ಅಭಿಪ್ರಾಯಪಟ್ಟಿದ್ದಾರೆ. ಮಂತ್ರಿಮಂಡಲದ ಮುಖ್ಯಸ್ಥನನ್ನು ಪ್ರಧಾನ ಮಂತ್ರಿ ಎನ್ನಲಾಗುತ್ತಿತ್ತು ಈತನು ಅರಸನಿಗೆ ಅತಿ ಆಪ್ತನಾಗಿದ್ದು ಆಡಳಿತ ವಿಷಯದಲ್ಲಿ ಮುಖ್ಯ ಕಾರ್ಯನಿರ್ವಾಹಕನಾಗಿ ಪಾತ್ರ ವಹಿಸುತ್ತಿದ್ದನು. ವಿದೇಶಾಂಗ ಮಂತ್ರಿಯನ್ನು ಮಹಾಸಂಧಿವಿಗ್ರಹಕನೆಂದೂ,ಕಂದಾಯ ಮಂತ್ರಿಯನ್ನು ಅಮಾತ್ಯನೆಂದೂ, ಹಣಕಾಸಿನ ಮಂತ್ರಿಯನ್ನು ಕೋಶಾಧ್ಯಕ್ಷನೆಂದು(ಭಂಡಾರಿಕ) ಆಡಳಿತದ ಲೆಕ್ಕ ಪತ್ರಗಳನ್ನು ನೋಡಿಕೊಳ್ಳುತ್ತಿದ್ದವನಿಗೆ ಕರಣಿಕನೆಂದು ಕರೆಯಲಾಗುತ್ತಿತ್ತು.

ಪ್ರಾಂತಿಯ ಆಡಳಿತ: ಮಾನ್ಯಖೇಟವು ರಾಷ್ಟ್ರಕೂಟರ ರಾಜಧಾನಿಯಾಗಿದ್ದುದಲ್ಲದೆ ಅದು ಪ್ರಮುಖ ರಾಜಕೀಯ, ಧಾರ್ಮಿಕ ಸಾಹಿತ್ಯ, ಶೈಕ್ಷಣಿಕ ಇನ್ನಿತರ ವ್ಯವಹಾರಗಳ ಪ್ರಮುಖ ಕೇಂದ್ರವಾಗಿತ್ತು.ಸಾಮ್ರಾಜ್ಯವನ್ನು ಆಡಳಿತದ ಅನುಕೂಲಕ್ಕಾಗಿ ರಾಷ್ಟ್ರಗಳನ್ನಾಗಿ, ರಾಷ್ಟ್ರಗಲನ್ನು ವಿಷಯಗಳನ್ನಾಗಿ, ವಿಷಯಗಳನ್ನು ಭುಕ್ತಿಗಳನ್ನಾಗಿ, ವಿಂಗಡಿಸಲಾಗಿದ್ದು ಪ್ರತಿಯೊಂದು ಭುಕ್ತಿಯು ಅನೇಕ ಗ್ರಾಮಗಳನ್ನೊಳಗೊಂಡಿತ್ತು. ರಾಷ್ಟ್ರಗಳ ಆಡಳಿತವನ್ನು ರಾಷ್ಟ್ರಪತಿಯೆಂಬುವವನು ನೋಡಿಕೊಳ್ಳುತ್ತಿದ್ದು ಈತನು ರಾಷ್ಟ್ರದಲ್ಲಿನ ಆಡಳಿತ, ಶಾಂತಿಪಾಲನೆ, ತೆರಿಗೆ ವಸೂಲಿ ಮಾಡಿ ಕೇಂದ್ರಕ್ಕೆ ಸಲ್ಲಿಸುತ್ತಿದ್ದನು.ಕೆಲವೊಮ್ಮೆ ಯುವರಾಜರುಗಳನ್ನು ಸಹ ರಾಷ್ಟ್ರಗಳ ಮುಖ್ಯಾಧಿಕಾರಿಯನ್ನಾಗಿ ನೇಮಿಸಲಾಗುತ್ತಿತ್ತು. ವಿಷಯಗಳ ಆಡಳಿತವನ್ನು ವಿಷಯಪತಿ ಅಥವಾ ಭೋಗಪತಿ ಎಂಬುವವನು ನೋಡಿಕೊಳ್ಳುತ್ತಿದ್ದನು. ಕೆಲವೊಮ್ಮೆ ಭುಕ್ತಿಗಳ ಆಡಳಿತವನ್ನು ಇವನೇ ನಿರ್ವಹಿಸುತ್ತಿದ್ದನು. ಗ್ರಾಮಗಳ ಆಡಳಿತವನ್ನು ಗವುಂನೆಂಬ ಗ್ರಾಮದ ಮುಖ್ಯಸ್ಥ ನೋಡಿಕೊಳ್ಳುತ್ತಿದ್ದನು. ಈತನು ಗ್ರಾಮದ ರಕ್ಷಣೆ, ನ್ಯಾಯಪಾಲನೆ, ತೆರಿಗೆಯ ವಸೂಲಿ ಮುಂತಾದ ಎಲ್ಲಾ ಕಾರ್ಯವನ್ನು ನಿರ್ವಹಿಸುತಿದ್ದನು. ಗ್ರಾಮದ ಮತ್ತು ಪಟ್ಟಣದ ಸರ್ವಾಂಗೀಣ ಅಭಿವೃದ್ಧಿಗಾಗಿ ಗ್ರಾಮಸಭೆ ಮತ್ತು ಪುರಸಭೆಗಳಿದ್ದವು. ಗ್ರಾಮಸಭೆಗಳು ಗ್ರಾಮದಲ್ಲಿನ ದೇವಾಲಯಗಳ, ಕೆರೆಗಳ, ರಸ್ತೆಗಳ ನಿರ್ಮಾಣ ಮತ್ತು ದುರಸ್ತಿ ಕಾರ್ಯವನ್ನು ನಿರ್ವಹಿಸುತ್ತಿದ್ದವು.

ಸೈನ್ಯಾಡಳಿತ:ರಾಷ್ಟ್ರಕೂಟರು ವಿಶಾಲ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿದ್ದರಿಂದ ಬಲವಾದ ಸೈನಿಕ ವ್ಯವಸ್ಥೆಯನ್ನು ಹೊಂದಿದ್ದರು. ಇವರ ಸೈನ್ಯದಲ್ಲಿ ಅಶ್ವದಳ, ಗಜದಳ, ರಥದಳಗಳಿದ್ದು ಪ್ರತಿಯೊಂದು ವಿಭಾಗಕ್ಕೂ ಮುಖಂಡ ಅಥವಾ ದಂಡನಾಯಕನಿರುತ್ತಿದ್ದನು. ರಾಷ್ಟಕೂಟ ದೊರೆಗಳು ಸ್ವತಃ ರಣರಂಗದಲ್ಲಿ ಸೈನ್ಯ ನಡೆಸುತ್ತಿದ್ದರು. ಸೋತ ರಾಜನನ್ನು ಚಿತ್ರಹಿಂಸೆಗೀಡು ಮಾಡದೇ ಕೇವಲ ಕಪ್ಪಕಾಣಿಕೆಯನ್ನು ಮಾತ್ರ ಪಡೆದು ತಮ್ಮ ಅಧೀನರಾಗುವಂತೆ ಮಾಡುತ್ತಿದ್ದರು. ರಾಷ್ಟ್ರಕೂಟ ರಾಜ್ಯದಲ್ಲಿ ಅನೇಕ ಸಾಮಂತ ರಾಜರುಗಳು ಆಳ್ವಿಕೆ ನಡೆಸಿತ್ತಿದ್ದು ಅವರುಗಳು ವರ್ಷಂಪ್ರತಿ ರಾಜನಿಗೆ ಕಪ್ಪ ಕಾಣಿಕೆ ತಂದು ಕೊಡುತ್ತಿದ್ದುದಲ್ಲದೆ

ರಾಜನ ಯುದ್ಧ ಸಮಯದಲ್ಲೂ ನೆರವಾಗುತ್ತಿದ್ದರು. ಕೆಲವೊಮ್ಮೆ ರಾಜನ ವಿರುದ್ಧ ಈ ಸಾಮಂತರು ಸ್ವತಂತ್ರರಾಗಿ ಬಂಡೇಳುತ್ತಿದ್ದರು. ಇಂತಹ ಸಾಮಂತರನ್ನು ತಕ್ಷಣವೇ ರಾಷ್ಟ್ರಕೂಟ ರಾಜರು ಧಮನ ಮಾಡುತ್ತಿದ್ದರು.

ಸಾಮಾಜಿಕ ಪರಿಸ್ಥಿತಿ:ರಾಷ್ಟ್ರಕೂಟರ ಕಾಲದ ಸಾಮಾಜಿಕ ಜೀವನವನ್ನು ತಿಳಿಯಲು ನಮಗೆ ಆ ಕಾಲದ ಶಾಸನಗಳು, ಸಾಹಿತ್ಯಗಳು, ಅರಬ್ ಬರಹಗಾರರಾದ ಸುಲೇಮಾನ್, ಅಲ್‌ಮಸೂದಿ, ಇಬನ್‌ಬತೂತರ ಬರವಣಿಗೆಗಳು ಸಹಾಯಕವಾಗುತ್ತವೆ. ಸಮಾಜವು ಶಾಂತಿ ಸಮೃದ್ಧಿಯಿಂದ ಕೂಡಿದ್ದು ಜನತೆ ಸುಸಂಸ್ಕೃತರು ವಿದ್ಯಾವಿನಯಸಂಪನ್ನರಾಗಿದ್ದರು. ಬ್ರಾಹ್ಮಣ, ಕ್ರತ್ರಿಯ ಮತ್ತು ವೈಶ್ಯರು ತಮ್ಮ ತಮ್ಮ ವರ್ಗಗಳ ವೃತ್ತಿಯನ್ನು ಸ್ವೀಕರಿಸಲು ಧರ್ಮ ಶಾಸ್ತ್ರಗಳು ಅನುವು ಮಾಡಿಕೊಟ್ಟವು. ಅದರೆ ಆಯಾ ವ್ಯಕ್ತಿಯ ವೃತ್ತಿ ಒಂದು ನಿರ್ದಿಷ್ಟವಾದದ್ದೇ ಆಗಿರಬೇಕೆಂಬ ಕಟ್ಟುನಿಟ್ಟಿನ ನಿಯಮವಿರಲಿಲ್ಲ. ಮುಖ್ಯ ವರ್ಣಗಳನ್ನು ಪಂಗಡಗಳನ್ನಾಗಿ ವಿಂಗಡಿಸುವ ಧೋರಣೆಯಿತ್ತು. ಇದರಿಂದ ವರ್ಣಗಳಲ್ಲಿ ಮೇಲು ಮತ್ತು ಕೀಳು ಎಂಬ ಭಾವನೆ ಬೆಳೆಯತೊಡಗಿತು. ಬ್ರಾಹ್ಮಣರು ಯೋಧರಾಗಿ ಕೃಷಿಕರಾಗಿ ಇದ್ದದು ನಮಗೆ ಶಾಸನಗಳಿಂದ ತಿಳಿದು ಬರುತ್ತದೆ. ಬ್ರಾಹ್ಮಣರು ತಮ್ಮ ವರ್ಣಕ್ಕೆ ವರ್ಗೀಕರಿಸಿದ ಉದ್ಯೋಗವನ್ನು ಬಿಟ್ಟು ಬೇರೆ ಉದ್ಯೋಗವನ್ನವಲಂಬಿಸಿದರೆ ಅತ ತೆರಿಗೆ ಕೊಡಬೇಕಾಗಿತ್ತು. ಕ್ಷತ್ರಿಯರಲ್ಲಿ ಎರಡು ಪಂಗಡವಿದ್ದಿತು. ಒಂದು ಸತ್ ಕ್ಷತ್ರಿಯರು (ನಿಜಕ್ಷತ್ರಿಯರು) ಮತ್ತೊಂದು ಸಾಮಾನ್ಯ ಕ್ಷತ್ರಿಯರು. ಆಡಳಿತ ವರ್ಗದವರು ಮತ್ತು ಶ್ರೀಮಂತರು ಸತ್ ಕ್ಷತ್ರಿಯರ ಗುಂಪಿಗೆ ಸೇರಿದವರಾಗಿದ್ದರು. ಸಾಮಾನ್ಯ ಕ್ಷತ್ರಿಯರು ವೇದಾಧ್ಯಯನಕ್ಕೆ ಅರ್ಹರಾಗಿರಲಿಲ್ಲ.

ಸಮಾಜದಲ್ಲಿ ಪಿತೃ ಪ್ರಧಾನ ಕುಟುಂಬ ಪದ್ಧತಿ ಆಚರಣೆಯಲ್ಲಿತ್ತು. ಸ್ತ್ರೀಗೂ ಸಹ ಸಮಾಜದಲ್ಲಿ ಗೌರವ ಸ್ಥಾನಮಾನವಿತ್ತು. ಸ್ತ್ರೀಗೆ ಶಿಕ್ಷಣದ ಸೌಲಭ್ಯವು ಸಹ ಇತ್ತು. ನೃತ್ಯ, ಸಂಗೀತ, ಲಲಿತ ಕಲೆಯಲ್ಲಿ ಸ್ತ್ರೀಯರು ಭಾಗವಹಿಸುತ್ತಿದ್ದರು. ಸ್ತ್ರೀಯರು ಅಲಂಕಾರ ಪ್ರಿಯರು ಸಹ ಆಗಿದ್ದರು. ಅವರು ಓಲೆ, ತೋಳಬಂದಿ, ಕೊರಳಿನ ಹಾರ, ಬಳೆಗಳು, ಕಾಲಂದುಗೆ ಮುಂತಾದ ಆಭರಣಗಳನ್ನು ಧರಿಸುತ್ತಿದ್ದರು. ರಾಜಮನೆತನದ ಸ್ತ್ರೀಯರು ಮುತ್ತು ರತ್ನಗಳಿಂದ ಕೂಡಿದ ಆಭರಣಗಳನ್ನು ಧರಿಸುತ್ತಿದ್ದರು. ಈ ಕಾಲದ ಒಂದು ಮುಖ್ಯ ಬದಲಾವಣೆಯೆಂದರೆ ಸ್ತ್ರೀಯರು, ತಮ್ಮ ಪತಿಯ ಆಸ್ತಿಯಲ್ಲಿ ಪಾಲು ಪಡೆಯುವ ಹಕ್ಕನ್ನು ಸಂಪಾದಿಸಿಕೊಂಡುದುದು. ಗಂಡಸರು ಎರಡು ತುಂಡಿನ ಬಟ್ಟೆಯನ್ನು ಧರಿಸುತ್ತಿದ್ದು ಮೊಣಕಾಲಿನವರೆಗೆ ಪಂಚೆ ಮೇಲೊಂದು ಅಂಗವಸ್ತ್ರವನ್ನು ಹಾಕಿಕೊಳ್ಳುತ್ತಿದ್ದರು. ಕಿವಿಗೆ ಕರ್ಣಕುಂಡಲವನ್ನು, ಕೈಗೆ ಕಡಗವನ್ನು ಧರಿಸುತ್ತಿದ್ದರು. ರಾಷ್ಟ್ರಕೂಟರ ಕಾಲದಲ್ಲಿ ಬಲಿದಾನ ಪದ್ದತಿ ರೂಡಿಯಲ್ಲಿತ್ತು. ರಾಜನ ನಿಷ್ಠಾವಂತ ಸೇವಕರು ತಮ್ಮ ಒಡೆಯ ಮರಣ ಹೊಂದಿದಾಗ, ಸ್ತ್ರೀಯರು ತಮ್ಮ

ಮಾನ ರಕ್ಷಣೆಗಾಗಿ, ಜನತೆ ಗ್ರಾಮದ ರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ತ್ಯಾಗಮಾಡಿದ ಸಂಗತಿಯನ್ನು ರಾಷ್ಟ್ರಕೂಟರ ಕಾಲಕ್ಕೆ ಸೇರಿದ ನೂರಾರು ವೀರಗಲ್ಲುಗಳು ನೆನಪಿಗೆ ತಂದುಕೊಡುತ್ತವೆ. ಸೇವಕರು ಮತ್ತು ಸೈನಿಕರುಗಳು ತಮ್ಮ ಪ್ರೀತಿ ಪಾತ್ರ ದೊರೆ ನಿಧನ ಹೊಂದಿದಾಗ ಅಥವಾ ತಾವು ಕೊಟ್ಟ ಮಾತನ್ನು ನಡೆಸಿಕೊಡಲು ಸಾಧ್ಯವಿಲ್ಲದಿದ್ದಾಗ ಪ್ರಾಣತ್ಯಾಗ ಮಾಡುವುದೇಲೇಸೆಂದು ಭಾವಿಸಿ ಆತ್ಮಾರ್ಪಣೆ ಮಾಡಿಕೊಳ್ಳುತ್ತಿದ್ದರು. ರಾಷ್ಟ್ರಕೂಟರ ಕಾಲದಲ್ಲಿನ ಇಂತಹ ಮರಣಗಳನ್ನು "ಕೀಳ್ಗುಂಟೆ, ವೇಳವಾಳಿ" ಎಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

ದೇವಾಲಯಗಳು ಕೆಲವೊಮ್ಮೆ ಸಾಮಾಜಿಕ ಜೀವನದ ಕೇಂದ್ರಗಳಾಗುತ್ತಿದ್ದವು. ಹೇಗೆಂದರೆ ಗ್ರಾಮದ ಆಡಳಿತ ವ್ಯವಸ್ಥೆಗಾಗಿ ಹಿರಿಯರು ದೇವಾಲಯದ ಸಭಾಂಗಣದಲ್ಲಿ ಸಭೆ ಸೇರುತ್ತಿದ್ದು ನೃತ್ಯ, ಸಂಗೀತ, ಮನರಂಜನಾ ಕಾರ್ಯಕ್ರಮಗಳು ಸಹ ಕೆಲವೊಮ್ಮೆ ನಡೆಯುತ್ತಿದ್ದವು. ಅಷ್ಟೇ ಅಲ್ಲದೆ ದೇವತಾ ಪೂಜೆಗೆ ಸಂಬಂಧಿಸಿದ ಅನೇಕ ವೃತ್ತಿಕಾರರಿಗೆ ಜೀವನೋಪಾಯಗಳನ್ನು ಸಹ ದೇವಾಲಯ ಕಲ್ಪಿಸಿತ್ತು. ಹೂವಾಡಿಗ, ತೋಟಗಾರ, ಗಂಧಕಾರ, ಕುಂಬಾರ, ಬಜಂತ್ರಿಗಾರ, ಪರೆಕಾರ, ವಂಶಿಗ (ಕೊಳಲೂದುವವ) ಮುಂತಾದವರಿಗೆ ಜೀವನಾಧಾರವಾಗಿದ್ದ ಇದು ಧಾರ್ಮಿಕ ಜೀವನದ ಕೇಂದ್ರವು ಅಗಿತ್ತು. ಸಾಧು ಸಂತರ ಪ್ರಯಾಣಿಕರ ವಸತಿಗೂ ಇಲ್ಲಿ ಅನುಕೂಲಗಳನ್ನು ಏರ್ಪಡಿಸಲಾಗಿತ್ತು. ಇಲ್ಲಿ ವಾಸಿಸುತ್ತಿದ್ದ ಸಾಧು, ಸನ್ಯಾಸಿಗಳು, ನಿಯಮಬದ್ಧವಾದ ಧಾರ್ಮಿಕ ಜೀವನವನ್ನು ನಡೆಸಲೇಬೇಕಾಗಿತ್ತು.

ನಾಯನ್ನಾರರ ಮತ್ತು ಆಳ್ವಾರರ ಭಕ್ತಿ, ಭಜನೆ, ಗೀತೆಗಳಿಂದ ಸಮಾಜದಲ್ಲಿ ಮೇಲು ಕೀಳೆಂಬ ಭಾವನೆ ಕಡಿಮೆಯಾಯಿತು. ಇದರಿಂದ ಶೂದ್ರರ ಸ್ಥಾನಮಾನಗಳು ಹೆಚ್ಚಿದಂತಾದವು. ಶೂದ್ರರಿಗೆ ವೇದಾಧ್ಯಯನದ ಹಕ್ಕು ಇರಲಿಲ್ಲವಾದರೂ ಅವರು ಕೆಲವು ಆಚರಣೆಗಳನ್ನು ಮಾಡಲು ಅವಕಾಶವಿತ್ತು. ಹಾಗೆಯೇ ಸೈನ್ಯಕ್ಕೆ ಸೇರಲು ಅವಕಾಶವಿತ್ತು. ಇವರು ಕೃಷಿ, ವ್ಯಾಪಾರ ಮತ್ತು ಕೈಗಾರಿಕೆಗಳಿಂದ ಶ್ರೀಮಂತರಾಗ ತೊಡಗಿದರು. ಅಸ್ಪೃಶ್ಯರಲ್ಲಿ ಚಪ್ಪಲಿ ಮಾಡುವವರು, ಬಿದಿರಿನ ಕೆಲಸ ಮಾಡುವವರು ಬೆಸ್ತರು, ಅಗಸರು, ಕಸಗುಡಿಸುವವರು ಮುಂತಾದ ಪಂಗಡಗಳಿದ್ದು ಇವರನ್ನು ಸಮಾಜ ಜೀವನದಿಂದ ಹೊರಗಿಡಲಾಗಿತ್ತು.

ಆರ್ಥಿಕ ಜೀವನ : ರಾಷ್ಟ್ರಕೂಟರ ಆರ್ಥಿಕ ಜೀವನವನ್ನು ತಿಳಿಯಲು ನಮಗೆ ಅಂದಿನ ಕಾಲದ ಶಾಸನಗಳು, ಸಾಹಿತ್ತಿಕ ಆಧಾರಗಳು, ನಾಣ್ಯಗಳು, ವಿದೇಶಿ ಬರವಣಿಗೆಗಳು ಪ್ರಮುಖ ಆಧಾರವಾಗಿವೆ. ವ್ಯವಸಾಯ ಆರ್ಥಿಕ ಜೀವನದ ಮೂಲವಾಗಿತ್ತು. ರಾಜ್ಯಾದಾಯ ಬಹುಪಾಲು ಭೂಕಂದಾಯದಿಂದಲೇ ಬರುತ್ತಿತ್ತು. ಭೂಮಿಯನ್ನು ಕೇವಲ ತರಿ ಮತ್ತು ಖುಷ್ಕಿ ಜಮೀನುಗಳೆಂದಲ್ಲದೆ ಅವುಗಳ ಫಲವತ್ತತೆಗನುಗುಣವಾಗಿ ವರ್ಗೀಕರಿಸಿ ಕಂದಾಯವನ್ನು ನಿಗಧಿಗೊಳಿಸಲಾಗುತ್ತಿತ್ತು. ಹುಟ್ಟುವಳಿಯ 1/6ಭಾಗವನ್ನು ಕಂದಾಯವಾಗಿ ಕೊಡಬೇಕಾಗುತ್ತಿತ್ತು.

ಕೆಲವೊಮ್ಮೆ ಕಂದಾಯದಲ್ಲಿ ವಿನಾಯಿತಿಯನ್ನು ನೀಡಲಾಗುತ್ತಿತ್ತು. ಕಂದಾಯವಲ್ಲದೆ ಇನ್ನಿತರ ವಿಶೇಷ ತೆರಿಗೆಗಳು ಸಹ ಜಾರಿಯಲ್ಲಿದ್ದವು. ಅವುಗಳೆಂದರೆ ಸುಂಕ, ಹೊರಸುಂಕ, ನಿಯತ ಹಾಗೂ ಅನಿಯತ ಸೈನಿಕ ಹಾಗೂ ಕಾವಲು ದಳಗಳ ಆಗಮನ ಕಾಲಕ್ಕೆ ವಸೂಲಿ ಮಾಡುವ ತೆರಿಗೆ, ರಾಜಸೇವಕರ ಆತಿಥ್ಯಕ್ಕಾಗಿ ಕೊಡುವ ತೆರಿಗೆ, ಉತ್ಸವಗಳಲ್ಲಿ ಕೊಡುವ ತೆರಿಗೆ ಇನ್ನಿತರ ತೆರಿಗೆಗಳಿದ್ದವು. ವೃತ್ತಿ ಸಂಘಗಳು : ಬೇರೆ, ಬೇರೆ ವೃತ್ತಿಗಳಿಗೆ ಸಂಬಂಧಿಸಿದ ಜನರು ತಮ್ಮದೇ ಆದ ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಂಡಿದ್ದರು. ಇವುಗಳನ್ನು ಶ್ರೇಣಿ ಎಂಬುದಾಗಿ ಕರೆಯಲಾಗುತ್ತಿತ್ತು. ಇವುಗಳು ಕೆಲವೊಮ್ಮೆ ಸಣ್ಣ ಪುಟ್ಟ ನಗರಗಳ ಆಡಳಿತವನ್ನು ನಿರ್ವಹಿಸುತ್ತಿದ್ದವು.

ಕ್ರಿ.ಶ. 775ರಲ್ಲಿ ಲಕ್ಷ್ಮೇಶ್ವರದಲ್ಲಿ ನೆಯ್ಗೆಕಾರರ ವಾಣಿಜ್ಯ ಸಂಘವಿದ್ದಿತು. ಮುಳಗುಂದದ ಕ್ರಿ.ಶ.880ರ ಶಾಸನ ತನ್ನ ಆಡಳಿತಾಧಿಕಾರಕ್ಕೆ 360 ಪಟ್ಟಣಗಳನ್ನು ಒಳಪಡಿಸಿಕೊಂಡಿದ್ದ ಒಂದು ವಾಣಿಜ್ಯ ಸಂಘದ ನಾಲ್ವರು ಪ್ರಮುಖರು ಕೊಟ್ಟ ದಾನವನ್ನು ಉಲ್ಲೇಖಿಸಿದೆ. ಹಾಗೆಯೇ ವಾಣಿಜ್ಯ ಸಂಘವೊಂದು 18ಪಟ್ಟಣಗಳಲ್ಲಿ ತನ್ನ ಕಾರ್ಯಾಲಯಗಳನ್ನು ಹೊಂದಿತ್ತೆಂದು ಬಳ್ಳಿಗಾಮೆಯ ಕ್ರಿ.ಶ. 1083ರ ಶಾಸನ ತಿಳಿಸುತ್ತದೆ. ಅಯ್ಯವೊಳೆ (ಐಹೊಳೆ) 500ಕ್ಕೆ ಬಲವಾದ ಅಧಿಕಾರದ್ದಿತು. ಇದು ಉದ್ದಿಮೆ ಹಾಗೂ ವಾಣಿಜ್ಯವನ್ನು ತನ್ನ ಆಧೀನಕ್ಕೊಳಪಡಿಸಿಕೊಂಡಿದ್ದಲ್ಲದೆ ದೇವಸ್ಥಾನ ಹಾಗೂ ಬ್ರಾಹ್ಮಣರಿಗೆ ಕೊಟ್ಟ ದತ್ತಿಗಳನ್ನು ಪರಿಪಾಲಿಸುವ ಹಾಗೂ ಅಂತರ ರಾಜ್ಯ ಕಲಹ ನಿರ್ಣಯಿಸಿ ಬಗೆಹರಿಸುವ ಅಧಿಕಾರವನ್ನು ಪಡೆದಿತ್ತು. ಶಾಸನ ಪಡೆದು ಸಂಘವಾದಂತಹ ಆ ಸಂಸ್ಥೆಗಳು ತಮ್ಮ ಸದಸ್ಯರು ತಪ್ಪದೇ ಪಾಲಿಸಬೇಕಾದ ನಿಯಮಗಳನ್ನು ರಚಿಸಬಲ್ಲವಾಗಿದ್ದವು.

ಬಳ್ಳಿಗಾಮೆಯ ವಾಣಿಜ್ಯ ಸಂಘವು 500 ಆಜ್ಞೆಗಳನ್ನು ಮಾಡಿದ್ದಿತು. ಈ ಸಂಘಗಳಿಗೆ ತಮ್ಮದೇ ಆದ ತುರಾಯಿ ಧರಿಸಿದ ಧ್ವಜಗಳಿದ್ದವು. ಬಳ್ಳಿಗಾಮೆ ಮತ್ತು ಕೊಲ್ಲಾಪುರದ ವೀರಬಣಜುಗಳ ವಾಣಿಜ್ಯ ಸಂಘಗಳ ಧ್ವಜಗಳ ಮೇಲೆ ಬೆಟ್ಟದ ಮುದ್ರೆಯಿದ್ದಿತು. ಕೃಷಿಗೆ ಸಂಬಂಧಿಸಿದಂತೆ 'ಮೇಟಿ' ಅಥವಾ 'ಮೇಳ' ಶ್ರೇಣಿ ಪ್ರಮುಖವಾದುದು. ಮೇಟಿ ಎಂದರೆ ನೇಗಿಲು ಇದು ವ್ಯವಸಾಯದ ಪ್ರಮುಖ ಉಪಕರಣ ಆಯಾಭಾಗದ ವ್ಯವಸಾಯಗಾರರೆಲ್ಲ ಸೇರಿ ಮೇಟಿಯ ಸದಸ್ಯರಾಗುತ್ತಿದ್ದರು. ಪ್ರಮುಖ ಆಹಾರ ಬೆಳೆಗಳಾದ ಜೋಳ, ಗೋಧಿ, ಸಜ್ಜೆ, ಬತ್ತವನ್ನೂ ದ್ವಿದಳ ದಾನ್ಯ, ಕುಸುಮೆ, ಹರಳು, ಸಾಸಿವೆ, ಎಳ್ಳು ಮುಂತಾದ ಎಣ್ಣೆ ಬೀಜಗಳನ್ನು ಬೆಳೆಯಲಾಗುತ್ತಿತ್ತು. ಕೊಂಕಣ ತೀರ ಪ್ರದೇಶಗಳಲ್ಲಿ ತೆಂಗು, ಅಡಕೆ, ಲವಂಗ, ಏಲಕ್ಕೆ, ಮೆಣಸು, ಮಾವು, ಹಲಸು, ಪೇರಿಳೆ, ಬಾಳೆ, ನಿಂಬೆ, ಕಿತ್ತಳೆ, ಕಬ್ಬನ್ನು ಬೆಳೆಯಲಾಗುತ್ತಿತ್ತು. ವ್ಯಾಪಾರ ಮತ್ತು ವಾಣಿಜ್ಯ : ರಫ್ತಾಗುತ್ತಿದ್ದ ವಸ್ತುಗಳೆಂದರೆ ಹತ್ತಿಯ ನೂಲು, ಬಟ್ಟೆ, ಒರಟಾದ ಮತ್ತು ನಯವಾದ

ಮಸ್ಲಿನ್ ಬಟ್ಟೆ, ಚಾಪೆಗಳು, ಚರ್ಮ, ನೀಲಿ, ಧೂಪ, ವೀಳೆಯದೆಲೆ, ಅಡಕೆ, ತೆಂಗು, ಶ್ರೀಗಂಧ, ತೇಗ, ಎಳ್ಳೆಣ್ಣೆ, ದಂತ, ನವಿಲುಗರಿ ಮುಂತಾದವುಗಳಾಗಿವೆ. ಆಮದಾಗುತ್ತಿದ್ದ ವಸ್ತುಗಳೆಂದರೆ ಮುತ್ತು, ಖರ್ಜೂರ, ಚಿನ್ನ, ಗುಲಾಮರು, ಇಟಲಿಯ ದ್ರಾಕ್ಷಾರಸ, ತಾಮ್ರ, ತವರ, ಸತು, ಲವಂಗ, ಗಟ್ಟಿಗಾಜು, ಚಿನ್ನದ ಹಾಗೂ ಬೆಳ್ಳಿಯ ನಾಣ್ಯ ಮುಂತಾದವು ಕ್ರಿ.ಶ. ಒಂದನೇ ಶತಮಾನದ ಪೆರಿಪ್ಲಸ್ ಆಫ್ ದಿ ಏರಿತ್ರಿಯನ್ ಸೀ ಗ್ರಂಥದಲ್ಲಿ ಅಂದಿನ ರಾಷ್ಟ್ರಕೂಟರ ಕಾಲದ ಈ ಪ್ರಮುಖ ಆಮದು ಮತ್ತು ರಫ್ತು ವಸ್ತುಗಳ ಬಗ್ಗೆ ಉಲ್ಲೇಖಿಸಲಾಗಿದೆ.

ಮಾರ್ಕೋಪೋಲೊ ತಿಳಿಸಿರುವಂತೆ ಅಂದು ಕುದುರೆಯ ವ್ಯಾಪಾರ ಅತ್ಯಂತ ಬಿರುಸಿನಿಂದ ನಡೆಯುತ್ತಿದ್ದು ದಖನ್ನಿನ ಬಂದರಿಗೆ ಹೋಗಿ ಮುಟ್ಟಿದ ಪ್ರತಿಯೊಂದು ಹಡಗಿನ ಸರಕುಗಳು ಕುದುರೆಗಳೇ ಅಗಿದ್ದವು ಎತ್ತುಗಳು, ಎತ್ತಿನ ಗಾಡಿಗಳು, ಕುದುರೆಗಳು,ಆನೆಗಳನ್ನು ಸರಕು ಸಾಗಾಣಿಕೆಗೆ ಬಳಸಿಕೊಳ್ಳಲಾಗುತ್ತಿತ್ತು. ಅರಣ್ಯ ಪ್ರದೇಶಗಳಲ್ಲಿ ದೊರೆಯುತ್ತಿದ್ದ ತೇಗ, ಶ್ರೀಗಂಧ, ಬೀಟೆ ಮೊದಲಾದ ವೃಕ್ಷ ಸಂಪತ್ತನ್ನು ಸಾಗಿಸಲು ಈ ಮೇಲ್ಕಂಡ ಪ್ರಾಣಿಗಳನ್ನು ಬಳಸಲಾಗುತ್ತಿತ್ತು. ವ್ಯವಸಾಯದ ನಂತರ ಉಪಕಸುಬುಗಳು ಕುಶಲ ಕೈಗಾರಿಕೆಗಳಾಗಿದ್ದವು. ನೂಲುವುದು, ಮರಗೆಲಸ, ಮಡಿಕೆ ಮಾಡುವುದು, ಚಾಪೆ, ಬುಟ್ಟಿಗಳನ್ನು ಎಣೆಯುವುದು ಲೋಹದ ಕೆಲಸ, ದಂತದ ಕೆಲಸ, ಒಡವೆ ತಯಾರಿಕೆ, ಚರ್ಮದ ತಯಾರಿಕೆ ಮುಖ್ಯವಾಗಿದ್ದವು. ಗಣಿಗಳು ಮತ್ತು ಕೈಗಾರಿಕೆಗಳು ರಾಷ್ಟ್ರಕೂಟರ ಕಾಲದಲ್ಲಿ ಅಭಿವೃದ್ಧಿ ಹೊಂದಿದ್ದವು. ಬಳ್ಳಾರಿ, ಬಿಜಾಪುರ, ಕಡಪ, ಧಾರವಾಡ, ಗೋಲ್ಕಂಡ ಮತ್ತಿತರ ಪ್ರದೇಶಗಳಲ್ಲಿ ತಾಮ್ರದ ಮತ್ತು ವಜ್ರದ ಗಣಿಗಳಿದ್ದುದ್ದು ತಿಳಿದು ಬಂದಿದೆ. ಮಾರ್ಕೋಪೋಲೋ ಹಾಗೂ ಇಬನ್ ಬತೂತರವರ ಹೇಳಿಕೆಯಂತೆ ವಜ್ರವು ದಖನ್ನಿನ ಗಣಿಗಳಲ್ಲಿ ದೊರೆಯುತ್ತಿತ್ತೆಂದು, ಆದರೆ ಅದನ್ನು ರಫ್ತು ಮಾಡಲು ಅವಕಾಶವಿರಲಿಲ್ಲವೆಂದು ತಿಳಿಸಿದ್ದಾರೆ. ವಾಣಿಜ್ಯ ಹಾಗೂ ಕೈಗಾರಿಕೆಗಳಿಗೆ ಸರಾಫಿನ (ಬ್ಯಾಂಕಿನ) ಸೌಲಭ್ಯ ವಿದ್ದಿರಬೇಕೆಂದು ಊಹಿಸಬಹುದು. ಕರ್ನಾಟಕದ ಉದ್ದಿಮೆ ಹಾಗೂ ಕೈಗಾರಿಕೆಗಳ ಸುಸ್ಪಷ್ಟವಾದ ಲಕ್ಷಣವಾದ ವಾಣಿಜ್ಯ ಸಂಘಗಳು ಈ ಹಣಕಾಸಿನ ಸೌಲಭ್ಯವನ್ನು ಒದಗಿಸಿದವು. ಕೈಗಾರಿಕೆಗಳಲ್ಲಿ ಹತ್ತಿ ಬಟ್ಟೆ, ಕೈಗಾರಿಕೆ ಮುಖ್ಯವಾದುದಾಗಿತ್ತು. ರಾಷ್ಟ್ರಕೂಟರ ಕಾಲದ ರಾಜಧಾನಿಯಾಗಿದ್ದ ಮಾನ್ಯಖೇಟ ಆಭರಣಗಳ ಇನ್ನಿತರ ಕೈಗಾರಿಕಾ ವಸ್ತುಗಳ ಪ್ರಮುಖ ಮಾರುಕಟ್ಟೆ ಸ್ಥಳವಾಗಿದ್ದಿತು.

ನಾಣ್ಯಗಳು : ರಾಷ್ಟ್ರಕೂಟರ ಕಾಲದಲ್ಲಿ ಅನೇಕ ಬೆಳ್ಳಿಯ ಮತ್ತು ಚಿನ್ನದ ನಾಣ್ಯಗಳು ಜಾರಿಯಲ್ಲಿದ್ದು ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿದ್ದವು. ಚಿನ್ನ, ಬೆಳ್ಳಿ, ತಾಮ್ರ ಮತ್ತು ಸೀಸದ ಅನೇಕ ನಾಣ್ಯವಿದ್ದುದು ನಮಗೆ ಶಾಸನಗಳಿಂದ ತಿಳಿದು ಬರುತ್ತದೆ. ದಖನ್ ಮತ್ತು ದಕ್ಷಿಣ ಭಾರತದಲ್ಲಿ ಅಂದು ಬಹುತೇಕವಾಗಿ ದ್ರಮ್ಮ, ಸುವರ್ಣ, ಗದ್ಯಾಣಕ, ಕಾಸು ಮತ್ತು

ವಿಶದಿ ಎಂಬ ನಾಣ್ಯವನ್ನು ಬಳಸಲಾಗುತ್ತಿತ್ತು. ರಾಷ್ಟ್ರಕೂಟರ ಬೆಳ್ಳಿ ನಾಣ್ಯಗಳ ಮೇಲೆ ಅವುಗಳು ಮುದ್ರಿತವಾದ ಕಾಲವನ್ನು ತಿಳಿಸಲಾಗಿದೆ. ಈ ಕಾಲದ ಸುವರ್ಣ ನಾಣ್ಯಗಳು 45ರಿಂದ 50 ಗ್ರೇಯ್ನುಗಳ ತೂಕವೆಂದು ಡಾ॥ ಅಲ್ವೇಕರ್ ತಿಳಿಸಿದ್ದಾರೆ. ಹಾಗೆಯೇ ಅವರು ತಮ್ಮ 'ರಾಷ್ಟ್ರಕೂಟರು' ಎಂಬ ಗ್ರಂಥದಲ್ಲಿ ಅಂದಿನ ಕಾಲದ ನಾಣ್ಯಗಳ ಬೆಲೆಯನ್ನು ಈ ರೀತಿ ಪಟ್ಟಿಮಾಡಿದ್ದಾರೆ.

ಹೆಸರು		ಲೋಹ	ಸರಿಸುಮಾರು ತೂಕ
1.	ದ್ರಮ್ಮ	ಬೆಳ್ಳಿ	65ಗ್ರೇಯ್ನುಗಳು ಅಥವಾ 1/3ತೊಲ
2.	ದ್ರಮ್ಮ	ಚಿನ್ನ	65ಗ್ರೇಯ್ನುಗಳು ಅಥವಾ 1/3ತೊಲ
3.	ಕವಿಂಜು	ಚಿನ್ನ	48 ಗ್ರೇಯ್ನುಗಳು ಅಥವಾ 1/4ತೊಲ
4.	ಗದ್ಯಾಣಕ	ಚಿನ್ನ	98ಗ್ರೇಯ್ನುಗಳು ಅಥವಾ 1/2ತೊಲ
5.	ಕಾಸು	ಚಿನ್ನ	15ಗ್ರೇಯ್ನುಗಳು
6.	ಮಂಜಾಡಿ	ಚಿನ್ನ	21/2 ಗ್ರೇಯ್ನುಗಳು
7.	ಅಕ್ಕಮ್	ಚಿನ್ನ	1 1/4 ಗ್ರೇಯ್ನುಗಳು

ಬಡ್ಡಿಯದರ: ಅಮೋಘವರ್ಷನ ಒಂದು ಶಾಸನ ಕ್ರಿ.ಶ. 9ನೇ ಶತಮಾನದಲ್ಲಿ ವಿಧಿಸುತ್ತಿರುವ ಬಡ್ಡಿ ದರವನ್ನು ಕುರಿತ ವಿಷಯಗಳನ್ನೊದಗಿಸುತ್ತದೆ. ಸ್ಥಳೀಯ ಶಿಲಾಹಾರ ರಾಜವಂಶದ ಮಂತ್ರಿ ಬುದ್ಧನ ಪೂಜೆಗೆ ವರ್ಷಕ್ಕೆ ಇಪ್ಪತ್ತು ದ್ರಮ್ಮಗಳನ್ನು, ಕಟ್ಟಡದ ದುರಸ್ತಿಗೆ 3ದ್ರಮ್ಮಗಳನ್ನು, ಬೌದ್ಧ ಸನ್ಯಾಸಿಗಳ ಉಡುಪಿಗೆ 5 ದ್ರಮ್ಮಗಳನ್ನು, ಗ್ರಂಥಗಳನ್ನು ಕೊಳ್ಳುವುದಕ್ಕೆ 1ದ್ರಮ್ಮಗಳನ್ನುಒದಗಿಸಲು 160 ದ್ರಮ್ಮಗಳನ್ನು ಧನ ಸಂಚಯವಾಗಿಟ್ಟಿದ್ದನು.ಅದರಿಂದ 160 ದ್ರಮ್ಮಗಳಿಗೆ ವರ್ಷಕ್ಕೆ29 ದ್ರಮ್ಮಗಳ ಆದಾಯವನ್ನು (ಬಡ್ಡಿ)ಗಳಿಸಲಾಗುತ್ತಿತ್ತು. 9ನೇ ಶತಮಾನದ ಮತ್ತೊಂದು ರಾಷ್ಟ್ರಕೂಟ ಶಾಸನ ಮುಮ್ಮಡಿ ಕೃಷ್ಣನ ಸಾಮಂತನಾದ ವೈದುಂಬ ಮಹಾರಾಜನ ರಾಣಿ ನೀಎಇದ ದತ್ತಿಯನ್ನು ಉಲ್ಲೇಖಿಸಿದೆ. ಅದರಲ್ಲಿ 20 ಕವಿಂಜುಗಳೂ ಮೇಲಿನ ಬಡ್ಡಿ, ಬತ್ತ 20 ಕಲಂಗಳೆಂದು ತಿಳಿಸಿದೆ. ಅಂದರೆ ಒಂದು ಕವಿಂಜುವಿನ ಬಡ್ಡಿಗೆ 8ರಿಂದ 12 ಕಲಂಗಳಷ್ಟು, ಬತ್ತವನ್ನು ಕೊಳ್ಳಬಹುದಾಗಿದ್ದು ಬಡ್ಡಿಯದರ ಶೇಕಡ 10ರಿಂದ 15 ಆಗುತ್ತಿತ್ತು. ಕ್ರಿ.ಶ. 915ರ ಬಾಣ ಶಾಸನವು 20 ಕವಿಂಜುಗಳ ಮೇಲಿನ ಬಡಿ 5 ಕವಿಂಜುಗಳೆಂದು ಎಂದರೆ ಶೇ 25 ಎಂದು ತಿಳಿಸಿದೆ.

ಬೆಲೆಗಳು: ಕವಿಂಜು ಒಂದು ಚಿನ್ನದ ನಾಣ್ಯವಾಗಿದ್ದು 1/2 ತೊಲ ತೂಕದಿಂದ ಕೂಡಿತ್ತು. ಒಂದು ಕವಿಂಜುವಿಗೆ 150 ಸೇರು ಅಕ್ಕಿಯನ್ನು ಕೊಳ್ಳಬಹುದಾಗಿತ್ತು. ಕ್ರಿ.ಶ. 915ರ ಬಾಣ ಶಾಸನದಲ್ಲಿ ತಿಳಿಸಿರುವಂತೆ 4 ಕವಿಂಜುವಿಗೆ ಒಂದು ದೇವಾಲಯದಲ್ಲಿ ಇಡೀ ವರ್ಷ ನಂದಾ ದೀಪ ಉರಿಯಲು ಬೇಕಾದ ತುಪ್ಪ ಸಿಗುತ್ತಿತ್ತು. 11/2 ಉವಿಕ್ಕು ಬತ್ತಕ್ಕೆ ಅಷ್ಟೇ ಪ್ರಮಾಣದ ಉಪ್ಪು ಸಿಗುತ್ತಿತ್ತೆಂದು ದಾಖಲೆಗಳಿಂದ ತಿಳಿದು ಬರುತ್ತದೆ.

ಜೀವನ ವೆಚ್ಚ: ರಾಷ್ಟ್ರಕೂಟರ ಕಾಲದಲ್ಲಿ ಒಬ್ಬ ಮನುಷ್ಯನಿಗೆ ವರ್ಷವೊಂದಕ್ಕೆ 540 ಸೇರು ಬತ್ತ ಬೇಕಾಗುತ್ತಿತ್ತು. ಧರ್ಮಶಾಲೆಯಲ್ಲಿ 25 ಬ್ರಾಹ್ಮಣರ ಬೋಜನಕ್ಕಾಗಿ ಒಂದು ವರ್ಷಕ್ಕೆ 932 1/2 ಕಲಂ ಬತ್ತ ಬೇಕಾಗುತ್ತಿತ್ತು.
ತರಕಾರಿ, ಸೌದೆ, ತುಪ್ಪ, ಮೊಸರು, ಸಾಂಬಾರು ಪದಾರ್ಥ, ವೀಳ್ಯದೆಲೆ, ಅಡಿಕೆ ಮುಂತಾದವುಗಳನ್ನು ದಿನನಿತ್ಯದ ಊಟದಲ್ಲಿ ಉಪಯೋಗಿಸಲಾಗುತ್ತಿತ್ತು. ಅಡಿಗೆಯವರ ಸಂಬಳಕ್ಕಾಗಿ ಪ್ರತಿಯೊಬ್ಬನಿಗೆ ದಿನವೊಂದಕ್ಕೆ ಒಂದು ಕುರಣಿ ಹಾಗೂ ಎರಡು ನಾವೆಯ ಪ್ರಮಾಣದಷ್ಟು ಬತ್ತ ಬೇಕಾಗುತ್ತಿತ್ತು.

ಧರ್ಮ

ರಾಷ್ಟ್ರಕೂಟರ ಅರಸರುಗಳು ವೈದಿಕ ಮತ್ತು ಜೈನ ಧರ್ಮದ ಆರಾಧಕರಾಗಿದ್ದರು. ಆದರೂ ಸಹ ಅನ್ಯಧರ್ಮ ಸಹಿಷ್ಣುತೆ ಮತ್ತು ಮೂರ್ತಿ ಪೂಜೆಗಲು ಎಲ್ಲಾ ವಿಧದಿಂದಲೂ ಮುಂದುವರೆದಿದ್ದವು. ಆ ಕಾಲದ ರಾಷ್ಟ್ರಕೂಟರ ದತ್ತಿ ಶಾಸನಗಳ ಮತ್ತು ತಾಮ್ರ ಶಾಸನಗಳ ನಾಂದಿ ಪದ್ಯದಲ್ಲಿ ಕಂಡು ಬರುವ ಶಿವ ಮತ್ತು ವಿಷ್ಣುಗಳಿಬ್ಬರ ಸ್ತುತಿಗಳು ಅಂದು ಶೈವ ಮತ್ತು ವೈಷ್ಣವ ಧರ್ಮಗಳು ಪ್ರಾಮುಖ್ಯತೆ ಪಡೆದಿರುವುದನ್ನು ತಿಳಿಸುತ್ತವೆ. ಹಾಗೆಯೇ ಆ ಕಾಲದ ಮುದ್ರಿಕೆಗಳಲ್ಲಿ ವಿಷ್ಣುವಿನ ವಾಹನವಾದ ಗರುಡ ಮತ್ತು ಯೋಗ ಮುದ್ರೆಯಲ್ಲಿರುವ ಶಿವನ ಚಿತ್ರಗಳು ಕಂಡುಬರುತ್ತವೆ. ಇತರೆ ದೇವರುಗಳಾದ ಸೂರ್ಯ, ಶಾರದೆ ಮುಂತಾದ ದೇವರುಗಳನ್ನು ಪೂಜಿಸಲಾಗುತ್ತಿತ್ತು.

ಅಮೋಘವರ್ಷನೃಪತುಂಗನ ಆಳ್ವಿಕೆಯಲ್ಲಿ ಜೈನ ಧರ್ಮವು ರಾಜಾಶ್ರಯವನ್ನು ಪಡೆಯಿತು. ಆತನು ಜೈನ ದೀಕ್ಷೆಯನ್ನು ಪಡೆದಿದ್ದಷ್ಟೇ ಅಲ್ಲದೆ ತನ್ನ ಆಸ್ಥಾನದಲ್ಲಿ ಅನೇಕ ಜೈನ, ಮುನಿಗಳಿಗೆ, ಕವಿಗಳಿಗೆ, ವಿದ್ವಾಂಸರಿಗೆ ಆಶ್ರಯನೀಡಿದ್ದನು. ಸ್ವತಃ ಆತನ ಗುರುಗಳಾಗಿದ್ದ ಮಹಾವೀರಚಾರ್ಯ, ಜಿನಸೇನಾಚಾರ್ಯರು ಜೈನರಾಗಿದ್ದರು. ಅಮೋಘವರ್ಷನು ಜೈನ ಧರ್ಮದ ನಿಷ್ಠಾವಂತ ಅನುಯಾಯಿಯಾಗಿದ್ದರೂ ಸಹ ವೈದಿಕ ಧರ್ಮವನ್ನು ಆಚರಿಸುತ್ತಿದ್ದು ಅದರ ಪ್ರೋತ್ಸಾಹಕನು ಆಗಿದ್ದನು. ಕೊಲ್ಲಾಪುರದಲ್ಲಿ ವೈದಿಕ ದೇವತೆಯಾದ ಮಹಾಲಕ್ಷ್ಮಿಗೆ ಆತ ತನ್ನ ಕೈಬೆರಳನ್ನು ಕತ್ತರಿಸಿ ಆಕೆಗೆ ಬಲಿಕೊಟ್ಟಿದುದು ಆತ ಹಿಂದೂ ಧರ್ಮದಲ್ಲಿಟ್ಟಿದ್ದ ನಂಬಿಕೆಗೆ

ಸಾಕ್ಷಿಯಾಗಿವೆ. ಆತನ ಕಾಲದಲ್ಲಿ ಹಿಂದೂ ಮತ್ತು ಜೈನ ದೇವತೆಗಳೆರಡನ್ನುಳ್ಳ ಸಂಕೀರ್ಣ ಪದ್ಧತಿಯ ದೇವಾಲಯಗಳುನಿರ್ಮಾಣಗೊಂಡವು. ಬೌದ್ಧ ಧರ್ಮದ ಬಗ್ಗೆಯೂ ರಾಷ್ಟ್ರಕೂಟರು ಸಹನೆ ಹಾಗೂ ಸಹಕಾರದ ಮನೋಭಾವನೆಯನ್ನು ತಾಳಿದ್ದರು. ಮುಂಬೈ ಸಮೀಪದ ಕನ್ಹೇರಿ ಎಂಬಲ್ಲಿ ಒಂದು ಬೌದ್ಧ ಸಂಘವಿತ್ತೆನ್ನಲು ಒಂದನೇ ಅಮೋಘವರ್ಷನ ಕಾಲದಲ್ಲಿನ ಮೂರು ಶಾಸನಗಳು ಆಧಾರವಾಗಿವೆ. ಹಾಗೆಯೆ ಸೊಲ್ಲಾಪುರ ಜಿಲ್ಲೆಯ ಕಂಪಿಲ ಮತ್ತು ಧಾರವಾಡ ಜಿಲ್ಲೆಯ ದಂಬಲ ಈ ಎರಡು ಕಡೆಗಳಲ್ಲಿ ಮಾತ್ರ ಬೌದ್ಧ ಸನ್ಯಾಸಿ ಮಠಗಳಿದ್ದವೆಂದು ತಿಳಿದು ಬರುತ್ತದೆ. ಇದರಿಂದ ರಾಷ್ಟ್ರಕೂಟರ ಕಾಲದಲ್ಲಿ ಜನತೆ ತಮ್ಮಗಳ ಸಹಜ ಪ್ರವೃತ್ತಿಗನುಸಾರವಾಗಿ ಯಾವುದೇ ಒಂದು ಧರ್ಮವನ್ನು ಅಥವಾ ಮೂರನ್ನೂ ಅನುಸಿಕೊಂಡು ಹೋಗಲು ನಿರ್ಭಂಧವಿರಲಿಲ್ಲವೆಂಬುದು ತಿಳಿದು ಬರುತ್ತದೆ.

ಆ ಕಾಲದಲ್ಲಿ ಹಿಂದೂ ಧರ್ಮ ವಿವಿಧ ನಂಬಿಕೆ ಹಾಗೂ ಸಂಪ್ರದಾಯಗಳ ನಡುವೆ ಏಕತೆಯನ್ನು ಸಾಧಿಸಿತೆನ್ನಬಹುದು. 8ನೇ ಶತಮಾನದ ಪೂರ್ವಾರ್ಧದಲ್ಲಿ ಮುಸ್ಲಿಮರು ಭಾರತಕ್ಕೇ ಆಗಮಿಸಿ ಸಿಂಧೂ ಪ್ರದೇಶದಲ್ಲಿ ನೆಲೆಸಿದರು. ಗೂರ್ಜರ ದೊರೆಗಳು, ಮುಸ್ಲಿಮರನ್ನು ಮತ್ತಷ್ಟು ಮುಂದಕ್ಕೆ ಪ್ರಯಾಣಿಸದಂತೆ ವಿರೋಧಿಸಿದರು, ಆದರೆ ಗೂರ್ಜರ ದೊರೆಗಳೊಂದಿಗೆ ಸ್ನೇಹವಲ್ಲದ ಸಂಬಂಧ ಹೊಂದಿದ್ದ ರಾಷ್ಟ್ರಕೂಟ ದೊರೆಗಳು ಅರಬ್ಬರಿಗೆ ಪಶ್ಚಿಮ ಕರಾವಳಿಯಲ್ಲಿ ನೆಲೆಸಲು ಅವಕಾಶ ಮಾಡಿಕೊಟ್ಟಿದ್ದಲ್ಲದೆ, ಪ್ರಾರ್ಥನಾಮಂದಿರಗಳನ್ನು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟರು. ಅವರಿಗೆ ಬಹಿರಂಗವಾಗಿ ಅವರ ಮತಾನುಸರಣೆಗೆ ಸ್ವಾತಂತ್ರ್ಯ ದೊರಕಿಸಿಕೊಟ್ಟಿದುದಲ್ಲದೆ ತಮ್ಮ ಧರ್ಮಾವಲಂಬಿಗಳಿಗೆ ನ್ಯಾಯ ವಿತರಣೆ ಮಾಡುವ ಸಲುವಾಗಿ ಮುಸ್ಲಿಂ ನ್ಯಾಯಾದೀಶರನ್ನು ನೇಮಕ ಮಾಡಿಕೊಂಡಿದ್ದರು. ಇದರಿಂದ ರಾಷ್ಟ್ರಕೂಟರು ತಮ್ಮ ಆಳ್ವಿಕೆಯಲ್ಲಿ ಇಸ್ಲಾಂ ಧರ್ಮಕ್ಕೂ ಸಹ ಸ್ಥಾನವನ್ನು ಕಲ್ಪಿಸಿಕೊಟ್ಟು, ಸರ್ವಧರ್ಮಸಹಿಷ್ಣುತಾ ಮನೋಭಾವ ಉಳ್ಳವರಾಗಿದ್ದರೆಂಬುದು ನಮಗೆ ಕಂಡು ಬರುತ್ತದೆ.

ರಾಷ್ಟ್ರಕೂಟರ ಕಾಲದಲ್ಲಿ ಸ್ಮಾರ್ತ ಪುರಾನಿಕವೆಂದು ಕರೆಯಲಾಗುತ್ತಿದ್ದ ಧರ್ಮವನ್ನು ಹೆಚ್ಚು ಜನ ಅನುಸರಿಸುತ್ತಿದ್ದರು. ಪುರೋಹಿತ ವರ್ಗವಂತೂ ಯಾವಾಗಲೂ ಸ್ಮಾರ್ತ ಅಗ್ನಿಹೋತ್ರ ಸಂಪ್ರದಾಯದವರಿಂದಲೇ ತುಂಬಿರುತ್ತಿತ್ತು. ಕೆಲವೂ ವರ್ಗದ ಜನರಂತೂ ಸ್ಮೃತಿಗಳಿಂದ ವಿಧಿಸಲ್ಪಟ್ಟ ಅನೇಕ ಪ್ರಾಯಶ್ಚಿತ್ತ (ಶುದ್ಧಿಕರಣ ಸಮಾರಂಭ)ಗಳನ್ನು ಮಾಡಿಕೊಳ್ಳುತ್ತಿದ್ದರೆಂದು ಕ್ರಿ.ಶ. 939ರ ನರಗುಂದ ಶಾಸನದಿಂದಲೂ, ನಾಲ್ಕನೆ ಗೋವಿಂದನ ಕೈಲಾಸ ಶಾಸನದಿಂದಲೂ ವ್ಯಕ್ತವಾಗುತ್ತದೆ. ತೀರ್ಥಯಾತ್ರೆಗೆ ಹೋಗುವ ಸಂಪ್ರದಾಯವಂತೂ ರಾಷ್ಟ್ರಕೂಟರ ಕಾಲದಲ್ಲಿ ಅತ್ಯಂತ ಜನಪ್ರಯವಾಗಿತ್ತು. ದೇವಸ್ಥಾನಗಳು ಸಾರ್ವಜನಿಕ ಆರಾಧನೆಯ ಕೇಂದ್ರಸ್ಥಾನವಾಗಿ ಪರಿಗಣಿಸಲ್ಪಟ್ಟಿದ್ದಲ್ಲದೆ, ಅವುಗಳು ಸಾಕಷ್ಟು, ಧನ ಸಂಪತ್ತನ್ನು

ಗಳಿಸುತ್ತಿದ್ದವು. ಆಳವಾದ ಧರ್ಮ ಶ್ರದ್ಧೆಯಿಂದ ಕೂಡಿದ ಜೀವನವನ್ನು ನಡೆಯಿಸುವ ಮತ್ತು ಧರ್ಮಾರ್ಥ ಉದ್ದೇಶಗಳಿಗಾಗಿ ಉದಾರವಾಗಿ ದತ್ತಿ ಬಿಡುವ ಮೇಲ್ಪಂಕ್ತಿಯನ್ನು ಅಂದಿನ ರಾಷ್ಟ್ರಕೂಟ ರಾಜರು ಸ್ವತಃ ಹಾಕಿಕೊಡುತ್ತಿದ್ದರು. ಈ ನಿಟ್ಟಿನಲ್ಲಿ ರಾಷ್ಟ್ರಕೂಟರ ಪ್ರಥಮ ದೊರೆಯಾಗಿದ್ದ ದಂತಿದುರ್ಗನು ತನ್ನ ತಾಯಿಯ ಆದೇಶದಂತೆ ಅನೇಕ ಹಳ್ಳಿಗಳನ್ನು ಧರ್ಮಾರ್ಥವಾಗಿ ದತ್ತಿ ಬಿಟ್ಟು ವಿವಿಧ ಧಾರ್ಮಿಕ ಸಮಾರಂಭಗಳನ್ನು ನಡೆಯಿಸುತ್ತಿದ್ದನೆಂಬುದಾಗಿ ತಿಳಿದು ಬರುತ್ತದೆ.

ಆತನ ದೊಡ್ಡಪ್ಪನಾಗಿದ್ದ ಮೊದಲನೇ ಕೃಷ್ಣನು ತನ್ನ ಧರ್ಮ ಶ್ರದ್ಧೆಗೆ ಶಾಶ್ವತವಾದ ಸ್ಮಾರಕವೊಂದನ್ನು ಅಪಾರವಾದ ದ್ರವಯವನ್ನು ಖರ್ಚುಮಾಡಿ ನಿರ್ಮಿಸಿದನು. ಪರ್ವತವೊಂದರ ಓರೆಯಿಂದ ಕೆತ್ತಿ ಬಿಡಿಸಲ್ಪಟ್ಟ ಕೃಷ್ಣೇಶ್ವರ (ಕಾಮೇಶ್ವರ) ದೇವಸ್ಥಾನವು ಬೆಲೆಯುಳ್ಳ ಒಡವೆಗಳಿಂದಲೂ ಚಿನ್ನದಆಭರಣಗಳಿಂದಲೂ ಅಲಂಕರಿಸಲ್ಪಟ್ಟಿತು. ಸುಮಾರು 60 ವರ್ಷಗಳ ಕಾಲ ರಾಜ್ಯಬಾರ ಮಾಡಿದ ಅಮೋಘವರ್ಷ ತನ್ನ 60ನೇ ವಯಸ್ಸಿನ ಬಳಿಕ ಒಮ್ಮೊಮ್ಮೆ ಲೌಕಿಕ ಜೀವನದಿಂದ ನಿವೃತ್ತನಾಗಿ ಧಾರ್ಮಿಕ ಜೀವನದಲ್ಲಿ ಪ್ರವೃತ್ತನಾಗಿರುತ್ತಿದ್ದನಂತೆ ನಾಲ್ಕನೇ ಗೋವಿಂದನು ತನ್ನ ಕಿರೀಟ ಧಾರಣೋತ್ಸವದ ಸಂಧರ್ಭದಲ್ಲಿ400 ಹಳ್ಳೀಗಳನ್ನು 32ಲಕ್ಷ ವರಹಗಳನ್ನು ಅಸಂಖ್ಯಾತ ದೇವಾಲಯಗಳಿಗೆ ದಾನ ಮಾಡಿದುದಾಗಿ ತಿಳಿದು ಬರುತ್ತದೆ. ಕ್ರಿ.ಶ. 936–939ರಲ್ಲಿ ಕೇವಲ ಮೂರು ರಾಜ್ಯಭಾರ ಮಾಡಿದ ಮೂರನೆ ಅಮೋಘವರ್ಷ ಬ್ರಾಹ್ಮಣರಿಗೆ ಮತ್ತು ದೇವಾಲಯಗಳಿಗೆ ಅನೇಕ ದತ್ತಗಳನ್ನು ಬಿಟ್ಟಿದ್ದನಲ್ಲದೆ ತನ್ನ ಇಷ್ಟದೈವನಾದ ಶಿವನ ಹೆಸರಿನಲ್ಲಿ ಅನೇಕ ದೇವಾಲಯಗಳನ್ನು ಕಟ್ಟಿಸಿದ್ದನು. ರಾಷ್ಟ್ರಕೂಟರ ಕಾಲದಲ್ಲಿ ಬ್ರಾಹ್ಮಣರನ್ನೇ ದೇವಸ್ಥಾನದ ಪೂಜಾಕಾರ್ಯಕ್ಕೆ ನೇಮಿಸಲಾಗುತ್ತಿತ್ತು. ಆದರೆ ಕೆಲವು ವೈಷ್ಣವೇತರ ದೇವಾಲಯಗಳಿಗೆ ಗುರುವರೆಂದು ಕರೆಯಲ್ಪಡುತ್ತಿದ್ದ ಬ್ರಾಹ್ಮಣೇತರರನ್ನು ಪೂಜಾರಿಗಳನ್ನಾಗಿನೇಮಿಸಿದ್ದುದು "ಸುಗಂಧ ಜಲದಿಂದ ಪ್ರೋಕ್ಷಣೆ, ಬೆಲೆಯುಳ್ಳ ವಸ್ತ್ರಾಭರಣಗಳಿಂದ ಅಲಂಕಾರ ಮತ್ತು ಪುಷ್ಕಳವಾದ ನೈವೇದ್ಯ"ವನ್ನು ಒದಗಿಸಲಾಗಿತ್ತಿತ್ತು. ದೇವರ ಪೂಜೆಗೆ ಬೇಕಾದ ಹೂಗಳನ್ನು ಬೆಳೆಸಲು ಜಮೀನನ್ನು ರಾಷ್ಟ್ರಕೂಟ ಅರಸರು ದತ್ತಿಯಾಗಿ ಬಿಡುತ್ತಿದ್ದರು. ಅವುಗಳೇ ದೇವಸ್ಥಾನದ ಆಸ್ತಗಳೇ ಆಗಿರುತ್ತಿದ್ದವು. ಹಬ್ಬ ಹರಿದಿನಗಳಲ್ಲಿ ಗೋವನ್ನು ವಿಶೇಷವಾಗಿ ಪೂಜಿಸಲಾಗುತ್ತಿತ್ತು. ಜಾತ್ರೆಗಳಲ್ಲಿ ರಥೋತ್ಸವವನ್ನು ಆಚರಿಸಲಾಗುತ್ತಿದ್ದು ಅಂದು ದೇವರ ಮೂರ್ತಯನ್ನು ವಿಸೇಷವಾಗಿ ಅಲಂಕೃತಗೊಳಿಸಿ ಮೆರವಣಿಗೆಯಲ್ಲಿ ಕೊಂಡೊಯ್ಯಲಾಗುತ್ತಿತ್ತು. ರಾಷ್ಟ್ರಕೂಟರ ಕಾಲದಲ್ಲಿ ಜನತೆ ಇನ್ನಿತರ ದೇವತೆಗಳಾದ ಸೂರ್ಯ, ಮಹಾಲಕ್ಷ್ಮಿ, ಶಾರದೆ, ದೇವರ ಕಲ್ಲುಗಳು, ವೃಕ್ಷಗಳು ನಾಗರಪೂಜೆ ಮುಉಂತಾದ ದೇವರನ್ನು ಸಹ ಪೂಜಿಸುತ್ತಿದ್ದರು. ಧಾರ್ಮಿಕ ಮಹತ್ವವನ್ನು ಪಡೆಯಲು

ದಾನಶೀಲರಾಗುವುದೇ ಪರಿಣಾಮಕಾರಿಯಾದ ಮತ್ತು ನಂಬಬಹುದಾದ ಮಾರ್ಗವೆಂಬ ತತ್ವ ರಾಷ್ಟ್ರಕೂಟರ ಕಾಲದಲ್ಲಿ ಪ್ರಭಲಗೊಳ್ಳುತ್ತಿತ್ತು.ಧಾನ ಧರ್ಮಗಳ ಸಲುವಾಗಿ ದೇವಾಲಯಗಳಿಗೆ ಮೀಸಲಾಗಿಡುತ್ತಿದ್ದ ಸಂಪತ್ತಿನ ಒಂದು ಅಂಶವನ್ನು ದಾರಿದ್ರಯ ನಿರ್ಮೂಲನದ ಸಲುವಾಗಿ ವಿನಿಯೋಗಿಸಲಾಗುತ್ತಿತ್ತು. ಧಾನ ಧರ್ಮಕ್ಕೆ ಮೀಸಲಿಟ್ಟ ಸಂಪತ್ತಿನ ಒಂದು ಭಾಗವನ್ನು ತಪ್ಪದೆ ಸಾರ್ವಜನಿಕ ಅಭಿವೃದ್ಧಿಯ ಉದ್ಧೇಶಗಳ ಕಡೆಗೂ ಉಪಯೋಗಿಸಲಾಗುತ್ತಿತ್ತು.

ಸಾಹಿತ್ಯ:ರಾಷ್ಟ್ರಕೂಟರ ಕಾಲದಲ್ಲಿ ಸಾಹಿತ್ಯಕ್ಕೆ ಹೆಚ್ಚು ಪ್ರೋತ್ಸಾಹವಿದ್ದುದನ್ನು ಈ ಕೆಳಕಂಡ ಅಂಶಗಳಿಂದ ತಿಳಿಯಬಹುದು. ಆ ಕಾಲದಲ್ಲಿ ಅನೇಕ ತಾಮ್ರ ಶಾಸನಗಳು ಹಲವಾರು ಶಿಲಾ ಶಾಸನಗಳು ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ಬರೆಯಲ್ಪಟ್ಟವು. ಶ್ರವಣಬೆಳಗೋಳದಲ್ಲಿ ದೊರಕಿರುವ ಆ ಕಾಲದ ಅನೇಕ ಕನ್ನಡ ಶಾಸನಗಳು ಶಾಸನ ಸಾಹಿತ್ಯಕ್ಕೆ ಉತ್ತಮ ನಿದರ್ಶನಗಳಾಗಿವೆ. ಕನ್ನಡದ ಪ್ರಪ್ರಥಮ ಕೃತಿ 'ಕವಿರಾಜಮಾರ್ಗ' ಅಮೋಘವರ್ಷನ ಕೃತಿಯೆಂದು ಹಿಂದೆ ತಿಳಿಯಲಾಗಿದ್ದು, ಇತ್ತೀಚೆಗೆ ಅದು ಶ್ರೀವಿಜಯ ಅಮೋಘವರ್ಷನ ಕವಿಯಾಗಿದ್ದನು. ಇದು ದಂಡಯ ಕಾವ್ಯಾದರ್ಶದ ಮಾದರಿಯಲ್ಲಿ ರಚಿತವಾಗಿದ್ದು ಇದರಲ್ಲಿ ಪ್ರಾಚೀನ ಕನ್ನಡ ಕವಿಗಳ ಉಲ್ಲೇಖಗಳು ಇವೆ. ವಿಮಲ, ಉದಯ, ನಾಗಾರ್ಜುನ, ಜಯಬಂದು ಮತ್ತು ದುರ್ವಿನೀತರ ಹೆಸರು ಕನ್ನಡ ಸಾಹಿತ್ಯ ಬೆಳವಣಿಗೆಯನ್ನು ಅರಿಯಲು ಸಹಾಯಕವಾಗುತ್ತದೆ. ಹಾಗೆಯೇ ಕರ್ನಾಟಕವು ಕಾವೇರಿಯಿಂದ ಗೋದಾವರಿಯವರೆಗೆ ಹರಡಿತ್ತೆಂಬುದನ್ನು ಕವಿರಾಜಮಾರ್ಗದಲ್ಲಿ ತಿಳಿಸಲಾಗಿದೆ. ಅಮೋಘವರ್ಷನ ವ್ಯಕ್ತಿತ್ವ ಮತ್ತು ಅಂದಿನ ರಾಜಕೀಯ ಸ್ಥಿತಿಗತಿಗಳ ಬಗ್ಗೆ ವಿವರಣೆಯನ್ನು ಈ ಕೃತಿ ಒದಗಿಸುತ್ತದೆ.

ರಾಷ್ಟ್ರಕೂಟರ ದೊರೆ ಮೂರನೇ ಕೃಷ್ಣನ ಕಾಲದಲ್ಲಿ ಕನ್ನಡ ಸಾಹಿತ್ಯ ಮತ್ತಷ್ಟು ಬೆಳೆದಿದ್ದಿತು. ಕವಿ ಚಕ್ರವರ್ತಿಗಳಲ್ಲಿ ಮೊದಲನೆಯವನೆನ್ನಲಾದ ಪೊನ್ನ ಮೂರನೆ ಕೃಷ್ಣನ ಆಸ್ಥಾನದಲ್ಲಿದ್ದನು. ಈತನು ಶಾಂತಿನಾಥ ಪುರಾಣ, ಭುವನೈಕ ರಾಮಭ್ಯುದಯ ಗ್ರಂಥಗಳನ್ನು ಬರೆದನು. ಈತನಿಗೆ ಉಭಯ ಕವಿ ಚಕ್ರವರ್ತಿ ಎಂಬ ಬಿರುದು ಸಹ ಇದ್ದಿತು. ಶಾಂತಿನಾಥ ಪುರಾಣವು 12 ಆಶ್ವಾಸಗಳಿಂದ ಕೂಡಿದ ಈ ಚಂಪೂಕಾವ್ಯ 16ನೆಯ ತೀರ್ಥಂಕರನಾದ ಶಾಂತಿನಾಥನನ್ನು ಕುರಿತು ಬರೆಯಲಾಗಿದೆ. ಭುವನೈಕ ರಾಮಾಭ್ಯುದಯ 14 ಆಶ್ವಾಸಗಳಿಂದ ಕೂಡಿದ್ದು ಇದು ಸ್ವತಃ ಪಂಪನ ಕಾವ್ಯವಾಗಿರಬೇಕೆಂದೂ ಅಥವಾ ಚಕ್ರವರ್ತಿ ಕೃಷ್ಣನ ಸುಮಂತ ರಾಜನಾದ ಶಂಕರಗಂಡನ ಅಭ್ಯುದಯವನ್ನು ಕುರಿತದ್ದಾಗಿದೆಯೆಂತಲೂ ಅಥವಾ ಶ್ರೀರಾಮನ ಕಥೆಯನ್ನು ಕುರಿತದ್ದಾಗಿದೆಯೋ ಎಂಬುದು ಸ್ಪಷ್ಟವಾಗಿಲ್ಲವಾಗಿದೆ. ಇದೇ ಕಾಲದಲ್ಲಿ ಇಮ್ಮಡಿ ಅರಿಕೇಸರಿಯ ಆಸ್ಥಾನದಲ್ಲಿದ್ದ ಪಂಪ 'ವಿಕ್ರಮಾರ್ಜುನ ವಿಜಯ' (ಪಂಪಭಾರತ) ಮತ್ತು 'ಆದಿಪುರಾಣ' ಎಂಬ ಗ್ರಂಥಗಳನ್ನು ಬರೆದನು. ಈತನಿಗೆ ಆದಿಕವಿಯೆಂದು ಸಹ

ಕರೆಯಲಾಗಿದೆ. ವಿಕ್ರಮಾರ್ಜುನ ವಿಜಯದಲ್ಲಿ ಪಂಪನು ತನ್ನ ಒಡೆಯನಾದ ಅರಿಕೇಸರಿಯ ಹಿರಿಮೆಯನ್ನು ಹೇಳಲು ಪ್ರಯತ್ನಿಸಿದ್ದಾನೆ. ಆದಿಪುರಾಣ ಆತ್ಮ ಕಲ್ಯಾಣಕ್ಕಾಗಿ ಬರೆದ ಗ್ರಂಥವಾಗಿದೆ. ಆದ್ದರಿಂದ ಕವಿ ಪಂಪನು ಒಂದು ಗ್ರಂಥದಲ್ಲಿ ಲೌಕಿಕವನ್ನು ಅಂದರೆ ಲೋಕದ ವ್ಯಾಪಾರವನ್ನು, ನಯಗುಣ ಹಿರಿಮೆಗಳನ್ನು ಇನ್ನೊಂದರಲ್ಲಿ ಧರ್ಮವನ್ನು ಎಂದರೆ ಜಿನಾಗಮನವನ್ನು ತಿಳಿಯಬಹುದೆಂದಿದ್ದಾನೆ.

ಒಟ್ಟಿನಲ್ಲಿ ಇದೇ ಕಾಲದಲ್ಲಿ ಬೇರೆ, ಬೇರೆ ರಾಜರ ಆಳ್ವಿಕೆಯಲ್ಲಿ ಪೊನ್ನ, ಪಂಪ, ರನ್ನರಿದ್ದುದು ವಿಶೇಷವಾಗಿದ್ದು ಈ ಮೂವರನ್ನು ರತ್ನತ್ರಯರೆಂದು ಕರೆಯಲಾಗಿದೆ. ರಾಷ್ಟ್ರಕೂಟರ ಕಾಲದ ಅತ್ಯಂತ ಸಂಪನ್ನವಾದ ಗದ್ಯ ಕೃತಿ 'ವಡ್ಡಾರಾದನೆ' ಈ ಕೃತಿಯ ಕೃರ್ತ ಶಿವಕೋಟ್ಯಾಚಾರ್ಯ. ಈ ಕೃತಿಯು ಹಳಗನ್ನಡ ಸಾಹಿತ್ಯದಲ್ಲಿ ಅತ್ಯಂತ ದೊಡ್ಡ ಗದ್ಯ ರಚನೆಗಳಿಂದ ಕೂಡಿದ್ದು ಇದರಲ್ಲಿ ವಸ್ತು, ರೀತಿ, ಕಾವ್ಯಗುಣ ಮಾನವ ಜೀವನದ ಗುಣವನ್ನೊಳಗೊಂಡ ನಾಗರೀಕತೆ ಮುಂತಾದ ಅಂಶಗಳಿವೆ.

ಸಂಸ್ಕೃತವು ಸಹ ರಾಷ್ಟ್ರಕೂಟರ ಕಾಲದಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಪಡೆದುಕೊಂಡಿತ್ತು. ರಾಷ್ಟ್ರಕೂಟರ ಮೂರನೆ ಇಂದ್ರನ ಬೇಗುಮ್ರಾ ಶಾಸನವು ಸಂಸ್ಕೃತದಲ್ಲಿದೆ. ಇದನ್ನು ಕೆತ್ತಿದ ತ್ರಿವಿಕ್ರಮನೆಂಬ ಕವಿ ಸಂಸ್ಕೃತದಲ್ಲಿ ಪ್ರಥಮವು, ನಿರ್ದಿಷ್ಟವಾದ ಕಾಲವನ್ನುಳ್ಳದ್ದೂ ಆದ 'ನಳಚಂಪು' ಎಂಬ ಗ್ರಂಥವನ್ನು ಈತ ರಚಿಸಿದ್ದಾನೆ. ಶಾಕಟಾಯನನೆಂಬುವವನು 'ಶಬ್ದಾನು-ಶಾಸನ' ಎಂಬ ಗ್ರಂಥವನ್ನು ರಚಿಸಿ ಅದಕ್ಕೆ ಆತನೇ ರಚಿಸಿದ ಸೂತ್ರಗ್ರಂಥವಾದ 'ಅಮೋಘ ವೃತ್ತಿ' ಎಂಬ ಟೀಕಾಗ್ರಂಥವನ್ನು ಬರೆದಿದ್ದಾನೆ. ಅಮೋಘವರ್ಷ ನೃಪತುಂಗನು 'ಪ್ರಶ್ನೋತ್ತರ ರತ್ನಮಾಲಿಕಾ' ಎಂಬ ಗ್ರಂಥವನ್ನು, ಮಹಾ ವೀರಾಚಾರ್ಯರು 'ಗಣಿತಸಾರ ಸಂಗ್ರಹ'ವನ್ನು ತ್ರಿವಿಕ್ರಮನೆಂಬುವವನು 'ಮದಲಸಾ ಚಂಪೂ'ವನ್ನು ಸೋಮದೇವಸೂರಿಯ 'ಯಶಸ್ತಿಲಕ', 'ನೀತಿವಾಕ್ಯಾಮೃತ', ಷಣ್ಣವತಿ ಪ್ರಕರಣಗಳು, ಜೀನಸೇನ (ವೀರಸೇನ)ನ 'ಧವಳಾ' ಮತ್ತು ಜಯಧವಳಾ', ಜಿನಸೇನಾಚಾರ್ಯನ 'ಆದಿಪುರಾಣ' ಮತ್ತು 'ಪಾರ್ಶ್ವಾಭ್ಯುದಯ', ಆಗಸನ 'ವರ್ಧಮಾನ ಪುರಾಣ', ಹಲಾಯುಧನ 'ಕವಿರಹಸ್ಯ' ಮತ್ತು 'ಮೃತ ಸಂಜೀವಿನಿ', ಅಕಳಂಕನ 'ತತ್ವಾರ್ಥ ವಾರ್ತ್ತಿಕ ಮತ್ತು 'ಪ್ರಮಾಣ ಸಂಗ್ರಹ' ವಿದ್ಯಾ ನಂದನ 'ಅಷ್ಟಸಾಹಸ್ರೀ ಮತ್ತು ಬಾಷ್ಯ, ಪ್ರಭಾ ಚಂದ್ರನ 'ಪ್ರಮೇಯ ಕಮಲ ಮಾರ್ತಂಡ, ಮುಂತಾದವು ರಾಷ್ಟ್ರಕೂಟರ ಕಾಲದಲ್ಲಿ ರಚನೆಯಾದ ಸಂಸ್ಕೃತ ಕೃತಿಗಳಾಗಿವೆ.

ಕಲೆ: ರಾಷ್ಟ್ರಕೂಟರ ಕಾಲದಲ್ಲಿ ಕಲೆಯೆಂಬುದು ತನ್ನ ಸಂಪೂರ್ಣ ಶ್ರೀಮಂತಿಕೆಯನ್ನು ಪಡೆದುಕೊಂಡಿತ್ತೆಂಬುದನ್ನು ನಾವು ಅವರ ಎಲ್ಲೋರ ಮತ್ತು ಎಲಿಫೆಂಟಾಗಳಲ್ಲಿ ಕೊರೆದು ನಿರ್ಮಿಸಿರುವ ಮೂರ್ತಿಶಿಲ್ಪಗಳಲ್ಲಿ ಕಾಣಬಹುದಾಗಿದೆ.

ಕೈಲಾಸನಾಥ ದೇವಾಲಯ: ಈಗಿನ ಮಹಾರಾಷ್ಟ್ರದ ಔರಂಗಾಬಾದ್ ಜಿಲ್ಲೆಯಿಂದ 14 ಮೈಲಿ ದೂರದ ಎಲ್ಲೋರದಲ್ಲಿರುವ ಕೈಲಾಸ ದೇವಾಲಯವು ಬಹುಶಃ ಭಾರತದ ಗುಹಾ ವಾಸ್ತುಶಿಲ್ಪದ ಅತ್ಯಂತ ಪ್ರಶಸ್ತವಾದ ಉದಾಹರಣೆಯಾಗಿದೆ. ಇಲ್ಲಿ ಒಟ್ಟು 34 ಗವಿಗಳು ಒಂದೇ ಬಂಡೆಯಲ್ಲಿ ಕೊರೆಯಲ್ಪಟ್ಟದ್ದು, 12 ಬೌದ್ಧ ಮತಕ್ಕೂ 18 ಹಿಂದೂ ಮತಕ್ಕೂ, 4 ಜೈನ ಧರ್ಮಕ್ಕೂ ಸಂಬಂಧಿಸಿದವುಗಳಾಗಿವೆ. ಇವುಗಳಲ್ಲೆಲ್ಲಾ ಅತ್ಯಂತ ಪ್ರಮುಖವಾದದ್ದೆಂದರೆ 16ನೇ ಗುಹೆಯ ಅದ್ಭುತ ಸೃಷ್ಟಿ ಎನಿಸಿರುವ ಕೈಲಾಸ ದೇವಾಲಯ. ದೊಡ್ಡ ಬೆಟ್ಟದ ಬಂಡೆಯ ಒಂದು ಭಾಗವನ್ನು ಸಂಪೂರ್ಣವಾಗಿ ಬೇರ್ಪಡಿಸಿದ ನಂತರ ಪ್ರತ್ಯೇಕವಾದ ಬೆಟ್ಟವನ್ನು ಸಮಕೋನವಾಗಿ ಆಗಾಧವಾದ ಮೂರು ಕಂದಕಗಳನ್ನು ಬಂಡೆಯ ಕೆಳಮಟ್ಟದವರೆಗೂ ಲಂಬವಾಗಿ ಕಡಿದು ರೂಪಿಸಿದ ದೇವಾಲಯವಿದು. ಇದನ್ನು ರಾಷ್ಟ್ರಕೂಟರ ದೊರೆ ಮೊದಲನೆಯ ಕೃಷ್ಣ ನಿರ್ಮಿಸಿದನು. 276ರ ಅಡಿ ಉದ್ದ ಮತ್ತು 154 ಅಡಿ ಅಗಲದಷ್ಟು ಈ ದೇವಾಲಯ ವಿಸ್ತಾರವಾಗಿದ್ದು ಹಿಂಬಾಗದಲ್ಲಿ 107 ಅಡಿಗಳಷ್ಟು ಎತ್ತರದ ವಿಸ್ತಾರವಾದ ಹಳ್ಳವಿದೆ. ಈ ದೇವಾಲಯ ಮುಂದಿನ ಆನೆಗಳಿಂದ ಎಳೆಯಲ್ಪಟ್ಟ ಒಂದು ರಥದಂತಿದ್ದು ಗರ್ಭಗುಡಿ, ಪಶ್ಚಿಮಕ್ಕೆ ಮಹಾದ್ವಾರ, ನಂದಿಮಂಟಪ ಮತ್ತು ಚತುಶಾಲೆಯ ಸುತ್ತಲೂ ಮೇಲ್ಛಾವಣಿ ಇರುವ ದಾರಿಗಳನ್ನು ಹೊಂದಿದೆ.

ಈ ದೇವಾಲಯವು ಎತ್ತರವಾದ ತಳಪಾಯದ ಮೇಲಿನ ವೇದಿಕೆಯಲ್ಲಿ ರಥದ ಮಾದರಿಯಲ್ಲಿ ನಿಂತಂತೆ ಕಂಡು ಬರುತ್ತದೆ. ವೇದಿಕೆಯ ಮಧ್ಯದಲ್ಲಿ ಮುಂಭಾಗವು ಆನೆ, ಸಿಂಹ ಇನ್ನಿತರ ಪ್ರಾಣಿಗಳ ಚಿತ್ರಗಳಿಂದ ಕೂಡಿರುವುದರಿಂದ ದೊಡ್ಡ ಆನೆಗಳು ಈ ದೇವಾಲಯದ ಸಂಪೂರ್ಣ ಭಾರವನ್ನು ಹೊತ್ತಿರುವಂತೆ ಮತ್ತು ಹಾಗೆಯೇ ಚಲಿಸುತ್ತಿವೆಯೇನೋ ಎಂಬಂತೆ ಕಂಡು ಬರುತ್ತದೆ. ಮಹಾ ಮಂಟಪದ ಮೇಲ್ಭಾಗ ಚಪ್ಪಟೆಯಾಗಿದ್ದು ಮಧ್ಯದಲ್ಲಿರುವ ಕಳಸದ ಕೆಳಗೆ ಸುತ್ತಲೂ ಅನೇಕ ದಳಗಳುಳ್ಳ ಕಮಲವನ್ನು ಕೆತ್ತಲಾಗಿದೆ. ಮಹಾಮಂಟಪ ಮತ್ತು ಅಂತರಾಳಗಳ ಹಿಂದೆ ಮೂರು ಅಂತಸ್ತುಗಳ ವಿಮಾನ, ಮುಂದೆ ಚಾಚಿದ ಅಲಂಕೃತ ಕಮಾನಿನ ಸುಕನಾಸಿ ಮೇಲೆ ಅರ್ಧ ಗೋಳಾಕೃತಿಯ ಶಿಖರ, ಚೌಕಾಕಾರದ ನಂದಿ ಮಂಟಪ ಸಹ ದೇವಾಲಯದಂತೆಯೇ ಎತ್ತರವಾದ ಪೀಠದ ಮೇಲಿದ್ದು ಎರಡನ್ನೂ ಸೇರಿಸುವ ಒಂದು ಕಲ್ಲಿನ ಸೇತುವೆಯಿದ್ದು ಈ ನಂದಿ ಮಂಟಪ ಇನ್ನೊಂದು ಕಲ್ಲು ಸೇತುವೆಯ ಮೂಲಕ ಮಹಾದ್ವಾರಕ್ಕೆ ಕೂಡಿಕೊಂಡಿದೆ. ಕೈಲಾಸ ದೇವಾಲಯದ ಕೆಲವು ಮೂರ್ತಿ ಶಿಲ್ಪಗಳು ಅತ್ಯಂತ ಆಕರ್ಷಕವಾಗಿವೆ. ರಾವಣನು ಕೈಲಾಸ ಪರ್ವತವನ್ನು ಎತ್ತುತ್ತಿದ್ದರೆ, ಇನ್ನೊಂದು ಕಡೆ ಶಿವಪಾರ್ವತಿಯರು ತನ್ಮಯರಾಗಿ ಪಗಡೆಯಾಡುತ್ತಿದ್ದಾರೆ. ಈ ದೃಶ್ಯವಂತೂ ಅತ್ಯಂತ

ಮನೋಹರವಾಗಿದ್ದು ಎಲ್ಲೋರದಲ್ಲಿ ಅನೇಕ ಬಾರಿ ಕಂಡು ಬರುತ್ತದೆ. ಇದು ಕೈಲಾಸ ದೇವಾಲಯದಲ್ಲಿಯೇ ಎರಡು ಬಾರಿ ಮೂಡಿ ಬಂದಿದೆ. ಶಿವ ಪಾರ್ವತಿಯರ ಅಕ್ಕಪಕ್ಕದಲ್ಲಿ ದ್ವಾರಪಾಲಕರೂ, ಚಾಮರ ಧಾರಣಿಯೋರ್ವಳೂ ಇದ್ದಾರೆ. ಅದರ ಕೆಳಗೆ ಕೈಗಳನ್ನು ಚಾಚಿ ಕುಳಿತ ರಾವಣನಿದ್ದಾನೆ. ರಾವಣನ ಸಾಹಸ ಕಾರ್ಯವನ್ನು ನೋಡಲು ದೇವತೆಗಳೂ ದೇವತಾ ಸ್ತ್ರೀಯರೂ ಸ್ವರ್ಗದಿಂದ ಇಳಿದು ಬರುತ್ತಿರುವಂತೆ ಕಾಣುತ್ತಾರೆ. ಸಂಪೂರ್ಣವಾಗಿ ಇದೊಂದು ತೀರ ಹೊಂದಾಣಿಕೆಯಿಂದ ಕೂಡಿದ ಕೃತಿಯಂತಿದೆ.

ಇದನ್ನು ಕುರಿತು ಪರ್ಸಿ ಬ್ರೌನ್‌ರವರು ಹೀಗೆ ಹೇಳಿದ್ದಾರೆ 'ಕೈಲಾಸ ದೇವಾಲಯದ ತಳವಿನ್ಯಾಸ ಅಥೇನ್ಸಿನ ಪಾರ್ಥನಾನದ ಸರಿ ಸುಮಾರು ವಿಸ್ತೀರ್ಣದಷ್ಟೇ ಇದೆ ಎಂಬುದನ್ನು ಅದರ ಎತ್ತರವೂ ಅದೇ ಗ್ರೀಕ್ ಶ್ರೇಷ್ಠ ಕಲಾಕೃತಿಯ ಒಂದೂವರೆಯಷ್ಟಿದೆಯೆಂಬುದನ್ನೂ ನಾವು ಗಮನಿಸಿದರೆ ಅದರ ಮಹತ್ವದ ಹಾಗೂ ಬೃಹತ್ವದ ಕಲ್ಪನೆ ಉಂಟಾಗುತ್ತದೆ. ಅದು ಕಲಾತ್ಮಕ ರಚನೆ ಮಾತ್ರವೇ ಅಲ್ಲ. ಅದಕ್ಕಿಂತಲೂ ಹೆಚ್ಚಾಗಿ ಅದೊಂದು ಮಹೋನ್ನತ ಅಧ್ಯಾತ್ಮಿಕ ಸಿದ್ಧಿ. ಅತ್ಯಂತ ಶ್ರೇಷ್ಠವಾದ ಆದರ್ಶಸಿದ್ಧಿಗಾಗಿ ಮಾನವನ ಬುದ್ಧಿ, ಹೃದಯ ಮತ್ತು ಕೈಗಳು ಒಂದೇ ಸ್ಥಾಯಿಯಲ್ಲಿ ಸೇರಿ ಹೊಂದಿಕೊಂಡು ಕೆಲಸ ಮಾಡಿದ ಅಪೂರ್ವ ಪ್ರಸಂಗವೊಂದರ ನಿದರ್ಶನವೇ ಕೈಲಾಸ". ಇದು ಮಾನವ ಕೃತಿಯಲ್ಲ, ಬ್ರಹ್ಮನದೇ ಸೃಷ್ಟಿ, ಎಂದು ಅಲ್ಲಿನ ಒಂದು ಶಾಸನವೇ ಹೇಳುತ್ತದೆ. ಜೈನಧರ್ಮಕ್ಕೆ ಸೇರಿದ ರಾಷ್ಟ್ರಕೂಟರ ಕಾಲದ ಐದು ಶಿಲೋತ್ಖನಿತ ದೇವಾಲಯಗಳು ಎಲ್ಲೋರದಲ್ಲಿವೆ. ಈ ಗುಂಪಿನಲ್ಲಿ ಛೋಟಾ ಕೈಲಾಸ, ಇಂದ್ರಸಭೆ ಮತ್ತು ಜಗನ್ನಾಥಸಭೆ ಎಂದು ಕರೆಯಲಾಗುವ ದೇವಾಲಯಗಳು ಉಲ್ಲೇಖನೀಯವಾಗಿವೆ.

ದಶಾವತಾರ ಗುಹೆ: ಎಲ್ಲೋರದಲ್ಲಿರುವ ಇತರ ಶಿಲೋತ್ಖನಿತ ದೇವಾಲಯಗಳಲ್ಲಿ ದಶಾವತಾರ ದೇವಾಲಯ ಪ್ರಮುಖವಾದುದಾಗಿದೆ. ಎರಡು ಅಂತಸ್ತಿನಲ್ಲಿರುವ ಈ ದೇವಾಲಯ (15ನೇ ಗುಹೆ)ದ ಗೋಡೆಯ ಮೇಲೆ ದಂತಿವರ್ಮನ ಶಾಸನವಿದ್ದು ಆತನೇ ಇದನ್ನು ನಿರ್ಮಿಸಿರಬಹುದೆಂದು ಹೇಳಲಾಗಿದೆ. ಈ ದೇವಾಲಯದ ಕೆಳ ಮಂಟಪ 97 ಅಡಿ ಉದ್ದದಿಂದ ಕೂಡಿದ್ದು 50ಅಡಿ ಅಗಲವಿದೆ. ಇಲ್ಲಿ ಶಿವತಾಂಡವ, ಪಾರ್ವತಿ, ವರಾಹ, ವಿಷ್ಣುಲೀಲೆಗಳಿಗೆ ಸಂಬಂಧಿಸಿದ ಶಿಲ್ಪ ಕಲಾಕೃತಿಗಳಿದ್ದು ಒಟ್ಟು 14 ಕಂಬಗಳು ಮೇಲಂತಸ್ತನ್ನು ಹೊತ್ತು ನಿಂತಿವೆ.

ಎಲಿಫೆಂಟಾ ಗುಹಾಲಯ: ಮುಂಬಯಿ ಬಂದರ ಬಳಿ ಇರುವ ಎಲಿಫೆಂಟಾ ದ್ವೀಪದಲ್ಲಿ ರಾಷ್ಟ್ರಕೂಟರ ಕಲೆಯು ಪರಾಕಾಷ್ಠತೆಯ ತುತ್ತ ತುದಿಯನ್ನು ಮುಟ್ಟಿತು. ಕೆಲವು ಕಾಲ ಈ ದ್ವೀಪವನ್ನು ಆಕ್ರಮಿಸಿಕೊಂಡಿದ್ದ ಪೋರ್ಚುಗೀಸರು ಇಲ್ಲಿದ್ದ ಅನೇಕ ಶಿಲ್ಪಕಲಾ ಕೃತಿಗಳನ್ನು ನಾಶಮಾಡಿದರು. ಅರ್ಧನಾರೀಶ್ವರ ಮೂರ್ತಿ ಫಲಕವು ಬಹುಕೆಟ್ಟದಾಗಿ

ವಿರೂಪಗೊಳಿಸಲ್ಪಟ್ಟಿದ್ದರೂ ಸಹ ಭವ್ಯವಾಗಿದೆ. ಪುರುಷಾರ್ಧ ಭಾಗದಲ್ಲಿ ಎರಡು ಕೈಗಳಿವೆ. ಒಂದು ಕೈಯಲ್ಲಿ ಸರ್ಪವಿದೆ. ಇನ್ನೊಂದು ಕೈ ನಂದಿಯ ತಲೆಯ ಮೇಲಿದೆ. ಸ್ತ್ರೀ ಭಾಗದ ಎರಡು ಕೈಗಳಲ್ಲಿ ಒಂದರಲ್ಲಿ ಕನ್ನಡಿಯಿದ್ದು ಮತ್ತೊಂದರಲ್ಲಿ ನಿರಿಗೆಯಿರುವ ವಸ್ತ್ರ ಖಂಡವಿದೆ ಸಮಗ್ರ ವಿನ್ಯಾಸವು ಅಸದೃಶ್ಯವಾಗಿದ್ದು ದೇವತೆಗಳ ಆಕೃತಿಗಳಿಂದ ತುಂಬಿದೆ.

ಎಲ್ಲೋರದ ದೇವಾಲಯಗಳಿಗೆ ಹೋಲಿಸಿದರೆ, ಎಲಿಫೆಂಟಾದ ಮುಖ್ಯ ದೇವಾಲಯ ದೊಡ್ಡದು ಮತ್ತು ಶಿಲ್ಪ ಸೌಂದರ್ಯದಲ್ಲಿ ಅತಿ ಶ್ರೇಷ್ಠ. ತಾಂತ್ರಿಕ ಪರಿಣತೆಯ ಕೊರತೆ ಇಲ್ಲಿ ಕಂಡು ಬಂದರೂ ಮೂರ್ತಿಗಳು ಅತ್ಯಾಲಂಕಾರದ್ದಾಗಿವೆ. ಎಲಿಫೆಂಟಾದ ಏಳು ಗುಹೆಗಳಲ್ಲಿ ಮಧ್ಯದ ಗುಹೆಯಲ್ಲಿ ತ್ರಿಮೂರ್ತಿ ಎಂದು ಸಾಮಾನ್ಯವಾಗಿ ಹೇಳುವ ಮಹೇಶ ಮೂರ್ತಿಯ ವಿಗ್ರಹವು ವಿಸ್ಮಯಕರವಾದ ಬೃಹದಾಕಾರವುಳ್ಳದ್ದಾಗಿದೆ. ಇಲ್ಲಿ ಶಿವನನ್ನು ಸೃಷ್ಟಿ, ಸ್ಥಿತಿ ಮತ್ತು ಲಯ ಕಾರ್ಯಗಳನ್ನು ನಿರ್ವಹಿಸುವ ಪ್ರತಿನಿಧಿಯ ರೂಪದಲ್ಲಿ ರಚಿಸಲಾಗಿದೆ. ಈ ಮೂಮೊಗದ ಮೂರ್ತಿಯು 23 ಅಡಿ ಎತ್ತರವು $19_{1/2}$ ಅಡಿ ಅಗಲವು ಇದೆ. ಫ್ರೆಂಚ್ ವಿಮರ್ಶಕನೂ ಇತಿಹಾಸಕಾರನೂ ಆದ ರೆನೆಗ್ರೌಸೆ ಈ ಶ್ರೇಷ್ಠ ವಿಗ್ರಹದ ಮೇಲ್ಮೆಯ ಮಟ್ಟವನ್ನು ಕುರಿತು ಹೀಗೆ ಬರೆದಿದ್ದಾನೆ. ಈ ಸರ್ವಾತ್ಮನ ಮೂರು ಮುಖ ಮುದ್ರೆಗಳನ್ನು ಇಲ್ಲಿ ಸ್ವಲ್ಪವೂ ಶ್ರಮವಿಲ್ಲದೆ ಸಮರಸಗೊಳಿಸಲಾಗಿದೆ. ಇದರಷ್ಟು ಸಮಗ್ರವೂ ಸುಸಂಗತವೂ ಆದ ದೇವತಾ ತತ್ವದ ಮೂರ್ತೀಕರವು ಬಹು ವಿರಳ, ಅಷ್ಟೇ ಅಲ್ಲ, ಇನ್ನೂ ವಿಶೇಷವೇನೆಂದರೆ ಮನುಷ್ಯ ಕೃತವಾದ, ನಿರ್ವಿವಾದವಾಗಿ ಅತ್ಯಂತ ಭವ್ಯವಾದ ಆಸ್ತಿಕವಾದಿಗಳ ದೇವತಾ ಮೂರ್ತಿ ಇಲ್ಲಿದೆ.

ಎಲಿಫೆಂಟಾದ ಮಹೇಶ ಮೂರ್ತಿಯ ಪಕ್ಕದಲ್ಲಿ ಗಿರಿಜಾ ಕಲ್ಯಾಣವನ್ನು ನಿರೂಪಿಸುವ ಇನ್ನೊಂದು ಭಿತ್ತಿ ಶಿಲ್ಪವಿದೆ. ವಧುವನ್ನು ದಾನ ಮಾಡುತ್ತಿರುವ ಪಾರ್ವತಿಯ ತಂದೆ ಆಕೆಯ ಹಿಂದೆ ನಿಂತಿದ್ದಾನೆ. ದೇವತೆಗಳು ಈ ಸಮಾರಂಭವನ್ನು ನೋಡುತ್ತಿದ್ದಾರೆ. ಆದರೆ ದುರಾದೃಷ್ಟವಶಾತ್ ಈ ಆಕೃತಿಗಳ ಕೆಳಭಾಗಗಳು ಊನವಾಗಿವೆ. ಇದುವರೆವಿಗೂ ಈ ಕಾಲದಲ್ಲಿ ಕಟ್ಟಿದ ದೇವಾಲಯಗಳು ವಿಶೇಷವಾಗಿ ಕಂಡು ಬಂದಿರಲಿಲ್ಲ. ಆದರೆ ಇತ್ತೀಚೆಗೆ ಗುಲ್ಬರ್ಗ ಜಿಲ್ಲೆಯ ಶಿರವಾಳದಲ್ಲಿ ಕ್ರಿ.ಶ. 939ನೆಯ ವರ್ಷದ ಮೂರನೇ ಕೃಷ್ಣನ ಕಾಲದ ಕೆಲವು ದೇವಾಲಯಗಳು ಪತ್ತೆಯಾಗಿವೆ. ಭೀಮಾನದಿಯ ದಂಡೆಯಲ್ಲಿರುವ ಶಾಸನಗಳಲ್ಲಿ ಶ್ರೀವೊಳಲ ಎಂದು ಕರೆಯಲಾದ ಈ ಗ್ರಾಮದಲ್ಲಿ ಸುಣ್ಣ ಕಲ್ಲಿನಿಂದ ಕಟ್ಟಿದ ಸುಮಾರು 20 ದೇವಾಲಯಗಳು ಕಂಡು ಬಂದಿವೆ. ಮಣ್ಣಿನಲ್ಲಿ ಹೂತು ಹೋಗಿದ್ದ ಇವುಗಳು ಬಹಳ ಜೀರ್ಣಾವಸ್ಥೆಯಲ್ಲಿದ್ದು ಇವುಗಳನ್ನು ಇನ್ನೂ ಹೊರತೆಗೆದು ಸ್ವಚ್ಛಗೊಳಿಸಬೇಕಾಗಿದೆ. ಇವುಗಳಲ್ಲಿ ಒಂದು ಈಶ್ವರಾಲಯ ತಗ್ಗಾದ ಪಾಯದ ಮೇಲೆ ಕಟ್ಟಲಾದ ದೇವಾಲಯದ ರಚನೆ ಸರಳವಾಗಿದೆ. ಭಾರವಾದ ಚೌಕಾಕಾರದ ಇದರ ಕಂಬಗಳ ನಾಲ್ಕೂ ಕಡೆಗಳಲ್ಲಿ ಕೀರ್ತಿ

ಮುಖದ ಅಲಂಕರಣವಿದೆ. ಸಭಾ ಮಂಟಪದ ಎರಡೂ ಗೋಡೆಗಳಲ್ಲಿ ಎರಡೆರಡು ಕಿಟಕಿಗಳಿವೆ. ಆದರೆ ಇದಕ್ಕೆ ಬಳಸಿದ ಕಲ್ಲು ಮಾತ್ರ ಕಪ್ಪಾದ ಬಸಾಲ್ಟ್ ಶಿಲೆ, ದೇವಾಲಯದ ತಳಪಾದಿಯ ಮೇಲ್ಭಾಗದಲ್ಲಿ ರಾಮಾಯಣ, ಮಹಾಭಾರತ, ಪಂಚತಂತ್ರಗಳ ಕತೆಗಳನ್ನು ನಿರೂಪಿಸುವ ಚಿತ್ರಗಳನ್ನು ಕೊರೆಯಲಾಗಿದೆ. ರಾಷ್ಟ್ರಕೂಟರ ಚಕ್ರಾದಿಪತ್ಯವು ವಿಸ್ತಾರವಾಗಿದ್ದರೂ ಅವರ ಕಲೆಗೆ ಸಂಬಂಧಿಸಿದ ಕಾರ್ಯಕ್ಷೇತ್ರಗಳು ಕೆಲವು ಮಾತ್ರ ಇದ್ದವು. ಅವರ ರಾಜಧಾನಿಯಾಗಿದ್ದ ಮಾನ್ಯಖೇಟದಲ್ಲಿಯೂ ಶ್ರೇಷ್ಟವಾದ ಕಲಾಕೃತಿ ಯಾವುದೂ ಇಲ್ಲ. ಅದು ಪೂರ್ತಿ ಹಾಳಾಗಿದೆ. ಶಿರವಾಳದಲ್ಲಿ ಕಂಡು ಬಂದಂತೆ ಸೊಂಡೂರಿನಲ್ಲಿ ಮೂರನೆ ಇಂದ್ರ ಹಾಗೂ ಅವನ ಮಂತ್ರಿಯೊಬ್ಬನ ಪ್ರತಿಮೆಗಳಿರುವ ನಯಗೊಳಿಸಿದ ಕಲ್ಲುಗಳಿಂದ ಕಟ್ಟಿದ ದೇವಾಲಯವಿದೆಯೆಂದು ಹರ್‌ಮನ್ನ್‌ಗೋಟ್ಸ್ (Herman Goetz) ಸೂಚಿಸಿದ್ದಾರೆ.

ರಾಷ್ಟ್ರಕೂಟರ ಅವಧಿಯಲ್ಲಿ ನಿರ್ಮಾಣಗೊಂಡ ದೇವಾಲಯಗಳ ಪೈಕಿ ಉಳಿದು ಬಂದಿರುವ ದೇವಾಲಯಗಳ ಸಂಖ್ಯೆ ಅತ್ಯಂತ ಕಡಿಮೆ ಎಂದು ಒಪ್ಪಿಕೊಳ್ಳುವುದು ಅನಿವಾರ್ಯವಾಗಿದೆ. ಈಗಿನ ಕರ್ನಾಟಕವನ್ನಷ್ಟೇ ಪರಿಗಣಿಸಿದರೆ. ಆ ಸಂಖ್ಯೆಯು ತೀರಾ ಗೌಣ ಎನಿಸಿದರೂ ಆಶ್ಚರ್ಯವಿಲ್ಲ. ಒಂದನೆಯ ಕೃಷ್ಣನ ಕಾಲದಲ್ಲಿ ನಿರ್ಮಾಣ ಆರಂಭಗೊಂಡ ಎಲ್ಲೋರದ ಕೈಲಾಸ ದೇವಾಲಯ ವಾಸ್ತು ಶಿಲ್ಪದಲ್ಲಿನ ಪ್ರಯೋಗಕ್ಕೆ ಒಂದು ವಿಶೇಷವಾದ ಉದಾಹರಣೆ ಈಗ ಮಹಾರಾಷ್ಟ್ರದ ಔರಂಗಾಬಾದ ಜಿಲ್ಲೆಗೆ ಸೇರಿರುವ ಎಲ್ಲೋರಾದ ಕೈಲಾಸ ದೇವಾಲಯವನ್ನು ಅದ್ಭುತ ಎನಿಸುವ ವಾಸ್ತು ನಿರ್ಮಾಣಕ್ಕೂ ಉದಾಹರಣೆಯಾಗಿ ಸ್ವೀಕರಿಸಲಾಗುತ್ತದೆ. ಮುಂಬೈ ನಗರಕ್ಕೆ ಎಲ್ಲೇ ಹತ್ತಿರದಲ್ಲಿರುವ 'ಎಲಪೆಂಟಾ' ಗುಹೆಗಳಲ್ಲೂ ಅವರ ನಿರ್ಮಿತಿಗಳಿವೆ. ಬಾದಾಮಿ, ಐಹೊಳೆ, ಪಟ್ಟದಕಲ್ಲು, ಸಿರಿವಾಳ, ಹಳ್ಳೂರು, ಕುಕನೂರು ಮತ್ತು ಕಲಬುರ್ಗಿ ಜಿಲ್ಲೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಾಷ್ಟ್ರಕೂಟರ ಕಾಲದ ವಾಸ್ತು ನಿರ್ಮಿತಿಗಳನ್ನು ಕಾಣಬಹುದಾಗಿದೆ.

ಒಂದು ಕಾಲಕ್ಕೆ ರಾಷ್ಟ್ರಕೂಟರ ಕಾಲದ ವಾಸ್ತು ನಿರ್ಮಿತಿಗಳು ಅತ್ಯಲ್ಪ ಎಂದು ಭಾವಿಸಲಾಗಿತ್ತು. ಇತ್ತೀಚಿನ ಸಂಶೋಧನೆಗಳು ರಾಷ್ಟ್ರಕೂಟರ ಕಾಲದಲ್ಲೂ ದೇವಾಲಯಗಳ ನಿರ್ಮಾಣ ಸಾಕಷ್ಟು ಪ್ರಮಾಣದಲ್ಲೇ ಆಗಿರುವುದನ್ನು ಖಚಿತಪಡಿಸಿವೆ. ಆದರೆ, ಎಲ್ಲೋರಾ, ಎಲಿಫೆಂಟಾ ಇತ್ಯಾದಿ ಬಹು ಪ್ರಸಿದ್ಧ ಸ್ಥಳಗಳಲ್ಲಿರುವ ವಾಸ್ತುಗಳು, ಅದೇ ಕಾಲದ ಇತರ ವಾಸ್ತು ನಿರ್ಮಿತಿಗಳನ್ನು ಮರೆ ಮಾಡುವಷ್ಟು ಪ್ರಭಾವಶಾಲಿಗಳಾಗಿವೆ. ರಾಷ್ಟ್ರಕೂಟರ ಪ್ರಾರಂಭ ಕಾಲದ ವಾಸ್ತು ನಿರ್ಮಿತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗುಹಾಲಯಗಳು. ಇವುಗಳಲ್ಲಿ ವೈದಿಕ ಮಾತ್ರವಲ್ಲದೆ ಜೈನ ಗುಹಾಲಯಗಳೂ ಸೇರುತ್ತವೆ. ಇವುಗಳಲ್ಲಿ ಎಲಿಫೆಂಟಾದ ಶೈವ ಗುಹೆಗಳೇ ಅತ್ಯಂತ ಪ್ರಾಚೀನ ಎಂದು ಪರಿಗಣಿಸಲಾಗಿದೆ. ಮುಂಬೈ ನಗರದ ನೈಋತ್ಯಕ್ಕೆ ಸುಮಾರು 10 ಕಿ.ಮೀ.

ದೂರದಲ್ಲಿ ಅರಬ್ಬೀ ಸಮುದ್ರದಲ್ಲಿರುವ ಒಂದು ಪುಟ್ಟ ದ್ವೀಪ ಎಲಿಫೆಂಟಾ ಇದಕ್ಕೆ ಸ್ಥಳೀಯವಾಗಿ ಘರಪುರಿ ಎಂದೂ ಕರೆಯಲಾಗುತ್ತದೆ. ಇಮ್ಮಡಿ ಪುಲಿಕೇಶಿಯು ಇದನ್ನು ವಶಪಡಿಸಿಕೊಂಡಿದ್ದ ವಿಷಯವನ್ನು ಐಹೊಳೆಯಲ್ಲಿರುವ ರವಿಕೀರ್ತಿಯ ಪ್ರಶಸ್ತಿ ಶಾಸನ ಖಚಿತಪಡಿಸಿದೆ. ರಾಷ್ಟ್ರಕೂಟರ ಕಾಲಕ್ಕೆ ಇಲ್ಲಿನ ಚಟುವಟಿಕೆಗಳು ಉತ್ತುಂಗಕ್ಕೆ ಏರಿರುವಂತೆ ಕಾಣುತ್ತದೆ. ಸುಮಾರು 8 ಕಿ.ಮೀ. ಚದರ ವಿಸ್ತೀರ್ಣ ಪ್ರದೇಶದಲ್ಲಿರುವ ಎಲಿಫೆಂಟಾ ದ್ವೀಪದಲ್ಲಿ ಈಗಲೂ ಜನ ವಸತಿ ಇದೆ.ಎಲಿಫೆಂಟಾ ದ್ವೀಪದಲ್ಲಿ ಮೊದಲಿನಿಂದಲೂ ವಾಸಿಸುತ್ತಿರುವ ಜನ ವರ್ಗ ಈಗಲೂ ಅಲ್ಲಿ ವಾಸಿಸುತ್ತಿದ್ದಾರೆ. ಇವರನ್ನು ಫಿರಿಗಳು ಅಥವಾ ಗುರವರು ಎಂದು ಸಂಭೋಧಿಸಲಾಗುತ್ತದೆ. ಇಲ್ಲಿನ ಪ್ರಮುಖ ಗುಹೆಯನ್ನು ರಾಷ್ಟ್ರಕೂಟರ ಕಾಲದ ವಾಸ್ತು ಮತ್ತು ಮೂರ್ತಿ ಶಿಲ್ಪಕಲೆಯ ಒಂದು ಪ್ರಯೋಗ ಶಾಲೆ ಎಂದು ಪರಿಗಣಿಸಬೇಕಾಗಿದೆ. ಹಾಗೆ ಕೊರೆದ ಗುಹೆಗಳು ಮತ್ತು ಅವುಗಳಲ್ಲಿನ ಶಿಲ್ಪಗಳಿಗೆ ನಿರಂತರ ಅಧ್ಯಯನಕ್ಕೆ ವಸ್ತುವಾಗುವ ಸಾಮರ್ಥ್ಯವಿದೆ. ಎಲಿಫೆಂಟಾ ದ್ವೀಪದಲ್ಲಿರುವ ಮಹೇಶ ಮೂರ್ತಿಯಾಗಲಿ, ನಟರಾಜ ಮೂರ್ತಿಯಾಗಲಿ, ಗಿರಿಜಾ ಕಲ್ಯಾಣದ ಚಿತ್ರಣವಾಗಲಿ, ಕಲ್ಯಾಣ ಸುಂದರ ಮೂರ್ತಿಯಾಗಲಿ ಅವರ ಕಾಲದಲ್ಲಿ ನಟರಾಜ ಮೂರ್ತಿಯಾಗಲಿ, ಗಿರಿಜಾ ಕಲ್ಯಾಣದ ಚಿತ್ರಣವಾಗಲಿ, ಕಲ್ಯಾಣ ಸುಂದರ ಮೂರ್ತಿಯಾಗಲಿ, ಅಂಧಕಾಸುರ ಸಂಹಾರ ಮೂರ್ತಿಯಾಗಲಿ, ಒಂದು ನೋಟಕ್ಕೆ ಪೂರ್ಣ ಅನಾವರಣಗೊಳ್ಳುವುದಿಲ್ಲ.

ಇಲ್ಲಿ ಕೆಲಸ ಮಾಡಿದ ವಾಸ್ತು ಶಿಲ್ಪಗಳಿಗೆ ಮತ್ತು ಶಿಲ್ಪಗಳಿಗೆ ಅವಕಾಶ ಕಲ್ಪಿಸಿ, ಪೋಷಿಸಿದ ರಾಜರು ಮತ್ತು ಅವರ ಅಧಿಕಾರಿಗಳನ್ನು ಕೃತಜ್ಞತೆಯಿಂದ ನೆನೆಯಬೇಕಾಗುತ್ತದೆ. ಇಲ್ಲಿನ ಒಂದೊಂದು ಮೂರ್ತಿ ಶಿಲ್ಪವೂ ತಾನೂ ಒಂದು ಶ್ರೀಮಂತ ಪರಂಪರೆಯ ಸಾಕ್ಷಿಗಳಾಗಿವೆ. ಎಲಿಫೆಂಟಾದ ಮುಖ್ಯ ಗುಹೆಯ 48 ಮೀಟರ್ ಉದ್ದ ಮತ್ತು ಅಗಲಗಳ ಚಚ್ಚೌಕಾಕೃತಿಯ ನಿರ್ಮಿತಿ ಇದು ಕೊರೆದು ಮಾಡಿದ ಗುಹೆ ಎಂಬುದನ್ನು ಯಾರೂ ಮರೆಯುವ ಹಾಗಿಲ್ಲ. ಎಲಿಫೆಂಟಾವನ್ನು ಹೊರತುಪಡಿಸಿಯೂ ರಾಷ್ಟ್ರಕೂಟ ವಾಸ್ತು ಮತ್ತು ಮೂರ್ತಿ ಶಿಲ್ಪಗಳ ಕಲಾಪ್ರತಿಭೆಯನ್ನು ಎಲ್ಲೋರಾದ ಗುಹಾಲಯಗಳಲ್ಲಿ ಕಾಣಬಹುದು.

ಇಲ್ಲಿನ ದಶಾವತಾರ ಗುಹೆಯ ರಾಷ್ಟ್ರಕೂಟರ ನಿರ್ಮಾಣದ ಎಂದು ತೀರ್ಮಾನ ಆಗಿದೆ. ಎಲ್ಲೋರಾದ ಗುಹೆಗಳಲ್ಲಿ 15ನೆಯ ಸಂಖ್ಯೆಯದು ದಶಾವತಾರ ಗುಹೆ 16ನೆಯ ಗುಹೆಯೇ ಕೈಲಾಸ ದೇವಾಲಯ. ಇದನ್ನು ಗುಹಾಲಯ ಎನ್ನಲೂ ಸಾಧ್ಯವಿಲ್ಲ. ಗುಹಾಲಯಗಳ ನಡುವೆ ಇರುವುದರಿಂದ ಮಾತ್ರ ಗುಹಾಲಯ ಎನ್ನಬಹುದು. ಉಳಿದಂತೆ ಅದು ಕಡೆದು ನಿರ್ಮಿಸಿದ ದೇವಾಲಯ. ಕೊರೆದು ಮಾಡಿದ ಗುಹೆಯಲ್ಲಿ ರಾಷ್ಟ್ರಕೂಟರ ಮಹತ್ವದ ಸಾಧನೆಯನ್ನು ಎಲ್ಲೋರಾದಲ್ಲಿ ಕಾಣಬಹುದು. ರಾಷ್ಟ್ರಕೂಟ ದಂತಿದುರ್ಗನ ಒಂದು ಶಾಸನ

ಇಲ್ಲಿದೆ. ಇದರ ಕಾಲ ಕ್ರಿ.ಶ. 735–36. ಆ ಹೊತ್ತಿಗೆ ದಶಾವತಾರ ಗುಹೆಯ ನಿರ್ಮಾಣ ಆಗಿದ್ದುದು ಸ್ಪಷ್ಟ. ಎರಡು ಅಂತಸ್ತಿನ ಈ ನಿರ್ಮಿತಿಯೂ ಗುಹೆಯಂತಿಲ್ಲ. ಇದೂ ಸಹ ಕಡೆದು ಮಾಡಿದ ನಿರ್ಮಿತಿ. ಇದರ ಕೆಳ ಅಂತಸ್ತಿನಲ್ಲಿ ಹದಿನಾಲ್ಕು ಕಂಬಗಳ ಮಂಟಪವಿದ್ದರೆ, ಮೇಲಿನ ಅಂತಸ್ತಿನಲ್ಲಿ ಹದಿನೆಂಟು ಕಂಬಗಳ ಮಂಟಪ ಇದೆ. ಒಳ ಗೋಡೆಗಳ ಮೇಲೆ ಅರ್ಧ ಕಂಬಗಳಿವೆ. ಇವುಗಳ ನಡುವೆ ಇರುವ ಮೂರ್ತಿ ಶಿಲ್ಪಗಳು ಬೆರಗುಗೊಳಿಸುವಷ್ಟು ಸುಂದರವಾಗಿವೆ. ಈ ಗುಹೆಯ ಗರ್ಭಗೃಹದಲ್ಲಿ ಇರುವ ವರ್ತುಲಾಕಾರದ ಲಿಂಗಪೀಠ ಮತ್ತು ಲಿಂಗವೂ ಸಹ ಅದೇ ಕಲ್ಲಿನ ಒಂದು ಭಾಗ. ಎಲ್ಲೋರಾದ ಲಂಕೇಶ್ವರ ಗುಹೆ ಮತ್ತು ಗಣೇಶ ಗುಹೆಗಳೂ ಸಹ ರಾಷ್ಟ್ರಕೂಟರ ಕಾಲದ ನಿರ್ಮಿತಿ ಎಂದು ಒಪ್ಪಿಕೊಳ್ಳಲಾಗಿದೆ. ರಾಷ್ಟ್ರಕೂಟರ ಕಾಲದ ಪ್ರಮುಖ ಮಾತ್ರವಲ್ಲದೆ, ಸದಾಕಾಲಕ್ಕೂ ಬೆರಗಿಗೆ ಕಾರಣವಾಗುವ ನಿರ್ಮಿತಿ ಎಂದರೆ ಎಲ್ಲೋರಾದ ಗುಹಾ ಸಮೂಹಗಳಲ್ಲಿ 16ನೆಯದು ಎಂದು ಪರಿಗಣಿತವಾಗಿರುವ ಕೈಲಾಸ ದೇವಾಲಯ. ಮೊದಲ ನೋಟಕ್ಕೂ ಗುಹೆಯಂತೆ ಕಾಣದ ಈ ದೇವಾಲಯಕ್ಕೆ ಈ ಹೆಸರು ಬಂದದ್ದೇಕೆ ಎಂಬ ಪ್ರಶ್ನೆಗೆ ಇನ್ನೂ ಸಮರ್ಥ ಉತ್ತರ ದೊರೆತಿಲ್ಲ.

ಗುಹಾ ಸಮೂಹದ ಜೊತೆಗಿರುವುದರಿಂದ ಈ ಹೆಸರು ಬಂದಿರಬಹುದೆ ಎಂದು ಅನುಮಾನಿಸಿದರೆ, ಇದು ಕೇವಲ ಗುಹಾ ಸಮೂಹವಲ್ಲ. ಕಲ್ಲನ್ನು ಗುಹೆಯಾಗಿ ಕೊರೆಯುವುದರ ಜೊತೆಗೆ ದೇವಾಲಯವಾಗಿ ಕಡೆಯುವ ಕೆಲಸವನ್ನೂ ಇಲ್ಲಿನ ಶಿಲ್ಪಿಗಳು ಸಮರ್ಥವಾಗಿ ಮಾಡಿದ್ದಾರೆ. ಗುಡ್ಡವೊಂದರ ಭಾಗವನ್ನು ಪ್ರತ್ಯೇಕಿಸಿಕೊಂಡು, ಅದನ್ನು ಮೇಲಿನಿಂದ ಕೆಳಗೆ ಕೊರೆದು ದೇವಾಲಯ ಮಾಡಿದ್ದಾರೆ. ಅದ್ಭುತಕ್ಕೆ ಒಂದು ಮೂರ್ತ ಉದಾಹರಣೆಯೆಂದರೆ, ಎಲ್ಲೋರಾದ ಕೈಲಾಸ ದೇವಾಲಯ. ರಾಷ್ಟ್ರಕೂಟ ಒಂದನೆಯ ಕೃಷ್ಣನ ಕಾಲದಲ್ಲಿ ನಿರ್ಮಾಣ ಕಾರ್ಯ ಆರಂಭವಾದ ಈ ದೇವಾಲಯದ ನಿರ್ಮಾಣ ಕಾರ್ಯ ಅವನ ಆಳ್ವಿಕೆಯ ಕಾಲಕ್ಕೆ ಮುಗಿಯಿತು ಎಂದು ತಿಳಿಯಲಾಗಿದೆಯಾದರೂ ಇದನ್ನು ಒಪ್ಪದ ವಿಚಾರವಂತರೂ ಇದ್ದಾರೆ. ಇಂತಹ ದೊಡ್ಡ ಪ್ರಮಾಣದ ಕಲ್ಲಿನ ದೇವಾಲಯದ ನಿರ್ಮಿತಿ ಒಬ್ಬ ವ್ಯಕ್ತಿಯ ಆಳ್ವಿಕೆಯ ಕಾಲಕ್ಕೆ ಸಾಧ್ಯವಾಗುವಂತಹದಲ್ಲ ಎಂಬುದು ತಾರ್ಕಿಕ ಅಭಿಪ್ರಾಯ.

ರಾಷ್ಟ್ರಕೂಟ "ಒಂದನೆಯ ಕೃಷ್ಣನ" ಆಳ್ವಿಕೆಯ ಹದಿನೆಂಟು ವರ್ಷಗಳಲ್ಲಿ (ಕ್ರಿ.ಶ.756–774) ಅಂತಹ ನಿರ್ಮಾಣ ಸಾಧ್ಯವಿಲ್ಲ ಎಂಬ ವಾದವನ್ನು ಅಲ್ಲಗಳೆಯುವುದೂ ಕಷ್ಟ. 31.61 ಮೀಟರ (107 ಅಡಿ) ಎತ್ತರ, 46.92 ಮೀಟರ (276 ಅಡಿ) ಉದ್ದ ಮತ್ತು 31.12 ಮೀಟರ (154 ಅಡಿ) ಅಗಲವಿರುವ ಇಂತಹ ಏಕ ಶಿಲಾ ದೇವಾಲಯದ ನಿರ್ಮಿತಿಯು ಕೇವಲ 18 ವರ್ಷಗಳಲ್ಲಿ ಸಾಧ್ಯವಿಲ್ಲ ಎಂಬ ಅನುಮಾನವನ್ನು ಅಲ್ಲಗಳೆಯಲೂ ಸಾಧ್ಯವಿಲ್ಲ. ಕಡೆದು ಮಾಡಿದ ಕೈಲಾಸದಂತಹ ಏಕ ಶಿಲಾ ದೇವಾಲಯದ ರಚನೆಗೆ ಹಲವು ವರ್ಷಗಳೇ ಬೇಕು

[illegible]

ಎಂಬ ವಾದವನ್ನು ಒಪ್ಪಲೇಬೇಕಾಗುತ್ತದೆ. ಈ ದೇವಾಲಯದ ರಚನೆಗೆ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯವು ಮಾದರಿಯಾಗಿದೆ ಎಂಬ ಅಭಿಪ್ರಾಯವೂ ಸಮರ್ಥನೀಯ. ಮೊದಲಿಗೆ ಕೃಷ್ಣೇಶ್ವರ ಅಥವಾ ಕನ್ನೇಶ್ವರ ಎಂಬ ಹೆಸರಿದ್ದ ಈ ದೇವಾಲಯವನ್ನು ಕೇವಲ ಕೆಲವು ನೂರು ವರ್ಷಗಳ ಹಿಂದಿನಿಂದಷ್ಟೇ 'ಕೈಲಾಸ' ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಇದು ಏಕ ಶಿಲಾ ದೇವಾಲಯವಾದ್ದರಿಂದ ನಿರ್ಮಿತಿಗಳ ಸಂಖ್ಯೆ ಕಡಿಮೆ ಮತ್ತು ಸರಳ ಎಂದು ಯಾರಿಗಾದರೂ ಅನಿಸಬಹುದು. ಆದರೆ ಇದು ಎರಡು ಅಂತಸ್ತಿನ ವಿಶಾಲವಾದ ದೇವಾಲಯ ಸಂಕೀರ್ಣ. ಮೇಲೆ ಸುಖನಾಸಿ ಸಹಿತ ಶಿಖರವೂ ಇದೆ.

ಎರಡೂ ಅಂತಸ್ತಿನ ಗರ್ಭಗೃಹಗಳಲ್ಲೂ ಶಿವಲಿಂಗವೇ ಇದ್ದು, ಪ್ರತ್ಯೇಕ ನಂದಿ ಮಂಟಪಗಳು ಇವೆ. ಇದರ ಪ್ರವೇಶ ದ್ವಾರವೂ ಸಹಿತ ವಿಶೇಷವಾಗಿದೆ. ಇವುಗಳ ಜೊತೆಗೆ ದೇವಾಲಯದಲ್ಲಿ ಪರಿವಾರ ದೇವತೆಗಳಿಗೂ ಸ್ಥಾನ ದೊರೆತಿದೆ. ದೇವಾಲಯದ ಸುತ್ತಲೂ ಪ್ರದಕ್ಷಿಣಾ ಪಥವಿದ್ದು, ಅದರ ಸುತ್ತಲ ಮಂಟಪದಲ್ಲಿ ಹಲವು ಸುಂದರ ಶಬ್ದಗಳಿವೆ. ದೇವಾಲಯದ ಮುಖಮಂಟಪ ಭಾಗದ ಬಲಬದಿಯ ಭಿತ್ತಿಯ ಕೋಷ್ಠದಲ್ಲಿ ಕೈಲಾಸವನ್ನು ಎತ್ತುತ್ತಿರುವ ರಾವಣನ ಶಿಲ್ಪ ಇರುವ ಕಾರಣದಿಂದ ಈ ದೇವಾಲಯಕ್ಕೆ ಕೈಲಾಸ (ಗುಹೆ) ಎಂಬ ಹೆಸರು ಬಂದಿರುವ ಸಾಧ್ಯತೆಗಳು ಹೆಚ್ಚು. ದೇವಾಲಯದ ಎದುರು ಪ್ರದಕ್ಷಿಣಾ ಪಥ ಎಂದು ತಿಳಿಯಬಹುದಾದ ಜಾಗದಲ್ಲಿ ಎರಡೂ ಕಡೆ ವಿಜಯ ಸ್ಥಂಭಗಳಿವೆ. ಇವು ಅಲಂಕೃತವೂ ಹೌದು. ಜೊತೆಗೆ ನಿಂತಿರುವ ಎರಡು ಸುಂದರ ಆನೆಗಳ ಶಿಲ್ಪ ಎಲ್ಲರ ಗಮನ ಸೆಳೆಯುತ್ತದೆ. ದೇವಾಲಯದ ಅಧಿಷ್ಠಾನದ ಕೆಳ ಹಂತದಲ್ಲಿ ಆನೆ ಮತ್ತು ಸಿಂಹಗಳ ಉಬ್ಬು ಶಿಲ್ಪಗಳಿವೆ. ಇವುಗಳ ನಡುವೆ ರಾಮಾಯಣ ಮತ್ತು ಮಹಾಭಾರತ ಪ್ರಸಂಗಗಳನ್ನು ಕೆತ್ತಲಾಗಿದೆ. ಈ ಕೆತ್ತನೆಗೂ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಕಥಾನಕ ಶಿಲ್ಪಗಳು ಪ್ರೇರಣೆಯಾಗಿರುವ ಸಾಧ್ಯತೆಗಳು ಹೆಚ್ಚು. ದೇವಾಲಯ ನಿರ್ಮಾಣದಲ್ಲಿ ಶಿಲ್ಪಿಗಳ ಸಿದ್ಧಿ ಮತ್ತು ಸಾಧನೆಯನ್ನು ಸ್ಪಷ್ಟಪಡಿಸಿಕೊಳ್ಳಲು ರಾಷ್ಟ್ರಕೂಟರ ಕಾಲದ ಕಡೆದ / ಕೊರೆದ ನಿರ್ಮಿಸಿದ ದೇವಾಲಯಗಳನ್ನು ನೋಡಲೇ ಬೇಕು. ಎಲ್ಲೋರದ ಕೈಲಾಸ ದೇವಾಲಯವಂತೂ, ಇದೂ ಮನುಷ್ಯ ನಿರ್ಮಿತಿಯೇ ಎಂದು ಬೆರಗಾಗಿಸುವಷ್ಟು ಮಟ್ಟಿನ ಪ್ರೌಢಿಮೆಯನ್ನು ಸಾಧಿಸಿದೆ. ಈ ಬಗ್ಗೆ ದೇಶೀಯ ಮತ್ತು ವಿದೇಶೀಯ ವಿದ್ವಾಂಸರು ಈಗಲೂ ಅಧ್ಯಯನ ನಿರತರಾಗಿದ್ದಾರೆ ಇದರಿಂದ ಈ ದೇವಾಲಯದ ಮಹತ್ವ ತಿಳಿಯುತ್ತದೆ.

ಎಲ್ಲೋರದ ಕೈಲಾಸ ದೇವಾಲಯವು ರಾಷ್ಟ್ರಕೂಟರ ಆಳ್ವಿಕೆಯ ಕಾಲದ ವಾಸ್ತು ತಂತ್ರಜ್ಞರ ಸಾಧನೆಯ ಪ್ರಮುಖ ಮೈಲಿಗಲ್ಲು. ಮೊದಲಿಗೆ ತಮ್ಮ ಅವಶ್ಯಕತೆಗೆ ಬೇಕಾದಷ್ಟು ಬಂಡೆಯನ್ನು ಗುಡ್ಡದಿಂದ ಬೇರ್ಪಡಿಸಿಕೊಂಡು ನಂತರ ಬೇರ್ಪಟ್ಟ ಬಂಡೆಯಂತಹ ಭಾಗವನ್ನು

ಮೇಲಿನಿಂದ ಕಡೆಯುತ್ತಾ, ಅಧಿಷ್ಠಾನದ ಕೆಳಭಾಗವನ್ನೂ ತಲುಪಿ, ನಂತರ ಒಳಗೆ ಕೊರೆದುಕೊಂಡೇ ಪ್ರವೇಶಿಸಿ, ಅಲ್ಲಿ ಕಂಬಗಳೂ ಸೇರಿದಂತೆ, ರಚನಿಕ ದೇವಾಲಯಗಳಲ್ಲಿ ಇರುವ ಎಲ್ಲ ಭಾಗಗಳನ್ನೂ ಕಡೆದು ನಿರ್ಮಿಸುವ ಕೆಲಸ ಸುಲಭವಲ್ಲ ಎಂದು ವಾಸ್ತುಶಾಸ್ತ್ರದ ಸಾಮಾನ್ಯ ಜ್ಞಾನವಿರುವವರೂ ಬಲ್ಲರು. ಬೋದಿಗೆಗಳೂ ಸೇರಿದಂತೆ ಒಂದೇ ಕಲ್ಲಿನಲ್ಲಿ ದೇವಾಲಯದ ನಿರ್ಮಾಣವಾಗಿರುವುದು ಒಂದು ಸೋಜಿಗದ ಮಾತು. ದೇವಾಲಯದ ಹೊರಗಿನ ಅಲಂಕೃತ ವಿಜಯ ಸ್ಥಂಭಗಳು, ಆನೆಗಳು, ಅಧಿಷ್ಠಾನವೂ ಸೇರಿದಂತೆ ಹೊರಬಿತ್ತಿಯಲ್ಲಿ ಕಡೆಯಲಾಗಿರುವ ಶಿಲ್ಪಗಳು, ಹೊರಗಿನ ಮಂಟಪದಲ್ಲಿ ಕಡೆಯಲಾಗಿರುವ ಶಿವ ಪುರಾಣದ ಕಥೆಮತ್ತು ರಾಮಾಯಣ ಮಹಾಭಾರತಗಳಲ್ಲಿನ ಕಥಾನಕಗಳನ್ನು ದೃಶ್ಯ ಮಾಧ್ಯಮದಲ್ಲಿ ನಿರೂಪಿಸಿರುವ ಹಲವು ಶಿಲ್ಪಗಳು, ವಿವರಣೆಗೆ ಶಬ್ದದ ಅವಶ್ಯಕತೆಯನ್ನು ಇಲ್ಲವಾಗಿಸಿವೆ. ಶಿಲ್ಪಗಳೇ ಸ್ವಯಂ ವಿವರಣಾತ್ಮಕವಾಗಿವೆ.

ಶಿಲ್ಪಗಳಲ್ಲಿ ಇಂತಹ ಕಥನ ಕಲೆ ರಾಷ್ಟ್ರಕೂಟರ ವೈಶಿಷ್ಟ್ಯ. ಎಲ್ಲೋರದಲ್ಲಿ ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿತವಾದ ದಶಾವತಾರ ಗುಹೆಗಳು, ಛೋಟಾ ಕೈಲಾಸ ಎಂದು ಕರೆಯಲಾಗುವ ಕಡೆದ ದೇವಾಲಯ ಮತ್ತು ಜೈನ ಗುಹೆಗಳಿವೆ. ಎಲ್ಲವೂ ರಾಷ್ಟ್ರಕೂಟರ ಕಾಲದಲ್ಲಿ ವಾಸ್ತು ನಿರ್ಮಿತಿಗೆ ದೊರೆತ ಪ್ರೋತ್ಸಾಹ. ಪ್ರೋತ್ಸಾಹವನ್ನು ಸದುಪಯೋಗ ಮಾಡಿಕೊಂಡ ಶಿಲ್ಪಿಗಳ ಆಸಕ್ತಿ ಮತ್ತು ಕ್ರಮಗಳ ಪರಿಚಯ ಮಾಡುತ್ತವೆ. ಛೋಟಾ ಕೈಲಾಸ ದೇವಾಲಯ ಕೈಲಾಸ ದೇವಾಲಯದ ಅನುಕರಣೆ. ಎಲ್ಲೋರಾದಲ್ಲಿರುವ ಜೈನ ಗುಹಾಲಯಗಳು ರಾಷ್ಟ್ರಕೂಟರ ಕಾಲದ ಕೊನೆಯ ಹಂತದ ರಚನೆಗಳು ಎರಡು ಅಂತಸ್ತಿನ ಇಂಧ್ರ ಸಭಾ ಮತ್ತು ಜಗನ್ನಾಥ ಸಭಾಗಳು ರಾಷ್ಟ್ರಕೂಟರ ಕಾಲದಲ್ಲಿ ರಚನೆ ಆಗಿವೆ. ಇಂಧ್ರ ಸಭಾದ ಮೊಗಸಾಲೆಯಲ್ಲಿ ಇಂಧ್ರ ಮತ್ತು ಶಚೀ ದೇವೆಯರ ಶಿಲ್ಪವಿದೆ. ಆದ್ದರಿಂದಲೇ ಆ ಗುಹೆಗೆ ಇಂದ್ರ ಸಭಾ ಎಂಬ ಹೆಸರು. ಈ ಗುಹಾಲಯದ ಒಳಗೋಡೆಗಳಲ್ಲಿ ಶಾಂತಿನಾಥ ಮತ್ತು ಪಾರ್ಶ್ವನಾಥರ ಮೂರ್ತಿಗಳಿವೆ.

ರಾಷ್ಟ್ರಕೂಟರ ಕಾಲದಲ್ಲಿ ಎಲ್ಲೋರಾ ಮತ್ತು ಎಲಿಫೆಂಟಾಗಳಲ್ಲೇ ಹೆಚ್ಚು ವಾಸ್ತು ಮತ್ತು ಶಿಲ್ಪಗಳ ಕಾರ್ಯ ನಡೆದಿರುವುದರಿಂದ ಬಹುತೇಕ ರಾಜ್ಯದ ಎಲ್ಲಾ ವಾಸ್ತು ತಜ್ಞರು ಮತ್ತು ಶಿಲ್ಪಿಗಳು ಅಲ್ಲೇ ಬೀಡು ಬಿಟ್ಟಿರುವ ಸಂಭವ ಹೆಚ್ಚು. ಅದೇ ಕಾರಣಕ್ಕಾಗಿ ರಾಜ್ಯದ ಇನ್ನಿತರ ಸ್ಥಳಗಳಲ್ಲಿ ವಿಶಿಷ್ಠ ಎನಿಸುವಂತಹ ದೊಡ್ಡದಾದ ಮತ್ತು ಭವ್ಯವಾದ ಹಾಗೂ ಸುಂದರವಾದ ದೇವಾಲಯಗಳ ನಿರ್ಮಾಣ ಆಗಿಲ್ಲ ಎಂದು ಊಹಿಸಲಾಗಿದೆ. ರಾಜ್ಯ ವಿಸ್ತರಣೆಗೂ ಹೆಚ್ಚು ಅವಕಾಶ ಇಟ್ಟುಕೊಂಡಿದ್ದ ರಾಷ್ಟ್ರಕೂಟರು, ಬಿಡುವಾಗಿದ್ದ ಶಿಲ್ಪಿಗಳನ್ನು ಮಾತ್ರ ಹೆಚ್ಚು ಬಳಸಿಕೊಂಡು, ದೇವಾಲಯ ನಿರ್ಮಾಣದ ಕ್ರಿಯೆಗೆ ಅವಕಾಶ ಕಲ್ಪಿಸಿರುವುದನ್ನು ಅಲ್ಲಗಳೆಯುವಂತಿಲ್ಲ. ರಾಷ್ಟ್ರಕೂಟರ ಕಾಲದ ಹೆಚ್ಚು ಶಿಲ್ಪಿಗಳ ಕ್ರಮ ಮತ್ತು ಕಾಲವನ್ನು

ಎಲ್ಲೋರಾ ಮತ್ತು ಎಲಿಫೆಂಟಾ ಗುಹಾಲಯಗಳು ಬಳಸಿಕೊಂಡ ಕಾರಣದಿಂದ ಬೇರೆಡೆ ದೇವಾಲಯಗಳ ನಿರ್ಮಾಣಕ್ಕೆ ಅವಕಾಶವಾಗಿಲ್ಲ ಎಂದು ಊಹಿಸಬಹುದಾಗಿದೆ. ಇದು ಕೇವಲ ಊಹೆ; ಇದಕ್ಕೆ ಬೇರೆ ಕಾರಣಗಳೂ ಇರಬಹುದು. ರಾಷ್ಟ್ರಕೂಟರ ಕಾಲದಲ್ಲಿ ದೇವಾಲಯ ನಿರ್ಮಾಣ ಮತ್ತು ಶಿಲ್ಪಗಳ ಸೃಷ್ಟಿ ಎಲ್ಲೋರಾ ಮತ್ತು ಎಲಿಫೆಂಟಾಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಆಗಿದೆ ಎನಿಸಿದರೂ, ಬೇರೆಡೆ ಆಗಿಯೇ ಇಲ್ಲ ಎನ್ನುವಂತಿಲ್ಲ. ದಕ್ಷಿಣ ಕರ್ನಾಟಕದಲ್ಲಿ ರಾಷ್ಟ್ರಕೂಟರ ಕಾಲದ ವಾಸ್ತು ನಿರ್ಮಿತಿಗಳು ಕಡಿಮೆ ಎನಿಸಿದರೂ, ಆಗಿಯೇ ಇಲ್ಲ ಎನ್ನುವಂತಿಲ್ಲ. ನೆಲಮಂಗಲ ತಾಲ್ಲೂಕಿನ ಮಣ್ಣೆಯ ಶ್ರೀವಿಜಯ ಜಿನಾಲಯದ ಉಳಿದಿರುವ ಕಂಬಗಳು ರಾಷ್ಟ್ರಕೂಟ ವಾಸ್ತುವಿನ ನೆನಪು ಮಾಡುತ್ತವೆ. ಶ್ರವಣಬೆಳಗೋಳದಲ್ಲೂ ರಾಷ್ಟ್ರಕೂಟರು ಬಸದಿಗಳನ್ನು ಕಟ್ಟಿಸಿದ್ದಾರೆ. ಕರ್ನಾಟಕದ ಉತ್ತರ ಭಾಗದಲ್ಲಿ ಗುಲಬರ್ಗಾ ಜಿಲ್ಲೆಯ ಸಿರಿವಾಳ, ಕುಕನೂರುಗಳಲ್ಲಿ ರಾಷ್ಟ್ರಕೂಟರ ಕಾಲದ ದೇವಾಲಯಗಳಿವೆ.

ಬಾದಾಮಿ ಚಾಲುಕ್ಯರ ವಾಸ್ತು ಮತ್ತು ಮೂರ್ತಿ ಶಿಲ್ಪಗಳ ಕೇಂದ್ರ ಎನಿಸಿರುವ ಐಹೊಳೆ ಮತ್ತು ಪಟ್ಟದಕಲ್ಲುಗಳಲ್ಲೂ ರಾಷ್ಟ್ರಕೂಟರ ಕಾಲದ ನಿರ್ಮಿತಿಗಳಿವೆ. ಲಕ್ಷ್ಮೇಶ್ವರ, ಹಳ್ಳೂರು, ಸವಡಿ, ರೋಣ, ಕುಕನೂರು ಇತ್ಯಾದಿ ಸ್ಥಳಗಳಲ್ಲೂ ರಾಷ್ಟ್ರಕೂಟರ ಕಾಲದ ದೇವಾಲಯಗಳು ಮತ್ತು ಬಸದಿಗಳಿವೆ. ಆಂಧ್ರ ಪ್ರದೇಶದ ಅಲಂಪುರದಲ್ಲಿಯೂ ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳಿವೆ. ಇದರಿಂದ ರಾಷ್ಟ್ರಕೂಟರ ಕಾಲದಲ್ಲಿ ವಾಸ್ತು ನಿರ್ಮಾಣ ಮತ್ತು ಶಿಲ್ಪಗಳ ರಚನೆ ಆಗಲೇ ಇಲ್ಲ ಎಂದು ಹೇಳುವಂತಿಲ್ಲ.

ರಾಷ್ಟ್ರಕೂಟರ ವಾಸ್ತು ನಿರ್ಮಾಣ ಮತ್ತು ಶಿಲ್ಪರಚನೆಗೆ ಎಲ್ಲೋರದ ಕೈಲಾಸ ದೇವಾಲಯವೊಂದೇ ಉದಾಹರಣೆ ಸಾಕು ಎನಿಸುತ್ತದೆ. ಹೊರನೋಟಕ್ಕೆ ಗುಹಾಲಯದಂತೆ ಕಂಡರೂ, ವಾಡಿಕೆಯಲ್ಲಿ ಎಲ್ಲೋರಾದ 16ನೆಯ ಗುಹಾಲಯ ಎಂದು ಹೆಸರುವಾಸಿಯಾಗಿರುವ ಕೈಲಾಸ ದೇವಾಲಯದ ಹೊರಭಾಗವನ್ನು ಕಡೆದು ಮತ್ತು ಒಳಭಾಗವನ್ನು ಕೊರೆದು ಮಾಡಲಾಗಿದೆ ಎಂಬ ಹೇಳಿಕೆಯೊಂದೇ ಅದರ ಹಿಂದಿನ ಪರಿಪಕ್ವತೆಯ ಪರಿಚಯ ಮಾಡುತ್ತದೆ. ವಾಸ್ತು ನಿರ್ಮಿತಿಯಲ್ಲಿ ಪ್ರೌಢತೆಯನ್ನು ಯಾವ ಕಾಲದಲ್ಲಾದರೂ ಕಾಣಬಹುದು ಎನ್ನುವುದಾದರೆ, ಅದಕ್ಕೆ ಎಲ್ಲೋರದ ಕೈಲಾಸ ದೇವಾಲಯವನ್ನಷ್ಟೇ ಉದಾಹರಿಸ ಬೇಕಾಗುತ್ತದೆ. ರಾಷ್ಟ್ರಕೂಟರ ಕಾಲದ ವಾಸ್ತು ತಜ್ಞರಿಗೆ ಮತ್ತು ಶಿಲ್ಪಿಗಳಿಗೆ ಅವರ ಹಿಂದಿನ ಬಾದಾಮಿ ಚಾಲುಕ್ಯ ಸ್ಥಪತಿಗಳು ಮತ್ತು ಶಿಲ್ಪಿಗಳು ಹೆಚ್ಚು ಮಾದರಿಯಾಗಿದ್ದಾರೆ. ಇದು ಸಹಜವೂ ಹೌದು ಸ್ವಾಭಾವಿಕವೂ ಹೌದು. ರಾಷ್ಟ್ರಕೂಟ ಸ್ಥಪತಿಗಳು ಮತ್ತು ಶಿಲ್ಪಿಗಳು ಬಾದಾಮಿ ಚಾಲುಕ್ಯ ಸ್ಥಪತಿ ಮತ್ತು ಶಿಲ್ಪಿಗಳನ್ನು ಹೆಚ್ಚು ಅನುಕರಿಸಿದ್ದಾರೆ ಎನ್ನುವುದಕ್ಕೆ ಎಲ್ಲೋರದ ಕೈಲಾಸ ದೇವಾಲಯಕ್ಕೆ ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯವೇ ಮಾದರಿ ಎಂಬ ವಿದ್ವಾಂಸರ ಅಭಿಪ್ರಾಯವನ್ನು

ಗಮನಿಸಲೇ ಬೇಕಾಗುತ್ತದೆ. ವಾಸ್ತು ಮಾತ್ರವೇ ಅಲ್ಲದೆ, ಶಿಲ್ಪಗಳ ಭಾವ, ಭಂಗಿಗಳಲ್ಲೂ ಎಲ್ಲೋರಾದ ಕೈಲಾಸ ದೇವಾಲಯವು ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯದ ಪ್ರಕೃತಿಯಂತಿದೆ ಅಥವಾ ಪ್ರಕೃತಿಯಂತೆ ಸಿದ್ಧವಾಗಲು ಪ್ರೇರಣೆ ನೀಡಿದೆ ಎಂದು ಒಪ್ಪಿಕೊಳ್ಳಲೇಬೇಕಾಗುತ್ತದೆ. ರಾಷ್ಟ್ರಕೂಟರ ಕಾಲದ ದೇವಾಲಯಗಳ ತಲವಿನ್ಯಾಸವು ಒಂದೇ ಮಾದರಿಯಲ್ಲಿ ಇರುತ್ತಿತ್ತೆಂದು ಭಾವಿಸಲು ಅವಕಾಶಗಳಿಲ್ಲ. ಸ್ಥಳೀಯ ಪರಿಸ್ಥಿತಿಯನ್ನು ಗಮನಿಸಿಯೇ ದೇವಾಲಯಗಳ ರಚನೆ ಆಗುತ್ತಿದ್ದುದರಿಂದ ಅಧಿಷ್ಠಾನದಿಂದ ಆರಂಭಿಸಿ. ಕಳಶದವರೆಗಿನ ವಿನ್ಯಾಸ ಏಕೆ ಸೂತ್ರವನ್ನು ಅನುಸರಿಸಲು ಸಾಧ್ಯವಾಗುತ್ತಿರಲಿಲ್ಲ ಎಂದು ಊಹಿಸಲಾಗಿದೆ.

ಬಾದಾಮಿ ಚಾಲುಕ್ಯರ ಕಾಲದಲ್ಲಿ ಏಕ ಕೂಟ ದೇವಾಲಯಗಳ ರಚನೆಯೇ ಹೆಚ್ಚಾಗಿ ಕಾಣುತ್ತದೆ. ಅಪರೂಪಕ್ಕೆ ದ್ವಿಕೂಟ ಮತ್ತು ತ್ರಿಕೂಟ ದೇವಾಲಯಗಳ ನಿರ್ಮಾಣ ಆಗಿರಬಹುದಾದರೂ, ಒಟ್ಟಾರೆಯಾಗಿ, ಏಕಕೂಟ ದೇವಾಲಯಗಳೇ ಹೆಚ್ಚು ಸಂಖ್ಯೆಯಲ್ಲಿ ಕಂಡುಬರುತ್ತವೆ. ದೇವಾಲಯಗಳು ವಿಸ್ತಾರವಾಗಿರುವುದರ ಬದಲು ಎತ್ತರವಾಗಿರುತ್ತವೆ. ಕೆಲವು ಸಂದರ್ಭಗಳಲ್ಲಿ ಎತ್ತರವೂ ಕಡಿಮೆ ಇರುತ್ತದೆ. ದೇವಾಲಯದ ನಿರ್ಮಾತೃವಿನ ಆರ್ಥಿಕ ಸ್ಥಿತಿಗತಿ ಮತ್ತು ಆಸಕ್ತಿಗಳನ್ನು ಅವಲಂಬಿಸಿ ದೇವಾಲಯಗಳ ನಿರ್ಮಾಣ ಕಾರ್ಯ ನಡೆಯಬೇಕಾಗಿದ್ದ ಕಾರಣ ಕೆಲವು ಇತಿ ಮತ್ತು ಮಿತಿಗಳನ್ನೂ ಅನುಸರಿಸುವುದು ಅನಿವಾರ್ಯವಾಗಿತ್ತು ಎಂದು ತಿಳಿಯಬಹುದಾಗಿದೆ. ಎಲ್ಲೋರದ ಕೈಲಾಸ ದೇವಾಲಯದ ಬಗೆಗಿನ ವಿವರಣೆಯನ್ನು ಕೇಳಿದ ಅಥವಾ ಖುದ್ದಾಗಿ ನೋಡಿದ ಯಾರಿಗೇ ಆದರೂ ಮೂಡುವ ಕಲ್ಪನೆಯನ್ನು ರಾಷ್ಟ್ರಕೂಟರ ಕಾಲದ ಎಲ್ಲ ದೇವಾಲಯಗಳಿಗೂ ಅನ್ವಯಿಸುವಂತಿಲ್ಲ. ಸಿರಿವಾಳದ ದೇವಾಲಯಗಳನ್ನು ನೋಡಿದಾಗ ಯಾರಿಗಾದರೂ ಪಿಚ್ಚೆನಿಸಬಹುದು. ಅಂತೆಯೇ ಕುಕನೂರಿನ ದೇವಾಲಯಗಳ ಸ್ವರೂಪವೇ ಬೇರೆ. ಎಲ್ಲ ಕಾಲದಂತೆ ರಾಷ್ಟ್ರಕೂಟರ ಕಾಲದಲ್ಲೂ, ವಾಸ್ತು ಮತ್ತು ಮೂರ್ತಿ ಶಿಲ್ಪಗಳಿಗೆ ಸಂಬಂಧಿಸಿದಂತೆ ಪ್ರಯೋಗಗಳು ನಡೆದಿರುವ ಸಾಧ್ಯತೆಗಳನ್ನೂ ಅಲ್ಲಗಳೆಯುವಂತಿಲ್ಲ.

ಕೈಲಾಸದಂತಹ ದೇವಾಲಯ ನಿರ್ಮಾಣಕ್ಕೆ ಕೈಹಾಕಿದ ರಾಷ್ಟ್ರಕೂಟ ವಾಸ್ತು ತಜ್ಞರಿಗೆ ಪ್ರಯೋಗ ಎನ್ನುವುದು ಸ್ವಭಾವದಲ್ಲಿ ಸಹಜವಾಗಿಯೇ ಇತ್ತು ಎನಿಸಿದರೆ ಆಶ್ಚರ್ಯ ಆಗಲಾರದು. ರಾಷ್ಟ್ರಕೂಟ ವಾಸ್ತು ತಜ್ಞರು ಪ್ರಯೋಗವೇ ತಮ್ಮ ಹಕ್ಕು ಎಂದು ಕಾರ್ಯಕ್ಕೆ ತೊಡಗುತ್ತಿದ್ದಂತೆ ತೋರುತ್ತದೆ. ಸಾಹಸ ಅವರ ಪ್ರವೃತ್ತಿಯಾಗಿತ್ತು ಎಂದು ತಿಳಿಯಬಹುದು. ಕುಕನೂರಿನಲ್ಲೂ, ವಾಸ್ತು ಪ್ರಯೋಗಗಳು ಇವೆ. ಆದರೆ, ಅದು ವೈಭವದ ಪ್ರದರ್ಶನಕ್ಕಲ್ಲ. ನವಲಿಂಗೇಶ್ವರನ ಜೊತೆಗೆ ಮಹಾ ಮಾಯೆಯೂ ಇರುವ ಕಾರಣದಿಂದ ದೇವಾಲಯ ವಿಸ್ತಾರವನ್ನು ಅಪೇಕ್ಷಿಸಿದೆ. ಅವಶ್ಯಕತೆ ಮತ್ತು ಅನುಕೂಲತೆಗಳಿಗೆ ತಕ್ಕಂತೆ ವಾಸ್ತುವಿನಲ್ಲಿ

ಪ್ರಯೋಗಗಳು ನಡೆಯುತ್ತವೆ. ಐಹೊಳೆಯ ಕೊಂತಿಗುಡಿ ಸಂಕೀರ್ಣವು ರಾಷ್ಟ್ರಕೂಟರ ಕಾಲದ ನಿರ್ಮಾಣ. ಇಲ್ಲಿನ ದೇವಾಲಯಗಳು ಸರಳವಾದ ಮಂಟಪಗಳು. ಹೆಚ್ಚಿನ ಅಲಂಕರಣಕ್ಕೆ ಇಲ್ಲಿ ಅವಕಾಶ ಮಾಡಿಕೊಂಡಿಲ್ಲ. ಒಂದು ಗರ್ಭಗೃಹವಷ್ಟೇ ಇಲ್ಲಿ ಮುಖ್ಯ ಅಧಿಷ್ಠಾನ ಎತ್ತರವಾಗಿಲ್ಲ. ಹಳ್ಳೂರಿನ ಕಾಶಿ ವಿಶ್ವೇಶ್ವರ, ಹೊಸಮಹಾಕೂಟದ ಅಡಕೇಶ್ವರ ಮತ್ತು ಮಲ್ಲಿಕಾರ್ಜುನ ದೇವಾಲಯಗಳು ರಾಷ್ಟ್ರಕೂಟರ ಕಾಲದ ನಿರ್ಮಾಣ. ಪಟ್ಟದಕಲ್ಲಿನ ಜೈನ ನಾರಾಯಣ ಬಸದಿಯೂ ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣವಾಗಿದ್ದು, ಇದು ಅನೇಕ ವಿಷಯಗಳಲ್ಲಿ ಬಾದಾಮಿ ಚಾಲುಕ್ಯರನ್ನು ಅನುಸರಿಸಿದೆ. ಐಹೊಳೆಯ ಮೇಗುತಿ ದೇವಾಲಯದಲ್ಲಿರುವಂತೆಯೇ ಇಲ್ಲೂ, ಮೇಲುಪ್ಪರಿಗೆಯಲ್ಲಿ ಒಂದು ಗರ್ಭಗೃಹ ಇದೆ.

ಬಾದಾಮಿಯ ಚಾಲುಕ್ಯರ ಕಾಲದ ಹಲವು ದೇವಾಲಯಗಳಲ್ಲಿ ಇಂತಹ ಮೇಲುಪ್ಪರಿಗೆಯ ದೇವಾಲಯಗಳಿವೆ. ರಾಷ್ಟ್ರಕೂಟರ ಕಾಲದಲ್ಲೂ ಇಂತಹ ದೇವಾಲಯಗಳ ರಚನೆ ಮುಂದುವರಿದಿದೆ. ಎರಡು ಮತ್ತು ಹೆಚ್ಚು ಅಂತಸ್ತಿನ ದೇವಾಲಯಗಳ ರಚನೆಗೆ ಬಾದಾಮಿ ಚಾಲುಕ್ಯರ ಕಾಲದ ನಿರ್ಮಿತಿಗಳು ಪ್ರೇರಣೆ ನೀಡಿರುವುದು ಅಸಂಭವವಲ್ಲ. ಪಟ್ಟದಕಲ್ಲಿನ ಜೈನ (ನಾರಾಯಣ) ಬಸದಿಯ ಸಂರಕ್ಷಣಾ ಕಾರ್ಯ ಕೆಲವು ವರ್ಷಗಳ ಹಿಂದೆ ನಡೆದಾಗ ದೇವಾಲಯದಲ್ಲಿ ಮೂರ್ತಿ ಪ್ರತಿಷ್ಠಾಪನೆಗೆ ಸಂಬಂಧಿಸಿದ ಕೆಲವು ವಿಚಾರಗಳು ಬೆಳಕಿಗೆ ಬಂದಿವೆ. ಕೆಲವು ವಿಚಾರಗಳಲ್ಲಿ ಜೈನ ಧರ್ಮವು ವೈದಿಕ ಧರ್ಮದ ಆಚಾರ ವಿಚಾರಗಳನ್ನು ಅನುಸರಿಸುತ್ತದೆ. ಇದರಲ್ಲಿ ದೇವಾಲಯ ವಾಸ್ತು ಮತ್ತು ಮೂರ್ತಿ ಪ್ರತಿಷ್ಠಾಪನೆಯೂ ಒಂದು. ಯಾವುದೇ ವಾಸ್ತು ನಿರ್ಮಾಣದ ಆರಂಭದಲ್ಲಿ ಮಾತ್ರವಲ್ಲದೆ, ಸೇರ್ಪಡೆ, ಜೀರ್ಣೋದ್ಧಾರ ಇತ್ಯಾದಿ ಸಂದರ್ಭದಲ್ಲಿ ಕೆಲವು ಪೂಜಾ ವಿಧಿಗಳನ್ನು ಆಚರಿಸಬೇಕೆಂದು ಶಾಸ್ತ್ರ ಗ್ರಂಥಗಳು ಸೂಚಿಸಿವೆ. ವಾಸ್ತು ಶಾಂತಿ, ವಾಸ್ತು ಪುರುಷನ ಆಹ್ವಾನೆ, ಆರಾಧನೆ, ತತ್ಸಂಬಂಧಿ ಹವನ, ಹೋಮ ಇತ್ಯಾದಿಗಳನ್ನು ನಡೆಸುವ ಪದ್ಧತಿ ಮೊದಲಿನಿಂದಲೂ ಬಂದಿದೆ. ಆಧಾರ ಶಿಲಾನ್ಯಾಸ (ಪಾಯದ ಪೂಜೆ) ದ ನಂತರ ಪ್ರಥಮೇಷ್ಟಿಕಾನ್ಯಾಸ (ಇಟ್ಟಿಗೆಯ ಜೋಡಣೆ) ಇತ್ಯಾದಿ ಕಾರ್ಯಗಳು ನಡೆಯಬೇಕು.

ಪಟ್ಟದಕಲ್ಲಿನ ಜೈನ ದೇವಾಲಯದಲ್ಲಿನ ಇಂತಹ ಕ್ರಿಯೆಗಳು ನಡೆದಿರುವುದನ್ನು ಸಂರಕ್ಷಣೆಯ ಸಂದರ್ಭದಲ್ಲಿ ಗಮನಿಸಲಾಗಿದೆ. ಗರ್ಭಗೃಹದ ಬಾಗಿಲಿನ ಬಲಕ್ಕೆ, ಕಲ್ಲಿನ ಗರ್ಭಪಾತ್ರವನ್ನು ಇಡಲಾಗಿತ್ತು. ಗರ್ಭಪಾತ್ರವನ್ನು ಅಧಿಷ್ಠಾನದ ಕೆಳಗೆ ಅಥವಾ ಶಿಖರದ ಕೆಳಗೆ ಇಡಲಾಗುತ್ತದೆ. ಪಟ್ಟದಕಲ್ಲಿನಲ್ಲಿ ಗರ್ಭಪಾತ್ರವು ಅಧಿಷ್ಠಾನದ ಭಾಗದಲ್ಲಿದ್ದುದು ಪತ್ತೆಯಾಗಿದೆ. ಇದರಿಂದ ಜೈನ ಬಸದಿಗಳ ಮತ್ತು ಹಿಂದೂ ದೇವತೆಗಳ ದೇವಾಲಯಗಳ ನಿರ್ಮಾಣಕ್ಕೆ ಒಂದೇ ಕ್ರಮವನ್ನು ಅನುಸರಿಸಲಾಗುತ್ತಿತ್ತು ಎಂದು ಸ್ಪಷ್ಟವಾಗುತ್ತದೆ. ದೇವಾಲಯಗಳೇ ಅಲ್ಲದೇ

ಕಲ್ಯಾಣಿ, ಮಠ ಇತ್ಯಾದಿಗಳನ್ನು ಕಟ್ಟಿ, ಅಲ್ಲಿ ಉಪಯೋಗಿಸಿದ ಕಲ್ಲಿನ ಮೇಲೂ ಶಿಲ್ಪಗಳ ಕೆತ್ತನೆಗೆ ಅವಕಾಶ ಮಾಡಿಕೊಂಡಿರುವ ಜಾಣತನವನ್ನು ರಾಷ್ಟ್ರಕೂಟ ವಾಸ್ತುತಜ್ಞರು ಮತ್ತು ಶಿಲ್ಪಿಗಳಲ್ಲಿ ಕಾಣಬಹುದು. ಗುಲಬರ್ಗಾ ಜಿಲ್ಲೆಯ ಸಿರಿವಾಳವು ರಾಷ್ಟ್ರಕೂಟ ಶಿಲ್ಪಕಲೆಯಿಂದ ಪ್ರಖ್ಯಾತಿ ಪಡೆದಿದೆ. ಇಲ್ಲಿ ಹಲವು ಕಲ್ಯಾಣಿಯಂತಹ ಕಟ್ಟೆಗಳಿವೆ. ಇಲ್ಲಿನ ಮೆಟ್ಟಿಲುಗಳು ಮತ್ತು ಗೋಡೆಯ ಮೆಟ್ಟಿಲಿಗೆ ಉಪಯೋಗಿಸಿರುವ ಕಲ್ಲುಗಳಲ್ಲಿ ವಿಶೇಷವೆನಿಸುವ ಶಿಲ್ಪಗಳಿವೆ.

ಇದರಿಂದ ರಾಷ್ಟ್ರಕೂಟ ಶಿಲ್ಪಗಳ ಪ್ರಯೋಗಶೀಲತೆ ವ್ಯಕ್ತವಾಗುತ್ತದೆ. ಈಗಾಗಲೇ ತಿಳಿಸಿರುವಂತೆ ರಾಷ್ಟ್ರಕೂಟರ ಕಾಲದಲ್ಲಿ ವಾಸ್ತು ಶಿಲ್ಪದಲ್ಲಿ ಹಲವು ಪ್ರಯೋಗಗಳು ನಡೆದಿವೆ. ಏಕಕೂಟ ಮಾತ್ರವೇ ಅಲ್ಲದೆ, ದ್ವಿಕೂಟ, ತ್ರಿಕೂಟ ವಾಸ್ತು ನಿರ್ಮಿತಿಗಳನ್ನು ಕಾಣಬಹುದು. ಆದರೆ, ವಿಸ್ತಾರದಲ್ಲಿ ಇವು ದೊಡ್ಡವಲ್ಲ, ಎತ್ತರದಲ್ಲಿ ದೊಡ್ಡವು. ಆ ಮೊದಲು ಬಾದಾಮಿಯ ಚಾಲುಕ್ಯರು ಮತ್ತು ಕಾಂಚಿಯ ಪಲ್ಲವರು ಕಲ್ಲನ್ನು ಕೊರೆದು ಗುಹಾಲಯಗಳನ್ನು ಮಾಡುತ್ತಿದ್ದಾರೆ. ಇವರು ಕಲ್ಲನ್ನು ಕಡೆದು, ರಾಚನಿಕ ದೇವಾಲಯಗಳಂತೆಯೇ ಕಾಣುವ ದೇವಾಲಯಗಳನ್ನು ನಿರ್ಮಿಸಿದರು. ಶಿಲ್ಪದ ವಿಷಯದಲ್ಲಿ ರಾಷ್ಟ್ರಕೂಟರ ಹೆಚ್ಚಿನ ಪ್ರಯೋಗಗಳಿಗೆ ಕೈಹಾಕಿದಂತೆ ಕಾಣುವುದಿಲ್ಲ ಒಂದು ಕಾಲಕ್ಕೆ ಕರ್ನಾಟಕದಲ್ಲಿ ರಾಷ್ಟ್ರಕೂಟರ ಕಾಲದಲ್ಲಿ ದೇವಾಲಯಗಳ ನಿರ್ಮಾಣ ಕಾರ್ಯವೇ ಆಗಿರಲಿಲ್ಲ ಎಂಬ ಅಭಿಪ್ರಾಯವಿತ್ತು. ಆದರೆ, ಈಗ ಆ ಅಭಿಪ್ರಾಯ ಬದಲಾಗಿದೆ. ಮೊದಲಿನಂತೆ ರಾಷ್ಟ್ರಕೂಟರ ಕಾಲದ ವಾಸ್ತು ಮತ್ತು ಶಿಲ್ಪಕಲೆಯನ್ನು ಕುರಿತ ಚರ್ಚೆಯ ಸಂದರ್ಭದಲ್ಲಿ ಉದಾಹರಿಸುತ್ತಿದ್ದಂತೆ ಕೇವಲ ಎಲ್ಲೋರ ಮತ್ತು ಎಲಿಫೆಂಟಾಗಳನ್ನು ಉದಹರಿಸುತ್ತಿದ್ದಂತೆ ಕೇವಲ ಎಲ್ಲೋರ ಮತ್ತು ಎಲಿಫೆಂಟಾಗಳನ್ನು ಉದಹರಿಸಬೇಕಾಗಿಲ್ಲ.

ಕರ್ನಾಟಕದಲ್ಲೇ ಹಾಸನ ಜಿಲ್ಲೆಯ ಶ್ರವಣಬೆಳಗೊಳ, ಬಾಗಲಕೋಟೆ ಜಿಲ್ಲೆಯ ಐಹೊಳೆ, ಬಾದಾಮಿ, ಪಟ್ಟದಕಲ್ಲು, ಗುಲಬರ್ಗಾ ಜಿಲ್ಲೆಯ ಸಿರಿವಾಳ, ಕೊಪ್ಪಳ ಜಿಲ್ಲೆಯ ಕುಕನೂರು, ಗದಗ ಜಿಲ್ಲೆಯ ಗದಗ, ಲಕ್ಷ್ಮೇಶ್ವರ, ನರೇಗಲ್, ಕುಡುತಿನಿ ಇತ್ಯಾದಿ ಸ್ಥಳಗಳಲ್ಲಿ ರಾಷ್ಟ್ರಕೂಟರ ಕಾಲದ ದೇವಾಲಯಗಳು ಇರುವುದು ತಿಳಿದು ಬಂದಿದೆ. ರಾಷ್ಟ್ರಕೂಟರ ಆಳ್ವಿಕೆಯ ಕೊನೆಯ ಕಾಲದಲ್ಲಿ ನಿರ್ಮಾಣವಾಗಿರುವ ದೇವಾಲಯಗಳಲ್ಲಿ ಜಗಲಿಯನ್ನು ಕಾಣಬಹುದು. ಇದಕ್ಕೆ ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರದ ಬಾಳೇಶ್ವರ ದೇವಾಲಯವು ಉತ್ತಮ ಉದಾಹರಣೆಯಾಗಿದೆ. ದೇವಾಲಯದ ಹೊರಭಿತ್ತಿಯ ಮೇಲಿನ ಅರ್ಧಗರಬಗಳು ಮತ್ತು ಕೋಷ್ಠಗಳುದೇವಾಲಯದ ಕಾಲವನ್ನು ನಿರ್ಧರಿಸಲು ನೆರವಿಗೆ ಬರುತ್ತವೆ. ಜೊತೆಗೆ ಭಿತ್ತಿಗಳಲ್ಲಿ ಜಾಲಂಧ್ರಗಳಿರುವುದು ವಿಶೇಷವಾಗಿದೆ. ಬಾಳೇಶ್ವರ ದೇವಾಲಯದ ಭಿತ್ತಿಯಲ್ಲಿ ಕೊರೆಯಲಾಗಿರುವ ನೃತ್ಯ ಗಣಪತಿ, ನಟರಾಜ, ಗಜಾಸುರ ಸಂಹಾರ ಮೂರ್ತಿ, ಉಗ್ರ

ನರಸಿಂಹ, ಮಹಿಷಮರ್ದಿನಿ, ಅರ್ಧನಾರೀಶ್ವರ, ವೃಷಭಾರೂಢ ಶಿವ ಇತ್ಯಾದಿ ಉಬ್ಬು ಶಿಲ್ಪಗಳು ದೇವಾಲಯದ ಸೌಂದರ್ಯವನ್ನು ಹೆಚ್ಚಿಸಿವೆ. ರಾಷ್ಟ್ರಕೂಟರ ದೇವಾಲಯಗಳ ಒಳಭಾಗದಲ್ಲಿ ಹೆಚ್ಚು ಆಕರ್ಷಣೆಯ ಭಾಗವೆಂದರೆ, ಮಕರ ತೋರಣ ಇದು ಅಲಂಕರಣಕ್ಕೆಂದೇ ರೂಪುಗೊಂಡ ಭಾಗ. ಇದು ದೇವಾಲಯದ ಅರ್ಧ ಮಂಟಪ ಅಥವಾ ಸುಖದಾಸಿಗೆ ಹೊಂದಿಕೊಂಡ ಭಾಗ ಸೊಗಲದ ಸೋಮೇಶ್ವರ, ಐಹೊಳೆಯ ಮಲ್ಲಿಕಾರ್ಜುನ, ಗಳಗನಾಥ ಇತ್ಯಾದಿ ದೇವಾಲಯಗಳಲ್ಲಿರುವ ಮಕರ ತೋರಣಗಳು ಅಲಂಕರಣಕ್ಕೆ ಬಳಕೆಯಾಗಿವೆ. ಮಕರ ತೋರಣದ ಮೇಲಿನ ತ್ರಿಪುರಾಂತಕ, ಭೈರವ, ಅಪ್ಸರೆ, ಮಹಿಷಮರ್ದಿನಿ ಇತ್ಯಾದಿ ಉಬ್ಬು ಶಿಲ್ಪಗಳು ಅಲಂಕರಣೆಗೆಂದೇ ಕೆತ್ತಲ್ಪಟ್ಟಿವೆ ಎನಿಸುತ್ತದೆ.

ರಾಷ್ಟ್ರಕೂಟರ ಕಾಲದ ದೇವಾಲಯಗಳ ಭಿತ್ತಿಗಳಲ್ಲಿ ನಿರ್ಮಿಸಲಾಗಿರುವ ಜಾಲಂಧ್ರಗಳು ವಿಶೇಷ ಗಮನ ಸೆಳೆಯುತ್ತವೆ. ರಾಷ್ಟ್ರಕೂಟರ ಕಾಲದ ದೇವಾಲಯಗಳಲ್ಲಿನ ಮತ್ತೊಂದು ವಿಶೇಷ ಅಂಶವೆಂದರೆ, ಮಾಳಿಗೆಯ ಮೇಲಕ್ಕೆ ಹತ್ತಿಹೋಗಲು, ಒಂದು ಸಣ್ಣ ಪ್ರವೇಶವನ್ನು ಮಾಡಿ, ಅದಕ್ಕೆ ಹತ್ತಲು ಕಲ್ಲಿನ ಏಣಿಯನ್ನು ಹಾಕುವ ವ್ಯವಸ್ಥೆ. ಇಂತಹ ಒಂದು ಏಣಿಯನ್ನು ಪಟ್ಟದಕಲ್ಲಿನ ಜೈನ ಬಸದಿಯಲ್ಲೂ ಕಾಣಬಹುದು. ಸೊಗಲದಲ್ಲಿನ ಸೋಮೇಶ್ವರ ದೇವಾಲಯವೂ ರಾಷ್ಟ್ರಕೂಟರ ಕಾಲದ್ದೆಂದು ಹೇಳಲಾಗಿದೆ. ಹೀಗೆ ರಾಷ್ಟ್ರಕೂಟರ ಕಾಲದಲ್ಲಿ ದೇವಾಲಯಗಳ ನಿರ್ಮಾಣ ಕಡಿಮೆ ಎಂದೇ ಹೇಳಬೇಕಾಗುತ್ತದೆ. ರಾಷ್ಟ್ರಕೂಟರ ಕಾಲದ ದೇವಾಲಯ ಎಂದರೆ ಎಲ್ಲೋರ ಮತ್ತು ಎಲಿಫೆಂಟಾಗಳತ್ತ ಮಾತ್ರ ಮುಖ ನೋಡಿ ನಿಲ್ಲುವ ಕಾಲ ಇದಲ್ಲ. ರಾಷ್ಟ್ರಕೂಟ ದೇವಾಲಯಗಳು ಕರ್ನಾಟಕದ ಬೇರೆಡೆಯೂ ಲಭ್ಯವಿದೆ. ಇತರ ರಾಜ ವಂಶಗಳಿಗೆ ಹೋಲಿಸಿದಾಗ ಇವರ ಕಾಲದಲ್ಲಿ ದೇವಾಲಯಗಳ ನಿರ್ಮಾಣ ಕಡಿಮೆ ಎನಿಸಿದರೂ, ಪೂರ್ಣ ಇಲ್ಲವೇ ಇಲ್ಲ ಎನ್ನುವಂತಿರಲಿಲ್ಲ.

ಇದಕ್ಕೆ ಇರುವ ಕಾರಣಗಳನ್ನು ಹುಡುಕಬೇಕಾಗಿದೆ. ಇತ್ತೀಚಿನ ಸಂಶೋಧನೆಯಿಂದ ತಿಳಿದು ಬರುವಂತೆ, ಗುಲಬರ್ಗಾ ಜಿಲ್ಲೆಯ ಸಿರಿವಾಳದಲ್ಲಿ ರಾಷ್ಟ್ರಕೂಟರ ಕಾಲದ ಹಲವು ದೇವಾಲಯಗಳಿವೆ. ಭೀಮಾ ನದಿಯ ಬಲ ದಂಡೆಯ ಮೇಲಿರುವ ಸಿರಿವಾಳದ ಐದು ಶಾಸನಗಳು ಪ್ರಕಟವಾಗಿವೆ. ಇಲ್ಲಿ ಶಾಸನಗಳಿಗಿಂತಲೂ ಪ್ರಮುಖವಾದವು ದೇವಾಲಯಗಳು ಮತ್ತು ಶಿಲ್ಪಗಳು ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ ಎಡೆದೊರೆ ಪ್ರಾಂತ್ಯದ ಸಗರನಾಡಿನ ಪ್ರಮುಖ ನೆಲೆಯಾಗಿದ್ದ ಸಿರಿವಾಳದಲ್ಲಿ ನಲವತ್ತಾರು ಸ್ಮಾರಕಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ ಮೂವತ್ತನಾಲ್ಕು ದೇವಾಲಯಗಳು, ಏಳು ಮಠಗಳು ಅಥವಾ ಕೋಷ್ಠಾಗಾರಗಳು ಮತ್ತು ಏಳು ಭಾವಿಗಳು ಸೇರಿವೆ. ಇಲ್ಲಿನ ಸಿದ್ದೇಶ್ವರ ದೇವಾಲಯ ಬಿಟ್ಟು ಉಳಿದ ಯಾವುದೇ ದೇವಾಲಯಗಳೂ ಸುಸ್ಥಿತಿಯಲ್ಲಿಲ್ಲ. ಪ್ರಖ್ಯಾತ ವೀರಶೈವ ಗುರು ರೇವಣಸಿದ್ಧರ ತಂದೆ

ಶಾಂತಿಮಯ್ಯನ ನೆನಪಿಗೆ ಈ ದೇವಾಲಯ ನಿರ್ಮಾಣವಾಗಿದೆ. ಸಿದ್ದೇಶ್ವರ ದೇವಾಲಯ ಎಂದು ಹೆಸರಿಸಲಾಗುವ ಪಂಚಕೂಟ ದೇವಾಲಯದ ವಿನಹ ಉಳಿದ ಎಲ್ಲಾ ದೇವಾಲಯಗಳೂ ನೆಲಕಚ್ಚಿವೆ. ಬೀಡಾಡಿ ಪ್ರಾಣಿಗಳ ಮಲಗು ಮನೆಗಳಾದ ಈ ದೇವಾಲಯಗಳು ತಿಪ್ಪೆಯ ಗುಂಡಿಗಳೇ ಆಗಿವೆ. ಈ ದೇವಾಲಯಗಳ ಮೂಲ ಹೆಸರೂ ಈಗ ಮರೆಯಾಗಿದೆ. ಕೆಲವು ದೇವಾಲಯಗಳನ್ನು ನಾದಯ್ಯ, ನನ್ನಯ್ಯ, ಸುಜ್ಞಾನೇಶ್ವರ, ಈಶ್ವರ, ಕದಂಬೇಶ್ವರ, ಜೋಡಿ ಹನಮಂತ, ಕುಂಬಾರ, ಸೂರ್ಯ, ಮಲ್ಲಿಕಾರ್ಜುನ ಇತ್ಯಾದಿ ಹೆಸರುಗಳಿಂದ ಗುರುತಿಸಲಾಗುತ್ತದೆ.

ಉಳಿದ ಯಾವುದೇ ದೇವಾಲಯಗಳಿಗೆ ಹೆಸರುಗಳಿಲ್ಲ. ನಮೂದಿಗಾಗಿ ನಂಬರುಗಳನ್ನು ಬಳಸಲಾಗುತ್ತದೆ. ಇಲ್ಲೊಂದು ಜೈನ ಬಸದಿಯೂ ಇದೆ. ಬಹುತೇಕ ದೇವಾಲಯಗಳ ಹೆಸರುಗಳು ಶಾಸನಗಳ ಮೂಲಕ ಲಭ್ಯವಿದ್ದರೂ, ಯಾವ ದೇವಾಲಯದ ಹೆಸರು ಏನು ಎಂದು ಖಚಿತವಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ. ಶಾಸನಗಳ ಪ್ರಕಾರ ಸಿರಿವಾಳದಲ್ಲಿ ಕದಂಬೇಶ್ವರ, ಎರಹೇಶ್ವರ, ಚಟ್ಟೇಶ್ವರ, ಸಿದ್ಧಸಾತೇಶ್ವರ, ಅಲ್ಮೇಶ್ವರ, ಮಹಾದೇವ, ಸೋಮೇಶ್ವರ, ಶಾಂತೀಶ್ವರ ಇತ್ಯಾದಿ ದೇವಾಲಯಗಳಿದ್ದುವು. ಈಗಲೂ ಗ್ರಾಮದಲ್ಲಿ 20ಕ್ಕೂ ಹೆಚ್ಚು ದೇವಾಲಯಗಳಿವೆ. ಇವುಗಳಲ್ಲಿ ಬಹುತೇಕ ದೇವಾಲಯಗಳು ರಾಷ್ಟ್ರಕೂಟರ ಕೊನೆಯ ಮತ್ತು ಕಲ್ಯಾಣಿ ಚಾಲುಕ್ಯರ ಆರಂಭ ಕಾಲಕ್ಕೆ ಸೇರುತ್ತವೆ. ಆದ್ದರಿಂದ ಈ ದೇವಾಲಯಗಳನ್ನು ರಾಜಕೀಯ ಮತ್ತು ಸಾಂಸ್ಕೃತಿಕ ಸಂಕ್ರಮಣದ ಕಾಲದ ನಿರ್ಮಿತಿಗಳೆಂದು ಪರಿಗಣಿಸಬಹುದಾಗಿದೆ. ನನ್ನಯ್ಯ ಮತ್ತು ನಾಗಯ್ಯನದೇವಾಲಯಗಳು ಖಚಿತವಾಗಿಯೂ ರಾಷ್ಟ್ರಕೂಟರ ಕಾಲಕ್ಕೇ ಸೇರುತ್ತವೆ. ಗರ್ಭಗೃಹ, ಸುಖವಾಸಿ, ಅರ್ಧಮಂಟಪ, ಕಿರು ಸಭಾಮಂಟಪ, ನವರಂಗ ಮತ್ತು ಮುಖ ಮಂಟಪಗಳಿರುವ ಈ ದೇವಾಲಯಗಳು ವಿಸ್ತಾರವಾಗಿಯೇ ಇವೆ. ಇವು ಈಗಲೂ ಜೀವಂತ ದೇವಾಲಯಗಳಾಗಿವೆ. ನವರಂಗದ ಕಂಬಗಳು ಆಕರ್ಷಕವಾಗಿವೆ.

ಸಿರಿವಾಳದಲ್ಲಿ ಏಕ, ದ್ವಿ ಮತ್ತು ಪಂಚಕೂಟ ದೇವಾಲಯಗಳಿರುವುದು ವಿಶೇಷ. ಪಂಚಕೂಟ ದೇವಾಲಯವಂತೂ ವಾಸ್ತು ತಜ್ಞರಿಗೆ ವಿಶೇಷ ಎನಿಸುತ್ತದೆ. ಜೀರ್ಣೋದ್ಧಾರಗೊಂಡಿರುವ ಸುಜ್ಞಾನೇಶ್ವರ ದೇವಾಲಯದ ಹಿಂದೆ, ದೇವಾಲಯಕ್ಕೆ ಹೊಂದಿಕೊಂಡಂತೆಯೇ ಇರುವ ಪುಷ್ಕರಣಿ ಎಂದು ಕರೆಯಬಹುದಾದ ಕಲ್ಲಿನ ಭಾವಿಯ ಅತ್ಯಂತ ಆಕರ್ಷಕವಾಗಿದೆ. ಇದಕ್ಕೆ ಇಳಿದು ಹೋಗಲು ಮೆಟ್ಟಿಲುಗಳಿವೆ. ಭಾವಿಗೆ ಕಲ್ಲಿನ ಗೋಡೆಯ ಕಟ್ಟಡ ಇದೆ. ಈ ಕಟ್ಟಡದ ಕಲ್ಲುಗಳ ಹೊರಮೈಯಲ್ಲಿ ರಾಮಾಯಣದ ಕಥಾನಕದ ಕೆಲವು ಉಬ್ಬು ಶಿಲ್ಪಗಳಿವೆ. ಶೈವ ದೇವಾಲಯಗಳೇ ಇರುವ ಸಿರಿವಾಳದಲ್ಲಿ ಒಂದು ತ್ರಿಕೂಟ

ಜೈನ ಬಸದಿಯೂ ಇದೆ. ಇಲ್ಲಿನ ಬಹುತೇಕ ದೇವಾಲಯಗಳ ಭಿತ್ತಿಗಳು ಮತ್ತು ಭಾವಿಗಳ ಗೋಡೆಯ ಹೊರಮೈಯ ಕಲ್ಲುಗಳ ಮೇಲೆ ಕೆತ್ತಿರುವ ಭಿತ್ತಿ ಶಿಲ್ಪಗಳು ಆಕರ್ಷಕವಾಗಿವೆ. ಚಿಕ್ಕಮಂಗಳೂರಿನ ಆಂಜನೇಯ ದೇವಾಲಯದಲ್ಲಿನ ಮುಖ ಮಂಟಪದಲ್ಲಿರುವ ನಾಲ್ಕು ಕಂಬಗಳು ರಾಷ್ಟ್ರಕೂಟರ ಕಾಲಕ್ಕೆ ಸೇರುತ್ತವೆ ಎಂಬ ಅಭಿಪ್ರಾಯವಿದೆ. ರಾಣೆಬೆನ್ನೂರು ತಾಲ್ಲೂಕಿನ ಇಟಗಿಯ ಬಸವೇಶ್ವರ ದೇವಾಲಯ, ಸಿಡೇನೂರು ಗ್ರಾಮದ ಕಲ್ಲೇಶ್ವರ ದೇವಾಲಯ, ಹಾವೇರಿ ತಾಲ್ಲೂಕಿನ ಆದಿಶಕ್ತಿ ದೇವಾಲಯ, ಕಿತ್ತೂರು ತಾಲ್ಲೂಕಿನ ಸಂಗಮೇಶ್ವರ ದೇವಾಲಯ ಇತ್ಯಾದಿಗಳು ರಾಷ್ಟ್ರಕೂಟರ ಕಾಲದ ನಿರ್ಮಿತಿಗಳೆಂದು ಇತ್ತೀಚೆಗೆ ತಿಳಿದು ಬಂದಿದೆ. ಹಾವೇರಿ ತಾಲ್ಲೂಕಿನ ದೇವಗಿರಿಯ ಹೊಲವೊಂದರಲ್ಲಿ ದೊರೆತಿರುವ ತೀರ್ಥಂಕರರ ಮೂರ್ತಿಗಳಿಂದಾಗಿ ಅಲ್ಲಿ ಒಂದು ಜೈನ ಬಸದಿ ಇದ್ದ ಸುಳಿವು ದೊರೆತಿದೆ. ರಾಷ್ಟ್ರಕೂಟರ ಕಾಲದಲ್ಲಿ ವಾಸ್ತು ನಿರ್ಮಿತಿಯ ಕೆಲಸ ಆಗಲೇ ಇಲ್ಲ ಎಂಬ ಅಭಿಪ್ರಾಯಗಳಿಗೆ ಈಗ ತೆರೆ ಬಿದ್ದಿದೆ. ತಮ್ಮ ಆಳ್ವಿಕೆಗೆ ಸೇರಿದ್ದ ಬಹುತೇಕ ಪ್ರದೇಶದಲ್ಲಿ ರಾಷ್ಟ್ರಕೂಟರು ದೇವಾಲಯಗಳ ನಿರ್ಮಾಣಕ್ಕೆ ಅವಕಾಶ ಕಲ್ಪಿಸಿದ್ದಾರೆ. ಇದರಲ್ಲಿ ಶೈವ ದೇವಾಲಯಗಳೇ ಹೆಚ್ಚು; ವೈಷ್ಣವ ದೇವಾಲಯಗಳ ಸಂಖ್ಯೆ ತೀರಾ ಇಲ್ಲವೇ ಇಲ್ಲ ಎನ್ನುವಂತಿದ್ದರೂ, ಆ ಸಂಖ್ಯೆಯು ವೈಷ್ಣವ ದೇವಾಲಯಗಳು ಇದ್ದ ಸುಳಿವನ್ನು ನೀಡುತ್ತವೆ. ಜೈನ ಬಸದಿಗಳ ಸಂಖ್ಯೆಯೂ ಗಮನಾರ್ಹವಾಗಿಯೇ ಇದೆ.

ಬಾದಾಮಿ ಚಾಲುಕ್ಯರ ಉತ್ತರಾಧಿಕಾರಿಗಳಾಗಿ ಬಂದ ರಾಷ್ಟ್ರಕೂಟರು, ತಮ್ಮ ಹಿಂದಿನ ರಾಜರು / ಅಧಿಕಾರಿಗಳು / ರಾಜ ಕುಟುಂಬದವರು ನಡೆಸಿಕೊಂಡು ಬಂದಿದ್ದ ಬಹುತೇಕ ಎಲ್ಲ ಚಟುವಟಿಕೆಗಳನ್ನೂ ಮುಂದುವರೆಸಿದರು ಪ್ರಗತಿ ಸಾಧಿಸಿದರು; ಬದಲಾವಣೆಗಳನ್ನು ಸ್ವಾಗತಿಸಿದರು. ಕಲ್ಯಾಣ ಚಾಲುಕ್ಯರಂತೆಯೇ ರಾಜ್ಯವನ್ನು ಮಧ್ಯ ಪ್ರದೇಶದವರೆಗೂ ವಿಸ್ತರಿಸಿದ್ದ ರಾಷ್ಟ್ರಕೂಟರು, ಹಿಂದಿನ ಎಲ್ಲ ಒಳ್ಳೆಯದನ್ನೂ ಉಳಿಸಿ, ಬೆಳೆಸಿದರು. ಅವರ ಕಾಲದ ಬದಲಾವಣೆಗಳು ಮುಂದಿನ ಜನಾಂಗಕ್ಕೆ ಮಾರ್ಗದರ್ಶಿ ಆಗಿವೆ. ವಾಸ್ತು ತಂತ್ರದಲ್ಲಿ ವಿಶೇಷ ಎನಿಸುವ ಅಂಶಗಳನ್ನು ರಾಷ್ಟ್ರಕೂಟರ ಕಾಲದಲ್ಲಿ ಕಾಣಬಹುದು. ವಾಸ್ತು ಶೈಲಿಯಲ್ಲಿ ವಿಶಿಷ್ಠ ಮತ್ತು ಅದ್ಭುತಕ್ಕೆ ಉದಾಹರಣೆ ನೀಡಬಹುದಾದ ಎಲ್ಲೋರಾದ ಕೈಲಾಸ ದೇವಾಲಯ, ಅಲ್ಲಿಯದೇ ಛೋಟಾ ಕೈಲಾಸ, ಗಣೇಶ ಗುಹೆ, ಲಂಕೇಶ ಗುಹೆ ಮತ್ತು ದಶಾವತಾರ ಗುಹೆಗಳಲ್ಲದೆ, ಕುಡತಿನಿಯ ರಾಮಲಿಂಗೇಶ್ವರ ಮತ್ತು ಸೂಡಿಯ ಗಣೇಶ ದೇವಾಲಯ, ಬಾಗಲಿಯ ಕಲ್ಲೇಶ್ವರ ದೇವಾಲಯ, ಸಿರಿವಾಳದ ನಾನಯ್ಯ, ನಾದಯ್ಯ, ಈಶ್ವರ, ಕದಂಬೇಶ್ವರ ಮತ್ತು ಸಂಗಮೇಶ್ವರ ದೇವಾಲಯ ಮತ್ತು ಇನ್ನೂ ಹಲವು ದೇವಾಲಯಗಳನ್ನು ನಿರ್ಮಿಸಲಾಗಿದೆ. ಸಾಮಾನ್ಯವಾಗಿ ರಾಷ್ಟ್ರಕೂಟರ ಕಾಲದ ದೇವಾಲಯಗಳ ಮೇಲೆ ವಿಮಾನ

ಇರುವುದಿಲ್ಲ. ರಾಷ್ಟ್ರಕೂಟ ಶಿಲ್ಪಿಗಳು ಕಲ್ಲನ್ನು ಕಡೆದ ಮತ್ತು ಕೊರೆದ ದೇವಾಲಯಗಳ ಜೊತೆಗೆ ಹಲವು ರಾಚನಿಕ ದೇವಾಲಯಗಳನ್ನು ನಿರ್ಮಿಸುವ ಮೂಲಕ ವಾಸ್ತು ಶೈಲಿಯಲ್ಲಿ ಯಶಸ್ವಿ ಪ್ರಯೋಗಗಳನ್ನು ಮಾಡಿದ್ದಾರೆ. ಗುಲಬರ್ಗಾ ಜಿಲ್ಲೆಯಲ್ಲಿ ಕರ್ನಾಟಕದ ಎರಡು ಪ್ರಮುಖ ಅರಸು ಮನೆತನಗಳು ತಮ್ಮ ರಾಜಧಾನಿಗಳನ್ನು ಕಟ್ಟಿದವು ಮತ್ತು ವೈಭವದಿಂದ ಆಳ್ವಿಕೆಯನ್ನು ನಡೆಸಿದವು. ಆ ಸ್ಥಳಗಳು ಮಳಖೇಡ ಮತ್ತು ಗುಲಬರ್ಗಾ. ಮೊದಲನೆಯದು ರಾಷ್ಟ್ರಕೂಟರಿಗೆ, ಎರಡನೆಯದು ಬಹುಮನಿಗೆ ರಾಜಧಾನಿಗಳಾಗಿದ್ದವು. ದಕ್ಷಿಣ ಭಾರತದ ಚರಿತ್ರೆಯಲ್ಲಿ ರಾಷ್ಟ್ರಕೂಟರು ಬಾದಾಮಿ ಚಾಲುಕ್ಯರನ್ನು ಸುಮಾರು ಕ್ರಿ.ಸ. 757ರಲ್ಲಿ ಸೋಲಿಸಿ ಸುಮಾರು ಕ್ರಿ.ಶ. 973ರವರೆಗೆ ಆಳ್ವಿಕೆ ನಡೆಸಿದರು.

ದೊರೆ ದಂತಿಗನು ಚಾಲುಕ್ಯ ಅರಸ ಇಮ್ಮಡಿ ಕೀರ್ತಿವರ್ಮನನ್ನು ಸೋಲಿಸಿ ಎಲಿಚಪುರ (ಎಲ್ಲೋರ)ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ಅದು ಮುಂದೆ ಇಮ್ಮಡಿ ಗೋವಿಂದನ ಆಳ್ವಿಕೆಯ ಕಾಲದವರೆಗೂ ರಾಜಧಾನಿಯಾಗಿತ್ತು. ತದನಂತರ ಅವರ ಎರಡನೆಯ ರಾಜಧಾನಿ ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ 'ಮಾನ್ಯಖೇಟ', ಅಂದರೆ ಈಗಿನ ಮಳಖೇಡ ಆಗಿದ್ದಿತು. ಮುಮ್ಮಡಿ ಗೋವಿಂದನ ಆಳ್ವಿಕೆಯ ಕಾಲದಲ್ಲಿ (ಅಂದರೆ ಸುಮಾರು ಕ್ರಿ.ಶ. 973–818) ದಕ್ಷಿಣದಲ್ಲಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದ ನಂತರ ಆಡಳಿತದ ಅನುಕೂಲಕ್ಕಾಗಿ ಇಲ್ಲೊಂದು ರಾಜಧಾನಿಯನ್ನು ಸ್ಥಾಪಿಸಲು ಯೋಚಿಸಿ ಮಾನ್ಯಖೇಟವನ್ನು (ಕ್ರಿ.ಶ. 818) ಆರಿಸಿಕೊಂಡ. ಆತನ ಉತ್ತರಾಧಿಕಾರಿಯಾಗಿದ್ದ ಅಮೋಘವರ್ಷನು ಸುಮಾರು ಕ್ರಿ.ಶ. 818ರಲ್ಲಿ ಮಾನ್ಯಖೇಟವನ್ನು ರಾಜಧಾನಿ ನಗರವನ್ನಾಗಿ ನಿರ್ಮಿಸಿಕೊಂಡನು. ಉಳಿದೆರಡು ರಾಜಧಾನಿಗಳು ಮಯೂರ ಖಂಡಿ (ಅಂದರೆ ನೆರೆಯ ಬಸವಕಲ್ಯಾಣ ತಾಲ್ಲೂಕಿನ ಬೀದರ ಜಿಲ್ಲೆಯ ಮೊರಖಂಡಿ) ಹಾಗೂ ಲಾತ್ತಲೂರು (ಅಂದರೆ ನೆರೆಯ ಮಹಾರಾಷ್ಟ್ರದ ಲಾತೂರ) ಈ ಸಾಮ್ರಾಜ್ಯದ ಬೆಳವಣಿಗೆಗೆ ಮುಖ್ಯ ಕಾರಣರಾದ ಅರಸರು ಮೊದಲಕೃಷ್ಣ ಗೋವಿಂದ (756–774), ಧ್ರುವ (780–793) ಮುಮ್ಮಡಿ ಗೋವಿಂದ (793–818), ಅಮೋಘವರ್ಷ (818–878), ಇಮ್ಮಡಿ ಕೃಷ್ಣ (878–918), ಮುಮ್ಮಡಿ ಇಂದ್ರ (918–939) ಮತ್ತು ಮುಮ್ಮಡಿ ಕೃಷ್ಣ (939–967) ಇವರು ಸಾಹಿತ್ಯ, ಸಂಸ್ಕೃತಿ ಮತ್ತು ಕಲೆ–ವಾಸ್ತು ಶಿಲ್ಪದ ಬೆಳವಣಿಗೆಗೆ ಪ್ರೋತ್ಸಾಹ ನೀಡಿದರು.

ಶಾಸನಗಳಲ್ಲಾಗಲೀ ಮತ್ತು ಸಾಹಿತ್ಯಕ ಕೃತಿಗಳಲ್ಲಾಗಲೀ ರಾಷ್ಟ್ರಕೂಟರ ರಾಜಧಾನಿಯಾಗಿದ್ದ 'ಮಾನ್ಯಖೇಟ' ಅಥವಾ 'ಮಾನ್ಯಪುರ'ವು ಗುಲ್ಬರ್ಗಾ ಜಿಲ್ಲೆಯ ಕಾಗಿನಾ ನದಿಯ ದಂಡೆಯ ಮೇಲಿರುವ ಮಳಖೇಡವೆಂದು ಹೇಳಿರುವುದಿಲ್ಲ. ಹೀಗೆ ಅನೇಕ ಕಾರಣಗಳಿಂದ ಪ್ರಸ್ತುತ ಮಳಖೇಡವು ರಾಷ್ಟ್ರಕೂಟರಿಗೆ ರಾಜಧಾನಿ ಆಗಿದ್ದಿತ್ತೆಂಬುದನ್ನು

ಅನೇಕರು ಸಂಶಯ ಪಟ್ಟಿದ್ದಾರೆ. ಈ ಸಂಶಯವೇ ತಪ್ಪೆಂಬುದನ್ನು ಕೆಲವು ಐತಿಹಾಸಿಕ ಸಂಗತಿಗಳಿಂದ ತಿಳಿಯಬಹುದಾಗಿದೆ. ಅವುಗಳಲ್ಲಿ ಆಕರ ಸಾಮಗ್ರಿಗಳನ್ನು, ರಾಜಕೀಯ ಚರಿತ್ರೆ, ಭೌಗೋಳಿಕ ಅಂಶಗಳನ್ನು ಮತ್ತು ಈ ಪ್ರದೇಶದ, ಈ ಕಾಲದ ವಾಸ್ತು ಶಿಲ್ಪಕಲಾ ಕೇಂದ್ರಗಳನ್ನು ಮುಖ್ಯವಾಗಿ ಪರಾಮರ್ಶಿಸಬಹುದು.

ಆಕರಗಳು: ಪೂರ್ವಪುರಾಣ, ಆದಿಪುರಾಣ ಮತ್ತು ವಡ್ಡಾರಾಧನೆ ಕೃತಿಗಳಲ್ಲಿರುವ ಜನಪದದ ಅಂಶಗಳಲ್ಲಿ "ಖೇಟಾ" ರಾಜಧಾನಿಯ 'ಕಾಣಿ' ಅಥವಾ 'ಕಾತುರವೇಣಿ' ತಟಾಕದಲ್ಲಿರುವುದೆಂದು ಉಕ್ತವಾಗಿದೆ. ರಾಷ್ಟ್ರಕೂಟರ ದೊರೆ ಮೊದಲನೇ ಕೃಷ್ಣನ ಆಳ್ವಿಕೆಯ ಕಾಲದ ಕೃತಿಯಲ್ಲಿ ಸುಂದರವಾದ ಮಾನ್ಯಖೇಟದಲ್ಲಿ ಸುಭೋಲಿಂಗನೆಂಬ ಬಲಿಷ್ಠ ಅರಸನಿದ್ದನೆಂದು ಹೇಳಿರುವುದು ಗಮನೀಯ ಸಂಗತಿ.

ರಾಷ್ಟ್ರಕೂಟರ ಮನೆತನದಲ್ಲಿ ಪ್ರಸಿದ್ಧಿಯನ್ನು ಪಡೆದ ಅರಸ ಅಮೋಘವರ್ಷ (ಕ್ರಿ.ಶ.814–878), ನೃಪತುಂಗ, ಕಲೆ ಮತ್ತು ಸಾಹಿತ್ಯ ಪೋಷಕನೂ ಆಗಿದ್ದನು. ಆತನ ಆಸ್ಥಾನದಲ್ಲಿ ಅನೇಕ ಉತ್ಕೃಷ್ಟ ಮತ್ತು ಪ್ರಖ್ಯಾತಿ ಪಡೆದ ಕವಿಗಳ ದಂಡೇ ಇತ್ತು. ಸ್ವತಃ ಅರಸ ಕೂಡ ಕವಿಯಾಗಿ "ಪ್ರಶ್ನೋತ್ತರ ಮಾಲಿಕೆ" ಎಂಬ ಕೃತಿಯನ್ನು ರಚಿಸಿದ. ಕೆಲವರು ಈ ಕೃತಿಯ ಕೃರ್ತ ಸ್ವತಃ ಅಮೋಘವರ್ಷನೆಂದು ವಾದಿಸುವರು. ಈತನ ಆಸ್ಥಾನದ ಪ್ರಮುಖ ಆಚಾರ್ಯ ಜಿನಸೇನ "ಆದಿಪುರಾಣ" ಎಂಬ ಕಾವ್ಯವನ್ನು ರಚಿಸಿದ. ಹಾಗೆಯೇ ಮಹಾವೀರಾಚಾರ್ಯ "ಗಣಿತಸಾರ ಸಂಗ್ರಹ"ವನ್ನು ಶಕ್ತಾಯನನ "ಶಬ್ದಾನುಶಾಸನ; ಮತ್ತು ಅಮೋಘವ್ರತಿ ಕೃತಿಗಳೆರಡು ಈತನ ಕಾಲದಲ್ಲಿ ರಚಿಸಲ್ಪಟ್ಟವು. ಜೈನಕವಿ ಪುಷ್ಪದಂತ "ಜೈನ ಮಹಾಪುರಾಣ"ವನ್ನು ರಚಿಸಿದ. ಆತ ರಾಷ್ಟ್ರಕೂಟ ದೊರೆ ಮುಮ್ಮಡಿ ಕೃಷ್ಣನ ಸಮಕಾಲೀನ ಆತ ಮಾನ್ಯಖೇಟ ನಗರವನ್ನು ವರ್ಣಿಸುತ್ತ ಅದು ದೀನ ಮತ್ತು ಅನಾಥರ ತಾಣವಾಗಿತ್ತು. ಯಾವಾಗಲೂ ಅರಳಿದ ಕಮಲದ ಹೂಗಳಿಂದ ಕೂಡಿದ ಉದ್ಯಾನವನಗಳು ಅಲ್ಲಿದ್ದವೆಂದು ಬಣ್ಣಿಸಲಾಗಿದೆ. ಇಮ್ಮಡಿ ಕರ್ಕನ ಕ್ರಿ.ಶ. 816ರ ತಾಮ್ರಪಟ ಶಾಸನದಲ್ಲಿ ಅಮೋಘವರ್ಷನ ಮಾನ್ಯಖೇಟನಗರವನ್ನು ಇಂದ್ರನ ರಾಜಧಾನಿ ಅಮರಾವತಿಯಂತೆ ಅಮೋಘವಾಗಿದ್ದಿತೆಂದು ವರ್ಣಿಸಲಾಗಿದೆ.

ಅಮೋಘವರ್ಷನ ಬಗೆಗೆ ಅರಬ್ ಇತಿಹಾಸ ತಜ್ಞ ಸುಲೇಮಾನನು ವಲ್ಲಭನಾದ ಅಮೋಘವರ್ಷನಷ್ಟು ಪ್ರಖ್ಯಾತಿ ಪಡೆದ ಅರಸರೊಡನೆ ಅದರಲ್ಲಿ ಚೀನಾ, ಬಾಗ್ದಾದ್ ಮತ್ತು ಕಾನ್‌ಸ್ಟಾಂಟಿನೋಪಲ್ ರಾಜರುಗಳನ್ನು ಸಹಪಂಕ್ತಿಯಲ್ಲಿ ಹೋಲಿಸಿದ್ದಾನೆ. ಈತನ ಆಳ್ವಿಕೆಯ ಕಾಲದಲ್ಲಿ ಜೈನಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯವಿತ್ತು. ಜೈನ ಧರ್ಮದ ಜೊತೆಗೆ ಇನ್ನಿತರ ಧರ್ಮಗಳಿಗೂ ಕೂಡ ಆತ ಮಹತ್ವವನ್ನು ನೀಡಿದ್ದು, ಮಾನ್ಯಖೇಟವನ್ನು ಅತ್ಯಂತ

ಸುಂದರಗೊಳಿಸಿದನೆಂತಲೂ, ಅಲ್ಲಿ ಎತ್ತರ ಬೆಟ್ಟಪ್ರದೇಶ ಮತ್ತು ನದಿ ದಂಡೆಯ ಮೇಲೆ ಈ ನಗರ ಸುಂದರವಾಗಿತ್ತೆಂದು ಹೇಳಿದ್ದಾರೆ.

ರಾಜಕೀಯ ಇತಿಹಾಸ : ರಾಷ್ಟ್ರಕೂಟರ ರಾಜಕೀಯ ಚರಿತ್ರೆಯನ್ನು ಅವಲೋಕಿಸಿದಾಗ ಅವರ ರಾಜಧಾನಿಯ ಬಗ್ಗೆ ಕೆಲ ಮಹತ್ವದ ಸಂಗತಿಗಳು ತಿಳಿದು ಬರುತ್ತವೆ. "ಮಾನ್ಯಖೇಟ"ವು ಅಮೋಘವರ್ಷನ ಮಗನಾದ ಇಮ್ಮಡಿ ಕೃಷ್ಣನ ಆಳ್ವಿಕೆಗೆ ಬರುವವರೆಗೂ ಅಂದರೆ ಕ್ರಿ.ಶ.878ರವರೆಗೂ ರಾಜಧಾನಿಯಾಗಿ ಮುಂದುವರೆಯಿತು. ಇಮ್ಮಡಿ ಕೃಷ್ಣನ ಆಳ್ವಿಕೆ ಗುಲ್ಬರ್ಗಾ ಪ್ರದೇಶದಲ್ಲಿ ಇದ್ದುದರ ಬಗೆಗೆ ಇಲ್ಲಿಯವರೆಗಿನ ಆಧಾರಗಳು ಮೌನತಾಳಿವೆ. ಮುಂದೆ ಬಂದ ಅರಸರು ಮಾನ್ಯಖೇಟ (ಮಳಖೇಡ)ದಿಂದ ಆಡಳಿತ ನಡೆಸಿರುವುದರ ಕುರಿತು ಆಧಾರಗಳು ಲಭ್ಯವಾಗಿಲ್ಲ. ರಾಷ್ಟ್ರಕೂಟ ದೊರೆ ಮುಮ್ಮಡಿ ಕೃಷ್ಣನ ಮೂರು ಶಾಸನಗಳು ಮಾತ್ರ ಗುಲ್ಬರ್ಗಾ ಜಿಲ್ಲೆಯಲ್ಲಿ ಬೆಳಕಿಗೆ ಬಂದಿವೆ. ಅವುಗಳು ನಿಡಗುಂದಿ (ಚಿಂಚೋಳಿ), ಶಿರಿವಾಳ (ಶಹಾಪೂರ ತಾಲ್ಲೂಕ) ಮತ್ತು ಅಂದೋಲ (ಜೇವರ್ಗಿ ತಾಲ್ಲೂಕ) ಶಿರವಾಳದ ಕ್ರಿ.ಶ. 939ರ ಶಾಸನ ಅಕಾಲವರ್ಷನ ಆಳ್ವಿಕೆಯದಾಗಿದೆ. ಅದರಲ್ಲಿ ಸಗರನಾಡಿನ ಉಲ್ಲೇಖವೂ ಇದೆ. ನಿಡಗುಂದಿಯ ಅಕಾಲವರ್ಷನ ಅಪೂರ್ಣ ಶಾಸನದಲ್ಲಿ ಶಕ ವರುಷ 876 ಇತ್ಯಾದಿ ವಿವರಗಳಿವೆ. ಅಂದರೆ ಈ ಶಾಸನದ ಕಾಲ ಕ್ರಿ.ಶ. 936 ಮುಮ್ಮಡಿ ಕೃಷ್ಣನ ಆಳ್ವಿಕೆಯನ್ನು ತಿಳಿಸುತ್ತದೆ. ಇದಲ್ಲದೆ ಅಲ್ಲಿಯ ಮನವೆರ್ಗ್ಗಡೆ, ಆಂದೋಲದ ಹೆಗ್ಗಡೆಗಳು, ಕೇಶಿಮಯ್ಯ ಅಧಿಕಾರಿ ಇತ್ಯಾದಿ ವಿವರಗಳಿವೆ. ಈ ವಿವರಗಳಿಂದ ಮಾನ್ಯಖೇಟವು ಅಮೋಘವರ್ಷನಿಂದ ಹಿಡಿದು ಮುಮ್ಮಡಿ ಕೃಷ್ಣನವರೆಗೂ ರಾಜಧಾನಿಯಾಗಿದ್ದಿತೆಂದು ತಿಳಿದುಬರುತ್ತದೆ.

ಮುಮ್ಮಡಿ ಕೃಷ್ಣನ ಆಳ್ವಿಕೆಯ ತರುವಾಯ ರಾಷ್ಟ್ರಕೂಟ ಸಾಮ್ರಾಜ್ಯ ಕ್ರಮೇಣ ಪತನದ ಹಾದಿಯನ್ನು ಹಿಡಿಯಿತು. ಕ್ರಿ.ಶ. 967ರಲ್ಲಿ ಪರಮಾರ ಅರಸ ಸೀಮುಕ ಹರ್ಷ, ಕಳಚೂರಿ ಮತ್ತು ಚೋಳರ ಸೈನ್ಯದ ಬಲದಿಂದ ದಾಳಿ ನಡೆಸಿ ಮಾನ್ಯಖೇಟ ನಗರವನ್ನು ಸೂರೆ ಮಾಡಿದ. ಆ ಸಂದರ್ಭದಲ್ಲಿ ರಾಷ್ಟ್ರಕೂಟರ ಸಾಮಂತ ಮತ್ತು ಸಂಬಂಧಿ ಗಂಗ ಮನೆತನದ ಇಮ್ಮಡಿ ಮಾರಸಿಂಹ ಬಲವಾದ ಸೈನ್ಯದೊಂದಿಗೆ ಧಾವಿಸಿ ಶತ್ರುಗಳನ್ನು ಅಲ್ಲಿಂದ ಹೊರಗಟ್ಟಿದನು. ಈ ಯುದ್ಧದ ಪರಿಣಾಮದಿಂದ ರಾಜಧಾನಿ ನಗರ ಮತ್ತು ದೇಶ ತತ್ತರಿಸಿತು. ಭಯಗ್ರಸ್ತ ಸನ್ನಿವೇಶ ನಿರ್ಮಾಣವಾಯಿತು. ಅಧಿಕಾರಿಗಳು ಸ್ವತಂತ್ರರಂತೆ ವರ್ತಿಸತೊಡಗಿದರು. ಆಳುವ ಅರಸನ ಬಲಹೀನತೆ ಹೆಚ್ಚಾಗತೊಡಗಿತು. ಇಂತಹ ದು:ಸ್ಥಿತಿಯಲ್ಲಿ ಬಲಹೀನ ದೊರೆ ಖೊಟ್ಟಿಗನು ಮರಣ ಹೊಂದಿದನು. ಈ ಯುದ್ದ ನಡೆದಾಗ ರಾಜಧಾನಿ ನಗರದ ಕೋಟೆಯನ್ನು ವೈರಿಗಳು ಸುಟ್ಟುಹಾಕಿದರು. ಈ ಮಾಹಿತಿಯು ಶ್ರವಣಬೆಳಗೋಳದ ಒಂದು ಶಾಸನದಲ್ಲಿದೆ. ಈ

ರೀತಿಯ ಸನ್ನಿವೇಶದಲ್ಲಿ ಒಬ್ಬ ದಂಡನಾಯಕನಾಗಿದ್ದ ಬೊಮ್ಮಹನು ತನ್ನ ಮಗಳನ್ನು ರಾಷ್ಟ್ರಕೂಟರ ಒಬ್ಬ ಸಾಮಂತನಾಗಿದ್ದ ಇಮ್ಮಡಿ ತೈಲಪನಿಗೆ ಕೊಟ್ಟು ಲಗ್ನ ಮಾಡಿದನು. ಆಗ ಸಾಮಂತಾಧಿಪತಿ ತೈಲನು ತರ್ದವಾಡಿನಾಡನ್ನು ಆಳುತ್ತಿದ್ದನು. ಈ ತೈಲನು ಬಾದಾಮಿ ಚಾಲುಕ್ಯ ವಂಶಸ್ಥನೂ ಆಗಿದ್ದನು. ಆತನ ತಾಯಿ ಭೊಂತಲಾದೇವಿ ಕಲಚೂರಿ ಮನೆತನದವಳಾಗಿದ್ದಳು. ಹೀಗೆ ತನ್ನ ಆಂತರಿಕ ಮತ್ತು ಬಾಹ್ಯ ರಕ್ತಸಂಬಂಧಗಳು ಅವನಿಗೆ ಹೆಚ್ಚಿನ ಸೈನ್ಯಶಕ್ತಿ ದೊರೆಯಲು ಕಾರಣವಾಯಿತು. ಆತನು ಅವರ ಸಹಾಯದಿಂದ ರಾಷ್ಟ್ರಕೂಟರನ್ನು ಸೋಲಿಸಿ ರಾಜಧಾನಿ ಮಾನ್ಯಖೇಟವನ್ನು ತನ್ನ ಕೈವಶ ಮಾಡಿಕೊಂಡನು. ಆ ಕ್ಲಿಷ್ಟ ಸಂದರ್ಭದಲ್ಲಿ ಮೊಟ್ಟಮೊದಲು ಆತನ ಅರಸೊತ್ತಿಗೆಯನ್ನು ಒಪ್ಪಿಕೊಂಡು ಕಪ್ಪಕಾಣಿಕೆ ಸಲ್ಲಿಸಿದವರು ಸೌಂದತ್ತಿಯ ರಟ್ಟರಾಗಿದ್ದರು. ಆದರೆ ಬಾಹ್ಯದಲ್ಲಿದ್ದ ಅವರ ವೈರಿಗಳಾಗಿದ್ದ ಚೋಳರು ಮತ್ತು ಪರಮಾರರು ಈ ತೈಲನನ್ನು ಸೋಲಿಸಲು ಆತನ ಮೇಲೆ ಪದೇ ಪದೇ ದಾಳಿ ಮಾಡುತ್ತಿದ್ದರು. ಮೇರುತುಂಗನ ಪ್ರಬಂಧ ಚಿಂತಾಮಣಿಯಲ್ಲಿ ಪರಮಾರ ಅರಸ ಮುಂಜನು ತೈಲನ ಮೇಲೆ ಸುಮಾರು 24ಸಲ ಯುದ್ದ ಮಾಡಿದ, ಆದರೆ 24ನೆಯ ಕೊನೆಯ ಯುದ್ಧದಲ್ಲಿ ಮಾತ್ರ ಮುಂಜನು ಸೋಲನ್ನು ಪಡೆದು ತೈಲಪನಿಗೆ ಸೆರೆಯಾದನೆನ್ನಲಾಗಿದೆ.

ಸೆರೆಮನೆಯಲ್ಲಿದ್ದವೈರಿಯ ಆತಿಥ್ಯ ನೋಡಿಕೊಳ್ಳಲು ಮೃಳಾಲವತಿಗೆ ವಹಿಸಿದನು. ಆಕೆಯನ್ನು ಮುಂಜ ಪ್ರೀತಿಸಿ ಅಲ್ಲಿಂದ ತಪ್ಪಿಸಿಕೊಳ್ಳಲು ಒಂದು ಸಂಚನ್ನು ಹೂಡಿದನು. ಸೆರೆಮನೆಯಿಂದ ತಪ್ಪಿಸಿಕೊಳ್ಳಲು ತನ್ನ ರಾಜಭಟರ ಸಹಾಯದಿಂದ ಒಂದು ಗುಪ್ತ ನೆಲಮಾರ್ಗವನ್ನು ತೋಡಿಸಿದ. ಅದು ಮುಗಿಯಲು ಒಂದು ದಿವಸ ಉಳಿದಾಗ ಮುಂಜನು ಮೃಳಾಲವತಿಗೆ ಅಲ್ಲಿಂದ ಆಕೆಯ ಜೊತೆಯಲ್ಲಿ ತಪ್ಪಿಸಿಕೊಂಡು ತನ್ನ ದೇಶಕ್ಕೆ ಪಾರಾಗಿ ಹೋದ ಬಳಿಕ ಲಗ್ನವಾಗುವುದಾಗಿ ಭರವಸೆ ನೀಡಿದ. ಈ ವಿಚಾರವನ್ನು ಆಕೆಯು ತಕ್ಷಣ ತನ್ನ ಸಹೋದರ ತೈಲಪನಲ್ಲಿ ಬಹಿರಂಗ ಪಡಿಸಿದಳು. ಸಿಟ್ಟಿಗೆದ್ದ ತೈಲಪನು ಮರುದಿನವೆ ಮುಂಜನಿಗೆ ಕಬ್ಬಿಣದ ಸರಪಳಿಗಿಂದ ಮೈಕೈಗಳನ್ನು ಕಟ್ಟಿಸಿ ಮಾನ್ಯಖೇಟ ನಗರದ ರಾಜಬೀದಿಗಳಲ್ಲಿ ಭಿಕ್ಷೆ ಬೇಡಿಸುತ್ತ ಮೆರವಣಿಗೆ ಮಾಡಿ ಆತನನ್ನು ಕೊಂದನೆಂದು ವರ್ಣಿಸಲಾಗಿದೆ. ಈ ಕಥೆಯಿಂದ ಸಮಕಾಲೀನ ಅರಸರ ಮತ್ತು ಮಾನ್ಯಖೇಟದ ರಾಜಧಾನಿ. ಅಲ್ಲಿಯ ಸೆರೆಮನೆ ಮುಂತಾದ ವಿಷಯಗಳು ತಿಳಿಯುತ್ತವೆ. ದಕ್ಷಿಣದಿಂದ ಚೋಳರು ತೈಲ ಮತ್ತು ಆತನ ವಂಶಸ್ಥರ ಮೇಲೆ ಪದೇ ಪದೇ ದಾಳಿ ಮಾಡುತ್ತಿದ್ದರಿಂದ ಮಾನ್ಯಖೇಟ ನಗರವು ಹೆಚ್ಚು ಧ್ವಂಸವಾಗಲು ಕಾರಣವಾಯಿತು. ಸುರಕ್ಷತೆಯ ಸಲುವಾಗಿ ಆತನು ತನ್ನ ರಾಜಧಾನಿ ಪಟ್ಟಣವನ್ನು ಅಲ್ಲಿಂದ ನೆರೆಯ ಏತಗಿರಿ ಅಂದರೆ ಇಂದಿನ ಯಾದಗಿರಿಗೆ ವರ್ಗಾಯಿಸಿದನು. ಇಲ್ಲಿಗೂ ಶತ್ರುಗಳಿಂದ ಬಹುತೇಕ ಚೋಳ, ಗಂಗ ಮತ್ತು ಇತರರಿಂದ ಕಾಟಗಳು ತಪ್ಪಲಿಲ್ಲ. ಚೋಳರ ದಾಳಿಗಳು

ಚಾಲುಕ್ಯರ ಮೇಲೆ ಮುಂದುವರಿದವು. ಮುಂದೆ ತೈಲನ ವಂಶದ (ಚಾಲುಕ್ಯ) ಇಮ್ಮಡಿ ಜಯಸಿಂಹ ಎಂಬವನು ತನ್ನ ಆಳ್ವಿಕೆಯ ಕಾಲದಲ್ಲಿ ರಾಜಧಾನಿಯನ್ನು ಪೊಟ್ಟಳಕೆರೆಗೆ ವರ್ಗಾಯಿಸಿದನು. ಇದರಿಂದ ಚೋಳರು ಚಾಲುಕ್ಯರಿಗೆ ಹುಟ್ಟುವೈರಿಗಳಾದರು. ಮುಂದೆ ಮೊದಲನೆಯ ಸೋಮೇಶ್ವರನು ಆಳುವಾಗ ನೆರೆ ಜಿಲ್ಲೆಯ ಇಂದಿನ ಬಸವ ಕಲ್ಯಾಣಕ್ಕೆ ಸುಮಾರು ಕ್ರಿ.ಶ. 1048ರಲ್ಲಿ ತಮ್ಮ ರಾಜಧಾನಿಯನ್ನು ವರ್ಗಾಯಿಸಿದನು.

ಕಲ್ಯಾಣಪುರ ಚಾಲುಕ್ಯರಿಗೆ ರಾಜಧಾನಿಯಾದ ತಕ್ಷಣ ಚೋಳರು ಸುಮಾರು ಎರಡು ಅಥವಾ ಮೂರು ಸಲ ಅದರ ಮೇಲೆ ದಾಳಿ ಮಾಡಿದರು. ಕಲ್ಯಾಣದ ಕೋಟೆಯನ್ನು ಸುಟ್ಟು ಹಾಕಿದರು. ಈ ಸ್ಥಳವೂ ಸುರಕ್ಷಿತವಾಗಿರಲು ಬಿಡಲಿಲ್ಲ. ಮುಂದೆ ಚೋಳರ ಜೊತೆ ರಕ್ತ ಸಂಬಂಧ ಬೆಳೆಸಿದ ಕಾರಣ ಆರನೇ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದಿಂದ ಕಲ್ಯಾಣದ ಮೇಲೆ ಚೋಳರಿಂದ ದಾಳಿಗಳು ಸಂಭವಿಸಲೇ ಇಲ್ಲ. ಬಲಿಷ್ಠ ಮತ್ತು ಪರಾಕ್ರಮಿ ಅರಸ ವಿಕ್ರಮಾದಿತ್ಯನಾಗಿದ್ದುದರಿಂದ ಕಲ್ಯಾಣವು ಸುಮಾರು ಒಂದು ಕಾಲು ಶತಮಾನ ಚಾಲುಕ್ಯರ ರಾಜಧಾನಿಯಾಗಿ ವೈಭವದಿಂದ ಮೆರೆಯಿತು. ಹೀಗಾಗಿ ಈ ಚಾಲುಕ್ಯರನ್ನು ಕಲ್ಯಾಣ ಚಾಲುಕ್ಯರೆಂದು ಕರೆಯುವರು. ಇವರ ಪೂರ್ವಜರೇ ಬಾದಾಮಿ ಚಾಲುಕ್ಯರು. ಇವರನ್ನು ಸೋಲಿಸಿದವರೇ ರಾಷ್ಟ್ರಕೂಟರೆಂದು ಅವರ ಮೇಲಿನ ಹಗೆತನವನ್ನು ತೀರಿಸಿಕೊಂಡನೆಂದು ಇವರು ತಮ್ಮ ಅನೇಕ ಶಾಸನಗಳಲ್ಲಿ ಹೇಳಿಕೊಂಡಿದ್ದಾರೆ. ಜೊತೆಯಲ್ಲಿ ಬಾದಾಮಿ ಚಾಲುಕ್ಯರ ಮನೆತನದಿಂದ ಕಲ್ಯಾಣ ಚಾಲುಕ್ಯರ ಮನೆತನದವರೆಗೆ ಬಹುತೇಕವಾದ ತೈಲನು ಅಯ್ಯಣನ ಕಾಲ ಅಥವಾ ಆರನೇ ವಿಕ್ರಮಾದಿತ್ಯನ ಕಾಲದವರೆಗೆ ಅವರ ವಂಶಾವಳಿ ವಿವರಗಳು ಶಾಸನ ಮತ್ತು ಸಾಹಿತ್ಯ ಕೃತಿಗಳಲ್ಲಿವೆ. ಈ ಐತಿಹಾಸಿಕ ಘಟನೆಗಳನ್ನು ಅವಲೋಕಿಸಿದಾಗ ರಾಜಕೀಯ ಸ್ಥಿತ್ಯಂತರದಲ್ಲಿ ರಾಜಧಾನಿ ಪಟ್ಟಣ (ನಗರ)ಗಳ ಸ್ಥಳಾಂತರ ವಿಷಯವನ್ನು ಇಲ್ಲಿ ಪರಾಮರ್ಶಿಸಲಾಗಿದೆ.

ಮಹಾರಾಷ್ಟ್ರದ ಎಲೆಚಪುರ ಅವರ ಮೊದಲ ರಾಜಧಾನಿ. ಅವರ ಮತ್ತೊಂದು ರಾಜಧಾನಿ ಮಾನ್ಯಖೇಟ. ಇನ್ನುಳಿದವುಗಳು ಮಯೂರಖಂಡಿ ಮತ್ತು ಲತ್ತಲೂರುಗಳು, ಮಯೂರಖಂಡಿ ಬಸವಕಲ್ಯಾಣ ತಾಲ್ಲೂಕಿನ ಮೊರಖಂಡಿಯಾದರೆ ಲತ್ತಲೂರು ನೆರೆಯ ಮಹಾರಾಷ್ಟ್ರದ ಲಾತೂರುಗಳಾಗಿವೆ. ಈ ಎರಡೂ ಸ್ಥಳಗಳನ್ನು ಮಾನ್ಯಖೇಟದ ದಕ್ಷಿಣದ ನೆರೆಯಲ್ಲಿವೆ. ಆಗಿನ ಮಾನ್ಯಖೇಟವು ಇಂದಿನ ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಮತ್ತು ಕಾಗಿಣನದಿ ದಂಡೆ ಮೇಲಿನ ಮಳಖೇಡವಾಗಿದೆ. ಕೆಲವರ ಅಭಿಪ್ರಾಯದಲ್ಲಿ ಈ ಮಾನ್ಯಖೇಟ ದಕ್ಷಿಣ ಕರ್ನಾಟಕದಲ್ಲಿನ ಮಾನ್ಯಪುರವೆಂದು ಅಭಿಪ್ರಾಯಪಟ್ಟಿರುವ ಈ ಸ್ಥಳವು ಮಯೂರಖಂಡಿಗಾಗಲಿ, ಲತ್ತಲೂರಿಗಾಗಲಿ, ಕಲ್ಯಾಣಪುರಕ್ಕಾಗಲಿ ಅತೀ ದೂರದಲ್ಲಿದೆ. ಇದನ್ನು

ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಈ ಮಾನ್ಯಖೇಟ ನಗರವು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಲು ಸುರಕ್ಷಿತವಲ್ಲದ ಕಾರಣ ಅದರ ರಾಜಧಾನಿಯನ್ನು ನೆರೆಯಲ್ಲಿರುವ ಎತ್ತರ ಬೆಟ್ಟವುಳ್ಳ ಏತಗಿರಿ ಅಂದರೆ ಈಗಿನ ಯಾದಗಿರಿಗೆ ವರ್ಗಾಯಿಸಿದರು. ಆನಂತರ ಆ ಪ್ರದೇಶಕ್ಕೆ ಹತ್ತಿರವಾದ ಮತ್ತೊಂದು ರಾಜಧಾನಿ ಸ್ಥಳ ಕಲ್ಯಾಣವು ಇಂದಿನ ಬಸವಕಲ್ಯಾಣವಾಗಿದೆ. ಹೀಗಾಗಿ ಒಟ್ಟಾರೆ ಈ ಎಲ್ಲ ರಾಜಧಾನಿಪಟ್ಟಿಗಳು ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಲುಕ್ಯರ ಆಳ್ವಿಕೆಯಲ್ಲಿ ಬೀದರ, ಗುಲ್ಬರ್ಗಾ ಪ್ರದೇಶಗಳಲ್ಲಿ ಮತ್ತು ಅದರ ನೆರೆಹೊರೆಗಳಲ್ಲಿರುವುದು ಸ್ಪಷ್ಟವಾಗಿ ಕಾಣುತ್ತದೆ. ಹೀಗಾಗಿ ಮಳಖೇಡವೇ ರಾಷ್ಟ್ರಕೂಟರ ರಾಜಧಾನಿ ಮಾನ್ಯಖೇಟವಾಗಿದ್ದಿತ್ತೆಂದು ಇನ್ನು ಸ್ಪಷ್ಟವಾಗುತ್ತದೆ.

ರಾಷ್ಟ್ರಕೂಟರ ಕಾಲದ ಅನೇಕ ದೇವಾಲಯ ಶಿಲ್ಪ ಶಾಸನ ಇತ್ಯಾದಿ ಸ್ಮಾರಕಗಳು ಈಗ ಗುಲಬರ್ಗಾ ಜಿಲ್ಲೆಯ ಶಿರವಾಳ, ಜೇವರ್ಗಿ, ಭೀಮರಾಯನಗುಡಿ, ಶಹಾಪುರ, ಮುದನೂರು, ನಿಡಗುಂಡಿ, ದಿಗ್ಗಾವಿ, ಇಂಗಳಗಿ, ರಾವೂರ, ಕುಳಗೇರಿ, ಕಾಳಗಿ, ಕೇಶ್ವಾರ, ಉಡಗಿ, ಸೇಡಂ, ಮಳಖೇಡ, ಗಂವ್ಹಾರ, ಕೊಲ್ಲೂರು, ಸನ್ನತಿ, ತಡಕಲ್ಲು, ದೋರನಹಳ್ಳಿ, ಮಾಗಣಗೇರಿ ಮುಂತಾದ ಸ್ಥಳಗಳಲ್ಲಿ ಪತ್ತೆಯಾಗಿವೆ. ಈ ಸ್ಥಳಗಳಲ್ಲಿರುವ ಸ್ಮಾರಕ ಶಿಲ್ಪಕಲೆಯ ಈ ಕಾಲದ ವಾಸ್ತು ಶಿಲ್ಪಕಲೆಯ ಅಧ್ಯಯನಕ್ಕೆ ಹೊಸ ಚೈತನ್ಯವನ್ನು ನೀಡುತ್ತದೆ. ವಿಭಿನ್ನ ರೀತಿಯ ರಾಷ್ಟ್ರಕೂಟರ ಕಾಲದ ಶಿಲ್ಪ, ದೇವಾಲಯ, ಬಸದಿ, ಪುಷ್ಕರಣಿ ಇತ್ಯಾದಿ ಸ್ಮಾರಕಗಳನ್ನು ಈ ಕಾಲದ ಈ ಪ್ರದೇಶದಲ್ಲಿ ಎಂ.ಎಸ್.ನಾಗರಾಜರಾವ್, ಅ. ಸುಂದರ್, ಸಿ.ಎಸ್. ಪಾಟೀಲ, ರು.ಮ. ಷಡಕ್ಷರಯ್ಯನವರು ಬೆಳಕಿಗೆ ತಂದಿದ್ದಾರೆ. ಡಾ. ದಾಖಿ ಅವರು ಸಂಪಾದಿಸಿದ 'ಎನ್‌ಸೈಕ್ಲೋಪೀಡಿಯಾ ಆಫ್ ಇಂಡಿಯನ್ ಟೆಂಪಲ್ಸ್' ಭಾಗ – 1ರ ಕೃತಿಯಲ್ಲಿ ಈ ಪ್ರದೇಶದ ಕೆಲವು ದೇವಾಲಯಗಳ ವಿವರಗಳಿವೆ.

ಮಳಖೇಡದ ಪ್ರಾಚೀನತೆ :

ಸೇಡಂ ತಾಲ್ಲೂಕು ಪ್ರಾಚೀನ ಕಾಲದಲ್ಲಿ ವಿಶೇಷವಾಗಿ ಹೆಸರುವಾಸಿಯಾಗಿದೆ. ತಾಲ್ಲೂಕಿನ 'ಮಳಖೇಡವು' (ಮಾನ್ಯಖೇಟ) ರಾಷ್ಟ್ರಕೂಟರ ಕಾಲದಲ್ಲಿ ರಾಜಧಾನಿಯಾಗಿ ತನ್ನ ಭವ್ಯ ಪರಾಕ್ರಮತೆ, ಕಲೆ, ಸಾಹಿತ್ಯ, ಸಂಗೀತ ಮುಂತಾದ ಕ್ಷೇತ್ರಗಳಲ್ಲಿ ಅದ್ವಿತೀಯ ಸಾಧನೆ ಮಾಡಿದೆ. ಪ್ರಾಚೀನ ಹೆಸರು ಮಾನ್ಯಖೇಟ. ಮಳೆಯಖೇಟಕ ನಂತರದ ದಿನಗಳಲ್ಲಿಮಾನ್ಯಖೇಡ, ಮಲಖೇಡ, ಮಳಖೇಡ ಹೀಗೆ ಪರಿವರ್ತನೆಯಾಗಿದೆ. ಕ್ರಿ.ಶ. 1337ರಲ್ಲಿ ಮಳಖೇಡ ಶಾಸನವು ಮಳೆಯ ಖೇಡ ಎಂದು ಹೆಸರುವಾಸಿಯಾಗಿದೆ. ರಾಷ್ಟ್ರಕೂಟರ ಸುವಿಖ್ಯಾತ ಅರಸ 'ನೃಪತುಂಗ' ಚಕ್ರವರ್ತಿಯು ಶಾಂತಿ ಸಮಾಜ ಸುಭಿಕ್ಷ ರಾಷ್ಟ್ರ ನಿರ್ಮಾಣ ಮಾಡಿ ಇಡೀ ಜನರ ಮನಸೂರೆಗೊಂಡುದು ಐತಿಹಾಸಿಕ ಸತ್ಯವಾಗಿದೆ. ಕನ್ನಡ ಉಪಲಬ್ಧ ಗ್ರಂಥ ಕವಿರಾಜಮಾರ್ಗ

ಸೃಷ್ಟಿಯಾಗಿದ್ದ ಪುಣ್ಯನೆಲ ಸೇಡಂ ತಾಲ್ಲೂಕಿನ ಮಳಖೇಡವಾಗಿದೆ. ರಾಜಧಾನಿ ಮಾನ್ಯಖೇಟದ ವರ್ಣನೆಯನ್ನು ಅನೇಕ ವಿದೇಶಿ ಪ್ರವಾಸಿಗರು ಕೊಂಡಾಡಿದ್ದಾರೆ. ದೇವಲೋಕದ ಇಂದ್ರನ ಅಮರಾವತಿ ನಾಚಿಸುವಂತಹ ಭವ್ಯ ರಾಜಧಾನಿ ಮಳಖೇಡವಾಗಿತ್ತು ಎಂದು ತಿಳಿದು ಬಂದಿದೆ. ಕುರಿತೋದದೆಯಂ ಕಾವ್ಯಪರಿಣತ ಮತಿಗಳ್, ಕವಿಗಳು, ಅತ್ಯುಗ್ರರು, ಸದಭಿಮಾನಿಗಳು ಎನ್ನುವ ಕವಿರಾಜ ಮಾರ್ಗನ ವಾಣಿಯಂತೆ ಈ ನೆಲ ಪವಿತ್ರವಾದುದು. ಆದುದರಿಂದ ಮಳಖೇಡ ಭವ್ಯಕೋಟೆಯ ಭಗ್ನಾವಸ್ಥೆಯಲ್ಲಿ ತಮ್ಮ ಮೂಕವೇದನೆ ವ್ಯಕ್ತಪಡಿಸುತ್ತಿದೆ. ಇಂದಿಗೂ ಮಳಖೇಡದಲ್ಲಿ ಕೋಟೆ ಕೊತ್ತಲಗಳು, ದೇವಾಲಯಗಳು ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಜೀರ್ಣೋದ್ಧಾರಗೊಂಡ ಜೈನ ಮಂದಿರ ಕಲಾತ್ಮಕತೆಗೆ ಪ್ರಸಿದ್ಧವಾಗಿದೆ. ಇಲ್ಲಿಯ ಹನುಮಾನ್ ಮಂದಿರಗಳು, ಸಂತಾನ ಗೋಪಾಲಕೃಷ್ಣ ಮಂದಿರ, ಮಲಯಾದ್ರಿ ಮಾಧವ ದೇವಾಲಯ, ಈಶ್ವರ ದೇಗುಲಗಳು, ಕೋಟೆ ಕೊತ್ತಲಗಳ ಮಧ್ಯದಲ್ಲಿರುವ ಶಿವ, ವಿಷ್ಣುವಿನ ಮೂರ್ತಿಗಳು, ಮುಸ್ಲಿಂ ದರ್ಗಾಗಳು ನೋಡುಗರನ್ನು ಆಕರ್ಷಿಸುತ್ತಿವೆ. ಭಗ್ನಗೊಂಡ ಮಳಖೇಡದ ಕೋಟೆಯು ತನ್ನ ಶೌರ್ಯ ಪ್ರರಾಕ್ರಮತೆ, ಹಿಂದಿನ ರಾಜವೈಭವತೆ, ರಾಷ್ಟ್ರಕೂಟ ಆಡಳಿತ ಧರ್ಮ ಸಂಸ್ಕೃತಿಯನ್ನು ಸಾರುತ್ತವೆ.

ಮಳಖೇಡದಲ್ಲಿ ಇರುವ ಟೀಕಾಚಾರ್ಯರ ಮಠ ಐತಿಹಾಸಿಕವಾಗಿದೆ. ಶ್ರೀ ಅಕ್ಷೋಭ್ಯತೀರ್ಥರ ಪದತಲದಲ್ಲಿ ಕುಳಿತು ದೋಂಡೋರಾಯರು ಹಲವಾರು ಗ್ರಂಥಗಳ ಸಾರವನ್ನು ತಿಳಿದುಕೊಂಡರು. ಲೇಖನಿಯ ಶಕ್ತಿಯನ್ನು ಪಡೆದುಕೊಂಡ ಇವರು ಶ್ರೀ ಮಧ್ವಾಚಾರ್ಯರ ಗ್ರಂಥಗಳಿಗೆ ಟೀಕೆಗಳನ್ನು ಬರೆದು ಸರಳೀಕರಿಸಿ ಜನಸಾಮಾನ್ಯರಿಗೆ ತಿಳಿಯುವಂತೆ ಮಾಡಿದರು. ಅದಕ್ಕಾಗಿ ಇವರನ್ನು ಟೀಕಾಚಾರ್ಯರು ಎಂದು ಕರೆಯುತ್ತಾರೆ. ಕನ್ನಡ ನಾಡನ್ನಾಳಿದ ಪ್ರತಿಷ್ಠಿತ ರಾಜ ಮನೆತನಗಳಲ್ಲಿ ರಾಷ್ಟ್ರಕೂಟರ ರಾಜಮನೆತನವೂ ಒಂದು. ಇತಿಹಾಸದಲ್ಲಿ ರಾಷ್ಟ್ರಕೂಟರನ್ನು ಮಾನ್ಯಖೇಟದ ರಾಷ್ಟ್ರಕೂಟರೆಂದೇ ಗುರುತಿಸಲಾಗುತ್ತಿದೆ. ಕ್ರಿ.ಶ. 9 ರಿಂದ 10ನೇ ಶತಮಾನದವರೆಗೆ ರಾಷ್ಟ್ರಕೂಟರು ಮಾನ್ಯಖೇಟವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದರು.

ಉತ್ತರ ಕರ್ನಾಟಕದ ಕಲಬುರ್ಗಿ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ಹರಿಯುವ ಭೀಮಾನದಿಯ ಉಪನದಿಯಾದ ಕಾಗಿಣಾ ನದಿಯ ದಂಡೆಯ ಮೇಲೆ ಮಾನ್ಯಖೇಟ ನಗರ ನಿರ್ಮಾಣಗೊಂಡಿದೆ. ಸಾವಿರಾರು ವರ್ಷಗಳ ಇತಿಹಾಸದ ಕಾಲಾವಧಿಯಲ್ಲಿ ಮಾನ್ಯಖೇಟ ನಗರಕ್ಕೆ ಅನೇಕ ಹೆಸರುಗಳಾದ ಮಾನ್ಯರ ಕೆರೆ, ಮಾಂಕೀರ, ಮಲಯಖೇಟ, ಮಲಯಾದ್ರಿಪುರ, ಕೃಷ್ಣಪುರ ಇತ್ಯಾದಿ ಹೆಸರಿನಿಂದ ಕರೆಯಲಾಗಿದೆ. ರಾಷ್ಟ್ರಕೂಟರ ಆಳ್ವಿಕೆಯ ಅವಧಿಯಲ್ಲಿ ರಾಜಧಾನಿಯಾಗಿದ್ದ ಮಾನ್ಯಖೇಟ ತನ್ನ ಸೌಂದರ್ಯ ಮತ್ತು ವೈಭವದಿಂದ ದೇಶ-ವಿದೇಶದಲ್ಲಿ

ಖ್ಯಾತಿಯನ್ನು ಪಡೆದಿತ್ತು. ಇತಿಹಾಸದ ಕಾಲಚಕ್ರದ ತುಳಿತದಲ್ಲಿನ ಸುಂದರವಾದ ಮಾನ್ಯಖೇಟ ಇಂದು ಹಾಳು ಕೊಂಪೆಯಾಗಿ ಜನರ ಬಾಯಿಯಲ್ಲಿ 'ಮಲಖೇಡ' ಎಂದಾಗಿದೆ. ರಾಷ್ಟ್ರಕೂಟರ ರಾಜಮನೆತನದ ಆಳ್ವಿಕೆಯ ನಂತರ, (9–10ನೇ ಶತಮಾನದ) ಆಳಿದ ರಾಜಮನೆತನಗಳಾದ ಚಾಲುಕ್ಯರು, ಕಲಚೂರಿಯರು, ಹೈದಯರು, ಬಹುಮನಿ ಸುಲ್ತಾನರು, ಗೋಲ್ಕೊಂಡಾದ ಕುತುಬ್‌ಶಾಹಿಗಳ ಆಳ್ವಿಕೆಯ ಅವಧಿಯಲ್ಲಿ ಕೂಡ ಮಾನ್ಯಖೇಟವು ರಾಜಧಾನಿಯಾಗಿ ಅಗ್ರಹಾರವಾಗಿ, ನೆಲವೀಡಾಗಿ, ಧರ್ಮ, ಅಧ್ಯಾತ್ಮ ಮತ್ತು ಸಂಸ್ಕೃತಿಯ ಕೇಂದ್ರವಾಗಿ ಇತಿಹಾಸದುದ್ದಕ್ಕೂ ತನ್ನ ಪ್ರಾಮುಖ್ಯತೆಯಿಂದ ಮೆರೆದಿದೆ. ಮಾನ್ಯಖೇಟದ ಗತವೈಭವವನ್ನು ನಾಚಿಸುವ ಭಗ್ನವಾದ ಕೋಟೆಗಳನ್ನು, ಅರಮನೆಗಳು, ಅಂತಃಪುರಗಳು, ಗುಡಿಗಳು, ಗೋಪುರಗಳನ್ನು ಇವತ್ತಿಗೂ ಕೂಡ ಇಲ್ಲಿ ನೋಡಬಹುದಾಗಿದೆ. ಮಾನ್ಯಖೇಟಗೆ ಸುಮಾರು 2000 ವರ್ಷಗಳ ಐತಿಹಾಸಿಕ ಹಿನ್ನಲೆ ಇದ್ದಿದ್ದು ತಿಳಿದು ಬರುತ್ತದೆ. ಕ್ರಿ.ಶ. 1ನೇ ಶತಮಾನದಲ್ಲಿ ಮಾನ್ಯಖೇಟವು ಶ್ವೇತಾಂಬರ ಜೈನ ಧರ್ಮದ ಕೇಂದ್ರವಾಗಿತ್ತೆಂಬ ಉಲ್ಲೇಖ 1923ರ ಮೈಸೂರು ಪ್ರಾಕ್ತನ ಶಾಸ್ತ್ರದ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ. ಈ ಶತಮಾನದಲ್ಲಿಯೇ ನೆಲೆಸಿದ್ದ ಜೈನ ಯತಿಗಳಾದ ಪಾದಲಿಪ್ತಾಚಾರ್ಯ, ಕುಂದಕುಂದಾಚಾರ್ಯರಿಗೂ, ಮಾನ್ಯಖೇಟದ ಜೊತೆಗೆ ಸಂಪರ್ಕವಿತ್ತೆಂಬ ಅಂಶವೂ ಕೂಡ ತಿಳಿದುಬರುತ್ತದೆ. ಕ್ರಿ.ಶ. 6ನೇ ಶತಮಾನದ ಕದಂಬರ ಕಾಲದ ಶಾಸನದಲ್ಲಿ ಮಾನ್ಯಖೇಟ ನಗರದ ಉಲ್ಲೇಖವಿದೆ. ಇಲ್ಲಿಯವರೆಗೆ ಸಿಕ್ಕ ಶಾಸನ ಉಲ್ಲೇಖಗಳಲ್ಲಿಯೇ ಇದು ಅತೀ ಪ್ರಾಚೀನವಾದುದ್ದಾಗಿದೆ. ಕ್ರಿ.ಶ. 9ನೇ ಶತಮಾನದಲ್ಲಿ ಮಾನ್ಯಖೇಟವು ರಾಷ್ಟ್ರಕೂಟರ ರಾಜಧಾನಿಯಾಗಿ ನಂತರ ಚಾಲುಕ್ಯರ ರಾಜಧಾನಿಯಾಗಿ ಇತಿಹಾಸದಲ್ಲಿ ಇನ್ನಷ್ಟು ಪ್ರಾಮುಖ್ಯತೆಯನ್ನು ಪಡೆದಿದೆ.

ಮಾನ್ಯಖೇಟದ ರಾಜಕೀಯ ಇತಿಹಾಸ (ರಾಜಮನೆತನಗಳ ಇತಿಹಾಸ)

ರಾಷ್ಟ್ರಕೂಟರ ಕಾಲದ ಮಾನ್ಯಖೇಟ :

ಕ್ರಿ.ಶ. 9ನೇ ಶತಮಾನದಲ್ಲಿ ರಾಷ್ಟ್ರಕೂಟರ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದ ಹೆಗ್ಗಳಿಕೆ ಮಾನ್ಯಖೇಟಕ್ಕಿದೆ. ಕ್ರಿ.ಶ. 753ರಲ್ಲಿ ದಂತಿದುರ್ಗನಿಂದ ಈ ರಾಜ್ಯ ಸ್ಥಾಪನೆಯಾಗಿ ಕ್ರಿ.ಶ. 814ರ ವರೆಗೆ ಅಂದರೆ ಮೂರನೇ ಗೋವಿಂದನವರೆಗೆ ರಾಷ್ಟ್ರಕೂಟರು ಆರಂಭದಲ್ಲಿ ಲಾತೂರ, ಎಲ್ಲೋರ, ಎಲೀಚಪುರ, ಮಯೂರ ಬಂಡಿಗಳನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದಂತೆ ಕಂಡು ಬರುತ್ತದೆ. ಕ್ರಿ.ಶ. 814–874ರ ಅಮೋಘವರ್ಷ ನೃಪತುಂಗನ ಆಳ್ವಿಕೆಯ ಕಾಲಾವಧಿಯಲ್ಲಿ ಮಾನ್ಯಖೇಟವು ರಾಷ್ಟ್ರಕೂಟ ಸಾಮ್ರಾಜ್ಯದ ರಾಜಧಾನಿಯಾಗಿ ನಿರ್ಮಾಣಗೊಂಡು ಸೌಂದರ್ಯ ಮತ್ತು ಸಂಪತ್ತಿನಿಂದ ದೇಶ ವಿದೇಶದಲ್ಲಿಯೇ ಖ್ಯಾತಿಯನ್ನು

ಪಡೆದ ನಗರವಾಗಿತ್ತು. ಕ್ರಿ.ಶ. 10ನೇ ಶತಮಾನದಲ್ಲಿ ರಾಜ್ಯಭಾರ ಮಾಡಿದ ರಾಷ್ಟ್ರಕೂಟ ದೊರೆ ಎರಡನೇ ಕರ್ಕನ ಕರಡಾದ ಶಾಸನದಲ್ಲಿ ಮಾನ್ಯಖೇಟ ನಗರದ ಬಗ್ಗೆ ತುಂಬಾ ಸೊಗಸಾಗಿ ಈ ಕೆಳಗಿನಂತೆ ವರ್ಣಿಸಲಾಗಿದೆ.

ತಸ್ಯ ಶ್ರೀಮದ್ ಅಮೋಘವರ್ಷ ನೃಪತಿ
ಆಸದ್ ಇಂದ್ರಪುರ ಅಧಿಕಮ ಪುರಮ ಇದಮ್
ಶ್ರೀ ಮಾನ್ಯಖೇಟ ಅಭಿದಮ್ ಎನ್ ಏದಮ್

ಕೆರೆಗಳು, ಉದ್ಯಾನವನಗಳು, ರಾಜಬೀದಿಗಳು, ಅರಮನೆಗಳು, ಅಂತಃಪುರಗಳು ಕೋಟೆ-ಕೊತ್ತಲುಗಳಿಂದ ಕೂಡಿದ ಮಾನ್ಯಖೇಟವು ಸೌಂದರ್ಯದಲ್ಲಿ ಇಂದ್ರನ ಅಮರಾವತಿಯನ್ನು ನಾಚಿಸುತ್ತಿತ್ತು ಎಂಬುದೇ ಮೇಲಿನ ಶ್ಲೋಕದ ಅರ್ಥವಾಗಿದೆ. ಮಾನ್ಯಖೇಟವು ವಿಸ್ತಾರದಲ್ಲಿನ ಸುತ್ತಮುತ್ತ ಸುಮಾರು 10 ಮೈಲುಗಳಷ್ಟು ವ್ಯಾಪ್ತಿಯಲ್ಲಿ ವಿಸ್ತರಿಸಿತ್ತು. ಸುತ್ತಲಿನ ಗ್ರಾಮಗಳಾದ ಸೇಡಂ, ದಂಡೋಲಿ, ನೀಲಹಳ್ಳಿ, ಕೊಂಕನಹಳ್ಳಿಗಳು ಮಾನ್ಯಖೇಟದ ಅವಿಭಾಜ್ಯ ಅಂಗಗಳಾಗಿದ್ದವು. ಸೇಡಂನಲ್ಲಿ ರಾಷ್ಟ್ರಕೂಟರ ರಾಣಿಯರ ಅಂತಃಪುರ ಮತ್ತು ಸಾಮ್ರಾಜ್ಯದ ಪ್ರಧಾನ ಕಛೇರಿಗಳಿದ್ದವು. ದಂಡೋಲಿಯಲ್ಲಿ ರಾಷ್ಟ್ರಕೂಟರ ಸೈನ್ಯದ ಕೇಂದ್ರವಿದ್ದರೆ, ನೀಲಹಳ್ಳಿ ಕೊಂಕನಹಳ್ಳಿಯಲ್ಲಿ ಖಜಾನೆಗಳಿದ್ದವೆಂಬುದು ಒಂದು ನಂಬಿಕೆ. ಆದರೆ ಇದಕ್ಕೆ ಪುಷ್ಟಿಕೊಡುವ ಖಚಿತ ದಾಖಲೆಗಳು ಲಭ್ಯವಾಗಿಲ್ಲ.

ಮಾನ್ಯಖೇಟದ ಕೋಟೆ :

ರಾಜಧಾನಿಯ ರಕ್ಷಣೆಗಾಗಿ ಅಮೋಘವರ್ಷ ನೃಪತುಂಗನು ಮಾನ್ಯಖೇಟದಲ್ಲಿ ಅಭೇದ್ಯವಾದ ಕೋಟೆಯನ್ನು ನಿರ್ಮಾಣಗೊಳಿಸಿದ ಉಲ್ಲೇಖ ಕರಡಾದ ಶಾಸನದಲ್ಲಿದೆ. ಆದರೆ ಆ ಮೂಲಕೋಟೆ ಧ್ವಂಸಗೊಂಡು, ಅದರ ಅವಶೇಷದಿಂದಲೇ ಸುಮಾರು 15-16ನೇ ಶತಮಾನದಲ್ಲಿ ಮುಸ್ಲಿಂ ಅರಸರ ಆಳ್ವಿಕೆಯಲ್ಲಿ ಕಟ್ಟಿದ ಪರಿವರ್ತಿತ ಕೋಟೆಯನ್ನು ನೋಡಬಹುದಾಗಿದೆ. ನೃಪತುಂತ ಚಕ್ರವರ್ತಿಯು ಕಟ್ಟಿಸಿದ ಕೋಟೆಯ ಅವಶೇಷಗಳು ಊರಿನ ಸುತ್ತಮುತ್ತ ಅಲ್ಲಲ್ಲಿ ನೋಡಬಹುದಾಗಿದೆ. ಎಸ್.ಕೆ. ಜೋಷಿ ಎಂಬ ವಿದ್ವಾಂಸರು 'ಡಿಫೆನ್ಸಿವ್ ಆರ್ಕಿಟೆಕ್ಚರ್ ಇನ ಅರ್ಲಿ ಕರ್ನಾಟಕ' ಎಂಬ ಗ್ರಂಥಗಳಲ್ಲಿ ಮಾನ್ಯಖೇಟದಲ್ಲಿನ ರಾಷ್ಟ್ರಕೂಟರ ಕೋಟೆಯ ಬಗ್ಗೆ ಸವಿಸ್ತಾರ ಮಾಹಿತಿ ನೀಡಿದ್ದಾರೆ. ರೋಮ್‌ದೇಶದ ಇತಿಹಾಸಕಾರನೊಬ್ಬ ತನ್ನ ಪ್ರವಾಸ ಕಥನದಲ್ಲಿ ವರ್ಣಿಸಿದ ಒಟ್ಟು 30 ಕೋಟೆಗಳಲ್ಲಿ ಮಾನ್ಯಖೇಟವು ಒಂದಾಗಿರಬಹುದೆಂದು ತರ್ಕಿಸಲಾಗಿದೆ. ವಿದೇಶಿ ಪ್ರವಾಸಿಗರಾದ ಸುಲೇಮಾನ ಸೌದಾಗರನು ರಾಷ್ಟ್ರಕೂಟ ಸಾಮ್ರಾಜ್ಯಕ್ಕೆ ಭೇಟಿ ನೀಡಿ ಮಾನ್ಯಖೇಟ ಚಕ್ರವರ್ತಿ ನೃಪತುಂಗನ ಬಗ್ಗೆ ತುಂಬಾ ಅಭಿಮಾನದಿಂದ ವರ್ಣಿಸಿದ್ದಾನೆ. ಜಗತ್ತಿನ ಶ್ರೇಷ್ಠ ಸಾಮ್ರಾಜ್ಯಗಳಾದ ಬಗದಾದ, ಚೀನ,

ಕಾನ್‌ಸ್ಟಾಂಟಿನೋಪಲ್ ಜೊತೆಗೆ ಭಾರತದಲ್ಲಿನ ರಾಷ್ಟ್ರಕೂಟ ಸಾಮ್ರಾಜ್ಯವು ಒಂದಾಗಿತ್ತು. ಮೇಲಿನ ಸಾಮ್ರಾಜ್ಯದ ಸಾಮ್ರಾಟರ ಜೊತೆಗೆ ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ ನೃಪತುಂಗನೂ ಒಬ್ಬನಾಗಿದ್ದಾನೆಂಬ ಉಲ್ಲೇಖಗಳನ್ನು ಆಧಾರವಾಗಿಟ್ಟುಕೊಂಡರೆ ರಾಷ್ಟ್ರಕೂಟರ ಆಳ್ವಿಕೆಯ ಅವಧಿಯಲ್ಲಿ ಮಾನ್ಯಖೇಟದ ಘನತೆ, ಗೌರವ ಹೇಗಿತ್ತೆಂಬುದು ಇಲ್ಲಿ ಊಹಿಸಬಹುದಾಗಿದೆ.

ಪ್ರಾಚೀನ ಭಾರತವನ್ನಾಳಿದ ಮಹಾನ್ ಚಕ್ರವರ್ತಿಗಳಲ್ಲಿ ಅಮೋಘವರ್ಷ ನೃಪತುಂಗನು ಒಬ್ಬನಾಗಿದ್ದಾನೆ. ಈ ಸಾಮ್ರಾಟನ ಆಳ್ವಿಕೆಯ ಕಾಲಾವಧಿ ರಾಷ್ಟ್ರಕೂಟ ರಾಜಮನೆತನದ ಉಚ್ಛ್ರಾಯದ ಕಾಲಾವಧಿಯೂ ಆಗಿತ್ತು. ನೃಪತುಂಗನು ಪ್ರಜಾಕಲ್ಯಾಣವೇ ರಾಜನ ಆದ್ಯ ಕರ್ತವ್ಯ ಮತ್ತು ಧರ್ಮ ಎಂದು ಭಾವಿಸಿ ಕನ್ನಡ ನಾಡಿನ ಪ್ರಜಾಕೋಟಿಯನ್ನು ತನ್ನ ಮಕ್ಕಳಂತೆ ಪರಿಪಾಲಿಸಿದನು. ಕ್ರಿ.ಶ. 814–878 ಅವನ ಆಳ್ವಿಕೆಯ ಕಾಲಾವಧಿ ಕನ್ನಡ ನಾಡಿನ ವಿವಿಧ ಕ್ಷೇತ್ರಗಳಾದ ಕಲೆ, ಸಾಹಿತ್ಯ, ಧರ್ಮ, ಅಧ್ಯಾತ್ಮ ಆಡಳಿತ ರಂಗದಲ್ಲಿ ಹಿಂದೆಂದೂ ಕಾಣದ ಪ್ರಗತಿ ಕಂಡಿತು. ಪ್ರಜಾಕೋಟಿ ನೆಮ್ಮದಿಯಿಂದ ಬಾಳಿತು. ನಾಡಿನಾದ್ಯಂತ ಶಾಂತಿ ಮತ್ತು ಸುಭಿಕ್ಷೆ ನೆಲೆಸಿತ್ತು. ಅಮೋಘವರ್ಷ ನೃಪತುಂಗನು ತನ್ನ ತಂದೆಯಾದ 3ನೇ ಗೋವಿಂದನ ನಂತರ ಕ್ರಿ.ಶ. 814ರಲ್ಲಿ ಅಧಿಕಾರಕ್ಕೆ ಬಂದನು. ಅಧಿಕಾರಕ್ಕೆ ಬರುವಾಗ ನೃಪತುಂಗನಿಗೆ ಕೇವಲ 14 ವರ್ಷಗಳು.

ಅಪ್ರಾಪ್ತ ವಯಸ್ಸಿನ ಲಾಭ ಪಡೆದ ಸಾಮಂತ ಅರಸನಾದ ತಲಕಾಡಿನ ಗಂಗರು, ವೆಂಗಿಯ ಚಾಳುಕ್ಯರು ಮತ್ತು ಕಂಚಿಯ ಪಲ್ಲವರು, ಬಾಲಕ ಚಕ್ರವರ್ತಿಯ ವಿರುದ್ಧ ದಂಗೆ ಎದ್ದರು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸಹೋದರ ಸಂಬಂಧಿಯಾದ ಕರ್ಕ ಸುವರ್ಣವರ್ಷನು ನೃಪತುಂಗನ ರಾಜಪ್ರತಿನಿಧಿಯಾಗಿ ನಿಂತು ನೃಪತುಂಗನನ್ನು ವಿಪತ್ತಿನಿಂದ ಪಾರು ಮಾಡಿದನು. ನೃಪತುಂಗನ ಆಳ್ವಿಕೆ ದಿಗ್ವಿಜಯ ದೃಷ್ಟಿಯಿಂದ ಮಹತ್ವದವಾಗಿರಲಿಲ್ಲ. ಆದರೆ ಧರ್ಮ ಮತ್ತು ಸಾಹಿತ್ಯ ದೃಷ್ಟಿಯಿಂದ ಮಹತ್ವದ್ದಾಗಿತ್ತು. ಇವರ ಪೂರ್ವಜರಾದ ತಂದೆ 3ನೇ ಗೋವಿಂದ. ಅಜ್ಜ ಧೃವ ಅಪ್ರತಿಮ ವೀರರಾದರೆ ನೃಪತುಂಗನು ಧರ್ಮವೀರನಾಗಿದ್ದನು. ಅವರದು ವೀರಪ್ರವೃತ್ತಿಯಾಗಿದ್ದರೆ ಇವನದು ಚಿಂತನ ಮತ್ತು ಅಧ್ಯಾತ್ಮಿಕ ಪ್ರವೃತ್ತಿಯಾಗಿತ್ತು. ಯುದ್ಧ ರಕ್ತಪಾತಕ್ಕಿಂತ ಶಾಂತಿ, ಸಂಧಾನ ಮತ್ತು ರಕ್ತ ಸಂಬಂಧವೇ ಈ ದೊರೆಗೆ ಹೆಚ್ಚು ಪ್ರಿಯವಾಗಿತ್ತು.

ವೈವಾಹಿಕ ಸಂಬಂಧ :

ಯಾರು ಪ್ರಪಂಚದಲ್ಲಿ ಯುದ್ಧ ಮಾಡಿ ರಕ್ತಪಾತದಿಂದ ಸಾಧನೆ ಮಾಡಿದರೋ ಅದಕ್ಕಿಂತಲೂ ಹೆಚ್ಚು ಮತ್ತು ಶಾಶ್ವತವಾಗಿ ಉಳಿಯುವ ಸಾಧನೆ ನೃಪತುಂಗನು

ರಕ್ತಸಂಬಂಧದಿಂದ ಸಾಧಿಸಿ ತೋರಿಸಿದನು. ಸಮಕಾಲೀನ ದೊರೆಗಳಾದ ತಲಕಾಡಿನ ಗಂಗರು, ವೆಂಗಿಯ ಚಾಳುಕ್ಯರು, ಕಂಚಿಯ ಪಲ್ಲವರು, ರಾಷ್ಟ್ರಕೂಟರು ಸಹಜ ವೈರಿಗಳಾಗಿ ಕಾದಾಡುತ್ತಲೇ ಇದ್ದರು. ಆದರೆ ನೃಪತುಂಗನು ಅಧಿಕಾರಕ್ಕೆ ಬಂದ ನಂತರ ಸರ್ವರೊಡನೆ ಶಾಂತಿಯಿಂದ ಬಾಳುವ ನೀತಿಯನ್ನು ಅನುಸರಿಸಿದನು. ಈ ಉದ್ದೇಶಕ್ಕಾಗಿ ತನ್ನ 3 ಜನ ಹೆಣ್ಣು ಮಕ್ಕಳಲ್ಲಿ ಶೀಲ ಮಹಾದೇವಿಯನ್ನು ವೆಂಗಿಯ ಚಾಳುಕ್ಯ ರಾಜಮನೆತನಕ್ಕೆ ಇನ್ನೊಬ್ಬ ಮಗಳಾದ ಚಂದ್ರಬ್ಬಲಬ್ಬೆಯನ್ನು ಗಂಗರಾಜ ಮನೆತನಕ್ಕೆ ಹಾಗೂ ಮತ್ತೊಬ್ಬ ಮಗಳಾದ ಶಂಖಾದೇವಿಯನ್ನು ಪಲ್ಲವ ರಾಜಮನೆತನಕ್ಕೆ ಕೊಟ್ಟು ವಿವಾಹ ಸಂಬಂಧವನ್ನು ಏರ್ಪಡಿಸಿ ವೈರವನ್ನು ಬಾಂಧವ್ಯದಲ್ಲಿ ಪರಿವರ್ತಿಸಿದನು. ಬಹುದಿನಗಳಿಂದ ದಕ್ಷಿಣದ ಈ ರಾಜರುಗಳ ಮಧ್ಯೆ ನಡೆದ ಯುದ್ಧಗಳು ಸ್ಥಗಿತಗೊಂಡು ಶಾಂತಿ ಮತ್ತು ಸೌಹಾರ್ದ ವಾತಾವರಣ ನಿರ್ಮಾಣಗೊಂಡಿದ್ದರಿಂದ ಸಾಮ್ರಾಜ್ಯದಲ್ಲಿ ಪ್ರಜಾಕೋಟಿ ನೆಮ್ಮದಿಯಿಂದ ಬಾಳಿತು.

ನೃಪತುಂಗನ ಸಾಹಿತ್ಯ ಪ್ರೇಮ :

ನೃಪತುಂಗನ ಆಳ್ವಿಕೆಯ ಕಾಲಾವಧಿಯು ಸಾಹಿತ್ಯಿಕ ದೃಷ್ಟಿಯಿಂದ ಸುಗ್ಗಿಯ ಕಾಲವಾಗಿತ್ತು. ಮಾನ್ಯಖೇಟವು ಅನೇಕ ಸಾಹಿತಿಗಳನ್ನು ಮತ್ತು ವಿದ್ವಾಂಸರನ್ನು ಆಕರ್ಷಿಸಿತ್ತು. ಸ್ವತಃ ಸಾಹಿತಿಯಾದ ನೃಪತುಂಗನು 'ಪ್ರಶ್ನೋತ್ತರ ರತ್ನಮಾಲಿಕಾ' ಎಂಬ ಕೃತಿಯನ್ನು ರಚಿಸಿದನು. ನೃಪತುಂಗನ ಆಸ್ಥಾನದಲ್ಲಿ ಅನೇಕ ಕವಿಗಳು ರಾಜಾಶ್ರಯ ಪಡೆದಿದ್ದಾರೆ. ಶ್ರೀವಿಜಯ ಎಂಬುವವನು ಮಾನ್ಯಖೇಟದಲ್ಲಿದ್ದುಕೊಂಡೇ 'ಕವಿರಾಜಮಾರ್ಗವೆಂಬ' ಅಲಂಕಾರ ಗ್ರಂಥವನ್ನು ರಚಿಸಿದನು. ಈ ಕೃತಿಯಲ್ಲಿ ಶ್ರೀವಿಜಯನು ಅಲ್ಲಲ್ಲಿ ನೃಪತುಂಗನ ಮತದಿಂ... ಎಂಬ ಉಲ್ಲೇಖನಗಳನ್ನು ನೋಡಿದರೆ ಚಕ್ರವರ್ತಿಯೂ ಸಾಹಿತಿ ಮತ್ತು ಶಾಸ್ತ್ರಕಾರನಾಗಿದ್ದನೆಂಬ ಮಾತಿಗೆ ಪುಷ್ಠಿ ದೊರೆಯುತ್ತದೆ.ಜಿನಸೇನಾಚಾರ್ಯ ಮಹಾವೀರಾಚಾರ್ಯ, ಗುಣಭದ್ರಾಚಾರ್ಯ, ಶಕಟಾಯನ ಮುಂತಾದ ವಿದ್ವಾಂಸರು ನೃಪತುಂಗನ ಆಸ್ಥಾನದಲ್ಲಿ ನೆಲೆಸಿ ಉತ್ಕೃಷ್ಟವಾದ ಕೃತಿಗಳನ್ನು ರಚಿಸಿದ್ದಾರೆ.

ರಾಜಧಾನಿಯ ನಿರ್ಮಾಣ:

ಮಾನ್ಯಖೇಟವನ್ನು ರಾಜಧಾನಿಯಾಗಿ ನಿರ್ಮಿಸಿದ್ದು ನೃಪತುಂಗನು ಇನ್ನೊಂದು ಮಹತ್ವದ ಸಾಧನೆಯಾಗಿದೆ. 10 ಕಿ.ಮೀ. ಸುತ್ತಳತೆಯ ವ್ಯಾಪ್ತಿಯಲ್ಲಿ ಈ ರಾಜಧಾನಿ ವ್ಯಾಪಿಸಿತ್ತು. ಸುತ್ತಮುತ್ತಲಿನ ಗ್ರಾಮಗಳಾದ ನೀಲಹಳ್ಳಿ, ಕೊಂಕನಟ್ಟಿ, ದಂಡೋಲಿ, ಸೇಡಂಗಳು ರಾಜಧಾನಿಯ ಅವಿಭಾಜ್ಯ ಅಂಗಗಳಾಗಿದ್ದವು. ದಂಡೋತಿ ಸೈನ್ಯದ ಕೇಂದ್ರವಾಗಿದ್ದರೆ ಪ್ರಧಾನ

ಕಛೇರಿ ಮತ್ತು ರಾಣಿ ಅಂತಃಪುರಗಳು ಸೇಡಂನಲ್ಲಿದ್ದವು. ನೀಲಳ್ಳಿ ಮತ್ತು ಕೊಂಕನಳ್ಳಿಗಳಲ್ಲಿ ಖಜಾನೆಗಳಿದ್ದವು ಎಂದು ಇತಿಹಾಸತಜ್ಞ ಶ್ರೀ ಆರ್.ಆರ್. ದಿವಾಕರ್ ತಮ್ಮ 'ಕರ್ನಾಟಕ ಥ್ರೋ ದಿ ಏಜೆಸ್' ಎಂಬ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಹೀಗೆ ನಿರ್ಮಾಣಗೊಂಡ ರಾಜಧಾನಿಯು ಅತ್ಯಂತ ಸುಂದರವಾಗಿ ಇಂದ್ರನ ಅಮರಾವತಿಯನ್ನು ನಾಚಿಸುತ್ತಿತ್ತೆಂದು ಕರಡಾದ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ನೃಪತುಂಗನ ಕಾಲದಲ್ಲಿ ಅನೇಕ ವಿದೇಶಿ ಯಾತ್ರಿಕರು ಮಾನ್ಯಖೇಟ ನಗರಕ್ಕೆ ಸಂದರ್ಶನ ಕೊಟ್ಟರು. ಪರ್ಶಿಯಾ ದೇಶದಿಂದ ಬಂದ ಸುಲೇಮಾನ ಸೌದಾಗರ ಎಂಬುವವನು ನೃಪತುಂಗ ಚಕ್ರವರ್ತಿಯನ್ನು ಅವನ ರಾಜಧಾನಿಯನ್ನು ಕಣ್ಣಾರೆ ಕಂಡು ಮುಕ್ತ ಕಂಠದಿಂದ ಕೊಂಡಾಡಿದ್ದಾನೆ. ಜಗದ್ವಿಖ್ಯಾತ ಚಕ್ರವರ್ತಿಗಳಲ್ಲಿ ಅಮೋಘವರ್ಷ ನೃಪತುಂಗನು ಒಬ್ಬನಾಗಿದ್ದಾನೆಂದು ಮತ್ತು ಅವನ ರಾಜಧಾನಿ ಹಾಗೂ ಸಾಮ್ರಾಜ್ಯ ತುಂಬಾ ಸುಂದರವಾಗಿತ್ತೆಂದು ಬಣ್ಣಿಸಿದ್ದಾರೆ. ಕಾಲನ ಹೊಡೆತಕ್ಕೆ ಸರ್ಕಾರ ಹಾಗೂ ಸಾರ್ವಜನಿಕ ಅವಕೃಪೆಗೆ ಗುರಿಯಾಗಿ ಸುಂದರವಾದ ನಗರ ಇಂದು ಹಾಳು ಕೊಂಪೆಯಾಗಿ ಗತವೈಭವದ ಇತಿಹಾಸವನ್ನು ನಾಚಿಸುತ್ತಿದೆ.

ಧರ್ಮ:

ಅಮೋಘವರ್ಷ ನೃಪತುಂಗನು ಧರ್ಮನಿಷ್ಠ ದೊರೆಯಾಗಿದ್ದನು. ಧರ್ಮವು ತನ್ನ ಜೀವನದ ಉಸಿರೆಂದು ತಿಳಿದು ಆಳ್ವಿಕೆ ಮಾಡಿದನು. ವೈದಿಕ ಮತ್ತು ಅವೈದಿಕ ಧರ್ಮವಾದ ಜೈನ ಧರ್ಮವನ್ನು ಪೋಷಿಸಿ ಬೆಳೆಸಿದನು. ಕೊಲ್ಲಾಪುರದ ಮಹಾಲಕ್ಷ್ಮೀಯ ಪರಮ ಭಕ್ತನಾಗಿದ್ದನು. ಜೀನಸೇನಾಚಾರ್ಯರು ನೃಪತುಂಗನ ಧರ್ಮ ಮತ್ತು ಅಧ್ಯಾತ್ಮಿಕ ಗುರುಗಳಾಗಿದ್ದರು. ಈ ಮಹಾ ಮುನಿಗಳ ಪ್ರಭಾವದಿಂದಲೇ ನೃಪತುಂಗನು ಜೈನ ಧರ್ಮಕ್ಕೆ ಮಾರುಹೋಗಿ ಅದಕ್ಕೆ ರಾಜಾಶ್ರಯವನ್ನಿತ್ತು ಪೋಷಿಸಿದನು. ಸಾಮ್ರಾಜ್ಯದಾದ್ಯಂತ ಅನೇಕ ಮಂದಿರಗಳು ಮತ್ತು ಬಸದಿಗಳು ನಿರ್ಮಾಣಗೊಂಡವು. ಮಾನ್ಯಖೇಟ, ಸೇಡಂ, ಆಡಕಿಗಳು ಈ ಭಾಗದ ಪ್ರಸಿದ್ದ ಜೈನ ಧರ್ಮದ ಕೇಂದ್ರಗಳಾಗಿದ್ದವು. ಮಾನ್ಯಖೇಟದಲ್ಲಿ ಸ್ವತಃ ಜಿನಸೇನಾಚಾರ್ಯರಿಂದ ಜೈನ ಧರ್ಮ ಪೀಠವನ್ನು ಸ್ಥಾಪಿಸಿದ್ದರಿಂದ ಅದು ಅನೇಕ ಜೈನ ಅನಯಾಯಿಗಳನ್ನು ಆಕರ್ಷಿಸಿತ್ತು. ನೃಪತುಂಗ ಚಕ್ರವರ್ತಿಯ ಉದಾರ ಧಾರ್ಮಿಕ ನೀತಿ ಅನುಕರಣೀಯವಾಗಿತ್ತು. ಆಳರಸರನ್ನು ಅನುಸರಿಸಿ ಜನರು, ವೈದಿಕ ಮತ್ತು ಅವೈದಿಕ ಎಂಬ ಭೇದ ಭಾವವನ್ನು ತೊರೆದು ಧರ್ಮ ಸಮನ್ವಯದಿಂದ ಬದುಕಿದ್ದರು.

ನ್ಯಾಯಪಕ್ಷಪಾತಿ :

ಅಮೋಘವರ್ಷ ನೃಪತುಂಗನು ನ್ಯಾಯನಿಷ್ಠುರನಾಗಿದ್ದನು. ತಪ್ಪು ಮಾಡಿದವನಿಗೆ ತಕ್ಕ ಶಾಸ್ತಿ ಕೊಡುವ ಮನೋಭಾವ ಅವನಲ್ಲಿತ್ತು. ನ್ಯಾಯ – ಅನ್ಯಾಯವನ್ನು ನಿರ್ಣಯಿಸುವಾಗ ಧರ್ಮ, ಅಂತಸ್ತು ರಕ್ತಸಂಬಂಧ, ರಾಗದ್ವೇಷದ ಪ್ರಭಾವಕ್ಕೆ ಒಳಗಾಗದೆ ನಿಷ್ಪಕ್ಷಪಾತವಾಗಿ ನ್ಯಾಯ ನೀಡುತ್ತಿದ್ದನು. ಚಕ್ರವರ್ತಿ ಜೀವನದಲ್ಲಿ ನಡೆದ ಒಂದು ಘಟನೆ ಅವನ ನ್ಯಾಯ ನಿಷ್ಪಕ್ಷಪಾತಕ್ಕೆ ಇಂದಿಗೂ ಜೀವಂತ ನಿದರ್ಶನವಾಗಿದೆ. ಸ್ವತಃ ತನ್ನ ಮಗನಾದ 2ನೇ ಕೃಷ್ಣನು ಚಕ್ರವರ್ತಿ ವಿರುದ್ಧ ಅಧಿಕಾರಕ್ಕಾಗಿ ಬಂಡೆದ್ದನು. ಕೊನೆಗೆ ಸೋಲನ್ನು ಅನುಭವಿಸಿ ಶರಣಾಗತನಾದನು. ರಾಜದ್ರೋಹ ಮಾಡಿದ್ದಕ್ಕಾಗಿ ಕೃಷ್ಣನನ್ನು ವಿಚಾರಣೆಗೆ ಗುರಿಪಡಿಸಲಾಯಿತು. ಚಕ್ರವರ್ತಿ ನೃಪತುಂಗನು ಈ ಸಂದರ್ಭದಲ್ಲಿ ತನ್ನ ಮಗನೆಂಬ ಮಮಕಾರಕ್ಕೆ ಒಳಗಾಗದೇ ರಾಜದ್ರೋಹಿಯಾದವನು ರಾಜಕುಮಾರನೇ ಆಗಿರಲಿ ವೈರಿ ಕುಮಾರನೇ ಆಗಿರಲಿ ಅವನು ಅಪರಾಧಿಯೇ ಎಂದು ತನ್ನ ಮಗನಿಗೆ ಮರಣದಂಡನೆ ಶಿಕ್ಷೆಯನ್ನು ವಿಧಿಸಿದನು. ಕನ್ನಡದ ಚಕ್ರವರ್ತಿಯೊಬ್ಬನ ನಿಷ್ಪಕ್ಷಪಾತ ನ್ಯಾಯ ನಿರ್ಣಯಕ್ಕೆ ಹಿಡಿದ ಕನ್ನಡಿಯಾಗಿದೆ ಈ ದೃಷ್ಟಾಂತ.

ಮಹಾತ್ಯಾಗಿ :

ಪ್ರಜಾಕಲ್ಯಾಣಕ್ಕಾಗಿ ಚಕ್ರವರ್ತಿ ನೃಪತುಂಗನು ಏನೆಲ್ಲಾ ತ್ಯಾಗ ಮಾಡಲು ಸಿದ್ಧನಾಗಿದ್ದನು. ಸಾಮ್ರಾಜ್ಯ ಮತ್ತು ಅಧಿಕಾರ ದಾಹಕ್ಕಾಗಿ ಪ್ರಜಾಕೋಟಿಯ ರಕ್ತವನ್ನು ಕೋಡಿಯಾಗಿ ಹರಿಸಿದ ಅನೇಕ ಉದಾಹರಣೆಗಳು ಜಾಗತಿಕ ಇತಿಹಾಸದಲ್ಲಿದೆ. ಆದರೆ ಪ್ರಜೆಗಳ ಕಲ್ಯಾಣಕ್ಕಾಗಿ ತನ್ನ ಕೈಯ ಕಿರುಬೆರಳನ್ನೇ ಅರ್ಪಿಸಿ ರಕ್ತಹರಿಸಿದ ಮಹಾತ್ಯಾತ ಮಯಿಯಾದ ದೊರೆ ನೃಪತುಂಗ ಚಕ್ರವರ್ತಿಯಾಗಿದ್ದಾನೆ. ಸಾಮ್ರಾಜ್ಯದಲ್ಲಿ ಹರಡಿದ ಬರಗಾಲವನ್ನು ಹೋಗಲಾಡಿಸಬೇಕಾದರೆ ತನ್ನ ಕೈ ಕಿರುಬೆರಳನ್ನು ಕಡಿದು ಕೊಲ್ಲಾಪುರದ ಮಹಾಲಕ್ಷ್ಮೀಗೆ ಅರ್ಪಿಸಿದಂತೆ, ಮುಂದೆ ಸಾಮ್ರಾಜ್ಯದಲ್ಲಿ ಆವರಿಸಿದ ಬರಗಾಲ ದೂರವಾಗಿ ಪ್ರಜೆಗಳು ಸುಭಿಕ್ಷೆಯಿಂದ ಬಾಳಿದರೆಂಬ ವಿಷಯ ಸಂಜನ್ ಶಾಸನದಿಂದ ತಿಳಿದು ಬರುತ್ತದೆ.

ಲೋಕಕಲ್ಯಾಣಕ್ಕಾಗಿ ಶರೀರದ ಮಾಂಸ ಮಜ್ಜನಗಳನ್ನು ಕೊಟ್ಟ ಉಲ್ಲೇಖಗಳನ್ನು ಪುರಾಣಗಳಲ್ಲಿ ಮಾತ್ರ ನೋಡುತ್ತೇವೆ. ಆದರೆ ಕರ್ನಾಟಕ ಇತಿಹಾಸದಲ್ಲಿ ಆಗಿಹೋದ ನೃಪತುಂಗನೆಂಬ ದೊರೆ ಪ್ರಜಾಕಲ್ಯಾಣಕ್ಕಾಗಿ ತನ್ನ ಶರೀರದ ಮಾಂಸ ಮಜ್ಜನವನ್ನು ಕೊಟ್ಟ ಉದಾಹರಣೆ ಜಾಗತಿಕ ಇತಿಹಾಸದಲ್ಲಿ ಬಹುಶಃ ಇದು ಒಂದೇ ಎಂದು ತೋರುತ್ತದೆ. ಇಂತಹ ತ್ಯಾಗಮಯಿಯಾದ ಚಕ್ರವರ್ತಿಯೊಬ್ಬ ನಾವೆಲ್ಲ ನಡೆದಾಡುವ ಈ ಸೇಡಂ ನೆಲದಲ್ಲೇ ಬದುಕಿ

ಬಾಳಿದ್ದು ಕನ್ನಡಿಗರಿಗೆ, ಅದರಲ್ಲಿ ವಿಶೇಷವಾಗಿ ಸೇಡಂ ಜನತೆಗೆ ಹೆಮ್ಮೆಯ ಸಂಗತಿಯಾಗಿದೆ.

ಕೊನೆಯ ದಿನಗಳು :

ಕೊನೆಯ ದಿನಗಳಲ್ಲಿ ಅಮೋಘವರ್ಷ ನೃಪತುಂಗನು ವೈರಾಗ್ಯ ಭಾವನೆಯನ್ನು ತಾಳಿದ್ದನು. ಸರ್ವಸಂಗ ಪರಿತ್ಯಾಗಿಯಾಗಿ ಧರ್ಮ ಮತ್ತು ಆಧ್ಯಾತ್ಮದಲ್ಲಿ ತೊಡಗಿದ್ದರಿಂದ ಅಧಿಕಾರ, ಸಂಪತ್ತು ಮತ್ತು ಸಾಮ್ರಾಜ್ಯ ಅವನಿಗೆ ಗೌಣವಾಗಿ ಕಂಡವು. ಆಳ್ವಿಕೆಯ ಕೊನೆಯ ದಿನಗಳಲ್ಲಿ ಆಧ್ಯಾತ್ಮದ ಕಡೆಗೆ ಹೆಚ್ಚಿನ ಆಸಕ್ತಿ ಹೊಂದಿ ಸಾಧನೆಗಾಗಿ ಆಗಾಗ ಆಡಳಿತ ಜವಾಬ್ದಾರಿಯನ್ನು ಮಗನಾದ ಇಮ್ಮಡಿ ಕೃಷ್ಣನಿಗೆ ವಹಿಸಿ ಹೋಗುತ್ತಿದ್ದ ಉಲ್ಲೇಖ ಅಜಂತಾದ ಗುಹೆಯಲ್ಲಿನ ಶಾಸನದಲ್ಲಿದೆ. ತನ್ನ ಆಳ್ವಿಕೆಯ ಸಂಧ್ಯಾ ಕಾಲದಲ್ಲಿ ಶಾಶ್ವತವಾಗಿ ಅಧಿಕಾರವನ್ನು ಮಗನಾದ ಕೃಷ್ಣನಿಗೆ ವಹಿಸಿ ಧರ್ಮ ಮತ್ತು ಆಧ್ಯಾತ್ಮ ಗೋಷ್ಠಿಯಲ್ಲೇ ಕಾಲಕಳೆದು ಕೊನೆಗೆ ಜೈನ ಧರ್ಮದ ಪದ್ಧತಿಯಂತೆ ಸಲ್ಲೇಖನ ವ್ರತವನ್ನು ಆಚರಿಸಿ ಮೃತಪಟ್ಟನೆಂದು ತಿಳಿದು ಬರುತ್ತದೆ. ನೃಪತುಂಗ ಚಕ್ರವರ್ತಿಯು ಪ್ರಜಾಹಿತ ತತ್ಪರನಾದ ದೊರೆ, ಶಾಂತಮೂರ್ತಿ, ಪ್ರಜಾ ಪ್ರೇಮಿ, ನ್ಯಾಯ ನಿಷ್ಠುರನಾದ ದೊರೆಯಾಗಿದ್ದನು. ಎಲ್ಲಕ್ಕೂ ಹೆಚ್ಚಾಗಿ ಮಹಾನ್ ತ್ಯಾಗಿಯಾಗಿ ಜಾಗತಿಕ ಇತಿಹಾಸದಲ್ಲಿ ಉನ್ನತವಾದ ಸ್ಥಾನವನ್ನು ಅಲಂಕರಿಸಿದ್ದಾನೆ. ಈ ಸಾಮ್ರಾಟವನ್ನು ಹೋಲುವ ಇನ್ನೊಬ್ಬ ಅರಸ ಜಗತ್ತಿನ ಇತಿಹಾಸದಲ್ಲಿ ತುಂಬಾ ವಿರಳ.

ಈ ಹಿಂದೆ ಭರತ ಖಂಡವನ್ನಾಳಿದ ಮೌರ್ಯವಂಶದ ಚಕ್ರವರ್ತಿ ಅಶೋಕನು ಮಾತ್ರ ನೃಪತುಂಗನನ್ನು ಹೋಲುತ್ತಾನೆ. ನಮ್ಮ ನಾಡಿನ ಖ್ಯಾತ ಇತಿಹಾಸಕಾರರಾದ ಶ್ರೀ ಪಂಚಮುಖಿಯವರು ನೃಪತುಂಗನನ್ನು ಕರ್ನಾಟಕದ ಅಶೋಕ ಎಂದು ಕರೆದಿರುವುದು ತುಂಬ ಔಚಿತ್ಯಪೂರ್ಣವಾಗಿದೆ. ನೃಪತುಂಗ ಚಕ್ರವರ್ತಿಯ ನಂತರ 8 ಜನ ಉತ್ತರಾಧಿಕಾರಿಗಳು ರಾಷ್ಟ್ರಕೂಟ ಸಾಮ್ರಾಜ್ಯವನ್ನಾಳಿದರು. ಅವರಲ್ಲಿ 3ನೇ ಕೃಷ್ಣನು ಅತ್ಯಂತ ಶ್ರೇಷ್ಠ ದೊರೆಯಾಗಿದ್ದನು. ಕ್ರಿ.ಶ. 930–967ರವರೆಗೆ ಅವನು ರಾಜ್ಯಭಾರ ಮಾಡಿದನು.

3ನೇ ಕೃಷ್ಣನ ಅವಧಿಯಲ್ಲಿ ಈ ಭಾಗದ ಸೇಡಂ, ಮಾನ್ಯಖೇಟ, ಕಾಳಗಿ, ನಾಗಾವಿಗಳು ಪ್ರಮುಖ ಅಗ್ರಹಾರಗಳು ಮತ್ತು ಘಟಿಕಾ ಸ್ಥಾನಗಳಾಗಿದ್ದವು ಎಂದು ತಿಳಿದು ಬರುತ್ತದೆ. ಇಂದ್ರನಂದಿ, ಪುಷ್ಪದಂತರಂತಹ ಮಹಾನ್ ಕವಿಗಳು ಮಳಖೇಡದಲ್ಲಿ ನೆಲೆಸಿದ್ದ ಉಲ್ಲೇಖ ಸಿಗುತ್ತದೆ. 3ನೇ ಕೃಷ್ಣನ ನಂತರ ರಾಷ್ಟ್ರಕೂಟರ ಅವನತಿ ಆರಂಭವಾಯಿತು. ಕೊಟ್ಟಿಗ ಮತ್ತು ತರ್ಕ ಎಂಬುವವರು ಈ ರಾಜಮನೆತನದ ಕೊನೆಯ ದೊರೆಗಳು. ಇವರ ಆಳ್ವಿಕೆಯ ಅವಧಿಯಲ್ಲಿ ಮಾನ್ಯಖೇಟದ ಮೇಲೆ ದಕ್ಷಿಣದ ಚೋಳರು, ಉತ್ತರದ ಪಾರಮಾರರು ದಾಳಿ ಮಾಡಿ ಸೇಡಂ ಮತ್ತು ಮಾನ್ಯಖೇಟಗಳನ್ನು ಧ್ವಂಸಗೊಳಿಸಿದರು. ಇಂದ್ರನ ಅಮರಾವತಿಯನ್ನು ನಾಚಿಸುವ ಸುಂದರವಾದ ರಾಜಧಾನಿ ಮಾನ್ಯಖೇಟವು ಹಾಳು ಕೊಂಪೆಯಾಗಿ ಮಾರ್ಪಟ್ಟಿತು.

[illegible]

ಮಳಖೇಡದಲ್ಲಿ ಜೈನಧರ್ಮ:

ಕರ್ನಾಟಕದಲ್ಲಿ ಭದ್ರಬಾಹು ಭಟ್ಟಾರಕರ ಕಾಲದಿಂದ ಜೈನಧರ್ಮವು ಪ್ರಚಲಿತದಲ್ಲಿತ್ತು. ಸುಮಾರು ಕ್ರಿ.ಶ.6–7ನೇ ಶತಮಾನದಲ್ಲಿ ಕರ್ನಾಟಕದ ವಿವಿಧೆಡೆಗಳಲ್ಲಿ ಜೈನಧರ್ಮವಿತ್ತೆಂದು ಆ ಸ್ಥಳಗಳಲ್ಲಿ ದೊರೆತಿರುವ ಶಾಸನಗಳು ಮತ್ತು ಜಿನಾವಶೇಷಗಳು ತಿಳಿಸುತ್ತಿವೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಸುಮಾರು ಕ್ರಿ.ಶ. 7ನೇ ಶತಮಾನದಿಂದ ಜೈನಮತವು ಪ್ರಚಲಿತದಲ್ಲಿದೆ. ವಿಶೇಷವಾಗಿ ರಾಷ್ಟ್ರಕೂಟರು ಮತ್ತು ಕಲ್ಯಾಣಿ ಚಾಲುಕ್ಯರು ಈ ಭಾಗವನ್ನು ಆಳುತ್ತಿರುವಾಗ ಜೈನಮತಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರೆತಿದ್ದು ಮಳಖೇಡ, ಸೇಡಂ, ಬಂಕೂರು, ಹರಸೂರು, ಆಡಕಿ, ಇಂಗಳಿಗೆ, ಹುಣಸಿಹಡಗಲಿ, ಏವೂರು ಮುಂತಾದ ಸ್ಥಳಗಳು ಪ್ರಮುಖ ಜೈನಕೇಂದ್ರಗಳಾಗಿದ್ದವು. ಎ.ಎಸ್. ಅಲ್ಟೇಕರ್‌ರವರು "ರಾಷ್ಟ್ರಕೂಟರ ಕಾಲದಲ್ಲಿ ರಾಜ್ಯದ ಸುಮಾರು ಮೂರನೇ ಒಂದು ಭಾಗದ ಜನರು ಜೈನರಾಗಿದ್ದರೆಂದು ತಿಳಿಸಿದ್ದಾರೆ.

ಆದರೆ ಈ ಜಿಲ್ಲೆಯಲ್ಲಿ ಪ್ರಕೃತಿವಿಕೋಪದ ಫಲವಾಗಿ ಸಾಕಷ್ಟು ಶಾಸನಗಳೂ, ದೇವಾಲಯಗಳೂ ನಶಿಸಿವೆ. ಉಳಿದಿರುವ ಶಾಸನಗಳ ಲಿಪಿಯು ಮಸಕಾಗಿದ್ದು, ತ್ರುಟಿತ ಶಾಸನಗಳಿಂದ ಪೂರ್ಣಪಾಠ ಲಭ್ಯವಿಲ್ಲ. ಈ ಜಿಲ್ಲೆಯಲ್ಲಿ ಉಪಲಬ್ಧವಿರುವ ಶಾಸನಗಳಲ್ಲಿ ಕೇವಲ 35 ಜೈನ ಶಾಸನಗಳು ದೊರೆಯುವುದಾದರೂ ಕರ್ನಾಟಕ ರಾಜ್ಯದ ಗುಲ್ಬರ್ಗಾ ಜಿಲ್ಲೆಯ ಗ್ಯಾಜೇಟಿಯರ್‌ನಲ್ಲಿ ನೀಡಿರುವ ವಿವರಗಳು ಸುಮಾರು 40–45 ಬಸದಿಗಳು ಈ ಜಿಲ್ಲೆಯಲ್ಲಿದ್ದಂತೆ ತಿಳಿಸಿದೆ. ಇದಲ್ಲದೇ ನೂರಾರು ಜಿನಾವಶೇಷಗಳು, ಬೇರೆ ಬೇರೆ ದೇವಾಲಯಗಳ ಬಳಿ ಕೆಲವು ಕಟ್ಟೆಯ ಮೇಲೆ, ಮರದ ಕೆಳಗೆ ಚದುರಿ ಬಿದ್ದಿವೆ ಎಂದು ತಿಳಿಯುತ್ತದೆ. 6–8 ಬಸದಿಗಳು ಬೇರೆ ಮತದ ದೇವಾಲಯಗಳಾಗಿ ಬದಲಾಗಿರುವುದು ಗಮನಾರ್ಹವಾಗಿದೆ. ಈ ಜಿಲ್ಲೆಯ ಜೈನಮತದ ಇತಿಹಾಸವನ್ನು ಗಮನಿಸುವಲ್ಲಿ, ಆ ಪ್ರದೇಶದಲ್ಲಿ ನೆಲೆಸಿದ್ದ ಜೈನಯತಿಗಳು, ಶ್ರಾವಕ, ಶ್ರಾವಿಕೆಯರು ಮತ್ತು ಅಲ್ಲಿದ್ದ ಬಸದಿಗಳು ಮತ್ತು ಜಿನಬಿಂಬಗಳನ್ನಾಧರಿಸಿ ತಿಳಿಯಬಹುದಾಗಿದೆ. ಸುಮಾರು ಕ್ರಿ.ಶ. 7ನೇ ಶತಮಾನದಿಂದ 15ನೇ ಶತಮಾನದವರೆಗೆ ಈ ಪರಿಸರದಲ್ಲಿದ್ದ ಜೈನಮತದ ಮಹತ್ವವನ್ನು ಈ ಪ್ರಬಂಧದಲ್ಲಿ ಗುರುತಿಸಲಾಗಿದೆ.

ಮಳಖೇಡದ ಜೈನ ಬಸದಿ (ಕೇಂದ್ರ) :

ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಮಳಖೇಡವು ಪ್ರಸಿದ್ಧ ಜೈನ ಕೇಂದ್ರವಾಗಿತ್ತು. ಇಲ್ಲಿನ ಕೋಟೆಯಲ್ಲಿ ಪ್ರಾಚೀನವಾದ ಮಲ್ಲಿನಾಥನ ಬಸದಿ ಇತ್ತು. ಇದು ರಾಷ್ಟ್ರಕೂಟರ ಕಾಲದಲ್ಲಿದ್ದದ್ದು (ಸುಮಾರು ಕ್ರಿ.ಶ.8–9ನೇ ಶತಮಾನ) ಅನೇಕ ಜನ ಜಿನಮುನಿಗಳು

ನೆಲೆಸಿದ್ದರು. ಅವರಲ್ಲಿ ಮಾನ್ಯಖೇಟ ಭಟ್ಟಾಕಲಂಕರು ಪ್ರಸಿದ್ಧ ವಾಗ್ಮಿಗಳೂ, ವಾದಿಗಳೂ ಆಗಿದ್ದರು. ಇವರನ್ನು ಶ್ರವಣಬೆಳಗೊಳದ ಶಾಸನವೊಂದು ಬೌದ್ಧರನ್ನು ವಾದದಲ್ಲಿ ಸೋಲಿಸಿದ್ದನ್ನು ಉಲ್ಲೇಖಿಸಿದೆ. ಇವರು ಸಮಂತಭದ್ರಾಚಾರ್ಯರ – ಆಪ್ತಮೀಮಾಂಸ ಗ್ರಂಥಕ್ಕೆ 'ಅಷ್ಟಶತೀ' ಎಂಬ ಟೀಕೆಯನ್ನು ಉಮಸ್ವಾತಿ ಪಂಡಿತರ 'ತತ್ವಾರ್ಥಸೂತ್ರ' ಗ್ರಂಥಕ್ಕೆ 'ತತ್ವಾರ್ಥರಾಜವರ್ತ್ತಿಕಾ' ಎಂಬ ಮಹಾಭಾಷ್ಯವನ್ನು ಬರೆದಿದ್ದಾರೆ. ಆಚಾರ್ಯ ಜಿನಸೇನರು ನೃಪತುಂಗ ಚಕ್ರವರ್ತಿಯ ರಾಜಗುರುಗಳಾಗಿದ್ದರು. ಇವರು ರಚಿಸಿದ 'ಜಯಧವಳಾ' ಟೀಕೆಯೂ, ಆದಿ ಪುರಾಣವು ಪ್ರಸಿದ್ಧವಾಗಿದೆ. ರಾಷ್ಟ್ರಕೂಟ ದೊರೆ ಮೂರನೇ ಕೃಷ್ಣನ ಗುರುಗಳಾಗಿದ್ದ ಗುಣಭದ್ರಾಚಾರ್ಯರು 'ಉತ್ತರ ಪುರಾಣ', ಆತ್ಮಾನುಶಾಸನ' ಮತ್ತು 'ಜಿನದತ್ತ ಚರಿತೆ' (ಕಥಾಗ್ರಂಥ)ಗಳನ್ನು ರಚಿಸಿದ್ದಾರೆ. ಸುಮಾರು ಕ್ರಿ.ಶ. 850ರಲ್ಲಿ ಮಹಾವೀರಾಚಾರ್ಯರು 'ಗಣಿತಸಾರ'ವನ್ನು ರಚಿಸಿದನು.

ಶಾಕಟಾಯನನು ಮಹಾವೈಯಾಕರಣೀಯಾಗಿದ್ದು 'ಶಬ್ಧಾನುಶಾಸನ' ರಚಿಸಿದ್ದಾನೆ. ಹೀಗೆ ರಾಷ್ಟ್ರಕೂಟರ ಕಾಲದಲ್ಲಿ ಜೈನಮತದ ಪ್ರಭಾವವು ಎಲ್ಲೆಡೆ ಫಸರಿಸಿತ್ತು. ಮಳಖೇಡದಲ್ಲಿರುವ 'ನೇಮಿನಾಥ ಬಸದಿಯು ಹಲವು ಬಾರಿ ಜೀರ್ಣೋದ್ಧಾರಗೊಂಡಿದ್ದು, ಮೂಲಸ್ವರೂಪವನ್ನರಿಯುವುದೇ ಕಷ್ಟವಾಗಿದೆ. ಗರ್ಭಗೃಹ, ಅಂತರಾಳ, ನವರಂಗಗಳನ್ನು, ವಿಶಾಲವಾದ ಹಜಾರವುಳ್ಳ ಈ ಬಸದಿಯಲ್ಲಿ 'ನೇಮಿನಾಥ' ಮತ್ತು 'ಮಲ್ಲಿನಾಥ' ತೀರ್ಥಂಕರರ ಬಿಂಬಗಳಿವೆ. ಗರ್ಭಗೃಹಕ್ಕೆ ಚತುಃಶಾಲೆಯ ದ್ವಾರಬಂಧದ ಲಲಾಟದಲ್ಲಿ ಗಜಲಕ್ಷ್ಮೀಯುಳ್ಳ ಸುಂದರವಾದ ದ್ವಾರಬಂಧವಿದೆ. ನವರಂಗಕ್ಕೆ ಲಲಾಟಫಲಕದಲ್ಲಿ ಆಸೀನ ಜಿನಬಿಂಬವುಳ್ಳ ಪಂಚಶಾಖೆಯ ದ್ವಾರಬಂಧವಿದೆ. ಮುಖಮಂಟಪದಲ್ಲಿ ಒಂದೆಡೆ ಅನೇಕ ಕಂಚಿನ ಶಿಲ್ಪಗಳನ್ನಿಡಲಾಗಿದೆ. ಇವುಗಳಲ್ಲಿ ನಂದೀಶ್ವರ, ಮಹಾಮೇರು, ಶ್ರುತಫಲಕಗಳೂ ಇವೆ. ಮುಖಮಂಟಪದಲ್ಲಿ ರಾಷ್ಟ್ರಕೂಟರ ಶೈಲಿಯ ಸುಂದರವಾದ ನಾಲ್ಕು ಕಂಬಗಳಿವೆ. ಈ ಬಸದಿಯನ್ನು ಉಲ್ಲೇಖಿಸಿರುವ ಕ್ರಿ.ಶ. 1391ರ ಶಾಸನವು 'ಶ್ರೀ ವಿದ್ಯಾನಂದ ಸ್ವಾಮಿಗಳ ನಿಸಿದಿಗೆ' ಶಾಸನವಾಗಿದೆ. ಇಲ್ಲಿಯ ಚತುರ್ವಿಂಶತಿ ತೀರ್ಥಂಕರ ಪೀಠಶಾಸನವು ಈ ದೇವರ ಪ್ರಭಾವಳಿಯನ್ನು ಮಲ್ಲಿಸೆಟ್ಟಿಯ ಮೊಮ್ಮಗನಾದ ಸಾಯಿಸೆಟ್ಟಿ ಮಾಡಿಸಿದನೆಂದು ತಿಳಿಸುತ್ತದೆ. ಮಳಖೇಡದ ಪ್ರಾಚೀನ ಶಾಸನವೊಂದು ಇಲ್ಲಿ 9ನೇ ಶತಮಾನದಲ್ಲಿದ್ದ ಏಕಚಟ್ಟುಗ ಜಿನಾಲಯವನ್ನು ಉಲ್ಲೇಖಿಸಿದೆ. ಇವರು ಕ್ರಿ.ಶ. 881ರಲ್ಲಿ ಕೊಪ್ಪಳದಲ್ಲಿ ಸಮಾಧಿಸ್ಥನಾದ ಮುನಿಯಾಗಿದ್ದಾನೆ. ಸುಮಾರು 975ರಲ್ಲಿ ಏಕಚಟ್ಟುಗ ಜಿನಾಲಯ ನಶಿಸಿದಾಗ ಅದನ್ನು ಸಾಧುಸೇನ ಪಂಡಿತನು ನಿಲ್ಲಿಸಿದನೆಂದು ಹಂಪನಾರವರು ತಿಳಿಸಿರುತ್ತಾರೆ. ಹೀಗೆ ಮಳಖೇಡವು

ಸುಮಾರು ಕ್ರಿ.ಶ ೮ನೇ ಶತಮಾನದಿಂದ ಜೈನಮತದ ಪ್ರಮುಖ ಕೇಂದ್ರವಾಗಿತ್ತೆಂದು ತಿಳಿಯಬಹುದು.

ಮಳಖೇಡದ (ಮಲ್ಖೇಡ್) ಯುದ್ಧ :

ಕ್ರಿ.ಶ. 1680ರಲ್ಲಿ ಛತ್ರಪತಿ ಶಿವಾಜಿಯ ಮರಣಾನಂತರ ಆತನ ತನಯನಾದ ಶಂಭಾಜೀ ಮರಾಠಾ ರಾಜ್ಯಪೀಠವನ್ನು (ಸಾಮ್ರಾಜ್ಯ) ಅಲಂಕರಿಸಿ ಕ್ರಿ.ಶ. 1681ರಲ್ಲಿ ಬುರ್ಹಾನ್‌ಪುರದ ಮೇಲೆ ದಂಡಯಾತ್ರೆ ಸಾಗಿಸಿ ದರೋಡೆಯನ್ನು ಮಾಡುತ್ತಾ ಪ್ರಜೆಯಲ್ಲಿ ಭೀತಿಯನ್ನುಂಟು ಮಾಡುತ್ತಾ ದಂಗೆಯನ್ನೆಬ್ಬಿಸಿದನು. ಬಹದ್ದೂರ್ ಖಾನ್ ಅಸಮರ್ಥಯನ್ನು ಆಸರೆ ಮಾಡಿಕೊಂಡು, ಶಂಭಾಜೀ ಈ ವಿಜಯ ಯಾತ್ರೆಗಳನ್ನು ಗೈದನು. ಅಲ್ಲಿನ ಮುಸಲ್ಮಾನರು ಶಂಭಾಜೀಯವರ ಆಕ್ರಮಣೆಗಳನ್ನಡಗಿಸಿ ಪ್ರಶಾಂತ ವಾತಾವರಣವನ್ನೊದಗಿಸುವವರೆಗೆ ನಾವು ಶುಕ್ರವಾರ ಪ್ರಾರ್ಥನೆಗಳಲ್ಲಿ ಭಾಗವಹಿಸುವುದಿಲ್ಲ" ಎಂದು ಚಕ್ರವರ್ತಿಗೆ ಮಹಾಜರ್ ಕಳುಹಿಸಿದರು. ಆಗ ತಾನು ದಖ್ಖನ್‌ನಲ್ಲಿ ಕಾಫಿರ್‌ಗಳನ್ನಡಗಿಸಿ ಶಾಂತಿ ಭದ್ರತೆಗಳನ್ನೊದಗಿಸುವುದಕ್ಕೆ ಸ್ವತಃ ಬರುವೆನೆಂದು ಮುಸ್ಲಿಮರಿಗೆ ಔರಂಗಜೇಬನು ಅಭಯವನ್ನು ಕೊಟ್ಟನು. ಚಕ್ರವರ್ತಿಯ ಕಿರಿಯ ಪುತ್ರನಾದ ಅಕ್ಬರನು ರಾಜಪುತ್ರರ ಸ್ನೇಹ ಪಡೆದು ಶಂಭಾಜೀಯವರ ಮೈತ್ರಿ ಹೊಂದಿ ತಂದೆಯ ಮೇಲೆ ಪಿತೂರಿಯನ್ನೆಬ್ಬಿಸಿದನು. ಕ್ರಿ.ಶ. 1682ರಲ್ಲಿ ಅಕ್ಬರ್ ರಾಜಕುಮಾರನ ಪಿತೂರಿಯನ್ನಡಗಿಸಲು ಮರಾಠಾ ಶಕ್ತಿಯ ವಿಜೃಂಬಣೆಯನ್ನು ಹತ್ತಿಕ್ಕಲು ಭಾರೀ ಸೈನ್ಯದೊಂದಿಗೆ ಔರಂಗಜೇಬನು ದಖ್ಖನಿಗೆ ಬಂದನು. ಇರಾನ್ ಸಫ್ವಿ ಮೊಘಲರ ವಿರೋಧಿ, ಮೊಘಲ್ ಇರಾನ್ ಚಕ್ರವರ್ತಿಗಳೊಬ್ಬರನ್ನೊಬ್ಬರನ್ನು ಬಲಹೀನಪಡಿಸಲು ಪಥಕಗಳನ್ನು ರೂಪಿಸಿಕೊಂಡಿದ್ದರು. ಕಂದಹಾರಿನ ಮೇಲೆ ಪರ್ಯಾಯ ಸಲ ದಂಡಯಾತ್ರೆಗಳನ್ನು ನಿರ್ವಹಿಸಿದರು. ಬಿಜಾಪುರ ಗೋಲ್ಕೊಂಡ ಸುಲ್ತಾನರು ಷಿಯಾಮತಾನುಯಾಯಿಗಳು ಕಾರಣ ಇರಾನಿನ ಚಕ್ರವರ್ತಿ ಅವರ ಮೈತ್ರಿಯನ್ನು ಸಂಪಾದಿಸಿ ಅವರಿಗನೇಕ ವಿಧವಾಗಿ ಸಹಾಯ ಸಹಕಾರಗಳನ್ನೊದಗಿಸುತ್ತಾ, ಆ ಎರಡೂ ರಾಜ್ಯಗಳು ಚಕ್ರವರ್ತಿಯನ್ನು ಎದುರಿಸುವ ಸ್ಥಿತಿಗೆ ಬರಬೇಕೆಂದು ಆಕಾಂಕ್ಷಿಸಿದರು.

ಕ್ರಿ.ಶ. 1682ರಲ್ಲಿ ಔರಂಗಜೇಬನು ಬುರಹಾನ್‌ಪುರ ತಲುಪಿ ನಾಲ್ಕು ತಿಂಗಳ ಕಾಲ ಅಲ್ಲೇ ನೆಲಸಿ ಅನಂತರ ಔರಂಗಬಾದಗೆ ಬಂದನು. ಆಗ ಗೋಲ್ಕೊಂಡ, ಬಿಜಾಪುರ ರಾಜ್ಯಗಳನ್ನು ಮೊಘಲ ಸಾಮ್ರಾಜ್ಯ ಅಂತರ ಭಾಗಗಳಾಗಿ ಗ್ರಹಿಸಬೇಕೆಂದು ಚಕ್ರವರ್ತಿ ಭಾವಿಸಿ ಮೊದಲು ಅಕ್ಬರ್ ಯುವರಾಜನ ಮೇಲೆ ಸೈನ್ಯವನ್ನು ನಡೆಸಿದನು. ಅವರು ಬಾರಿ ಬರಲಿಲ್ಲ. ಕ್ರಿ.ಶ. 1683ರಲ್ಲಿ ಮರಾಠಾ ರಾಜ್ಯಭಾಗಗಳ ಮೇಲೆ ಏರಿಹೋದನು. ಅಜಂ ರಾಜಕುಮಾರನು

ಉತ್ತರ ಕೊಂಕಣದ ಸಲಿಹೇರ್ ದುರ್ಗದ ಮೇಲೆಯೂ ಮೋಕ್ಷಂ ರಾಜಕುಮಾರನು ಕಂದರಾದ ಮೇಲೆಯು ದಾಳಿ ಮಾಡಲು ನಿಯುಕ್ತರಾದರು. ಒಂದು ವರ್ಷದವರೆಗೆ ದಾಳಿಗಳನ್ನು ನಿರ್ವಹಿಸಿದರೂ ಫಲಿತಾಂಶವು ಶೂನ್ಯ. ಮರಾಠಾರನ್ನೆದಿರಿಸಿ ವಿಜಯ ಸಾಧಿಸುವಲ್ಲಿ ಸಹಕರಿಸಬೇಕೆಂದು ಚಕ್ರವರ್ತಿ ಗೋಲ್ಕೊಂಡ, ಬಿಜಾಪುರದ ಸುಲ್ತಾನರನ್ನು ಆದೇಶಿಸಿದನು. ಬಿಜಾಪುರದ ಸೈನ್ಯಾಧ್ಯಕ್ಷನಾದ ಸಯ್ಯದ್ ಮಕ್ದೂಮ್ ಪರ್‍ಜಾಖಾನ್ ಹೆಸರಲ್ಲಿ ಫರ್ಮಾನ್ ಜಾರಿಗೊಳಿಸಿದ್ದರೂ ಫಲಿತವೂ ಕಾಣಲಿಲ್ಲ. ಬಿಜಾಪುರ, ಗೋಲ್ಕೊಂಡ ಸುಲ್ತಾನರು ಶಂಭಾಜಿಗೆ ದ್ರವ್ಯ ಸಹಾಯ ಮಾಡಿದ್ದಾರೆಂದು ಚಾರರು ಚಕ್ರವರ್ತಿಗೆ ನಿವೇದಿಸಿದರು. ಮರಾಠರ ಮೇಲೆ ದಾಳಿ ಮಾಡಲು ನಿಲ್ಲಿಸಿ, ದಖ್ಖನ್ ಮುಸ್ಲಿಂ ರಾಜ್ಯಗಳ ಮೇಲೆ ದಂಡಯಾತ್ರೆ ಮಾಡಬಯಸಿ ಕ್ರಿ.ಶ. 1685ರಲ್ಲಿ ಆಜಂ ರಾಜಕುಮಾರನ ನೇತೃತ್ವದಲ್ಲಿ ಬಿಜಾಪುರದ ಮೇಲೆ ದಂಡಯಾತ್ರೆ ಸಾಗಿಸಲು ಚಕ್ರವರ್ತಿಯ ಸೈನ್ಯವು ಹೊರಟಿತು. ಗೋಲಕೊಂಡ ರಾಜ್ಯವು ಸುಸಂಪನ್ನವಾದದ್ದು, ಮಹಮ್ಮದ್ ಸಮೀಧನು ಚಕ್ರವರ್ತಿಗೆ ಕುತುಬ್‌ಷಾಹಿ ರಾಜ್ಯದ ಮೇಲೆ ಆಶೆಗಳನ್ನು ಕಲ್ಪಿಸಿದನು. ಆ ರಾಜ್ಯದ ಅತ್ಯುನ್ನತ ಪದವಿಗಳಲ್ಲಿದ್ದ ಅಕ್ಕಣ್ಣ – ಮಾದಣ್ಣರನ್ನು ಕುರಿತು ಇಲ್ಲದವುಗಳನ್ನು ಕಲ್ಪಿಸಿ ಚಾಡಿ ಮಾತುಗಳನ್ನು ಹೇಳಿದನು. ಶಂಭಾಜಿಗೆ ತಾನೀಷಾನು ಸಹಾಯ ಸಹಕಾರಗಳನ್ನೊದಗಿಸುವುದು ದೊಡ್ಡ ಅಪರಾಧವೆಂದು ಭಾವಿಸಲಾಯಿತು. ತಾನೀಷಾ ಬಿಜಾಪುರದ ಸುಲ್ತಾನನಿಗೆ ಯಾವ ರೀತಿಯ ಸಹಾಯ ಸಹಕಾರ ನೀಡಬಾರದೆಂದು ಚಕ್ರವರ್ತಿಗೆ ಆಜ್ಞೆಯನ್ನಿತ್ತನು.

ಚಕ್ರವರ್ತಿಯನ್ನು ದೊಡ್ಡ ಮನುಷ್ಯನೆಂದು ಭಾವಿಸಿದ್ದೇನೆ. ಸಿಕಿಂದರ್ ಆದಿಲ್‌ಷಾನಂಥ ಹುಡುಗನ ಮೇಲೆ ದಂಡಯಾತ್ರೆ ಮಾಡುವ ಕ್ರಮ ಸಹಿಸಲಾಗಿದ್ದೆಂದು, ಖಲೀಲುಲ್ಲಾ ನೇತೃತ್ವದಲ್ಲಿ 40 ಸಾವಿರ ಸೈನ್ಯವನ್ನು ಬಿಜಾಪುರದ ಸಹಾಯಕ್ಕೆ ಕಳಿಸಲಾಗುವುದು ಆ ಕಡೆಯಿಂದ ಶಂಭಾಜಿ ಮರಾಠರ ಸೈನ್ಯದಿಂದ ಮುತ್ತಿಗೆ ಹಾಕಿ ಮುಂದಕ್ಕೆ ಸಾಗಿ ಬರುವನು ಮೊಘಲರು ಯಾವ ರೀತಿಯಿಂದ ಹೋರಾಡಿ ಯುದ್ಧದಲ್ಲಿ ವಿಜಯವನ್ನು ಸಾಧಿಸುವರೋ ನೋಡೋಣವೆಂದು ತಾನೀಷಾ ದಿಲ್ಲಿಯಲ್ಲಿದ್ದ ತನ್ನ ರಾಯಭಾರಿಗೆ ಬರೆದ ಪತ್ರವನ್ನು ಔರಂಗಜೇಬ ಚಕ್ರವರ್ತಿಯ ಸಮಕ್ಷಮದಲ್ಲಿಡಲಾಯಿತು.

ಆತನು ಭುಗಿಲೆದ್ದು ಧನಮದಾಂಧನಾಗಿ ವಿಲಾಸಮಯ ಜೀವನವನ್ನು ಅನುಭವಿಸುತ್ತಾ ಮಂಚವನ್ನಿಳಿಯದ ತಾನೀಷಾನು ನನ್ನನ್ನೆದಿರಿಸುವನೇ? ಎಂದು ಗೋಲಕೊಂಡಾ ಮುತ್ತಿಗೆಗೆ ಅಪಾರವಾದ ಸೈನ್ಯವನ್ನು ಕಳುಹಿಸಿದನು. ಗೋಲಕೊಂಡಾ ಮುತ್ತಿಗೆಯಲ್ಲಿ ಬಹದ್ದೂರ್ ಖಾನ್ ಸದ್ದರ್ ಖಾನ್, ಏತಬಾರ್ ಖಾನ್ ಮುಲ್ತಫ್ ಖಾನ್ ಸಯ್, ದಬ್ಬುಲ್ಲಾ ಖಾನ್ ಶಾಹಿಯೂ ನಿಸಾರಖಾನ್‌ರಂಥ ಯೋಧರಿದ್ದರು. ಅಬ್ದುಲ್ ಹಸನ್ ತಾನೀಷಾ ಮೊಘಲರ ಮುತ್ತಿಗೆ

ತಪ್ಪಲಾರದೆಂದು ಭಾವಿಸಿ ಕ್ರಿ.ಶ. 1679ರಲ್ಲಿ ಕೊಂಡಪಲ್ಲಿ ದುರ್ಗವನ್ನು ದುರಸ್ತಿ ಮಾಡಿಸಿದನು. 12 ಸಾವಿರ ಹೊನ್ನಿನ ಬೆಲೆ ಬಾಳುವ ತುಪಾಕಿ ಮದ್ದನ್ನು 20 ಖಂಡಗ ಸೀಸವನ್ನು ಸರಬರಾಜು ಮಾಡಬೇಕೆಂದು ಬ್ರಿಟಿಷ್ ಕಂಪನಿಯವರನ್ನು ಬೇಡಿದನು. ಕರ್ನಾಟಕದಲ್ಲಿ ಆಡಳಿತ ವ್ಯವಹಾರವನ್ನು ಸುಧಾರಿಸಲ್ಪಟ್ಟಿತ್ತು. ಎ.ಡಿ. 1684ರಲ್ಲಿ ಲಿಂಗಪ್ಪನು ಚಿಕ್ಕನಾಯಕಪಲ್ಲಿ ಪ್ರಾಂತಗಳನ್ನು ಕುತುಬ್ ಷಾ ಆಜ್ಞೆಯ ಮೇರೆಗೆ ಸಾಧಿಸಿದನು. ಮಹಮ್ಮದ್ ಇಬ್ರಾಹಿಂನ ಪದವಿಯ ಸ್ಥಾನಮಾನವನ್ನು ಕುಗ್ಗಿಸಲಾಯಿತು. ಅಕ್ಕನ್ನ ಮತ್ತು ಮಾದನ್ನರೆಂಬ ಹಿಂದೂ ಸಹೋದರರು ಗೋಲ್ಕೋಡಾ ರಾಜ್ಯದಲ್ಲಿ ಪ್ರಭಾವಿ ಅಧಿಕಾರಿಯಾಗಿ ತೌನಷಾನ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದರು.

ಅಕ್ಕಣ್ಣ ಅಂತರಂಗಿಕ ವ್ಯವಹಾರಗಳನ್ನು ಮಾದನ್ನ ವಿದೇಶಿ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದರು. 1685ರ ಕಾಲಕ್ಕೆ ಗೋಲ್ಕೊಂಡ ಶಕ್ತಿ ಸಮನ್ವಿತ ರಾಜ್ಯವಾಗಿ ರೂಪುಗೊಂಡು ಮೊಘಲರ ದಾಳಿಗೆದುರು ನಿಲ್ಲುವ ಸ್ಥಿತಿಗೆ ಅವರು ತಂದಿದ್ದರು. ಮಲ್ಖೇಡ್ ಕೋಟೆಯು ಬಲಿಷ್ಠವಾಗಿದ್ದು, ಇದರಲ್ಲಿ 40 ಸಾವಿರ ಸೈನ್ಯವಿದ್ದಿತು. ವೀರಾಧಿವೀರರಾದ ಕುತುಬಾಷಾ ಸೇನಾನಾಯಕರು ಈ ದಂಡಿಗೆ ನಾಯಕತ್ವ ವಹಿಸಿ ಯುದ್ಧಕ್ಕೆ ಸನ್ನದ್ಧರಾಗಿದ್ದರು.

ಖಾನ್ ಜಹಾನ್ ಕೋರತಾಬ್ ಸೈನ್ಯ ಸಮೇತ ಮಲ್ಖೇಡ್ ತಲುಪಿಸಿದನು. ಮಳಖೇಡಿಗೆ ಎರಡು ಮೈಲು ದೂರದಲ್ಲಿ ಮೊಘಲ ರಾಜಕುಮಾರ ಷಾ ಆಲಂ ತನ್ನ ಸೈನ್ಯದೊಂದಿಗೆ ಮುಂದಕ್ಕೆ ಸಾಗುತ್ತಿರಲಾಗಿ ಕೋಟೆಗೆ ಎಂಟು ಮೈಲಿನ ದೂರದಲ್ಲಿದ್ದ ಕುತುಬ ಷಾ ಸೈನ್ಯವು ಅದನ್ನು ತಡೆಯಿತು. ದಖ್ಖನ್ ಸೈನ್ಯ ಅಪಾರವೆಂದು ಮನಗಂಡು ಮೊಘಲ್ ಸೇನರು ಸಮೀಪದಲ್ಲಿದ್ದ ಒಂದು ದುರ್ಗವನ್ನು ಹೊಕ್ಕರು, ಮಲಖೇಡ, ಸೇಡಂಗಳ ನಡುವೆ ಯುದ್ಧ ಆರಂಭವಾಯಿತು. ಈ ಯುದ್ದ ಗೋಲ್ಕೊಂಡದ ಕುತುಬಷಾಹಿ ಸೈನ್ಯವು ವಿಜಯ ದುಂದುಭಿ ಬಾರಿಸಿತು. ಈ ಸಮಯದಲ್ಲಿ ಆಜಂ ರಾಜಕುಮಾರನು ಸೈನ್ಯವನ್ನು ಮುಂದಕ್ಕೆ ನಡೆಯಿಸಿ ಧೈರ್ಯದೊಂದಿಗೆ ತಮ್ಮ ಸೈನಿಕರಿಗೆ ಹುರಿದುಂಬಿಸುತ್ತಾ ಶತ್ರುಗಳನ್ನು ಚಂಡಾಡುತ್ತಾ ಯುದ್ಧಭೂಮಿಯಲ್ಲಿ ಭೀಭತ್ಸವನ್ನು ಸೃಷ್ಟಿಸಿದನು. ಕೆಲವು ನಿಬಂಧನೆಗಳನ್ನು ಸೂಚಿಸುತ್ತಾ ಸಂಧಿ ಮಾಡಿಕೊಳ್ಳಲು ಇಚ್ಛಿಸಿದನು.

1. ಅಕ್ಕಣ್ಣ, ಮಾದಣ್ಣ ಸಹೋದರರನ್ನು ಉದ್ಯೋಗದಿಂದ ವಜಾ ಮಾಡಬೇಕು.
2. ಸೇಡಂ, ರಾಮಗಿರಿ, ಪರಗಣಗಳನ್ನು ಮೊಘಲರ ವಶಕ್ಕೆ ಒಪ್ಪಿಸುವುದು.
3. ಪೇಷ್ಕಸ್ ಬಕಾಯಗಳನ್ನು ಪಾವತಿ ಮಾಡಬೇಕು ಮತ್ತು ಮೇಲ್ಕಾಣಿಸಿದ ನಿಯಮಗಳಿಗೆ ಡೆಕ್ಕನ್ ಸೇನಾನಿಗಳು ಅಂಗೀಕರಿಸಲಿಲ್ಲವಾದ ಕಾರಣ ಯುದ್ದವು ನಿಲ್ಲಲಿಲ್ಲ.

ಖಾನ್ ಜಹಾನ್, ಹಿಮ್ಮತ್ ಖಾನ್, ಸಯ್ಯದಬ್ದುಲ್ಲಾರಂಥ ಯೋಧರು ಯುದ್ಧರಂಗದಲ್ಲಿ ನೀರವಿಹಾರವನ್ನು ಪ್ರದರ್ಶಿಸಿದರು. ಮೊಘಲರ ಸೇನೆ ಸೋಲನ್ನನುಭವಿಸುವ ಸಮಯದಲ್ಲಿ ಚಕ್ರವರ್ತಿಯ ಒಂದಾನೆಯ ಹೆದರಿ ಝಂಕಾರ ಮಾಡುತ್ತ ದಖ್ಖನ್ ಸೈನ್ಯವನ್ನು ಚೆಲ್ಲಾಚೆದುರಾಗಿ ಮಾಡಿತು. ಇಂಥಾ ತುಳಿದಾಟದಲ್ಲಿ ಕುತುಬಷಾ ಗಜಸೇನೆ ಅಶ್ವಿಕದಳ ಪದಾತಿದಳ ದಿಕ್ಕು ತೋಚದೆ ಸುಳಿದಾಡುವುದನ್ನು ಕಂಡು ಚಕ್ರವರ್ತಿಯ ಸೈನಿಕರು ಕುತುಬ್‌ಷಾ ಗಜಾಶ್ವದಳವನ್ನು ವಶಕ್ಕೆ ತೆಗೆದುಕೊಂಡು ವಿಜಯ ದುಂದುಭಿ ಬಾರಿಸಿದರು. ಜಾನ್ ನಿಸಾನ್ ಖಾನ್ ಸೇಡಂ ಕೋಟೆಯನ್ನು ವಶಪಡಿಸಿಕೊಂಡನು. ಆ ಸಮಯದಲ್ಲಿ ಮಾದನ್ನ ಕಳಿಸಿದ 10 ಸಾವಿರ ಸೈನ್ಯ ಯುದ್ದರಂಗದಲ್ಲಿ ಹೊಕ್ಕು ಮೊಘಲ್ ಸೈನ್ಯದೊಂದಿಗೆ ಭೀಕರವಾಗಿ ಹೋರಾಡಿತು. ನೂರಾರು ಸೈನಿಕರು ಮೃತಪಟ್ಟರು. ಸಾವಿರಾರು ಕ್ಷತಗಾತ್ರರಾದರು. ಕುತುಬ್ ಷಾ ಸೇನಾನಿ ಬಾರೀಖಾನ್ ಕವುಣಿಯಿಂದ (ವಡಿಸೆಲ) ಕಲ್ಲು ಬೀಸುವಲ್ಲಿ ಕುಶಲ ಆತನ ಖಾನೇಜಹಾನ್ ಮುಂದಕ್ಕೆ ಬಂದು ಮೊಘಲ ಸೇನಾನಿಗಳಲ್ಲಿ ವಿಶೇಷರಾದವರಾರೆಂದು ಪ್ರಶ್ನಿಸಿ ಅವರನ್ನೆದಿರಿಸಲು ಹೊರಟನು. ಅಷ್ಟರಲ್ಲಿ ಒಂದು ಬಾಣವು ಆತನ ಹೃದಯವನ್ನು ಛೇದಿಸಿತು. ನೆಲಕ್ಕಪ್ಪಿ ಅಸುನೀಗಿದನು. ಕುತುಬ ಷಾ ಸೈನ್ಯದಲ್ಲಿ ಉಳಿದವರೆಲ್ಲರನ್ನು ಕೊಲ್ಲುವದುಕ್ತವೆಂದು ಸಯ್ಯದಬ್ದುಲ್ಲ ಸಲಹೆ ಕೊಟ್ಟನು. ಆಜಂ ರಾಜಕುಮಾರನು ಆ ಸಲಹೆಗಳನ್ನು ಒಪ್ಪಲಿಲ್ಲ.

ಯುದ್ಧ ನಿಲ್ಲಿಸಿದ ಗೋಲ್ಕಂಡ ಸೈನ್ಯವು ಮೊಘಲರನ್ನೆದಿರುಸುತ್ತ ಯುದ್ಧವನ್ನಡಿಸಿದರು. ಚಕ್ರವರ್ತಿ ತಾನೇ ಜಹಾಂ ಹೆಸರಿನಲ್ಲಿ ಫರ್ಮಾನ್ ಕಳುಹಿಸಿ ಯುದ್ಧವನ್ನು ಜಾರಿಯಲ್ಲಿಡಲು ಆಜ್ಞಾಪಿಸಿದನು. ಮೊಅಜ್ಜಂ ರಾಜಕುಮಾರನು ಯುದ್ಧ ವಿಮುಖನಾದನು. ಆದರೂ ಚಕ್ರವರ್ತಿಯ ಆಜ್ಞೆಯನ್ನು ಅನುಸರಿಸಿ ಯುದ್ಧ ಆರಂಭಿಸಿದನು. ಖಾನೆಜಹಾನ್ ಯುದ್ಧದಲ್ಲಿ ಪಾಲ್ಗೊಳ್ಳಲು ನಿರಾಕರಿಸಿದನು. ಆತನ ಸ್ಥಾನಕ್ಕೆ ಸಯ್ಯದಬ್ದುಲ್ಲಾ ಮನಃಪೂರ್ವಕವಾಗಿ ಪ್ರಮಾಣ ಮಾಡಿ ಯುದ್ಧ ಭೂಮಿಯಲ್ಲಿ ಹಾರಿದನು. ಇನ್ನಿತರ ಮೊಘಲ ಸೇನಾನಿಗಳು ರಣರಂಗದಲ್ಲಿ ಪ್ರವೇಶಿಸಿದರು. ರಾಜಕುಮಾರನು ಸರ್ ಲಕ್ಷರ್ ಖರೀಬುಲ್ಲಾ ಇವರಿಗೆ ಸಂಧಿ ಪತ್ರವನ್ನು ಕಳುಹಿಸಿದನು. ಸೇಡಂ, ಕೊಹಿರ್, ಆಡಕಿ, ಮಲಖೇಡ್ ಪರಗಣಗಳನ್ನು ಮೊಘಲರ ಸ್ವಾಧೀನಪಡಿಸಲು ಒಪ್ಪಿದರೆ, ಸಂಧಿಗಾಗಿ ಚಕ್ರವರ್ತಿಗಳಿಗೆ ವಿನಂತಿ ಕಳುಹಿಸಲಾಗುವುದೆಂದು ಮೋ ಆಜ್ಜಂ ರಾಜಕುಮಾರನು ಸಂಧಿ ಪತ್ರದೊಂದಿಗೆ ತಿಳಿಸಿದನು.

ಈ ಪತ್ರವನ್ನು ನಾಜರ್ ಜಮುರುದ್ ಎಂಬವನು ಕುತುಬ್ ಷಾ ಸನ್ನಿಧಿಯಲ್ಲಿಟ್ಟನು. ಮಹಮ್ಮದಿಬ್ರಾಹಿಂ ಸಂಧಿಗೊಪ್ಪಿಕೊಳ್ಳಬೇಕೆಂದು ತಾನೀಷಾಯವರಿಗೆ ಸಲಹೆ ಕೊಟ್ಟನು. ಆದರೆ ರುಸ್ತುಂರಾವು ಷೇಕ್ ಮೀನ್ ಹಜಲೀಸು ಸಂಧಿಗೆ ಒಪ್ಪಲಿಲ್ಲ. ಮತ್ತೆ ಯುದ್ಧ ಪ್ರಾರಂಭವಾಯಿತು. ಕುತುಬ್ ಷಾ ಸೇನೆಯ ಬಾಣ ಪರಂಪರೆ ಮೊಘಲ್ ಸೇನೆಯನ್ನು

ಗೊಂದಲಕ್ಕೀಡು ಮಾಡಿತು. ಕೆಲವು ಬಾಣಗಳು ಮೋ ಅಜ್ಜಂ ರಾಜಕುಮಾರನ ಡೆರಾದೊಳಗೆ ನುಗ್ಗಿ ಬಂದವು. ಮೊಘಲ ಸೈನ್ಯಕ್ಕೆ ಆಹಾರ ಪದಾರ್ಥಗಳ ಸರಬರಾಜಿಗೆ ಅಡ್ಡಿಯನ್ನುಂಟು ಮಾಡಲು ಕಟ್ಟುನಿಟ್ಟು ಮಾಡಿದರು. ಕುತುಬ್ ಷಾಹಿ ಅಧಿಕಾರಿಗಳು ಅಷ್ಟಲ್ಲದೆ ಮೊಘಲ್ಲರಲ್ಲಿದ್ದ ಆಹಾರ ಧಾನ್ಯಗಳನ್ನು ವಶಪಡಿಸಿಕೊಂಡು ನಾಶಪಡಿಸಿದರು.

ಮೊಅಜ್ಜಂ ರಾಜಕುಮಾರನು ಅಗ್ರಹಾವೇಶಪೂರಿತನಾಗಿ ಯುದ್ಧ ಭೇರಿ ಬಾರಿಸಲು ಆಜ್ಞಾಪಿಸಿದನು. ಬಹದ್ದೂರು ಖಾನ್, ಮೊಹಿಜುದ್ದೀನ್ ಮುಂತಾದವರು ಸೈನ್ಯಾಧ್ಯಕ್ಷರು, ಜಾಫರ್‌ಖಾನ್, ಹಿಮ್ಮತ್ ಖಾನರು ಸೇನಾನಿಗಳು ಇವರು ಮೊಗಲರ ಸೈನ್ಯವನ್ನು ಮುಂದಕ್ಕೆ ಸಾಗಿಸಿದರು. ರಾಜಕುಮಾರನ ಹಿಂದೆ ರಾಜಾ ಮಾನಸಿಂಗ್, ಅಬೂರ್ ಮಕಾರಂ, ಸಮಂದರ್ ಬೇಗ್‌ರಂಥ ಯೋಧರಿದ್ದರು. ಗೋಲ್ಕೊಂಡಾದಿಂದ ಮತ್ತೆ ಹೆಚ್ಚಿನ ಸೈನ್ಯವು ಕುತುಬಾ ಷಾ ಸೈನ್ಯವನ್ನು ಸೇರಿತು. ಕುತುಬ್ ಷಾ ಸೇನೆಗಳು ನಾಲ್ಕು ಮೈಲು ಹಿಂದಕ್ಕೆ ಹೋಗಿ, ತೋಪುಗಳನ್ನು ಮದ್ದನ್ನು ತುಂಬಿ ತಗ್ಗುಗಳಲ್ಲಿ ಹೂಳಿದರು. ಷೇಕಮಿನ್ ಹಾಜ್, ರುಸ್ತುಂರಾವು ಅಧಿಪತ್ಯದಲ್ಲಿ ಕುತುಬ್ ಷಾ ಸೇನೆಗಳು ನಿಂತವು. ರಾಜಕುಮಾರನನ್ನೆದುರಿಸಲು ಸಯ್ಯದಬ್ದುಲ್ಲಾ ನೇಮಿಸಲ್ಪಟ್ಟನು. ಮೊದಲನೆಯ ದಿನದ ಯುದ್ಧದಲ್ಲಿ ಗೋಲಕೊಂಡ ಸೈನ್ಯವು ಸೋತು ಸೇಡಂ ದಿಕ್ಕಿಗೆ ಹಿಂದುರಿಗಿತು. ಸೇನಾನಿಗಳು ಯುದ್ಧ ಮಾಡಲು ಸ್ವಲ್ಪ ಸಮಯಾವಕಾಶ ಕೇಳಿದರು. ಎರಡನೆಯ ದಿನ ಯುದ್ಧವು ಸಾಯಂಕಾಲದವರೆಗೆ ನಡೆಯಿತು. ಒಬ್ಬರಿಬ್ಬರು ಕತ್ತಿ ಯುದ್ದವು ಮಾಡಿ ಜಯಾಪಜಯಗಳನ್ನು ನಿರ್ಣಯಿಸುವುದು ಗುರಿ ರಕ್ತಪಾತವಾಗಲಾರದು. ಜನನಷ್ಟವು ಸಂಭವಿಸುವುದಿಲ್ಲವೆಂದು ಕುತುಬ್ ಷಾ ಸೇನಾನಿಗಳು ಮೊ ಅಜ್ಜಂ ರಾಜಕುಮಾರನಿಗೆ ತಿಳಿಸಿದರು. ಮೊಘಲರು ಇದಕ್ಕೆ ಅಂಗೀಕರಿಸಲಿಲ್ಲ.

ಆನೆಗಳಿಂದ ನಿಮ್ಮನ್ನೆದುರಿಸಿ ಅಪಜಯಗೊಳಿಸುವೆವೆಂದು ರಾಜಕುಮಾರನು ಸಮಾಧಾನಕೊಟ್ಟನು. ಯುದ್ಧ ಮುಂದುವರಿಯಿತು. ಈ ಯುದ್ಧದಲ್ಲಿ ಕುತುಬ್ ಷಾ ಸೇನೆ ಸೋಲನ್ನೊಪ್ಪಿ ರಾಜಧಾನಿ ದಾರಿ ಹಿಡಿದವು. ಕುತುಬ್ ಷಾ ಸೈನ್ಯದಲ್ಲಿ ಸ್ಥಾನಿಕ, ಸ್ಥಾನಿಕೇತರ ಮಧ್ಯೆ ಭೇದಭಿಪ್ರಾಯಗಳು ಮೂಡಿದವು. ಕೆಲವರು ಯುದ್ದ ಮಾಡಲು ಸಿದ್ದರಾದರೆ ಇನ್ನಿತರರು ಯುದ್ಧದ ಅವಸರವಿಲ್ಲವೆಂದು ತಿಳಿಸಿದರು. ಮೊಘಲ್ ಸೇನಾನಿಗಳು ಯುದ್ಧ ಭೇರಿ ಬಾರಿಸುತ್ತಾ ಕುತುಬ್ ಷಾ ಸೈನ್ಯವನ್ನು ಬೆನ್ನಟ್ಟಿ ಗಗನ್ ಪಹಾಡ್‌ದವರೆಗೆ ಬಂದರು. ರಾಜಕುಮಾರನು ಗೋಷಾಮಹಲ್ ಪ್ರಾಂತದಲ್ಲಿ ಬೀಡು ಬಿಟ್ಟಲ್ಲಿ, ಗೋಲ್ಕೊಂಡದ ಸರ್ ಲಕ್ಷರ್ ಷಾ ಬಂದು ಮೊಘಲರಲ್ಲಿ ಬಂದು ಸೇರಿದನು. ಮಲಖೇಡ್ ಯುದ್ಧದಲ್ಲಿ ಕುತುಬ್ ಷಾ ಸೇನೆ ಸೋಲಿಗೆ ಈತನೆ ಪ್ರಧಾನಕಾರಕನು. 1686ರಲ್ಲಿ ಖಲೀಲುಲ್ಲಾ ಖಾನ್ ಮೊಘಲ್ ರಾಜಕುಮಾರನನ್ನು ಆಶ್ರಯಿಸಿದನು. ಈತನಿಗೆ ಮಹಬತ್ ಖಾನ್ ರಾಜಕುಮಾರನನ್ನು ಬಿರುದಿನೊಂದಿಗೆ, 6 ಸಾವಿರ

ಮನ್ಸಬ್, ನಾಲ್ಕು ಸಾವಿರ ಸೈನ್ಯದ ಮೇಲೆ ಅಧಿಪತ್ಯವು ಲಭಿಸಿತು. ಕುತುಬ್ ಷಾ ಗೋಲಕೊಂಡ ಕೋಟೆಯಲ್ಲಿ ತಲೆಮರಿಸಿಕೊಂಡನು. ಹೈದರಾಬಾದು ನಗರವು ದರೋಡೆಗಾರರಿಗೆ ಗುರಿಯಾಯಿತು. ಮೊಘಲ್ ಸೈನಿಕರಲ್ಲಿ ಕೆಲವರು ದರೋಡೆಗೆ ಮುಂದಾದರು. ನಗರದ ರಕ್ಷಣ ವಲಯವು ಭೇದಿಸಲ್ಪಟ್ಟಿತು. ನಗರ ವಾಸಿಗಳ ಧನವಸ್ತು ವಾಹನ ಮಾನ ಪ್ರಾಣಿಗಳಿಗೆ ರಕ್ಷಣೆ ಇಲ್ಲದೆ ಹೋಯಿತು. ಸಾವಿರಾರು ಜನ ನಗರವನ್ನು ಬಿಟ್ಟು, ಓಡಿಹೋಗಿ ಗ್ರಾಮ ಸೀಮೆಗಳನ್ನು ಸೇರಿದರು. ರಾಜ್‌ಮಹಲ್ ಮೇಲೆಯು ದಾಳಿ ಜರುಗಿತು. ಅಮೀರರು, ಮರ್ಯಾದಸ್ಥ ಪ್ರಮುಖ ವರ್ತಕರು ಇನ್ನಿತರ ಸಮಾಜದ ಗಣ್ಯ ವ್ಯಕ್ತಿಗಳು ಸತಿಸುತರೊಂದಿಗೆ ಪ್ರಾಣ ರಕ್ಷಣೆಗಾಗಿ ಗಿಡ–ಗುಡ್ಡಗಳನ್ನು ಆಶ್ರಯಿಸಿದರು. ಸ್ತ್ರೀಯರು ಬುರಖಾಗಳನ್ನು ಧರಿಸಿ ಹೋಗಲು ಸಹ ಸಮಯವಿರಲಿಲ್ಲ. ಅನೇಕರು ಸೆರೆಹಿಡಿಯಲ್ಪಟ್ಟರು.

ಕೆಲವರು ತಮ್ಮ ವಸ್ತು ಸಾಮಗ್ರಿಗಳನ್ನು ಬಿಟ್ಟು ಗೋಲಕೊಂಡದ ಕಡೆಗೆ ಓಡಿದರು. ಶತ್ರುಸೈನಿಕರು ಮನೆಮಂದಿರಗಳಲ್ಲಿ ಧಾವಿಸಿ ಕೋಟಿಗಟ್ಟಲೆ ಬೆಲೆ ಬಾಳುವ ವಸ್ತು ಸಂಪದವನ್ನು ಸ್ವಾಧೀನ ಪಡಿಸಿಕೊಂಡರು. ಬಡವರು ಸಾಮಾನ್ಯ ಪ್ರಜೆಗಳು ದರೋಡೆಕೊರರ ಕೈಯಲ್ಲಿ ಸಿಕ್ಕ ಸರ್ವಸ್ವವನ್ನು ಕಳೆದುಕೊಂಡರು. ಹೈದರಾಬಾದು ನಗರಾಧಿರ್ಭಾವದಂದಿನಿಂದ ಇಂಥ ದಾರುಣಕಾಂಡ ನಡೆದದ್ದು ಪ್ರಥಮ ಸಲವಾಗಿದ್ದಿತು. ಮೊಅಜ್ಜಂ ರಾಜಕುಮಾರನಿಗೆ ನಗರದ ಪರಿಸ್ಥಿತಿ ತಿಳಿಯುವವರೆಗೂ ಪಟ್ಟಣವು ಧ್ವಂಸವಾಯಿತು. ಆತನು ದರೋಡೆಕೋರರನ್ನಡಗಿಸಲು ಸೈನಿಕರನ್ನು ನೇಮಿಸಿದನು. ಈ ಸೈನಿಕರು ದಂಗೆಯನ್ನಡಗಿಸಲು ಬದಲಾಗಿ ತಾನೆ ಜನರನ್ನು ಭೇಡಿಸಿ ದೋಚಿಕೊಳ್ಳುವುದು ಮಾಡಿದ್ದರು.

ಖಾನ್ ಜಹಾನ್ ನಗರಸಂರಕ್ಷಾ ಬಾಧ್ಯತೆ ವಹಿಸಿದಾಗ್ಯೂ ಅವುಗಳನ್ನು ಹತ್ತಿಕ್ಕಲು ಆಗಲಿಲ್ಲ. ಈ ಗೊಂದಲಗಳು ದಾವಾನಲದ ಹಾಗೆ ಸಾಮ್ರಾಜ್ಯವೆಲ್ಲವು ಹಬ್ಬಿತು. ತಖೀ ಮಹಮ್ಮದ್ ದಾವೂದುನಂತವರು ಮೊಗಲರನ್ನಾಶ್ರಯಿಸಿದರು. ಹಾಗೆ ಉನೀಷಾನ ಸೋದರಳಿಯ ಷರೀಪ್ ಉಲ್ಕಲ್ಕ ಚಕ್ರವರ್ತಿನಾಶ್ರಯಿಸಿ 3 ಸಾವಿರ ಮನ್ಸಬು, 200 ಪಾಶ್ವಿಕ ದಳದ ಮೇಲೆ ಅಧಿಪತ್ಯವನ್ನು ಹೊಂದಿದರು. ಮಹಮ್ಮದ್ ಇಬ್ರಾಹಿಂ ಚಕ್ರವರ್ತಿಯವರಿಂದ 41 (ನಲವತ್ತೊಂದು) ಕುದುರೆ, ಆನೆಗಳು ಮತ್ತು 5 ಸಾವಿರ ಹೊನ್ನುಗಳನ್ನು ಬಹುಮಾನವಾಗಿ ಹೊಂದಿದನು. ತಾನೀಷಾನ ಪರಮ ಮಿತ್ರನಾದ ಜೈನು ಲಾಬುದ್ಧೀನು ಮೊಘಲ ದರ್ಬಾರಿನಲ್ಲಿ ಸೇವೆಯಲ್ಲಿ ಸೇರಿದುದು. ಈ ಪರಿಸ್ಥಿತಿಯಲ್ಲಿ ತಾನೀಷಾ ತಾನೆಂಥ ಷರತ್ತುಗಳನ್ನಾದರೂ ಅಂಗೀಕರಿಸುವೆನೆಂದು ಮೊಅಜ್ಜಂ ರಾಜಕುಮಾರನಿಗೆ ಸಂಧಿರಾಯ ಬಾರವನ್ನು ಕಳುಹಿಸಿದನು. ರಾಜಕುಮಾರನು, ಸಂಧಿಯಂಗೀಕರಿಸಬೇಕೆಂದು ಚಕ್ರವರ್ತಿಗೆ ಪತ್ರವನ್ನು ಕಳುಹಿಸಿದನು. 1. ಬಕಾಯ ಬಿದ್ದ ದ್ರವ್ಯ ಕೋಟಿ ಸಂದಾಯ ಮಾಡುವುದು, 2. ವಾರ್ಷಿಕ ಕಪ್ಪ ಎರಡು ಲಕ್ಷ

ತೋಪುಗಳನ್ನು ಕಟ್ಟುವರು, 3. ಅಕ್ಕಣ್ಣ ಮಾದಣ್ಣರನ್ನು ಪದವಿ ಭ್ರಷ್ಟರನ್ನಾಗಿ ಮಾಡುವುದು, 4. ಮಾಳ್ಖೇಡ್, ಸೇಡಂ ಮಂಡಲಗಳನ್ನು ಮೊಗಲರ ಆಡಳಿತಕ್ಕೆ ಪರಭಾರೆ ಮಾಡುವರು ಎಂಬ ಸಂಧಿ ಷರತ್ತುಗಳನ್ನು ಚಕ್ರವರ್ತಿ ಸಂತೋಷದಿಂದ ಅನುಮೋದಿಸಿದನು. ರಾಜಕುಮಾರನಿಗೆ ಹೆಚ್ಚಳವಾಗಿ 10 ಸಾವಿರ ಮನ್ಸಬು ಅನುಗ್ರಹಿಸಿದನು. ಮಹ್ಮದು ನಿಯಾಮಿತ್ ಖಾನ್ ಆಲಿ ರಾಜರ ಈ ವಿಜಯವೆಲ್ಲರನ್ನು ರಾರಾಜಿಸುವದೆಂಬ ಭಾವವುಳ್ಳ ಕವಿತೆಯನ್ನು ಹೆಣೆದರು. 1868ರಲ್ಲಿ ಈ ಸಂಧಿ ಸಮಕೂರಿತು ಮೊಅಜ್ಜಂ ರಾಜಕುಮಾರನು ಕೆಲವು ತಿಂಗಳ ಹೈದ್ರಾಬಾದನಲ್ಲಿ ನೆಲೆಕೊಂಡು ಸೈನಿಕವಯ್ಯ ನಿಬಂಧನೆಗಳನ್ನು ಜಾರಿಗೊಳಿಸುವುದು.

ಬಕಾಯಿ ದ್ರವ್ಯ ಸಂದಾಯ ಮೊದಲಾದ ಕಾರ್ಯಗಳನ್ನು ಮುಗಿಸಿಕೊಂಡು ಕುತುಬ್‌ಷಾ ಕೋರಿಕೆಯ ಮೇರೆಗೆ ನಗರವನ್ನೂ ಬಿಟ್ಟು ಕೋಹೀರ್ ಹೊರಟನು. ಸಂಧಿ ಷರತ್ತುಗಳೆಲ್ಲವು ಜಾರಿಗೊಳಿಸಲ್ಪಟ್ಟವು. ಆದರೆ ಲಕ್ಕಣ್ಣ ಮಾದಣ್ಣರನ್ನು ಉದ್ಯೋಗದಿಂದ ವಜಾ ಮಾಡುವ ಕೆಲಸವೊಂದು ಉಳಿಯಿತು. ಮೊಘಲರ ಅಂತಃಪುರವಾಸಿಗಳು, ಮುಸಲ್ಮಾನರು ಅಕ್ಕಣ್ಣ ಮಾದಣ್ಣರಿಗೆ ಪ್ರಬಲ ವೈರಿಗಳು ತಾನೀಷಾನು ಸಂಧಿಗಳನ್ನನುಸರಿಸಿ ಇವರನ್ನು ವಜಾ ಮಾಡುವಲ್ಲಿ ಕಾಲಾಯಾಪನೆ ಮಾಡುವುದು ಇವರು ಸಹಿಸುವಂತಿಲ್ಲ. ತಾನೀಷಾ ಪ್ರೇಯಸಿಯರಾದ ಸರುಮ, ಜಾನೀಸಾಹೇಬ ಎಂಬುವರು ಅಕ್ಕಣ್ಣ ಮಾದಣ್ಣರನ್ನು ಕೊಲ್ಲುವ ಷಡ್ಯಂತ್ರದಲ್ಲಿ ಪ್ರಧಾನ ಪಾತ್ರ ವಹಿಸಿದರು. ಈ ಷಡ್ಯಂತ್ರದಲ್ಲಿ ನಾಯಕ ಸೇರ್‌ಮಿನ್ಹಾಜ್.

ಒಂದು ದಿನ ತಾನೀಷಾನ ದರ್ಶನವನ್ನು ಪಡೆದು ಅಕ್ಕನ್ನ ಮಾದನ್ನರು ರಾಜಬೀದಿಯಿಂದ ಸಾಗುತ್ತಾ ತಮ್ಮ ಗೃಹಗಳಿಗೆ ಹೋಗುತ್ತಲಿದ್ದರು. ಜಮುಶೀದಾ ಆತನ ಅನುಚಾರರು ಅವರನ್ನೆದುರಿಸಿ ತರವಾಲಗಳಿಂದ ಅವರ ತಲೆಗಳನ್ನು ಕತ್ತರಿಸಿ ಹಾಕಿದರು. ಅಂದು ಜಮಾಧಿಲಾವ್ವಲ್ (1097) ಹಿಜರಿ ಕ್ರಿ.ಶ. 1666 ನೆಯ ಸಂವತ್ಸರ ಹಾಗೆಯೇ ರುಸ್ತು ಮುರಾವು ಮನೆಯೊಳಗೆ ಹೊಕ್ಕಿ ಆತನನ್ನು ಆತನ ಕುಟುಂಬದ ಸದಸ್ಯರನ್ನು ಸಂಹರಿಸಿ ಸಮಸ್ತವನ್ನು ಹಂಚಿಕೊಂಡರು. ಮಂದಿರಗಳನ್ನು ಧ್ವಂಸ ಮಾಡಿ ಬ್ರಾಹ್ಮಣರನ್ನು, ಹಿಂದೂಗಳನ್ನು ಸಂಹರಿಸಿ ದೌರ್ಜನ್ಯಗಳನ್ನು ದರೋಡೆಯನ್ನು ಮಾಡಿದರು. ಸರಕಾರ ಈ ಸಮಯದಲ್ಲಿ ಪ್ರಾಮುಖ್ಯತೆ ವಹಿಸಿ ಗದ್ದಲಗಳನ್ನು ನಿಯಂತ್ರಣ ಮಾಡಿತು. ಅಂತಃಪುರವಾಸಿಗಳು ಅಕ್ಕನ್ನ ಮಾದನ್ನರ ಶಿರಗಳನ್ನು ರಾಜಕುಮಾರನಿಗೆ ಕಾಣಿಕೆಯಾಗಿ ಕಳುಹಿಸಿದರು. ಮೊಅಜ್ಜಂ ರಾಜಕುಮಾರನು ಆ ಶಿರಗಳನ್ನು ಬಹದ್ದೂರು ಆಲಿ ನಿಂಗಪ ಚಕ್ರವರ್ತಿಗೆ ಕಳುಹಿಸಿದನು. ಅವರ ಶಿರಗಳನ್ನು ಹೈದ್ರಾಬಾದ್ ನಗರ ಬೀದಿಗಳಲ್ಲಿ ಆನೆಗಳಿಂದ ತುಳಿಸಲ್ಪಟ್ಟವೆಂದು ಕೆಲವರು ಭಾವಿಸಿದ್ದಾರೆ. ರಾಜಕುಮಾರನು ಸೈನಿಕನೊಂದಿಗೆ ಕೋಹೀರ್‌ದಿಂದ ಸೋಲಾಪುರಕ್ಕೆ ತೆರಳಿದನು. ತಾನೀಷಾನು ಚಕ್ರವರ್ತಿಯವರಿಗೆ 100 ಆನೆಗಳನ್ನು ನಜರಾನಾರೊಪೇಣ

ರಾಯಭಾರಿಯೊಂದಿಗೆ ಕಳುಹಿಸಿದನು. ತೆಲಗು ಅಮಾತ್ಯರ ಹತ್ಯೋದಂತವನ್ನಾಲಕಿಸಿ ಚಕ್ರವರ್ತಿ ಸಂತೈಸಿದನು. ಆತನ ಚಿರಕಾಲ ಮಹಿಮೆ ನೆರವೇರಿತು. ಸುವಿಶಾಲ ಸಾಮ್ರಾಜ್ಯದ ನಿರ್ಮಾಣಕ್ಕೆ ತಮ್ಮ ಮಧುಶ್ರೀಯನ್ನು ಧಾರೆಯೆರೆದು ಪಾಲಾನಾವ್ಯವಹಾರಗಳನ್ನು ಪ್ರತಿಷ್ಠೆಗೊಳಿಸಿ, ಕುತುಬ್‌ಷಾಹಿ ರಾಜ್ಯ ಕೀರ್ತಿ ಪ್ರತಿಷ್ಠಾನಗಳನ್ನು ದ್ವಿಗುಣೀಕೃತ ಮಾಡಿದ ಮಹಾಮಂತ್ರಿ ಅಕ್ಕನ್ನ ಮಾದನ್ನರ ಹತ್ಯೆಗಳೊಂದಿಗೆ ದಖ್ಖನ್ ಸ್ವತಂತ್ರ ಜ್ಯೋತಿ ನಂದಿ ಹೋಗಿ ಅಂಧಕಾರಮಯವಾಯಿತು.

ಗೋಲ್ಕೊಂಡ ಮುತ್ತಿಗೆ :

ಮೊಆಜ್ಜಂ ರಾಜಕುಮಾರನ ಸಂಗಡ ಮಾಡಲಾದ ಒಪ್ಪಂದದಿಂದ ಗೋಲಕೊಂಡ ಅತ್ಯಂತ ನಷ್ಟದಾಯಕವಾಯಿತು. ಮೊಘಲರಿಗೆ ಯುದ್ಧವ್ಯಯ, ಬಕಾಯಿ, ಮಲ್ಖೇಡ, ಸೇಡಂ ಪರಗಣಗಳು ಲಭಿಸಿದವು. ಅಕ್ಕಣ್ಣ, ಮಾದಣ್ಣರ ಮರಣದಿಂದ ಮೊಘಲರಿಗೆ ಅತ್ಯಾನಂದವಾಯಿತು. ಮೊಘಲ ಸೈನ್ಯ ಗೋಲಕೊಂಡದಿಂದ ಹೊರಟಿತು. ಬಿಜಾಪುರ ಮೇಲೆ ದಂಡಯಾತ್ರೆ ಸಾಗಿಸಲು ಗೋಲಕೊಂಡವು ಅಡ್ಡಿಯಾಗಿದ್ದದ್ದು ತೊಲಗಿಬಿಟ್ಟಿತು. ಬಿಜಾಪುರ ಮುತ್ತಿಗೆಯ ತರುವಾಯ ಗೋಲಕೊಂಡ ರಾಜ್ಯದೊಂದಿಗೆ ಮಾಡಿಕೊಂಡ ಸಂಧಿಗೆ ವಿಘಾತವಾಯಿತು. ತಾನೀಷಾ ವಿರೋಧಿಗಳು ಗೋಲಕೊಂಡವನ್ನು ಮುತ್ತಿಗೆ ಹಾಕಲು ಚಕ್ರವರ್ತಿಗೆ ಪ್ರೋತ್ಸಾಹಿಸಿದರು. ಗೋಲಕೊಂಡ ರಾಜ್ಯ ಪತನವನ್ನು ಮೊದಲಿನಿಂದಲೇ ಔರಂಗಜೇಬನು ಬಯಸುತ್ತಿದ್ದನು.

ಅಧ್ಯಾಯ–3

ಗುಲ್ಬರ್ಗಾ ಜಿಲ್ಲೆಯಲ್ಲಿ ರಾಷ್ಟ್ರಕೂಟರ ದೇವಾಲಯಗಳ ನೆಲೆಗಳು

ಅಧ್ಯಾಯ–3

ಗುಲ್ಬರ್ಗಾ ಜಿಲ್ಲೆಯಲ್ಲಿ ರಾಷ್ಟ್ರಕೂಟರ ದೇವಾಲಯಗಳ ನೆಲೆಗಳು

ರಾಷ್ಟ್ರಕೂಟರ ಕಾಲದ ಅನೇಕ ದೇವಾಲಯ ಶಿಲ್ಪ ಶಾಸನ ಇತ್ಯಾದಿ ಸ್ಮಾರಕಗಳು ಈಗ ಗುಲ್ಬರ್ಗಾ ಜಿಲ್ಲೆಯ ಶಿರವಾಳ, ಜೇವರ್ಗಿ, ಭೀಮಾರಾಯನಗುಡಿ, ಶಹಾಪೂರ, ಮುದನೂರು, ನಿಡಗುಂದಿ, ದಿಗಾಂವ, ಇಂಗಳಗಿ ರಾವೂರ, ಕುಳಗೇರಿ, ಕಾಳಗಿ, ಕೇಶ್ವಾರ, ಉಡಗಿ, ಸೇಡಂ, ಮುಳಖೇಡ, ಗಂವ್ಹಾರ, ಕೊಲ್ಲೂರು, ಸನ್ನತಿ, ತಡಕಲ್ಲು, ದೋರನಹಳ್ಳಿ, ಮಾಗಣಗೇರಿ ಮುಂತಾದ ಸ್ಥಳಗಳಲ್ಲಿ ಪತ್ತೆಯಾಗಿವೆ. ಈ ಸ್ಥಳಗಳಲ್ಲಿರುವ ಸ್ಮಾರಕ ಶಿಲ್ಪಕಲೆಯು ಈ ಕಾಲದ ವಾಸ್ತು ಶಿಲ್ಪಕಲೆಯ ಅಧ್ಯಯನಕ್ಕೆ ಹೊಸ ಚೈತನ್ನಯವನ್ನು ನೀಡುತ್ತದೆ. ವಿಭಿನ್ನ ರೀತಿಯ ರಾಷ್ಟ್ರಕೂಟರ ಕಾಲದ ಶಿಲ್ಪ, ದೇವಾಲಯ, ಬಸದಿ, ಪುಷ್ಕರಣಿ ಇತ್ಯಾದಿ ಸ್ಮಾರಕಗಳನ್ನು ಈ ಕಾಲದ ಈ ಪ್ರದೇಶದಲ್ಲಿ ಎಂ.ಎಸ್. ನಾಗರಾಜರಾವ್, ಅ. ಸುಂದರ, ಸಿ. ಎಸ್. ಪಾಟೀಲ, ರು.ಮ. ಷಡಕ್ಷರಯ್ಯರವರು ಬೆಳಕಿಗೆ ತಂದಿದ್ದಾರೆ. ಡಾ. ಧಾಖಿ ಅವರು ಸಂಪಾದಿಸಿದ 'ಎನ್‌ಸೈಕ್ಲೋಪೀಡಿಯಾ ಆಪ್ ಇಂಡಿಯನ್ ಟೆಂಪಲ್ಸ್' ಭಾಗ–1ರ ಕೃತಿಯಲ್ಲಿ ಈ ಪ್ರದೇಶದ ಕೆಲವು ದೇವಾಲಯಗಳ ವಿವರಗಳಿವೆ.

ಶಾಂತೇಶ್ವರ ಗುಡಿ ಇತ್ಯಾದಿ: ದಿಗ್ಗಾಂವಿ (ಚಿತ್ತಾಪುರ ತಾ.) ಯಲ್ಲಿಯ ಅನೇಕ ದೇವಾಲಯಗಳಲ್ಲಿ ಎರಡು ಈ ಕಾಲದಲ್ಲೆ ಸೇರಿವೆ. ಒಂದು ಶಾಂಥೇಶ್ವರ ಇನ್ನೊಂದು ಅನಂತೇಶ್ವರ. ಶಾಂಥೇಶ್ವರ ಗುಡಿಯು ಪೂರ್ವಾಭಿಮುಖವಾಗಿದ್ದು ತಳಪಾಯದಲ್ಲಿ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಗರ್ಭಗೃಹ ಬಾಗಿಲು ಚೌಕಟ್ಟಿನಲ್ಲಿ ಆರು ನಿಂತ ಬಾಲಕನ ಉಬ್ಬು ಚಿತ್ರಗಳಿವೆ. ಈ ಲಕ್ಷಣಗಳು ಈ ಪ್ರದೇಶದ ನೇಕ ದೇವಾಲಯಗಳಲ್ಲಿವೆ. ಉದಾಹರಣೆಗೆ ಇಲ್ಲಿಯ ಅನಂತೇಶ್ವರ, ಹಂದರಕಿ ಇತ್ಯಾದಿ ಕಡೆಗಳಲ್ಲಿ ಕಾಣಬಹುದು. ಅನಂತೇಶ್ವರ ದೇವಾಲಯ ತಳಪಾಯದಲ್ಲಿ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ಎತ್ತರದ ಆಧಿಷ್ಠಾನವೂ ಇದೆ. ಗರ್ಭಗೃಹದಲ್ಲಿ ಅನಂತಶಯನ ವಿಗ್ರಹವಿದೆ. ಅದರ ಬಾಗಿಲ ಚೌಕಟ್ಟಿನಲ್ಲಿ ನಾಲ್ಕು ಶಾಖೆಗಲಿದ್ದು ಒಂದರಲ್ಲಿ ನಿಂತಿರುವ ನಾಲ್ಕು ಬಾಲಕರ ಶಿಲ್ಪಗಳಿವೆ. ಅದಕ್ಕೆ ವೈಷ್ಣವ ದ್ವಾರಪಾಲಕರಿದ್ದಾರೆ.(ಕ್ರಿ.ಶ. 10ನೇ ಶತಮಾನ)



ಕುರುಕುಂಟದ ಸಂಗಮೇಶ್ವರ ದೇವಾಲಯ

ಈ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳಿವೆ. ಇದರ ದ್ವಾರದ ಶಾಖೆಗಲಲ್ಲಿ ಹುಡುಗರನ್ನು ಅಥವಾ ಗಣಗಳನ್ನು ಕೇವಲ ಮುಖಗಳ ಚಿನ್ಹೆಯಲ್ಲಿ ಉದ್ದವಾಗಿ ಏಕಸಾಲಿನಲ್ಲಿ ಚಿತ್ರಿಸಿರುವುದು ವಿಶೇಷವೆನಿಸಿದೆ.

ಶಿರಿವಾಳ ದೇವಾಲಯಗಳು

ಶಿರವಾಳಕ್ಕೆ (ಶಹಪುರ ತಾ.) 'ಶಿರವೊಳಲು' 'ಸಿರಿವೊಳಲು' 'ದಕ್ಷಿಣ ವಾರಣಾಸಿ' 'ಧರ್ಮದ ಮನೆ' ಇತ್ಯಾದಿ ಹೆಸರುಗಳಿವೆ. ಅಲ್ಲಿಯ ಶಾಸನಗಳಲ್ಲಿ ರಾಷ್ಟ್ರಕೂಟ ಅಮೋಘವರ್ಷನ ಕಾಲದಲ್ಲಿ ಸಗರ ನಾಡಿನ ಗಾವುಂಡ ಚಂದಯ್ಯನಿಗೆ ಊರಿನ ಕೆಲವರು ದತ್ತಿ ನೀಡಿದ ವಿವರಗಳಿವೆ. ಇನ್ನೊಂದು ಶಾಸನದಲ್ಲಿ ಪಡೆಯಣ್ಣನ ಮಗ ಸಂಪಯ್ಯನ ಧರ್ಮವನ್ನು ವಿವರಿಸಿದೆ. ಈ ಊರಿನಲ್ಲಿ ಸುಮಾರು 20 ದೇವಾಲಯಗಳಿವೆ. ಹೆಚ್ಚು ದೇವಾಲಯಗಳು ರಾಷ್ಟ್ರಕೂಟರ ಕಾಲದ್ದಾಗಿವೆ. ಈ ಊರ ಹಳ್ಳದಾಚೆ ಇವರು ನನ್ನಯ್ಯ ಮತ್ತು ನಾಗಯ್ಯನ

ದೇವಾಲಯುಗಳು ಮುಂತಾದವು ಈ ಕಾಲದ್ದಾಗಿವೆ ಈ ದೇವಾಲಯಗಳ ತಳಪಾಯದಲ್ಲಿ ಗರ್ಭಗೃಹ, ಸುಕನಾಸ, ಅರ್ಧಮಂಟಪ, ಕಿರು ಸಭಾಮಂಠಪ, ನವರಂಗ ಮತ್ತು ದ್ವಾರ ಮಂಟಪಗಳಿವೆ. ಎತ್ತರದ ಅಧಿಷ್ಠಾನವಿದೆ. ಗರ್ಭಗೃಹದಲ್ಲಿ ಶಿವಲಿಂಗಗಳಿವೆ. ಬಾಗಿಲ ಚೌಕಟ್ಟಿನಲ್ಲಿ ಮೂರು ಶಾಖೆಗಳ ಅಲಂಕರಣವಿದೆ. ಲಲಾಟದಲ್ಲಿ ಗಜಲಕ್ಷ್ಮೀ ಇರುವಳು ನವರಂಗದಲ್ಲಿ ದೊಡ್ಡ ಗಾತ್ರದ ಕಂಬಗಳಿವೆ. ಭುವನೇಶ್ವರಿಯಲ್ಲಿ ನಟರಾಜನ ಉಬ್ಬುಶಿಲ್ಪವಿದೆ. ಅಲ್ಲಿಯ ಸುಜ್ಞಾನೇಶ್ವರ ಗುಡಿಯ ಬಾಗಿಲ ಚೌಕಟ್ಟು ಈ ಕಾಲದ್ದೇ ಆಗಿದೆ. ಅದರಹಿಂದೆ ಈ ಕಾಲದ ಮಕರಣೀಯವಿದೆ. ಅದರ ಗೋಡೆಯಲ್ಲಿ ರಾಮಾಯಣದ ಕಥಾನಕ ಶಿಲ್ಪಗಳಿವೆ.

ಹಳ್ಳಿದಾಚಿನ ಕೆಲವು ಏಕಕೂಟ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿವೆ. ದ್ವಿಕೂಟ ಮಾದರಿಯ ದೇವಾಲಯಗಳೂ ಅಲ್ಲಿವೆ. ಅವುಗಳಿಗೆ ತೆರೆದ ನವರಂಗಗಳಿವೆ. ಇಲ್ಲಿಯ ಕಂಬಗಳ ಬುಡದಲ್ಲಿ ಕುಳಿತ ಸಿಂಹಗಳಿವೆ. ಅಲ್ಲಿಯ ಒಂದು ಪುಷ್ಕರಣಿಯ ಗೋಡೆಯಲ್ಲಿ ಗಜಲಕ್ಷ್ಮೀ, ರಾಮ, ಉಗ್ರನರಸಿಂಹ, ಕಿರಾತಾರ್ಜುನ ಮುಂತಾದ ಉಬ್ಬುಶಿಲ್ಪಗಳಿವೆ. ಅದರೆ ಎರಡೂ ಕಡೆಗಳಲ್ಲಿ ಹಾಳಾದ ಗರ್ಭಗೃಹಗಳಿವೆ. ಇಲ್ಲಿಯ ಮಲ್ಲಿಕಾರ್ಜುನ ಗುಡಿಯ ತಳಪಾಯದಲ್ಲಿ ಗರ್ಭಗೃಹ, ತೆರೆದ ಅಂತರಾಳ, ನಕ್ಷತ್ರಾಕಾರದ ನವರಂಗವಿದೆ. ಶಿವಲಿಂಗ ಗರ್ಭಗೃಹದಲ್ಲಿದೆ. ದ್ವಾರ ಚೌಕಟ್ಟಿನ ಮೇಲೆ ಹಂಸಪಕ್ಷಿಗಳ ಸಾಲಿದೆ. ನವರಂಗದ ಛತ್ತಿನಲ್ಲಿ ಅಷ್ಟದಿಕ್ಪಾಲಕರ ನಡುವೆ ನಟರಾಜನಿದ್ದಾನೆ. ಭಿತ್ತಿ ಸರಳವಾಗಿದೆ.

ಇಲ್ಲಿಯ ಹಳ್ಳದ ದಂಡೆಯಲ್ಲಿ ಎರಡು ಭವ್ಯವಾದ ಶೈವದ್ವಾರಪಾಲಕರ ವಿಗ್ರಹಗಳಿದ್ದವು. ಈಗ ಹಳ್ಳದ ದಂಡೆಯಲ್ಲಿ ಒಂದು ಅಲ್ಲೇ ಉಳಿದಿದೆ. ಇನ್ನೊಂದು ಗುಲ್ಬರ್ಗಾದ ಸರಕಾರಿ ವಸ್ತು ಸಂಗ್ರಹಾಲಯದಲ್ಲಿದೆ.

ರಾಮಲಿಂಗೇಶ್ವರ ಗುಡಿ : ಮುಧೋಳ (ಸೇಡಂ ತಾಲೂಕ)ದ ರಾಮಲೀಂಗೇಶ್ವರ ದೇವಾಲಯದ ರಾಷ್ಟ್ರಕೂಟರ ಕನ್ನರನ ಶಾಸನದಲ್ಲಿ ಮುದುವೊಳಲನ್ನು ಗೋಣಯ್ಯನೆಂಬವವನು ಆಳುತ್ತಿದ್ದನೆನ್ನಲಾಗಿದೆ. ಆಗ ಗೂಳಿಗಾವುಂಡ ನೆಂಬುವವನು ಮಹಾದೇವ ದೇವಾಲಯವನ್ನು ನಿರ್ಮಿಸಿ ದತ್ತಿ ನೀಡಿದನೆಂದು ಹೇಳಿದೆ. ಅದೇ ಇಂದಿನ ರಾಮಲಿಂಗೇಶ್ವರ ದೇವಾಲಯವಾಗಿದೆ. ತಳಪಾಯದಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳಿವೆ. ಶಿವಲಿಂಗ ಗರ್ಭಗೃಹದಲ್ಲಿದೆ. ಅಲಂಕೃತ ಬಾಗಿಲ ಚೌಕಟ್ಟಿದೆ. ಅದರ ಲಲಾಟದಲ್ಲಿ ಗಜಲಕ್ಷ್ಮೀ ಇರುವಳು.

ಭೂಮಿಜ ಶಿಖರವುಳ್ಳ ಶಿಖರ: ಮೋಘ (ಚಿಂಚೋಳ್ಳಿ ತಾಲೂಕು)ದಲ್ಲಿ ಕ್ರಿ.ಶ.918ರ ಕಾಲದ ತ್ರುಟಿತಕ ಶಾಸನವಿದ್ದು, ಚಂಡಿಗನೆಂಬುವನು ಮೊರಘೆಯಲ್ಲಿ ಆದಿತ್ಯದೇವರನ್ನು

ಪತಿಷ್ಠಾಪಿಸಿದನೆಂದು, ಅದರ ಪೂಜೆಗಾಗಿ ಬಾಲಚಂದ್ರಭಟಾರರಿಗೆ ದತ್ತಿ ನೀಡಿದ ವಿವರವಿದೆ. ಇಲ್ಲಿಯ ರಾಮಲಿಂಗೇಶ್ವರ ದೇವಾಲಯ ಪೂರ್ವಾಭಿಮುಖವಾಗಿದೆ. ಎತ್ತರ ಅಧಿಷ್ಠಾನವುಳ್ಳ ಈ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳಿವೆ. ಮೂರು ಕಡೆಗಳಲ್ಲಿ ಪ್ರವೇಶ ದ್ವಾರಗಳಿವೆ. ಅಂತರಾಳದಲ್ಲಿ ಎರಡು ದೇವಕೋಷ್ಠಗಳಲ್ಲಿ ಗಣೇಶನ ವಿಗ್ರಹಗಳಿವೆ. ನವರಂಗದಲ್ಲಿ ನಾಲ್ಕು ದೇವಕೋಷ್ಠಗಳಿವೆ. ಸಪ್ತಮಾತೃಕೆ ಮತ್ತು ಮಹಿಷಮರ್ದಿನಿ ಶಿಲ್ಪಗಳು ಎರಡರಲ್ಲಿವೆ. ಬಲಗಡೆ ಮೂಡಳಚಿಯ ಶಿಲ್ಪವಿದೆ. ನವರಂಗದ ಕಂಬಗಳ ಮೇಲೆ ವಿಭಿನ್ನ ಉಬ್ಬುಶಿಲ್ಪಗಳಿವೆ. ಅವು ನಟರಾಜ, ಬ್ರಹ್ಮ, ವಿಷ್ಣು, ಸರಸ್ವತಿ, ಭೈರವಿ, ಗಣಪತಿ, ಉಗ್ರನರಸಿಂಹ, ಸೂರ್ಯ, ಭಿಕ್ಷಾಟನ ಶಿವ, ನರ್ತಕಿ ಇತ್ಯಾದಿ ಶಿಲ್ಪಗಳಿವೆ. ಗರ್ಭಗೃಹದ ಹೊರಭಿತ್ತಿಯಲ್ಲಿ ಮೂರು ಗೂಡುಗಳಲ್ಲಿ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ಶಿಲ್ಪಗಳಿವೆ. ಭಿತ್ತಿ ಸರಳವಾಗಿದ್ದು ಇದಕ್ಕೆ ಭೂಮಿಜ ಶಿಖರವಿರುವುದು ಈ ಭಾಗದಲ್ಲೇ ಅಪರೂಪದ್ದಾಗಿದೆ. ಲಾಡ್ ಚಿಂಚೋಳ್ಳಿ (ಆಳಂದ ತಾಲೂಕು) ಯ ಸಿದ್ದೇಶ್ವರ ದೇವಾಲಯದ ಶಿಖರವೂ ಔತ್ತರೇಯ (ಭೂಮಿಜ) ಶಿಖರವನ್ನು ಹೊಂದಿದೆ. ಇಲ್ಲಿಯ ನಾಗಾರ್ಜುನ ಶಿಲ್ಪ ಅಣ್ಣಿಗೇರಿಯ ಶಿಲ್ಪವನ್ನು ನೆನಪಿಸಬಹುದು.

ಶಂಕರಲಿಂಗ ಗುಡಿ:ಸುಲೇಪೇಟೆ (ಚಿಂಚೋಳ್ಳಿ ತಾಲೂಕು) ಯ ಶಂಕರಲಿಂಗ ದೇವಾಲಯ ತಳಪಾಯಕ್ಕೆ ಗರ್ಭಗೃಹ ಮತ್ತು ಅಂತರಾಳಗಳಿವೆ. ಬೃಹತ್ ಶಿವಲಿಂಗ ಗರ್ಭಗೃಹದಲ್ಲಿದೆ. ಬಾಗಿಲ ಚೌಕಟ್ಟಿನಲ್ಲಿ ಆರು ಶಾಖೆಗಳ ಅಲಂಕರಣವಿದೆ. ಅದರ ಮೇಲೆ ಹಂಸಗಳ ಸಾಲಿದೆ.

ಲಿಂಗದಗುಡಿಇತ್ಯಾದಿ: ಸೇಡಂ ಲಿಂಗದ ಗುಡಿ (ಮಾಣಿಕೇಶ್ವರ) ಸಂಪೂರ್ಣ ಜೀರ್ಣೋದ್ಧಾರವಾಗಿರುವುದರಿಂದ ಅದರ ಮೂಲ ಅಸ್ಪಷ್ಟ. ಅದರಲ್ಲಿರುವ ಕಂಬಗಳು ಈ ಕಾಲದ್ದಾಗಿದೆ. ಇಲ್ಲಿಯ ಇನ್ನೊಂದು ಗುಡಿಯನ್ನು ದೇಗುಲವೆಂದು ಕರೆಯುವರು. ಪೂರ್ವಾಭಿಮುಖವಾಗಿರುವ ಈ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅರ್ಧಮಂಟಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅದರ ಬ್ರಹ್ಮಸೂತ್ರವು ಕ್ರಿ.ಶ.10ನೇ ಶತಮಾನದ ಶೈಲಿಯಲ್ಲಿದೆ. ಬಾಗಿಲ ಚೌಕಟ್ಟಿನಲ್ಲಿ ಐದು ಶಾಖೆಗಳಿವೆ. ಲಲಾಟದಲ್ಲಿ ಗಜಲಕ್ಷ್ಮೀ ಇರುವಳು. ಉತ್ತರಾಂಗದಲ್ಲಿ ಪಂಚ ರೇಖಾನಾಗರಶೈಲಿಯ ಶಿಖರಗಳು ಏಕಸಾಲಿನಲ್ಲಿವೆ. ನಡುವೆ ಸಿಂಹಗಳಿವೆ. ಅಲ್ಲಿಯ ಅಂತರಾಳದ ಬಾಗಿಲು ಚೌಕಟ್ಟಿನ ಮೇಲೆ ಮಕರತೋರಣದಲ್ಲಿ ನಟರಾಜನಿದ್ದಾನೆ. ಕಾಲ ಸುಮಾರು ಕ್ರಿ.ಶ.10ನೇ ಶತಮಾನ. ಇಲ್ಲಿಯ ಗಣೇಶನ ಗುಡಿಯ ಹತ್ತಿರದ ಈಶ್ವರ ಗುಡಿಯ ತಳಪಾಯದಲ್ಲಿ ಗರ್ಭಗೃಹ, ಅರ್ಧಮಂಟಪಗಳಿವೆ. ಶಿವಲಿಂಗ

ಗರ್ಭಗೃಹದಲ್ಲಿದೆ. ಬಾಗಿಲ ಚೌಕಟ್ಟು ಸರಳವಾಗಿದೆ. ಲಲಾಟದಲ್ಲಿ ಗಣಪತಿಯಿದೆ. ಕಾಲ ಸುಮಾರು ಕ್ರಿ.ಶ. 10ನೇ ಶತಮಾನ.

ನೀಲಕಂಠೇಶ್ವರ ಗುಡಿ: ಯಾಳಗಿ (ಸುರಪುರ ತಾಲೂಕು)ಯ ಗುಗ್ಗರಬಾವಿ ಓಣಿಯಲ್ಲಿರುವ ಪೂರ್ವಾಭಿಮುಖ ನೀಲಕಂಠೇಶ್ವರ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ಬಾಗಿಲ ಚೌಕಟ್ಟಿನ ಮೇಲೆ ಬಾತುಕೋಳಿಗಳ ಸಾಲಿದೆ. ನವರಂಗದಲ್ಲಿ ವೃತ್ತ ಪಟ್ಟಿಕೆಯ ಕಂಬಗಳಿದ್ದು ಛತ್ತಿನಲ್ಲಿ ಕಮಲವಿದೆ.

ಲಕ್ಕಮೇಶ್ವರಿ ಗುಡಿ:ಲಖಣಾಪುರ (ಜೇವರ್ಗಿ ತಾಲೂಕು)ದ ಲಕ್ಕಮೇಶ್ವರಿ ದೇವಾಲಯವು ಪೂರ್ವಾಭಿಮುಖವಾಗಿದೆ. ಅಧಿಷ್ಠಾನಕ್ಕೆ ಬಹುಕೋನಗಳಿವೆ. ತಳಪಾಯದಲ್ಲಿ ಗರ್ಭಗೃಹ ಮತ್ತು ಅಂತರಾಳ, ನವರಂಗಗಳಿವೆ. ಗರ್ಭಗೃಹದ ಬಾಗಿಲ ಚೌಕಟ್ಟಿನ ಮೇಲೆ ಬಾತುಕೋಳಿಗಳ ಸಾಲಿವೆ. ನವರಂಗದಲ್ಲೆರಡು ಗೂಡುಗಳಿದ್ದು ಅಲ್ಲಿ ವೈಷ್ಣವಿ ಮತ್ತು ಸರಸ್ವತಿ ಉಬ್ಬುಶಿಲ್ಪಗಳಿವೆ. ನವರಂಗ ತೆರೆದಿದ್ದು ಅಲ್ಲಿ ಕಕ್ಷಾಸನವಿದೆ. ಇದು ಜೀರ್ಣೋದ್ಧಾರಗೊಂಡಿದೆ.

ಸರ್ವತೋಭದ್ರ ಮಾದರಿ ದೇವಾಲಯ: ಕಾಳಗಿ (ಚಿತಾಪೂರ ತಾಲೂಕ)ಯ ಕಾರಂಜಿಯ ದಡದಲ್ಲಿರುವ ದೇವಾಲಯದ ನಾಲ್ಕು ದ್ವಾರಗಳನ್ನು ಹೊಂದಿರುವುದು ಗಮನೀಯ. ಈ ದೇವಾಲಯದ ತಳಪಾಯದ ಭಿತ್ತಿಯಲ್ಲಿ ಅಷ್ಟ ಮುಖಗಳಿವೆ. ಏಕಕೂಟವುಳ್ಳ ಈ ದೇವಾಲಯದ ಗರ್ಭಗೃಹದಲ್ಲಿ ಒಂದು ಆಯತಾಕಾರದ ಪೀಠವಿದ್ದು, ಅದರಲ್ಲಿ ಎರಡು ರಂಧ್ರಗಳನ್ನು ವಿಗ್ರಹಗಳನ್ನು ಕೂಡಿಸಲು ನಿರ್ಮಿಸಿದಂತಿದೆ. ಅದರ ಅಧಿಷ್ಠಾನವು ನಕ್ಷತ್ರಾಕಾರವಿರುವುದು ವಿಶೇಷ. ಶೈಲಿಯಿಂದ ಈ ದೇವಾಲಯದ ಕಾಲ ಸುಮಾರು ಕ್ರಿ.ಶ.10ನೇ ಶತಮಾನ. ಇದಲ್ಲದೇ ಇದೊಂದು ಸರ್ವತೋಭದ್ರ ಮಾದರಿಯದ್ದಾಗಿದೆ.

ಬಲಭೀಮರಾಯನ ಗುಡಿ: ಮಾಗಣಗೇರಿ (ಜೇವರ್ಗಿ ತಾ) ಬಲಭೀಮರಾಯನ ಗುಡಿಯ ಸಭಾಮಂಟಪದಲ್ಲಿ ಕ್ರಿ.ಶ. 10ನೇ ಶತಮಾನದ ಶಾಸನವಿದೆ. ಆದರೆ ಅದರಲ್ಲಿರುವ ಕಂಬಗಳು ಕ್ರಿ.ಶ. 11ನೆಯ ಶತಮಾನದವು.

ಪಾಪನಾಥ ಗುಡಿ: ಮಿರ್‍ಯಾಣ (ಚಿಂಚೊಳ್ಳಿ ತಾ)ದಲ್ಲಿ ತಾಂಡೂರು ರಸ್ತೆಯ ಬದಿಗೆ ಪಾಪನಾಥ ದೇವಾಲಯವಿದೆ. ತಳಪಾಯದಲ್ಲಿ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ಪೂರ್ವದಿಂದ ಪ್ರವೇಶವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಬಾಗಿಲು ಚೌಕಟ್ಟಿನಲ್ಲಿ ನಾಲ್ಕು ಶಾಖೆಗಳಿವೆ. ನವರಂಗದಲ್ಲಿ ಕಿರಿದಾದ ಕಂಬಗಳಿವೆ. ಅವುಗಳಲ್ಲಿ ಕೀರ್ತಿಮುಖ, ಹೂಬಳ್ಳಿ, ಮುತ್ತಿನ ಮಾಲೆ ಮತ್ತು ಪದ್ಮಾಸನದಲ್ಲಿ ಕುಳಿತ ಯತಿಗಳ ಉಬ್ಬುಶಿಲ್ಪಗಳಿವೆ. ನವರಂಗದ ಗೂಡುಗಳಲ್ಲಿ ಗಣಪತಿ ಮತ್ತು ಮಹಿಷಮರ್ದಿನಿ ಶಿಲ್ಪಗಳಿವೆ.

ದ್ವಾರದ ಚೌಕಟ್ಟಿನಲ್ಲಿ ಪಂಚಶಾಖೆಗಳ ಅಲಂಕಾರವಿದೆ. ಇದಕ್ಕೆ ಕದಂಬನಾಗರ ಶೈಲಿಯ ಶಿಖರವಿದ್ದು ಅದರ ಕಾಲ ಸುಮಾರು ಕ್ರಿ.ಶ. 10ನೇ ಶತಮಾನ.



ಶಿವನಗುಡಿ: ಮಿರ್‍ಯಾಣ (ಚಿಂಚೋಳ್ಳಿ ತಾ.) ನಡುವೆ ಮೂರು ಶೈವ ದೇವರ ಗುಡಿಗಳಿವೆ. ಅದಕ್ಕೆ ಮೂರು ಪ್ರತ್ಯೇಕ ದೇವಾಲಯಗಳಿವೆ. ಎರಡು ಪಶ್ಚಿಮಾಭಿಮುಖವಾಗಿವೆ. ಇನ್ನೊಂದು ಪೂರ್ವಾಭಿಮುಖವಾಗಿದೆ. ಅಂತರಾಳದಲ್ಲಿ ಸ್ತಂಬಗಳುಳ್ಳ ಮಕರತೋರಣವಿದೆ. ಇನ್ನೊಂದು ಕಡೆ ಗಂಗಾ–ಯಮುನೆಯರ ಎತ್ತರದ ಉಬ್ಬುಶಿಲ್ಪಗಳಿವೆ. (?) ಶಿಖರಗಳು ಕದಂಬ ನಾಗರ ಶೈಲಿಯಲ್ಲಿವೆ. ಸರಳ ಬಾಗಿಲ ಚೌಕಟ್ಟಿವೆ. ಮೇಲ್ಗಡೆ ಕಪೋತದ ಮೇಲೆ ಹಂಸಗಳ ಸಾಲಿದೆ. ಕಾಲಮಾನ ಸುಮಾರು ಕ್ರಿ.ಶ. 10ನೆಯ ಶತಮಾನ.

ಸಿದ್ದೇಶ್ವರ ಗುಡಿ: ಮುಡಗೋಳ (ಶಹಪುರ ತಾ)ದ ಸಿದ್ದೇಶ್ವರ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ಶಿವಲಿಂಗವನ್ನು ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಲಾಗಿದೆ. ಬಾಗಿಲ ಚೌಕಟ್ಟನ್ನು ಅಲಂಕರಿಸಲಾಗಿದೆ. ಕಾಲ ಸುಮಾರು ಕ್ರಿ.ಶ. 10ನೆಯ ಶತಮಾನ.

ರೇವಣಸಿದ್ದೇಶ್ವರ ಗುಡಿ: ಕೆಂಭಾವಿಯ ರೇವಣಸಿದ್ದೇಶ್ವರ ದೇವಾಲಯ ಚತುರ್‌ಕೂಟ ಮಾದರಿಯದ್ದಾಗಿದೆ. ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಗರ್ಭಗೃಹಗಳಿದ್ದವು. ತೆರೆದ ಅಂತರಾಳಗಳಿವೆ. ನಾಲ್ಕಕ್ಕೂ ಒಂದೇ ನವರಂಗ, ಪಶ್ಚಿಮದ ಗರ್ಭಗೃಹ ಮತ್ತು ಅಂತರಾಳಗಳು ಸುಸ್ಥಿತಿಯಲ್ಲಿವೆ. ಉಳಿದ ಭಾಗಗಳ ರಚನೆಗಳು ನಾಶವಾಗಿವೆ. ಮೂರು ಗರ್ಭಗೃಹಗಳ ಭಾಗಗಳಲ್ಲಿ ಮೂರು ಶಿವಲಿಂಗಗಳಿವೆ. ನಾಲ್ಕರಲ್ಲಿ ಆಧುನಿಕ ಶಿವಲಿಂಗವಿದೆ. ಗರ್ಭಗೃಹದ ದ್ವಾರಕ್ಕೆ ಪಂಚಶಾಖೆಗಳಿವೆ. ಅಲ್ಲಿ ಗಂಗಾ, ಯಮುನಾ, (?) ಚೌರಿಧಾರಿಯರು ಮತ್ತು ಶೈವದ್ವಾರಪಾಲಕರಿರುವುದು

ವಿಶಿಷ್ಟವೆನಿಸಿದೆ. ಗಂಗಾ-ಯಮುನೆಯರ ಶಿಲ್ಪಗಳು ಬಾದಾಮಿ ಚಾಲುಕ್ಯರ ದೇವಾಲಯಗಳಲ್ಲಿ ಮತ್ತು ರಾಷ್ಟ್ರಕೂಟರ ಆರಂಭಿಕ ಕಾಲದಲ್ಲಿ ಸಾಮಾನ್ಯವೆಂಬುದನ್ನು ಇಲ್ಲಿ ನೆನೆಯಬಹುದು. ಪಶ್ಚಿಮದ ಅಂತರಾಳ ಮಕರತೋರಣದಲ್ಲಿ ತ್ರಿಮೂರ್ತಿಯರಿದ್ದಾರೆ. ಕೆಳಗಡೆ ಬಿದ್ದಿರುವ ಒಂದು ಮಕರಕೋಣದಲ್ಲಿ ನಟರಾಜ, ಗಜಮರ್ಧನ ಮತ್ತು ಉಗ್ರನರಸಿಂಹರ ಶಿಲ್ಪಗಳಿವೆ. ರಕ್ಷಾಸನ ಭಾಗ ಮತ್ತು ಇತರ ಪುರಾವೆಗಳು ಅಲ್ಲಲ್ಲಿ ಚದುರಿವೆ. ಈ ದೇವಾಲಯವನ್ನು ಕ್ರಿ.ಶ. 1054ರಲ್ಲಿ ಚಾಲುಕ್ಯ ದೊರೆ ಮೊದಲನೆಯ ಸೋಮೇಶ್ವರನ ಮಹಾಮಂಡಳೇಶ್ವರನಾದ ದೇವರಸನ ರಾಣಿ ಮಾಳಿಯಬ್ಬರಸಿಯು ತನ್ನ ಹೆಸರಿನಲ್ಲಿ ಮಾಳಿಚೇಶ್ವರ ದೇವಾಲಯವನ್ನು ನಿರ್ಮಿಸಿ, ದತ್ತಿ ನೀಡಿದ ವಿವರ ಅಲ್ಲಿಯ ಒಂದು ಶಾಸನ ತಿಳಿಸುತ್ತದೆ. ಇಲ್ಲಿ ಕಾಣುವ ಗಂಗಾ ಮತ್ತು ಯಮುನೆಯರ ಶಿಲ್ಪಗಳ ಲಕ್ಷಣಗಳು ರಾಷ್ಟ್ರಕೂಟರ ಉತ್ತರ ಕಾಲದ್ದವೆಂದು ತರ್ಕಿಸಬಹುದು.

ಸಿದ್ದೇಶ್ವರ ಗುಡಿ: ಕೇಶ್ವರ (ಚಿಂಚೋಳ್ಳಿ ತಾ.) ದ ಊರ ಹೊರಗಡೆಯ ಸಿದ್ದೇಶ್ವರ ದೇವಾಲಯ ಉತ್ತರಾಭಿಮುಖವಾಗಿದೆ. ತಳಪಾಯದಲ್ಲಿ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ಬದಿಗೆ ಪ್ರವೇಶ ದ್ವಾರವಿದೆ. ಗರ್ಭಗೃಹದಲ್ಲಿ ಈಗ ಯಾವುದೇ ವಿಗ್ರಹವಿಲ್ಲ. ಆದರೆ ಶಿವಲಿಂಗವೊಂದು ನವರಂಗದಲ್ಲಿದೆ. ಕಾಲಮಾನ ಸುಮಾರು ಕ್ರಿ.ಶ.10ನೆಯ ಶತಮಾನ. ಈ ದೇವಾಲಯದ ಬದಿಗೆ ದ್ವಿಕೂಟ ಮಾದರಿಯ ಕರಿದೇವರ ದೇವಾಲಯವಿದೆ. ಅದರ ಗರ್ಭಗೃಹಗಳು ಎದುರುಬದುರಾಗಿವೆ. ತಲಾ ಒಂದಕ್ಕೆ ತೆರೆದ ಅಂತರಾಳಗಳಿವೆ. ಈ ಎರಡರ ನಡುವೆ ಒಂದು ನವರಂಗವಿದೆ. ಎರಡೂ ಕಡೆಗಳಿಂದ ಪ್ರವೇಶದ್ವಾರಗಳಿವೆ. ಭಿತ್ತಿಯು ಸರಳವಾಗಿದೆ.

ಕಪಾಲೇಶ್ವರ ಗುಡಿ: ಗಂವ್ಹಾರ (ಜೇವರ್ಗಿ ತಾ.)ದಲ್ಲಿ ಕಪಾಲೇಶ್ವರ ದೇವಾಲಯ ಬಹಳ ಶಿಥಿಲವಾಗಿದೆ. ಅದಕ್ಕೆ ಎತ್ತರವಾದ ಆಧಿಷ್ಠಾನವಿದೆ. ತಳಪಾಯದಲ್ಲಿ ಗರ್ಭಗೃಹ, ಅಂತರಾಳಗಳಿವೆ. ಉಳಿದ ನವರಂಗ ಭಾಗ ಹಾಳಾಗಿಹೋಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಬಾಗಿಲ ಚೌಕಟ್ಟಿನಲ್ಲಿ ಶೈವದ್ವಾರಪಾಲಕರನ್ನು ಬುಡದಲ್ಲಿ ಚಿತ್ರಿಸಲಾಗಿದೆ. ಇದರ ಕಾಲ ಸುಮಾರು ಕ್ರಿ.ಶ. 10ನೆಯ ಶತಮಾನ.

ಭಾಗ್ಯವಂತೀ ಗುಡಿ: ಘತ್ತರಗಿ (ಅಫಜಲಪುರ ತಾ.)ದಲ್ಲಿ ಭಾಗ್ಯವಂತಿ ದೇವಾಲಯದ ಸುತ್ತ ಪ್ರಾಕಾರವಿದೆ. ತಳಪಾಯಕ್ಕೆ ಗರ್ಭಗೃಹ, ಪ್ರದಕ್ಷಿಣಾಪಥ ಮತ್ತು ನವರಂಗವಿದೆ. ಇಲ್ಲಿ ಪ್ರದಕ್ಷಿಣಾಪಥದ ಲಕ್ಷಣ ವಿಶೇಷವಾಗಿದೆ.

ದೇವಾಲಯ ಕಂಬಗಳು: ಮಳಖೇಡ (ಸೇಡಂ ತಾ.)ವು ಕಾಗಿಣಾ ನದಿಯ ದಂಡೆಯ ಮೇಲಿದ್ದು, ಇದು ರಾಷ್ಟ್ರಕೂಟರ ರಾಜಧಾನಿಯಾಗಿದ್ದಿತು. ಇದರ ಮೂಲ ಹೆಸರು ಮಾನ್ಯಖೇಟ. ರಾಷ್ಟ್ರಕೂಟ ದೊರೆ ಅಮೋಘವರ್ಷನ ಆಳ್ವಿಕೆಯ ಕಾಲದಲ್ಲಿ ಈ ನಗರ ರಾಜಧಾನಿಯಾಯಿತು.

ಅಲ್ಲಿ ಈಗ ಕ್ರಿ.ಶ. 15ನೆಯ ಶತಮಾನ ಕೋಟೆಕೊತ್ತಲವಿದ್ದು ಅದಕ್ಕೆ ನಾಲ್ಕು ಅಗಸಿ, 52 ಬುರುಜುಗಳಿವೆ. ಮಳಖೇಡದ ಬಸದಿಯ ಎದುರು ತೆರೆದ 4 ಸ್ತಂಭಮಂಟಪವಿದ್ದು ಇವುಗಳ ಮೇಲೆ ತಲಾ ಒಂದಕ್ಕೆ ನಾಲ್ಕು ಮುಖಗಳಲ್ಲಿ ಉಬ್ಬುಶಿಲ್ಪಗಳಿವೆ. ಒಂದರಲ್ಲಿ ಕಾಮ–ರತಿ, ಗಜಲಕ್ಷ್ಮೀ, ಹಾರ ಹಿಡಿದ ಸೇವಕ, ಶಿವ–ಪಾರ್ವತಿ ಮತ್ತು ಕುಳಿತ ಗಣೇಶರ ಶಿಲ್ಪಗಳಿವೆ. ಎರಡರಲ್ಲಿ ಜೋಡು ದಂತಿಗಳು, ತ್ರಿವಿಕ್ರಮ, ಕುಳಿತ ನಿಧಿಗಳಾದ ಶ್ರೀನಿಧಿ ಮತ್ತು ಪದ್ಮನಿಧಿ ಮತ್ತು ಗಜಲಕ್ಷ್ಮೀಯರಿದ್ದಾರೆ. ಮೂರನೆಯ ಕಂಬದಲ್ಲಿ ನಟರಾಜ, ನಿಧಿ ಮತ್ತು ಪೂರ್ಣಕುಂಭಗಳಿವೆ. ನಾಲ್ಕರಲ್ಲಿ ರಾವಣ, ರಾಮ–ಲಕ್ಷ್ಮಣ, ರಾಮ–ಸೀತೆಯರ ಉಬ್ಬುಶಿಲ್ಪಗಳಿವೆ. ಬಳ್ಳಿಗಳ ಅಲಂಕಾರವೂ ಇದೆ. ಇದಲ್ಲದೇ ಕಾಮ, ರತಿ, ಇಬ್ಬರು ಶಿವ, ಇಬ್ಬರು ಲಕ್ಷ್ಮೀ, ನಾಗ, ಗಜಮರ್ದನ, ಇಬ್ಬರು ಆದಿತ್ಯ, ಸೂರ್ಯ, ಶ್ರೀದೇವಿ, ಭೂದೇವಿ, ಇಬ್ಬರು ಯತಿಗಳು ಮತ್ತು ಬಳ್ಳಿಗಳ ಅಲಂಕರಣವಿದೆ. ವಾದ್ಯಗಾರರೂ ಮತ್ತು ನೃತ್ಯಗಾರರೂ ಇದ್ದಾರೆ. ರಾವಣ ಕೈಲಾಸವನ್ನು ಅಲುಗಾಡಿಸುತ್ತಿರುವನು, ಅಲ್ಲಿ ಶಿವ–ಪಾರ್ವತಿಯರಿದ್ದಾರೆ.

ಶಂಭುಲಿಂಗೇಶ್ವರ ಗುಡಿ: ಸುಲೇಪೇಟೆ (ಚಿಂಚೋಳ್ಳಿ ತಾ.)ಯ ಒಕ್ಕಲಿಗರ ಓಣಿಯಲ್ಲಿ ಶಂಭುಲಿಂಗೇಶ್ವರ ಗುಡಿಯಿದೆ. ಇದರ ತಳಪಾಯದಲ್ಲಿ ಮೂರು ಗರ್ಭಗುಡಿಗಳು, ತೆರೆದ ಅಂತರಾಳಗಳು, ಒಂದು ನವರಂಗಗಳಿವೆ. ಉತ್ತರಾಭಿಮುಖವಾಗಿದೆ. ಮೂಲ ಗರ್ಭಗೃಹದಲ್ಲಿ ಜಿನಪೀಠದಲ್ಲಿ ಶಿವಲಿಂಗವಿದೆ. ಬಾಗಿಲ ಚೌಕಟ್ಟಿನ ಲಲಾಟದಲ್ಲಿ ಜಿನಬಿಂಬಗಳಿವೆ. ಛತ್ತಿನಲ್ಲಿ ಕಮಲದ ಅಲಂಕರಣವಿದೆ. ನವರಂಗದ ಬಾಗಿಲ ಚೌಕಟ್ಟಿನಲ್ಲಿ ಪಂಚಶಾಖೆಗಳಿವೆ. ಲಲಾಟದಲ್ಲಿ ಜಿನಬಿಂಬವಿದೆ. ಭಿತ್ತಿ ಸರಳವಾಗಿದೆ. ಶಿಖರ ಹಾಳಾಗಿದೆ. ಕಾಲ ಸುಮಾರು ಕ್ರಿ.ಶ.10ನೆಯ ಶತಮಾನ.

ಕೇಶ್ವರವು ಚಿಂಚೋಳ್ಳಿ ತಾಲೂಕಿನಲ್ಲಿದ್ದು ಅಲ್ಲಿಯ ಸಿದ್ದಪ್ಪನ ಗುಡಿ ಬಳಿಯಿರುವ ಶಾಸನವೊಂದು ಸು. ಕ್ರಿ.ಶ.8ನೆಯ ಶತಮಾನದ್ದಾಗಿದೆ. ತ್ರುಟಿತ ಈ ಶಾಸನವು ಬ್ರಹ್ಮಚಾರಿಗಳಿಗೆ ನೀಡಿದ ದತ್ತಿಯ ವಿವರವನ್ನೊಳಗೊಂಡಿದೆ.

ಲಿಂಗಯ್ಯನ ಗುಡಿ: ಹಲ್ಕಟ್ಟಾ (ಚಿತಾಪುರ ತಾ)ದ ಲಿಂಗಯ್ಯನ ದೇವಾಲಯ ತ್ರಿಕೂಟ ಮಾದರಿಯಲ್ಲಿದೆ. ತಳಪಾಯದಲ್ಲಿ ಮೂರು ಗರ್ಭಗೃಹಗಳು, ಮೂರು ಅಂತರಾಳಗಳು ಮತ್ತು ಒಂದು ನವರಂಗವಿದೆ. ಅದರ ಬದಿಗಿನ ಗಣೇಶ ದೇವಾಲಯದ ತಳಪಾಯದಲ್ಲಿ ಗರ್ಭಗೃಹ ಮತ್ತು ಅರ್ಧಮಂಟಪಗಳಿವೆ. ಗರ್ಭಗೃಹದಲ್ಲಿ ಗಣೇಶನ ವಿಗ್ರಹವಿದೆ. ಅದರ ದ್ವಾರದ ಚೌಕಟ್ಟಿನ ಬುಡದಲ್ಲಿ ಪೂರ್ಣಕುಂಭವಿದೆ. ಅರ್ಧಮಂಟಪದಲ್ಲಿ ವೃತ್ತಾಕಾರದ ಜೋಡುಕಂಬಗಳಿವೆ. ಇವುಗಳ ಕಾಲ ಸುಮಾರು ಕ್ರಿ.ಶ. 10ನೆಯ ಶತಮಾನ.

ನಾಗೇಶ್ವರ ಗುಡಿ: ಕುಳಗೇರಿಯ ನಾಗೇಶ್ವರ ದೇವಾಲಯ ಪೂರ್ವಾಭಿಮುಖವಾಗಿದೆ. ಇದೊಂದು ಏಕಕೂಟ ಮಾದರಿಯಲ್ಲಿದೆ. ಅದಕ್ಕೆ ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿವೆ. ನವರಂಗದಲ್ಲಿ ಎರಡು ತೆರೆದ ಮಂಟಪಗಳಿದ್ದು, ಕ್ರಮವಾಗಿ ತಲಾ ಒಂದರಲ್ಲಿ ಬ್ರಹ್ಮ ಮತ್ತು ವಿಷ್ಣು ಇವರ ವಿಗ್ರಹಗಳಿವೆ. ಅಂತರಾಳದ ಮಕರತೋರಣದಲ್ಲಿ ತ್ರಿಮೂರ್ತಿಗಳ ಶಿಲ್ಪಗಳಿವೆ. ದ್ವಾರದಲ್ಲಿ ಐದು ಶಾಖೆಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿಯಿರುವಳು. ಅಲ್ಲಿ ಮಿಥುನ ಶಿಲ್ಪಗಳು ಮತ್ತು ಪೂರ್ಣಕುಂಭಗಳ ಚಿತ್ರಗಳು ವಿಶಿಷ್ಟವೆನಿಸಿವೆ. ಮುಖ್ಯದ್ವಾರದಲ್ಲಿ ಸಪ್ತಶಾಖೆಗಳಿವೆ. ಇಲ್ಲಿಯೂ ಲಲಾಟದಲ್ಲಿ ಗಜಲಕ್ಷ್ಮಿ ಇರುವಳು. ಭಿತ್ತಿಯಲ್ಲಿ ಯತಿಗಳು, ವಾಮನ, ವಿಷ್ಣು, ನಟರಾಜ, ಅರ್ಜುನ, ವರಾಹ, ವೀಣಾಧಾರಿ ಶಿವ, ಭೈರವಿ ಮುಂತಾದ ಉಬ್ಬುಶಿಲ್ಪಗಳಿವೆ. ಈ ದೇವಾಲಯದಲ್ಲಿ ಭಿತ್ತಿಯಲ್ಲಿನ ಅನೇಕ ಶಿಲ್ಪಗಳು ವಿಶೇಷ ಗಮನ ಸೆಳೆಯುತ್ತವೆ. ಇದು ಸುಮಾರು ಕ್ರಿ.ಶ. 10ನೆಯ ಶತಮಾನದ ಲಕ್ಷಣಗಳಿರುವ ದೇವಾಲಯವಾಗಿದೆ.

ಈಶ್ವರ ಗುಡಿ:



ಗುಂಡಗರ್ತಿನ (ಚಿತಾಪೂರ ತಾ.)ಯ ಈಶ್ವರ ದೇವಾಲಯದ ತಳಪಾಯದಲ್ಲಿ ಗರ್ಭಗೃಹ ಮತ್ತು ನವರಂಗಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ದ್ವಾರದ ಚೌಕಟ್ಟಿನಲ್ಲಿ ಮೂರು ಶಾಖೆಗಳಾದ ರತ್ನಗಳು, ಅರ್ಧಗಂಭ ಮತ್ತು ಜಾಲಂಧ್ರದಲ್ಲಿ ರತ್ನಗಳ ಅಲಂಕರಣವಿದೆ. ಲಲಾಟದಲ್ಲಿ ಗಜೇಂದ್ರಮೋಕ್ಷದ ಚಿತ್ರವನ್ನು ತೋರಿಸಿರುವುದು ಅಪರೂಪದ್ದಾಗಿದೆ.

ಕೆಳಗಡೆ ಮಕರತೋರಣದಲ್ಲಿ ನಂದಿ, ಗಣೇಶ ಮತ್ತು ವಾದ್ಯಮೇಳದವರಿದ್ದಾರೆ. ನವರಂಗದ ಭುವನೇಶ್ವರಿ ಗೊಮ್ಮಟಾಕಾರವಿದ್ದು, ಅಲ್ಲಿ ಪದ್ಮದ ಅಲಂಕರಣವಿದೆ. ಇದರ ಗರ್ಭಗೃಹದ ಭಾಗವು ಸುಮಾರು ಕ್ರಿ.ಶ. 10ನೆಯ ಶತಮಾನದ್ದಾಗಿದೆ.

ಲೋಕೇಶ್ವರ ಗುಡಿ ಇತ್ಯಾದಿ: ಇಂಗಳಗಿಯಲ್ಲಿ ಒಂಭತ್ತು ಪ್ರಾಚೀನ ದೇವಾಲಯಗಳಿವೆ. ಅವುಗಳ ಶಿಖರ ನಮೂನೆ ಮತ್ತು ಇನ್ನಿತರ ಲಕ್ಷಣಗಳಿಂದ ಈ ದೇವಾಲಯಗಳು ಕ್ರಿ.ಶ. 10ನೆಯ ಶತಮಾನಕ್ಕೆ ಸೇರಿವೆ. ಅಲ್ಲಿಯ ಲೋಕೇಶ್ವರ ಪೂರ್ವಾಭಿಮುಖವಾಗಿದೆ. ಅದಕ್ಕೆ ಗರ್ಭಗೃಹ ಮತ್ತು ಅಂತರಾಳಗಳು ಮಾತ್ರ ಉಳಿದಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಇನ್ನೊಂದು ಸಪ್ತಲಿಂಗೇಶ್ವರ ದಕ್ಷಿಣಕ್ಕೆ ಮುಖವಾಗಿದೆ. ಕೆಲವು ದೇವಾಲಯಗಳೂ ಪೂರ್ವಕ್ಕೆ ಮುಖವಾಗಿದೆ. ಎರಡು ಪಶ್ಚಿಮಾಭಿಮುಖವಾಗಿದೆ. ಇವುಗಳ ಶಿಖರ ಕದಂಬನಾಗರ ಶೈಲಿಯಲ್ಲಿದ್ದು, ಅಲಂಕಾರವಿಲ್ಲ. ಇದರ ಕಾಲ ಸುಮಾರು ಕ್ರಿ.ಶ.10ನೆಯ ಶತಮಾನ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಇವು ಜೀರ್ಣೋದ್ದಾರಗೊಂಡಿವೆ.

ವಿದ್ಯಾಕೇಂದ್ರ: ಅವರಾದಿಯು ಜೇವರ್ಗಿ ತಾಲೂಕಿನಲ್ಲಿದ್ದು, ಅಲ್ಲಿ ಶಾತವಾಹನರ ಕಾಲದಲ್ಲಿ ಒಂದು ವಿದ್ಯಾಕೇಂದ್ರವಿದ್ದ ಶಾಸನವಿದೆ. ಅದರಲ್ಲಿ 'ಚಕಸಬೋದಿಸಣವಿಜಲಯ' ಎಂದು ಉಲ್ಲೇಖವಾಗಿದೆ. ಆದರೆ ಈ ಕಾಲದ ಅಥವಾ ರಾಷ್ಟ್ರಕೂಟರ ಕಾಲದ ಇನ್ನಿತರ ಪುರಾವೆಗಳು ಸಿಕ್ಕಿಲ್ಲ.

ಈಶ್ವರ ಇತ್ಯಾದಿ ಗುಡಿಗಳು: ದೇವರಹಯ್ಯಾಳ (ಶಹಪೂರ ತಾ.)ದಲ್ಲಿ ರಾಮಲಿಂಗೇಶ್ವರ, ಈಶ್ವರ, ಲಿಂಗೇಶ್ವರ ಮತ್ತು ಹಯ್ಯಾಳಲಿಂಗೇಶ್ವರ ಗುಡಿಗಳಿವೆ. ಮೊದಲ ಮೂರು ಶೈವ ಗುಡಿಗಳ ತಳಪಾಯದಲ್ಲಿ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ಇವುಗಳಲ್ಲಿ ಶಿವಲಿಂಗಗಳಿವೆ. ಒಂದಕ್ಕೆ ಬಲಹರಿ, ಎರಡಕ್ಕೆ ಎಡಹರಿ ಶಿವಲಿಂಗಗಳಿವೆ. ವಿಶೇಷವೆಂದರೆ ಈ ಗುಡಿಗಳ ಬಾಗಿಲ ಚೌಕಟ್ಟಿನಲ್ಲಿ ಮೂರರಿಂದ ಐದು ಶಾಖೆಗಳಿದ್ದು, ಬುಡದಲ್ಲಿ ಪೂರ್ಣಕುಂಭಗಳನ್ನು ಚಿತ್ರಿಸಲಾಗಿದೆ. ಪೂರ್ಣಕುಂಭ ಲಕ್ಷಣವು ರಾಷ್ಟ್ರಕೂಟರ ಶೈಲಿಯನ್ನು ನೆನಪಿಸುವುದು.

ರಾಮಲಿಂಗೇಶ್ವರ: ಅಂಕುಲಗಿ (ಜೇವರ್ಗಿ ತಾ.)ಯ ರಾಮಲಿಂಗೇಶ್ವರ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪಗಳಿವೆ. ಅಲ್ಲಿಯ ಕಂಬಗಳ ಮೇಲೆ ರಾಮ, ಸೂರ್ಯ, ಭೈರವ, ವಿಷ್ಣು, ನರ್ತಕಿಯರು ಮುಂತಾದ ಉಬ್ಬು ಶಿಲ್ಪಗಳಿವೆ. ಶೈಲಿಯಿಂದ ಈ ದೇವಾಲಯವು ಮೂಲತಃ ಕ್ರಿ.ಶ. 11ನೆಯ ಶತಮಾನದ್ದಾಗಿದೆ. ತದನಂತರ ಇದನ್ನು ಜೀರ್ಣೋದ್ಧಾರಗೊಳಿಸಲಾಗಿದೆ. ಈ ಊರು ತರ್ದವಾಡಿ–1000 ನಾಡಿನಲ್ಲಿ ಕಂಪಣ ಅಂಕುಲಗೆ–50 ಎಂದು ಹೆಸರನ್ನು ಪಡೆದಿತ್ತು.

ರೇವಣೇಶ್ವರ ಗುಡಿ: ಅಫಜಲಪುರ ಆರನೆಯ ವಿಕ್ರಮಾದಿತ್ಯನ 1007 ಯುವರಾಜ ಮಲ್ಲಿಕಾರ್ಜುನ ಮಹಾಪ್ರಧಾನ ನಾಚಿಮ್ಮರಸ, ಮಹಾಮಂಡಳೇಶ್ವರ ಶಿಲಾಹಾರ ಡಂಕಾರಸ ಮತ್ತು ಆತನ ರಾಣಿ ಸೇರಿಕೊಂಡು ಅಫಜಲಪುರದಲ್ಲಿ ತ್ರೈಕೂಟದ ರೇವಣೇಶ್ವರ ದೇವರ್ಗೆ 100 ಮತ್ತರು ಭೂಮಿ ದಾನ ನೀಡಿದರು. ಅಫಜಲಪುರದಲ್ಲಿ 2 ಸಹಸ್ರಲಿಂಗಗಳಿವೆ. ಸಹಸ್ರಲಿಂಗದೇವರಿಗೆ 40 ಮತ್ತರು ಭೂಮಿ ದತ್ತಿ ನೀಡಲಾಗಿದೆ. ಇಲ್ಲಿ 13ನೆಯ ಶತಮಾನದ ಶಾಸನ (ಇದು ಅರಕೇರಿಯದ್ದಾಗಿದೆ 1033) 20 ಇಂಚು ಎತ್ತರದ ಶಿವಲಿಂಗದಲ್ಲಿ 20 ಸ್ತರಗಳಲ್ಲಿ ಕಿರು ಪ್ರಮಾಣದ ಸಹಸ್ರಲಿಂಗಗಳಿವೆ.

ಅಷ್ಟಲಿಂಗೇಶ್ವರ ಗುಡಿ: ಅಂದೋಲ ಜೇವರ್ಗಿ ತಾಲೂಕಿನ ಒಂದು ಹಳ್ಳಿ. ಅಲ್ಲಿಯ ಅಷ್ಟಲಿಂಗೇಶ್ವರ ಗುಡಿಯ ಮುಂದಿರುವ ರಾಷ್ಟ್ರಕೂಟರ ದೊರೆ ಮುಮ್ಮಡಿ ಕೃಷ್ಣನ ಕ್ರಿ.ಶ.957ರ ಶಾಸನದಲ್ಲಿ ಅಲ್ಲಿ ಗುಂಡಗೇಶ್ವರ ದೇವಾಲಯವನ್ನು ನಿರ್ಮಿಸಿ, ಇದಕ್ಕೆ ಭೂದತ್ತಿ ನೀಡಿದ ವಿವರವಿದೆ. ಈ ಕಾಲದ ಪುರಾವೆಗಳು ಸ್ಥಳಾಂತರವಾಗಿವೆ. ಜೀರ್ಣೋದ್ದಾರವಾಗಿವೆ. ಈ ಶಾಸನದ ಬದಿಗಿನ ದೇವಾಲಯದ ತಳಪಾಯಕ್ಕೆ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ಅಂತರಾಳದಲ್ಲಿ ಸಪ್ತಮಾತೃಕೆಯರ ಶಿಲ್ಪವಿದೆ. ದ್ವಾರಬಂಧಗಳಲ್ಲಿ ಗಜಲಕ್ಷ್ಮೀ ಇರುವಳು. ಭುವನೇಶ್ವರಿಯಲ್ಲಿ ಕಮಲವಿದೆ.

ಶಾಂತಲಿಂಗೇಶ್ವರ ಗುಡಿ:ಆದರೆ ಈ ನಾರಿನ ಉತ್ತರಕ್ಕಿರುವ ಸಾತಲಿಂಗೇಶ್ವರ ದೇವಾಲಯದ ತಳಪಾಯಕ್ಕೆ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ಶಿವಲಿಂಗ ಗರ್ಭಗೃಹದಲ್ಲಿದ್ದು ಬಾಗಿಲ ಫಲಕದಲ್ಲಿ ನಾಲ್ಕು ಶಾಖೆಗಳಿವೆ. ನವರಂಗ ಕಂಬಗಳ ಮೇಲೆ ಶಿವ, ಪಾರ್ವತಿ, ವಾಲಿ, ಸುಗ್ರೀವ, ಜಟಾಧಾರಿ ಶಿವ ಮುಂತಾದ ಶಿಲ್ಪಗಳಿವೆ.



ನವರಂಗದ ನಡುವಿನ ಛತ್ತಿನಲ್ಲಿ ನಟರಾಜನನ್ನು ಭುವನೇಶ್ವರಿಯ ಭಾಗದಲ್ಲಿ ಕೆತ್ತಲಾಗಿದೆ. ಮುಖ್ಯ ದ್ವಾರದ ಫಲಕದ ಲಲಾಟದಲ್ಲಿ ಗಜಲಕ್ಷ್ಮಿ ಇರುವಳು. ಭಿತ್ತಿಯಲ್ಲಿ ಕಿರುಕಂಬಗಳಿವೆ. ಹೀಗಾಗಿ ಈ ದೇವಾಲಯವೇ ಅಂದಿನ ಗುಂಡಗೇಶ್ವರ ದೇವಾಲಯವಿರಬಹುದು.

ಶಿವಲಿಂಗವುಳ್ಳ ದ್ವಾರಪಟ್ಟಿಕೆ: ದಂಡಾಪುರದ ದ್ವಾರಪಟ್ಟಿಕೆಯಲ್ಲಿ ಶಿವಲಿಂಗವಿದೆ (ಲಲಾಟದಲ್ಲಿ). ಕೆಳಗಡೆ ಫಲಕಗಳಲ್ಲಿ ಪೂರ್ಣ ಕುಂಭಗಳಿವೆ. ಈ ನಮೂನೆಯ ದ್ವಾರ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ಕೋಗಳಿಯ ಮಾರುತಿ ಗುಡಿಯಲ್ಲಿ ಕಾಣಬಹುದು.

ರಾಜಾಪುರದ ಭೋಗಲಿಂಗ ದೇವಾಲಯ: ಉಮಾ ಮಹೇಶ್ವರ ದೇವಾಲಯ (ಬಸವಕಲ್ಯಾಣ ತಾ. ಬೀದರ ಜಿ.) ಸರಳ ಭೂಮಿಜ ಶಿಖರಗಳನ್ನು ಹೋಲುತ್ತದೆ. ರಾಜಾಪುರದ ಶಿಖರ ತುಂಬ ಶಿಥಿಲವಾಗಿದೆ. ಅದರ ಮೇಲೆ ಕಳಸವಿದೆ. ಸರಳ ಭಿತ್ತಿಯಿದೆ. ಭಿತ್ತಿಯ ಮೇಲೆ ಶಿಖರದ ಬುಡದ ಕಪೋತ ಕೆಳಗಡೆ ಏಕಸಾಲಿನ ಹಂಸಪಕ್ಷಿಗಳ ಸಾಲಿದೆ. ಆದರೆ ಈ ಜಿಲ್ಲೆಯ ಮೋಘಾದ ರಾಮಲಿಂಗೇಶ್ವರ ದೇವಾಲಯದ ಶಿಖರ ಭೂಮಿಜದಲ್ಲಿ ಇದ್ದರೂ ಸಹ ಅಧಿಷ್ಠಾನದಿಂದ ಶಿಖರದ ತುದಿಯವರೆಗೆ ಉದ್ದವಾದ ಪಟ್ಟಿಕೆಗಳಿವೆ. ಅದರ ಮೇಲಿನ ಅಮಲಕ ವೃತ್ತಾಕಾರವಾಗಿ ಅಂಚಿನ ಸುತ್ತ ಅಲಂಕರಣವಿದೆ. ಇದರ ಮೇಲೂ ಕಳಸವಿದೆ. ಭಿತ್ತಿಯ ದೇವಕೋಷ್ಠ ಗರ್ಭಗೃಹದ ಬಾಗಿಲಿನಂತಿದೆ. ನರಬೋಳ (ಗುಲ್ಬರ್ಗಾ ಜಿ.) ದ ಈಶ್ವರ ದೇವಾಲಯಕ್ಕೆ ಸರಳ ಭಿತ್ತಿ ಮತ್ತು ಶಿಖರಗಳು ದ್ರಾವಿಡ ಮಾದರಿಯಲ್ಲಿವೆ.

ನಾದಯ್ಯನ ಗುಡಿ: ಶಿರವಾಳದ ನನ್ನಯ್ಯನ ಗುಡಿಯ ಬದಿಗೆ ನಾದಯ್ಯನ ಗುಡಿಯಿದೆ. ತಳಪಾಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿವೆ. ಅಂತರಾಳದ ಉತ್ತರ ಮತ್ತು ದಕ್ಷಿಣಕ್ಕೆ ಪ್ರವೇಶದ್ವಾರಗಳಿವೆ. ಸಭಾಮಂಟಪಕ್ಕೆ ಪಶ್ಚಿಮದಲ್ಲಿ ಪ್ರವೇಶದ್ವಾರವಿದೆ. ಅಧಿಷ್ಠಾನಕ್ಕೆ ಉಪಾನ, ಜಗತಿ, ಎತ್ತರ ಪದ್ಮ, ಕುಮುದದಲ್ಲಿ ವೃತ್ತ, ಮೂರು ಪಟ್ಟಗಳು ಮತ್ತು ಅನೇಕ ಮುಖಗಳಿವೆ. ಕಪೋತದ ಮುಖ ಇಳಿಜಾರಿದ್ದು ಅಲ್ಲಿ ಪುಷ್ಪಗಳಿವೆ. ಈ ತರದಲ್ಲಿ ಸಿಂಹ, ಬತ್ತಲೆ ಹೆಂಗಸು, ಆನೆ, ಹಾರುವ ಗಂಧರ್ವರು, ಶಿವಲಿಂಗ ಆರಾಧಕರು, ಮಹಿಷಾಸುರ ಮರ್ದಿನಿ, ವಾದ್ಯಮೇಳ, ಜೋಡಿಹಂಸ, ಗಣೇಶ, ಶಿವ-ಪಾರ್ವತಿ, ಗಣೇಶ ಇತ್ಯಾದಿ ಕಿರುಶಿಲ್ಪಗಳಿವೆ. ಭಿತ್ತಿಯಲ್ಲಿ ಉದ್ದವಾದ ಚೌಕಾದ ಅರೆಗಂಬಗಳ ತುದಿ ಕುಂಭದಂತಿದೆ. ಅದರ ಕಪೋತ ಕೆಳಗಡೆ ಗಿಳಿಗಳು, ಬತ್ತಲೆ ಹೆಂಗಸು, ಮಿಥುನ, ಸಿಂಹಗಳು, ಮಂಗ, ಆಮೆ ಇತ್ಯಾದಿ ಕಿರುಚಿತ್ರಗಳಿವೆ. ಇದರಲ್ಲಿ ಹಿಂಚಾಚು ಮುಂಚಾಚುಗಳಿವೆ. ಗರ್ಭಗೃಹ ಮತ್ತು ಸಭಾಮಂಟಪದಲ್ಲಿ ಸರಳ ಭದ್ರಗಳು ಹೆಚ್ಚು ಮುಂಚಾಚಿವೆ. ಹಿಂಚಾಚಿನಲ್ಲಿ ಎರಡು ಸ್ತಂಭಪಂಜರ ನಮೂನೆಯಿದೆ.

ಸಭಾಮಂಟಪದ ದ್ವಾರ ಚೌಕಟ್ಟನ್ನು ಅಲಂಕೃತಗೊಳಿಸಲಾಗಿದೆ. ಲಲಾಟದಲ್ಲಿ ಗಜಲಕ್ಷ್ಮೀ, ಕಪೋತದ ಕೆಳಗಡೆ ಹಾರುವ ಪಕ್ಷಿಗಳ ಸಾಲಿದೆ. ಹೊಸ್ತಿಲ ಬದಿಗಳಲ್ಲಿ ಎರಡು ಆನೆಗಳಿವೆ. ಶಿಲ್ಪಗಳಾದ ಶಿವ-ಪಾರ್ವತಿ, ಜೊತೆಗೆ ನಂದಿ, ಗಣೇಶ, ವಾದ್ಯಮೇಳ ದಕ್ಷಿಣದಲ್ಲಿದೆ. ಮಕರದ ಮೇಲೆ ನಿಂತ ಗಂಗೆಯಿದ್ದಾಳೆ. ಕೂರ್ಮದ ಮೇಲೆ ಯಮುನೆ ನಿಂತಿದ್ದಾಳೆ. ಶಿವ-ಪಾರ್ವತಿ ಜೊತೆ ನಂದಿ ಇರುವುದು. ಅಪಸ್ಮಾರದ ಮೇಲೆ ನೃತ್ಯಿಸುತ್ತಿರುವ ನಟರಾಜನಿದ್ದಾನೆ.

ಗರ್ಭಗೃಹದಲ್ಲಿ ಚೌಕ ಶಿವಲಿಂಗವಿದೆ. ಪೂರ್ವ ಗೋಡೆಯಲ್ಲಿ ಕಿರು ಗೂಡಿದೆ. ಭತ್ತಿನಲ್ಲಿ ಅಷ್ಟಮುಖ ಕಮಲವಿದೆ. ದ್ವಾರ ಚೌಕಟ್ಟಿನಲ್ಲಿ ಶೈವ ದ್ವಾರಪಾಲಕರು ಮತ್ತು ಶಾಖೆಗಳ ಅಲಂಕರಣವಿದೆ. ಅಂತರಾಳದಲ್ಲಿ ನಾಲ್ಕು ಕಂಬಗಳಿವೆ. ಮುಂದಿನ ಎರಡು ಕಂಬಗಳ ಮೇಲೆ ಮಕರತೋರಣ ಪಟ್ಟಿಯಿದೆ. ತೋರಣ ಪಟ್ಟಿಕೆಯಲ್ಲಿ ಬದಿಗೆರಡು ಮಕರಗಳಿವೆ. ಅವುಗಳ ಲತಾಬಳ್ಳಿಗಳ ಬಾಲಗಳಿವೆ. ಹಗ್ಗದಂತಹ ತೋರಣ ಮಕರಗಳ ಬಾಯಿಂದ ಬಂದಿವೆ. ಮೇಲೆ ಸಿಂಹ, ಗಂಧರ್ವರಿದ್ದಾರೆ. ಸಭಾಮಂಟಪ ದೊಡ್ಡದಾಗಿದೆ. ನಡುವೆ ದೊಡ್ಡ ಕಂಬಗಳು ಮತ್ತು ಕಿರು ಕಂಬಗಳಿವೆ. ನಡುವಿನ ಭತ್ತಿನಲ್ಲಿ ಕಮಲದ ಅಲಂಕರಣವಿದೆ. ಕಾಲಮಾನ ಸು. ಕ್ರಿ.ಶ. 10ನೆಯ ಶತಮಾನ.

ನನ್ನಯ್ಯನ ಗುಡಿ: ಶಿರವಾಳದ ವಾಯವ್ಯಕ್ಕೆ ಹಳ್ಳದ ಉತ್ತರಕ್ಕೆ ನನ್ನಯ್ಯನ ಗುಡಿಯಿದೆ. ಈ ಗುಡಿಯ ಅಧಿಷ್ಠಾನದ ತರವನ್ನು ಗ್ರಾನೈಟ್ ಶಿಲೆಯಿದ್ದು, ಉಳಿದ ಭಾಗ ಡಾಲರೈಟ್‌ನದು. ತಳಪಾಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪವಿದೆ. ಕಪೋತ ತರದಲ್ಲಿ ಅದರ ಮೇಲಿನ ಎರಡು ತರಗಳಲ್ಲಿ ಅನೇಕ ಕಿರುಶಿಲ್ಪಗಳಿವೆ. ಈ ಮೇಲಿನ ತರದಲ್ಲಿ ಕಾಮ, ಸೂರ್ಯ, ಭೈರವಿ, ನರಸಿಂಹ–ಹಿರಣ್ಯಕಶ್ಯಪರ ಹೋರಾಟ, ನರಸಿಂಹ ಹಿರಣ್ಯಕಶ್ಯಪುವನ್ನು ಕೊಲ್ಲುತ್ತಿರುವುದು, ವಿಷ್ಣು, ಸೂರ್ಯ ಮುಂತಾದ ಚಿತ್ರಗಳಿವೆ. ಭಿತ್ತಿಯಲ್ಲಿ ಸರಳ ಅರೆಗಂಬಗಳ ಸಾಲಿದೆ. ಅದರಲ್ಲಿ ಜಾಲವಾತಾಯನ ಕಿಡಕಿಗಳಿವೆ. ಇದರ ಕಪೋತದ ಕೆಳಗಡೆ ಬಾತುಕೋಳಿ ಕುಬ್ಜರ ಸಾಲಿದೆ.

ಸುಜ್ಞಾನೇಶ್ವರ ದೇವಾಲಯ: ಶಿರಿವಾಳದ ಇನ್ನೊಂದು ದ್ವಿಕೂಟ ಮಾದರಿಯ ದೇವಾಲಯ ಎರಡು ಗರ್ಭಗೃಹಗಳು ತಲಾ ಒಂದಕ್ಕೆ ಒಂದು ಅಂತರಾಳಗಳಿವೆ. ಇವುಗಳಿಗೆ ಒಂದು ಸಭಾಮಂಟಪವಿದೆ. ಸ್ವಲ್ಪ ಅಲ್ಲಲ್ಲಿ ಬದಲಾವಣೆಯಿದೆ. ಪೂರ್ವ ಗರ್ಭಗೃಹ ಚೌಕಾಗಿದೆ. ದ್ವಾರದ ಚೌಕಟ್ಟಿನ ಒಂದು ಶಾಖೆಯಲ್ಲಿ ಕುಳಿತ ವ್ಯಕ್ತಿಗಳು, ನೃತ್ಯಗಾತಿಯರು ಮತ್ತು ವಾದ್ಯಮೇಳಗಳಿವೆ. ಪಶ್ಚಿಮದ ಗರ್ಭಗೃಹವು ಚೌಕಾಗಿದೆ. ಅಲ್ಲೂ ಯಾವ ರೀತಿಯ ಶಿಲ್ಪಗಳಿಲ್ಲ. ಅಂತರಾಳದಲ್ಲಿ ಎರಡು ಕಂಬಗಳಿವೆ. ಸಭಾಮಂಟಪದಲ್ಲಿ ನಾಲ್ಕು ಕಂಬಗಳಿವೆ. ಇಲ್ಲಿಯ ಕಂಬಗಳ ಕಾಂಡದಲ್ಲಿ ಕುಂಭಗಳಿವೆ. ಉದ್ದವಾದ ಅಂಕಣ ಸಭಾಮಂಟಪದ ಉತ್ತರಕ್ಕಿದೆ. ಅದಕ್ಕೆ ಇಳಿಜಾರಾದ ಛತ್ತಿದೆ.

ಈಶ್ವರ ದೇವಾಲಯ: ಶಿರಿವಾಳದ ಈ ದೇವಾಲಯ ಪಶ್ಚಿಮಕ್ಕೆ ಮುಖಮಾಡಿದೆ. ತಳಪಾಯದಲ್ಲಿ ಗರ್ಭಗೃಹ, ಅಂತರಾಳ, ಚತುರಸ್ರಾಕಾರದ ದಾರಿ, ಸಭಾಮಂಟಪ ಮತ್ತು ನಂದಿಗುಡಿಯಿದೆ. ಅಧಿಷ್ಠಾನದಲ್ಲಿ ಉಪಾನ, ದಳಗಳುಳ್ಳ ಜಗತಿ, ಕೆತ್ತನೆಯುಳ್ಳ ತ್ರಿಪಟ್ಟ, ಕುಮುದ, ಮೇಲಿನ ತರದಲ್ಲಿ ಹಿಂಚಾಚುಗಳಿವೆ. ಮುಂಚಾಚಿದ ತರದಲ್ಲಿ ಕಥಾನಕ ಇತ್ಯಾದಿ ಚಿತ್ರಗಳಿವೆ.

ಅವುಗಳಲ್ಲಿ ಮಕರ ತಲೆಗಳು, ಸಿಂಹಗಳು, ಆನೆಗಳು, ಹಂದಿ, ನರಿ, ಯತಿಗಳು, ಮನುಷ್ಯರು ಇತ್ಯಾದಿಗಳಿವೆ. ತ್ರಿಪಟ್ಟ ಕುಮುದದ ಮೇಲಿನ ಕಥಾನಕ ಚಿತ್ರಗಳು ಹೀಗಿವೆ. ಕಾಗೆ-ಕೋಳಿಯನ್ನು ಕರಿ ಸರ್ಪಕೊಂದಿರುವುದು, ಯಕ್ಷ, ಕಿರಾತಾರ್ಜುನೀಯ, ಸೀತಾಪರಣ, ರಾಮದರ್ಶನ ಪಡೆದ ಹನುಮ, ವಾಲಿ ಸುಗ್ರೀವರ ಹೋರಾಟ, ಗಣೇಶ, ಮಹಿಳೆ ತಲೆಯ ಮೇಲೆ ಪುಟ್ಟಿಯನ್ನು ಹೊತ್ತಿರುವುದು, ಬತ್ತಲೆಯವರು, ವೀಣೆಯನ್ನು ಬಾರಿಸುವವಳು, ಕುಳಿತ-ಹಾರುವ ಯಕ್ಷರು, ಗಜಲಕ್ಷ್ಮೀ, ಮಿಥುನ, ಮಂಗ ಹಾವು, ಎರಡು ಸಿಂಹಗಳು, ರಾಜ-4 ಯತಿಗಳು ನೃತ್ಯ ಮತ್ತು ವಾದ್ಯ ಮೇಳದೊಂದಿಗೆ, ಕೋಳಿ-ಗುಬ್ಬಿ, ಮಂಗ ಬಾಲವನ್ನು ಬೆಣೆಯಲ್ಲಿ ಸಿಕ್ಕಿಸಿಕೊಂಡಿರುವುದು, ಸಿಂಹ-ಮೊಲ-ಮೊಸಳೆ, ಗರುಡ-ನಾಗರ ಹೊಡೆದಾಟ, ನರಿ ಕಥೆ, ಮಿಥುನ, ಕತ್ತೆ-ನರಿ, ಮಿಥುನ ಮುಖ್ಯವಾಗಿವೆ. ಉದ್ದ ಪಟ್ಟಿಕೆಯಲ್ಲಿ ಅನೇಕ ಚಿತ್ರಗಳಿವೆ. ಯಕ್ಷರು (8) ಗಿಳಿ, ದಂಪತಿಗಳು, ಬತ್ತಲೆ ಸ್ತ್ರೀ (6) ಮಂಗ-ಮೊಸಳೆ, ಮಂಗ-ಹಾವು, ಬತ್ತಲೆ ಮನುಷ್ಯ(1), ಗಣೇಶ (2), ಸಿಂಹಗಳು (3), ಪುಷ್ಪಗಳು (20) ಹಂದಿ (6), ಹಾವು, ನಂದಿ, ಪಕ್ಷಿ, ಹಾರುವ ಗಂಧರ್ವರು, ಆನೆ, ಮಿಥುನ, ಮಂಗ-ಸ್ತ್ರೀ, ಮಂಗ, ಮುಂಗುಸಿಗಳು, ಜೋಡು ಮಂಗಗಳು ಇತ್ಯಾದಿಗಳಿವೆ. ಗರ್ಭಗೃಹದಲ್ಲಿ ಯಾವುದೇ ವಿಗ್ರಹಗಳಿಲ್ಲ. ಆದರೆ ಚೌಕ ಪೀಠವಿದೆ. ಅಲಂಕೃತ ದ್ವಾರ ಚೌಕಟ್ಟಿನ ಲಲಾಟದಲ್ಲಿ ಗಜಲಕ್ಷ್ಮೀ ಇದ್ದಾಳೆ. ಅಂತರಾಳದ ಕಂಬದಲ್ಲಿ ಮಕರಪಟ್ಟಿಯಿದೆ. ಸಭಾಮಂಟಪದಲ್ಲಿ ಚೌಕಪಟ್ಟಿಕೆಗಳುಳ್ಳ ನಾಲ್ಕು ಕಂಬಗಳಿವೆ. ನಡುವಿನ ಛತ್ತಿನಲ್ಲಿ ಎದ್ದು ಕಾಣಿಸುವ ಕಮಲವಿದೆ. ದೊಡ್ಡದಾದ ಶೈವದ್ವಾರಪಾಲಕರಿದ್ದಾರೆ.

ಕದಂಬರೇಶ್ವರ ದೇವಾಲಯ: ಶಿರಿವಾಳದ ಪೂರ್ವಕ್ಕೆ ಮುಖಮಾಡಿದ ಈ ದೇವಾಲಯವನ್ನು ಕೊಠಡಿಯನ್ನಾಗಿ ಪರಿವರ್ತಿಸುವುದು ದುರ್ದೈವದ ಸಂಗತಿ. ತಳಪಾಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ಚತುಷ್ಟಾಕಾರದ ದಾರಿ ಮತ್ತು ಸಭಾಮಂಟಪಗಳಿವೆ. ಅದಿಷ್ಠಾನದಲ್ಲಿ ಉಪಾನ, ಜಗತಿ, ತ್ರಿಪಟ್ಟ, ಕುಮುದ, ಕಪೋತಗಳಿವೆ. ಭಿತ್ತಿಯಲ್ಲಿ ಸರಳ ಅರೆಗಂಬಗಳಿವೆ. ಕಪೋತದ ಕೆಳಗಡೆ ಬಾತುಕೋಳಿ, ಆನೆಗಳು, ಮಂಗಗಳು, ಮಿಥುನ, ಮನುಷ್ಯ ಮತ್ತು ಸ್ತ್ರೀಯರ ಇತ್ಯಾದಿ ಕಿರುಚಿತ್ರಗಳಿವೆ. ಗರ್ಭಗೃಹದಲ್ಲಿ ವಿಗ್ರಹಗಳಿಲ್ಲ, ಅಂತರಾಳದ ಮುಂದಿನ ಕಂಬಗಳಲ್ಲಿ ಮಹಿಷಾಸುರ ಮರ್ದಿನಿ ಮತ್ತು ಗಣೇಶನ ಶಿಲ್ಪಗಳಿವೆ. ಸಭಾಮಂಟಪದಲ್ಲಿ ನಾಲ್ಕು ಕಂಬಗಳಿವೆ. ಇನ್ನೆರಡು ವೃತ್ತಾಕಾರದ ಕಂಬಗಳೂ ಅಲ್ಲಿವೆ. ಸಭಾಮಂಟಪ ಮತ್ತು ನವರಂಗದ ನಡುವೆ ಒಂದು ಪ್ರವೇಶ ದಾರಿಗೆ ಬದಿಗಳಲ್ಲಿ ಎರಡು ಪ್ರವೇಶ ದ್ವಾರಗಳಿರುವುದು ವಿಶೇಷ.

ಜೋಡಿ ಹನುಮನ ಗುಡಿ: ಶಿರಿವಾಳದ ಈ ದೇವಾಲಯದಲ್ಲಿ ಈ ಕಾಲದ ನಾಲ್ಕು ಕಂಬ, ದ್ವಾರದ ಚೌಕಟ್ಟು, ಎಂಟು ಅರೆಗಂಬ ಇತ್ಯಾದಿಗಳನ್ನು ಬಳಸಲಾಗಿದೆ.

ಕುಂಬಾರ ಗುಡಿ: ಶಿರಿವಾಳದ ಈ ದೇವಾಲಯ ಊರ ಹಳ್ಳದ ದಂಡೆಯ ಮೇಲಿದ್ದು ಅದನ್ನು ಕುಂಬಾರರು ಮನೆಯನ್ನಾಗಿ ಮಾಡಿಕೊಂಡಿದ್ದಾರೆ.ಅಳಿದುಳಿದ ಭಾಗದಲ್ಲಿ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿವೆ. ಅದೀಷ್ಠಾನದಲ್ಲಿ ಉಪಾನ, ಜಗತಿ, ಎತ್ತರ, ಪದ್ಮ ಅಲಂಕರಣ, ತ್ರಿಪಟ್ಟ, ಕುಮುದ ಮತ್ತು ಕಪೋತಗಳಿವೆ.ಭಿತ್ತಿಯಲ್ಲಿ ಸರಳ ಅರೆಗಂಬಗಳಿವೆ. ಇಲ್ಲಿ ಇಟ್ಟಿಗೆಯನ್ನು ಬಳಸಿದ್ದು, ಅದರಲ್ಲಿ ಅರೆಗಂಬದ ಅಲಂಕರಣವಿರುವುದು ಕಾಣುತ್ತದೆ. ಗರ್ಭಗೃಹ ಚೌಕಾಗಿದ್ದು, ಅದರಲ್ಲಿ ಮೂರು ದೇಶಕೋಷ್ಠಗಳಿವೆ. ದ್ವಾರ ಚೌಕಟ್ಟಿನಲ್ಲಿ ಶಾಖೆಗಳ ಅಲಂಕರಣ ದ್ವಾರಪಾಲಕರಿದ್ದಾರೆ. ದ್ವಾರಪಾಲಕರ ವಸ್ತ್ರಾಭರಣ ಶೈಲಿ ಈ ಕಾಲದ ಮಾದರಿಯಲ್ಲಿವೆ. ಕಪೋತದ ಇಳಗಡೆ ಬಾತುಕೋಳಿಗಳ ಸಾಲಿದೆ. ಹೊಸ್ತಿಲ ಅಂಚಿನಲ್ಲಿ ಮುಂಚಾಚಿದ ಆನೆಗಳಿವೆ. ತೆರೆದ ಅರ್ಧಮಂಟಪವಿದೆ. ಅರೆಬಂಬಗಳಲ್ಲಿ ಮಹಿಷಾಸುರ ಮರ್ದಿನಿ, ಗಣೇಶ, ಯಕ್ಷ ಇತ್ಯಾದಿ ಶಿಲ್ಪಗಳಿವೆ. ಸಭಾಮಂಟಪದಲ್ಲಿ ನಾಲ್ಕು ಕಂಬಗಳಿವೆ. ನಡುವಿನ ಛತ್ತಿನಲ್ಲಿ ವೃತ್ತಾಕಾರದ ಕಮಲವನ್ನು ಚೌಕಾದ ಉಬ್ಬು ಅಲಂಕರಣದಲ್ಲಿ ಚಿತ್ರಿಸಲಾಗಿದೆ. ಇಲ್ಲಿ ಗೋಡೆಯ ಒಮದು ಕಡೆಗೆ ಇಟ್ಟಿಗೆಯನ್ನು ಬಳಸಲಾಗಿದೆ.

ಶಿರಿವಾಳದ ಊರ ಹೊರಗಿನ ಪೂರ್ವಕ್ಕೆ ಮುಖಮಾಡಿದ ಈ ದೇವಾಲಯ ತಳಪಾಯದಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ಅಪರೂಪದ ಸಭಾಮಂಟಪಗಳಿವೆ. ಇದಕ್ಕೆ ಉಪಪೀಠವಿದ್ದು ಅಲ್ಲಿ ಉಪಾನ, ಜಗತಿ ಮತ್ತು ಹಿಂಚಾಚು ಕಂಠವಿದೆ. ಇದರ ಮೇಲಿನ ಅಧಿಷ್ಠಾನಕ್ಕೆ ಉಪಾನ ಜಗತಿ, ತ್ರಿಪಟ್ಟ, ಕುಮುದ ಮತ್ತು ಕಪೋತಗಳಿವೆ. ಭಿತ್ತಿಯಲ್ಲಿ ಅರೆಗಂಬಗಳಿವೆ. ಅರೆಗಂಬದ ಮೇಲ್ಗಡೆಯ ಕೆತ್ತನೆಯಲ್ಲಿ ಸಿಂಹಗಳು, ಹಂಸಗಳು, ನದಿ, ಆನೆ, ಮನುಷ್ಯರು, ದೇವತೆಗಳಾದ ನರಸಿಂಹ ಹಿರಣ್ಯ ಕಶಪುಗಳ, ಹೋರಾಟ, ಶಿವ-ಪಾರ್ವತಿ, ರತಿ-ಮುನ್ಮಥ, ಸೂರ್ಯ, ಚಂದ್ರ, ನೃತ್ಯಗಾರರು, ಮಹಿಷಾಸುರಮರ್ಧಿನಿ, ಗಣೇಶ ಇತ್ಯಾದಿ ಚಿತ್ರಗಳಿವೆ. ಕಪೋತದ ಕಾಲಗಡೆ ಸಿಂಹಗಳು, ಮಂಗಗಳು, ಹಾವು, ಮಂಗ-ಹಾವು-ಹಂಸಗಳಿವೆ. ಗರ್ಭಗೃಹ ಚೌಕಾಗಿದೆ. ಇದರ ದ್ವಾರದ ಚೌಕಟ್ಟಿನಲ್ಲಿ ಶಾಖೆಗಳ ಅಲಂಕರಣವಿದೆ. ಅರ್ಧಮಂಟಪದ ಮುಂದಿನ ಎರಡು ಕಂಬಗಳಲ್ಲಿ ಅಲಂಕರಣವಿದೆ. ಮುಂದೆ ಚರುರಸ್ರಾಕಾರದ ದಾರಿಯುಇದೆ. ಸಭಾಮಂಟಪದಲ್ಲಿ ನಾಲ್ಕು ಕಂಬಗಳಿವೆ. ನಡುವಿನ ಛತ್ತಿನಲ್ಲಿ ಕಮಲ ಉಬ್ಬುಶಿಲ್ಪವಿದೆ. ನಡುವೆ ಅಷ್ಟಭುಜ ನಟರಾಜನು ಅಪಸ್ಮಾರಣ ಮೇಲೆ ನಿಂತು ನೃತ್ಯ ಮಾಡಿತ್ತಿರುವನು. ತಲಾ ಒಂದರ ಒಳ ದಳದಲ್ಲಿ ವಾದ್ಯಮೇಳದವರಿದ್ದರೆ, ಹೊರಗಡೆ ದಂಪತಿ ಸಮೇತ ದಿಕ್ಪಾಲಕರಿದ್ದಾರೆ. ಆನೆ ಮೇಲೆ ಇಂದ್ರ(ಪೂರ್ವ),ಟಗರಿನ ಮೇಲೆ ಅಗ್ನಿ (ಆಗ್ನೇಯ), ಕೋಣದ ಮೇಲೆ ಯಮ (ದಕ್ಷಿಣ), ನಿರುತಿ ಮನುಷ್ಯನ ಮೇಲೆ (ನೈಋತ್ಯ), ಮಕರದ ಮೇಲೆ

ವರುಣ (ಪಶ್ಚಿಮ), ವಾಯು ಕುದುರೆಯ ಮೇಲೆ (ವಾಯುವ್ಯ) ಕುಬೇರ ಮೇಕೆಯ ಮೇಲೆ (ಉತ್ತರ) ಮತ್ತು ನಂದಿಯ ಮೇಲೆ ಈಶಾನ (ಈಶಾನ್ಯ)ರ ಶಿಲ್ಪಗಳಿವೆ. ಸಭಾಮಂಟಪ ತಳಪಾಯ ಅಪರೂಪದ್ದು. ಇದರ ಉತ್ತರ, ದಕ್ಷಿಣ ಮತ್ತು ಪೂರ್ವದ ಗೋಡೆಗಳ ನಡುವಿನ ಭಾ ಆಳವಾದ ತೆರೆದ ಅರ್ಧಮಂಟಪಗಳಿರುವುದು ಅಪರೂಪದ್ದಾಗಿದೆ. ಗೋಡೆಗಳಲ್ಲಿ ಜಾಲವಾತಾಯನಗಳಿವೆ.

ಸಿದ್ಧೇಶ್ವರ ದೇವಾಲಯ: ಶಿರಿವಾಳ ಪ್ರಮುಖ ದೇವಾಲಯವೆಂದರೆ ಸಿದ್ಧೇಶ್ವರ. ಅಲ್ಲಲ್ಲಿ ಹಾಳಾದ ತಳಪಾಯವುಳ್ಳ ಈ ದೇವಾಲಯದಲ್ಲಿ ಐದು ಗರ್ಭಗೃಹಗಲಿವೆ. ಪ್ರವೇಶಕ್ಕೆ ಮಹಾದ್ವಾರ ಉತ್ತರಕ್ಕಿದೆ. ತಲಾ ಒಂದು ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿವೆ. ನಡುವೆ ಒಂದು ಗರ್ಭಗೃಹವಿದ್ದು ಅದು ಸರ್ವತೋಭದ್ರ ಮಾದರಿಯದ್ದಾಗಿದೆ. ಪೂರ್ವ ಮತ್ತು ಪಶ್ಚಿಮದ ಸಭಾಮಂಟಪಗಳಿಗೆ ಮುಖಮಂಟಪಗಳಿವೆ. ಅದಿಷ್ಠಾನ ಅರ್ಧಭಾಗ ಹೂತಿದೆ. ಸಭಾಮಂಟಪಗಳ ಭಿತ್ತಿಯಲ್ಲಿ ಅರೆಗಂಬಗಳಿವೆ. ನಡುವಿನ ಗರ್ಭಗೃಹದಲ್ಲಿ ಶಿವಲಿಂಗವನ್ನು ಚೌಕಾಕಾರದ ಪೀಠದಲ್ಲಿ ಪ್ರತಿಷ್ಠಾಪಿಸಲಾಗಿದೆ. ಇದಕ್ಕೆ ಬ್ರಹ್ಮಸೂತ್ರವಿರುವುದಿಲ್ಲ. ಭಿತ್ತಿನಲ್ಲಿ ಕಮಲದ ಅಲಂಕರಣವಿದೆ. ಕಂಬಗಳಲ್ಲಿ ವಿಭಿನ್ನ ದೇವ-ದೇವತೆಗಳ ಕಿರುಶಿಲ್ಪಗಳಿವೆ. ಈ ದೇವಾಲಯದ ಬದಿಗಲಲ್ಲಿ ವಾಯುವ್ಯ ಮತ್ತು ನೈರುತ್ಯಕ್ಕೆ ಎರಡು ಚಿಕ್ಕ ಗುಡಿಗಳಿವೆ.

ಮದ್ನೂರು (ಸುರಪುರ ತಾ.): ಬಸವಣ್ಣನವರಿಗಿಂತ ಹಿರಿಯ ಶಿವಶರಣ ಜೇಡರ ದಾಸಿಮಯ್ಯನ ಜನ್ಮಸ್ಥಳ. ಈತನ 100ಕ್ಕೂ ಹೆಚು ವಚನಗಳಲ್ಲಿ 'ರಾಮನಾಥ' ಎಂಬ ಅಂಕಿತನಾಮವಿದೆ. ವಾಸತಾಣವೆನಿಸಿದ ಮುದನೂರು ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲೂಕಿನಲ್ಲಿದೆ. ಈ ಊರನ್ನು ಹಿರೇಮದ್ನೂರು ಎಂದು ಕರೆಯುವರು ಈ ಊರು ಸುರಪುರದಿಂದ ವಾಯುವ್ಯಕ್ಕೆ ಸುಮಾರು 35ಕಿ.ಮೀ. ದೂರದಲ್ಲಿದೆ ಈ ಊರು ಈ ಮೊದಲು ಸಗರ 300 ನಾಡಿನಲ್ಲಿತ್ತು. ಈ ಸ್ಥಳ ಎಳಮೇಲಸಿಂಹ ಪರ್ಷೆಯ ಅಭಿನವಪಾಶು ಪತಕೇಂದ್ರ. ಇದರ ಮೂಲಪುರುಷ ಮಲೆಯಾಳ ಪಂಡಿತ ಈ ಊರಿನವನೇ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಈ ಊರು ಹೆಚ್ಚು ಪ್ರಸಿದ್ದಿಗೆ ಬಂದಿತು. ಈ ಊರಿನಲ್ಲಿ ಸುಮಾರು 21 ಶಾಸನಗಳಿವೆ. ಶಿಲ್ಪ, ದೇವಾಲಯ, ಪುಷ್ಕರಣಿಗಳಿವೆ. ಅವುಗಳಲ್ಲಿ ರಾಮಲಿಂಗೇಶ್ವರ ದೇವಾಲಯ ಮತ್ತು ಪುಷ್ಕರಣಿ ರಾಮತೀರ್ಥ ಮಹತ್ವದೆನಿಸಿವೆ. ರಾಮಲಿಂಗೇಶ್ವರ ದೇವಾಲಯವು ವಿಶಾಲ ಸಮುಚ್ಚಯದಿಂದ ಒಳಗೊಂಡಿದ್ದು ಅದರ ಸುತ್ತಲೂ ಒಟ್ಟು ಐದು ಕಿರು ದೇವಾಲಯಗಳಿವೆ. ಈ ಊರಿನಲ್ಲಿ ರಾಮತೀರ್ಥ. ಲಕ್ಷ್ಮಣ ತೀರ್ಥ, ಪಾಂಡವತೀರ್ಥ, ಸಂಗಮತೀರ್ಥ, ಹಾಲಿನ ತೀರ್ಥ ಮತ್ತು ಸಕ್ಕರೆತೀರ್ಥಗಳೆಂಬ ಪುಷ್ಕರಣಿಗಳನ್ನು ಅವುಗಳಲ್ಲಿ ರಾಮತೀರ್ಥವೇ ಮಹತ್ವದ್ದು. ಈ ರಾಮತೀರ್ಥದ ಪಶ್ಚಿಮ ಬದಿಯಲ್ಲಿ ಹೊಂದಿಕೊಂಡು ಮೂರು

ದೇವಾಲಯಗಳಿದ್ದರೆ, ನೈರುತ್ಯ ಬದಿಗೆ ಹೊಂದಿಕೊಂಡು ರಾಮಲಿಂಗೇಶ್ವರ ದೇವಾಲಯದ ಸಂಕೀರ್ಣವಿದೆ. ಈ ಮೂರು ದೇವಾಲಯಗಳಲ್ಲಿ ಸಿದ್ಧಲಿಂಗ ದೇವಾಲಯ ಮಹತ್ವದ್ದು. ಈ ದೇವಾಲಯ ಮತ್ತು ಉತ್ತರ ಬದಿಗಿನ ದೇವಾಲಯಗಳನ್ನು ಬಳಸಿಕೊಂಡು ಕೆಲವರು ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ.

ರಾಮಲಿಂಗೇಶ್ವರ ದೇವಾಲಯ: ಅರ್ಧಮದ್ದೂರು ಗ್ರಾಮದ ಪೂರ್ವ ಮಹಾದ್ವಾರದ ಪಶ್ಚಿಮಕ್ಕೆ ಪೂರ್ವ–ಪಶ್ಚಿಮಾಭಿಮುಖವಾಗಿ ರಾಮಲಿಂಗೇಶ್ವರ ದೇವಾಲಯವಿದೆ. ಅದರ ತಳಪಾಯದಲ್ಲಿ ಎದುರು–ಬದುರಾಗಿ ಎರಡು ಗರ್ಭಗೃಹಗಳಿವೆ. ತಲಾ ಒಂದು ಗರ್ಭಗೃಹಕ್ಕೆ ಅರ್ಧ ಮಂಟಪವಿದ್ದು, ಇವುಗಳ ಮಧ್ಯದಲ್ಲಿ ಒಂದು ನವರಂಗವಿದೆ. ಪಶ್ಚಿಮದ ಗರ್ಭಗೃಹದಲ್ಲಿ ಒಂದು ಶಿವಲಿಂಗವಿದೆ. ಅದನ್ನು ರಾಮಲಿಂಗೇಶ್ವರ ಎಂದು ಕರೆಯುವರು. ಅದು ಆಧುನಿಕ ಕಾಲದ್ದಾಗಿದೆ. ಈ ಗರ್ಭಗೃಹದ ಬಾಗಿಲ ಚೌಕಟ್ಟಿನಲ್ಲಿ ಕೆಳಗಡೆ ಶೈವ ಮಹಾದ್ವಾರ ಪಾಲಕರು, ಲಲಾಟದಲ್ಲಿ ಗಜಲಕ್ಷ್ಮಿಯ ಚಿತ್ರಗಳಿವೆ. ಈ ಗರ್ಭಗೃಹದ ಮುಂದೆ ಮಾತ್ರ ಎರಡು ಸ್ತಂಭಗಳುಳ್ಳ ಅರ್ಧಮಂಟಪವಿದೆ. ಈ ಸ್ತಂಭಗಳ ಮೇಲೆ ಸುಂದರ ಕೆತ್ತನೆಯ ಮಕರ ತೋರಣ ಪಟ್ಟಿಕೆಯಿದೆ. ಈ ಪಟ್ಟಿಕೆಯ ಮಧ್ಯೆ ಗಜಲಕ್ಷ್ಮಿ, ಬದಿಗಳಲ್ಲಿ ಕುಳಿತ ಪದ್ಮನಿಧಿಯರಿದ್ದಾರೆ. ಈ ಸ್ತಂಭಗಳಿಗೆ ಪೀಠಗಳಿವೆ. ಅವುಗಳ ಮೇಲಿನ ಕಾಂಡಭಾಗ ವೃತ್ತಾಕಾರದಲ್ಲಿದ್ದು ಅಲ್ಲಿ ಮಣಿ ಮುತ್ತಿನ ಹಾರಗಳಲ್ಲಿ ವಿಭಿನ್ನ ಚಿತ್ರಗಳಿವೆ. ಕೆಳಗಿನ ಕಾಂಡಭಾಗ ಚೌಕಾಗಿದೆ.

ನವರಂಗದಲ್ಲಿ ನಾಲ್ಕು ಕಂಬಗಳಿವೆ. ಅದರ ಮಧ್ಯದಲ್ಲಿ ರಾಮಲಿಂಗೇಶ್ವರನಿಗೆ ಎದುರು ಮುಖಮಾಡಿ ಕುಳಿತ ನಂದಿಯಿದೆ. ಒಂದು ಕಡೆ ಉಮಾಮಹೇಶ್ವರ, ಗಣೇಶ ಮತ್ತು ಪಾದಪೀಠಗಳುಳ್ಳ ಶಿಲ್ಪಗಳಿವೆ. ಎದುರಿಗಿನ ಗರ್ಭಗೃಹದಲ್ಲಿ ಜೇಡರ ದಾಸಿಮಯ್ಯ ಶರಣರ ಆಧುನಿಕ ಶಿಲ್ಪವಿದೆ. ಅದರ ಅರ್ಧ ಮಂಟಪದ ಎಡಗೋಡೆಯಲ್ಲಿ ಶಾಸನವಿದೆ. ದಾಸಿಮಯ್ಯ ಗರ್ಭಗೃಹದ ದಕ್ಷಿಣ ಮತ್ತು ಉತ್ತರ ಮುಖಗಳ ಗೋಡೆಗಳಲ್ಲಿ ದೇವಕೋಷ್ಠಗಳಿದ್ದು ಅವುಗಳಲ್ಲಿ ಕ್ರಮವಾಗಿ ಮಹಿಷಾಸುರ ಮರ್ದಿನಿ ಮತ್ತು ನಟರಾಜರ ಶಿಲ್ಪಗಳಿವೆ. ಈ ದೇವಾಲಯಕ್ಕೆ ಮೂಲ ಅಧಿಷ್ಠಾನ ಭಾಗ ಹಾಗೆಯೇ ಉಳಿದುಕೊಂಡಿದೆ. ಈ ದೇವಾಲಯದ ಭಿತ್ತಿ, ಶಿಖರ ಮತ್ತು ಛತ್ತುಗಳನ್ನು ಸುಮಾರು ಒಂದು ಶತಮಾನದ ಹಿಂದೆ ಜೀರ್ಣೋದ್ದಾರಗೊಳಿಸಲಾಗಿದೆ. ರಾಮಲಿಂಗೇಶ್ವರ ದೇವಾಲಯದ ಗರ್ಭಗೃಹ, ಬಾಗಿಲ ಚೌಕಟ್ಟು (ಲಲಾಟ ಪಟ್ಟಿ ಸೇರಿ), ಅರ್ಧಮಂಟಪದ ಸ್ತಂಭ ಮಕರತೋರಣ, ದೇವಕೋಷ್ಠಗಳಲ್ಲಿರುವ ನಟರಾಜ ಮತ್ತು ಮಹಿಷಾಸುರ ಮರ್ದಿನಿ ಶಿಲ್ಪಗಳು ಶೈಲಿಯ ದೃಷ್ಟಿಯಿಂದ ಇವುಗಳ ಕಾಲ ಸುಮಾರು ಕ್ರಿ.ಶ. 10ನೇ ಶತಮಾನದ ಅಂತ್ಯ ಭಾಗದ್ದಾಗಿದೆ. ಅಲ್ಲಿಯ ಸಪ್ತಮಾತೃಕೆ, ಗಣೇಶ, ಪಾದಮುದ್ರೆಗಳು

ಸುಮಾರು ಕ್ರಿ.ಶ. 12ನೇ ಶತಮಾನದ್ದಾಗಿದೆ. ಉಳಿದ ಭಾಗಗಳಾದ ಭಿತ್ತಿ, ಛತ್ತು, ಶಿಖರಗಳು ಸುಮಾರು ಒಂದು ಶತಮಾನ ಹಳೆಯವು.

ಈ ದೇವಾಲಯದ ಹೊರಗಡೆ ಮತ್ತು ರಾಮತೀರ್ಥದ ಹತ್ತಿರ ದೇವಾಲಯದ ಶೈವ ದ್ವಾರಪಟ್ಟಿಕೆಗಳಿವೆ. ಅವುಗಳ ಬುಡದಲ್ಲಿ ಶೈವ ದ್ವಾರಪಾಲಕ ತ್ರಿಭಂಗಿಯಲ್ಲಿ ನಿಂತಿದ್ದಾನೆ. ಕೈಗಳಲ್ಲಿ ಅಭಯ, ನಾಗ, ತ್ರಿಶೂಲ, ಡಮರು ಅಥವಾ ಗದೆಗಳನ್ನು ಹಿಡಿದಿದ್ದಾನೆ. ಬದಿಗಳಲ್ಲಿ ಕಮಲ ಮತ್ತು ಕುಂಡಲಗಳನ್ನು ಹಿಡಿದು ಸೇವಕಿ ಯರಿಬ್ಬರು ನಿಂತಿದ್ದಾರೆ. ವಸ್ತ್ರಾಭರಣ ಧರಿಸಿದ್ದಾರೆ. ಮೇಲೆ ಸರಳ ನಾಲ್ಕು ಶಾಖೆಗಳಿವೆ. ಇದರ ಪಕ್ಕದಲ್ಲಿ ಮಕರ ತೋರಣಪಟ್ಟಿಕೆ ಇದೆ. ಈ ಪಟ್ಟಿಕೆ ಯಲ್ಲಿ ಮಕರಗಳ ಬಾಯಿಂದ ಬಂದ ದಪ್ಪನೆಯ ಲತೆಯು ನಾಲ್ಕು ಕಮಾನಿನಂತೆ ಏಕಸಾಲಿನಲ್ಲಿದೆ. ಮಕರಗಳ ಮೇಲೆ ಸವಾರರು ಮತ್ತು ಕಮಾನುಗಳ ನಡುವೆ ಕುಬ್ಜರು ಕುಳಿತಿದ್ದಾರೆ. ಅದರ ಮೇಲೆ ಏಕಸಾಲಿನಲ್ಲಿ ಲತಾಸುರುಳಿಯ ಅಲಂಕಾರವಿದೆ.

ಪ್ರಾಚೀನ ಜನವಸತಿ ಪುರಾವೆಗಳು: ಮುದ್ದೂರಿನ ರಾಮಲಿಂಗೇಶ್ವರ ದೇವಾಲಯದ ದಕ್ಷಿಣ ಪ್ರವೇಶದ ಹೊರಭಾಗದಲ್ಲಿ ಹೊಸದಾಗಿ ಕಟ್ಟಡ ಕಟ್ಟಲು ಅಲ್ಲಲ್ಲಿ ಆಳವಾಗಿ ಗುಂಡಿಗಳನ್ನು ತೆಗೆದು ಕಾಂಕ್ರೀಟ್ ಕಂಬಗಳನ್ನು ಸಾಲಾಗಿ ನಿಲ್ಲಿಸಲಾಗಿದೆ. ಈ ಗುಂಡಿಗಳಲ್ಲಿ ಸುಮಾರು ಒಂದು ಮೀಟರ್ ಆಳದಲ್ಲಿ ಹೆಚ್ಚು ಗಡಿಗೆ–ಮಡಿಕೆಗಳಿವೆ. ಅವುಗಳ ಲಕ್ಷಣಗಳು ಸುಮಾರು 1ರಿಂದ 2ನೇ ಶತಮಾನಕ್ಕೆ ಸೇರಿವೆ. ಹೀಗಾಗಿ ಈ ಸ್ಥಳದ ಪ್ರಾಚೀನತೆಯು ಸುಮಾರು 2ನೇ ಶತಮಾನವೆಂದು ಹೇಳಬಹುದು.

ರಾಮಲಿಂಗೇಶ್ವರನ ದೇವಾಲಯ ಸಂಕೀರ್ಣದಲ್ಲಿರುವ ಕಿರು ದೇವಾಲಯಗಳು: ಮುದ್ದೂರಿನ ರಾಮಲಿಂಗೇಶ್ವರ ದೇವಾಲಯದ ಹೊರಭಾಗದ ನಾಲ್ಕು ಮೂಲೆಗಳಲ್ಲಿ ವಿಭಿನ್ನ ಅಳತೆಯ ಐದು ದೇವಾಲಯಗಳಿವೆ.

ಶಿವ ದೇವಾಲಯ: ಮುದ್ದೂರಿನ ಮೊದಲನೆಯ ದೇವಾಲಯವು ರಾಮಲಿಂಗೇಶ್ವರ ದೇವಾಲಯದ ಪಶ್ಚಿಮ ಗರ್ಭಗೃಹದ ಆಗ್ನೇಯಕ್ಕೆ ಇದೆ. ಅದರ ತಳಪಾಯದಲ್ಲಿ ಕೇವಲ ಗರ್ಭಗೃಹ ಮತ್ತು ಅರ್ಧ ಮಂಟಪಗಳಿವೆ. ಅದಕ್ಕೆ ಎತ್ತರವಾದ ಅಧಿಷ್ಠಾನವಿದೆ. ಗರ್ಭಗೃಹದಲ್ಲಿರುವ ಶಿವಲಿಂಗದ ಮೇಲೆ ಸುಮಾರು ಕ್ರಿ.ಶ.12ನೇ ಶತಮಾನದ ಬ್ರಹ್ಮಸೂತ್ರವಿದೆ. ಶಿವಲಿಂಗದ ಪೀಠ ಮಾತ್ರ ಎರಡು ರೀತಿಯಲ್ಲಿದೆ. ಅದರ ದ್ವಾರ ಚೌಕಟ್ಟಿನಲ್ಲಿ ಶೈವ ದ್ವಾರಪಾಲಕರು ಮತ್ತು ಲಲಾಟದಲ್ಲಿ ಗಜಲಕ್ಷ್ಮಿಯರಿದ್ದಾರೆ. ಅದಕ್ಕೂ ಆಧುನಿಕ ಶಿಖರವಿದೆ. ಈ ದೇವಾಲಯದ ಶಿಲ್ಪಭಾಗದಲ್ಲಿ ಮೂಲ ಭಿತ್ತಿಭಾಗ ಮತ್ತು ಅಧಿಷ್ಠಾನಗಳು ಉಳಿದಿವೆ. ಈ ದೇವಾಲಯದ ಉದ ಭಿತ್ತಿಬಳಿಾಗ ಮತ್ತು ಶಿಖರಗಳನ್ನು ಒಂದು ಶತಮಾನದ ಹಿಂದೆ ಜೀರ್ಣೋದ್ದಾರ ಮಾಡಲಾಗಿದೆ. ಸುಮಾರು ಕ್ರಿ.ಶ. 11 ರಿಂದ 12ನೇ ಶತಮಾನ. ಮುದ್ದೂರಿನ

ಎರಡನೆಯ ದೇವಾಲಯವು ರಾಮಲಿಂಗೇಶ್ವರ ದೇವಾಲಯದ ಪೂರ್ವ ಗರ್ಭಗೃಹದ ಹೊರಗಡೆ ಈಶಾನ್ಯಕ್ಕಿದೆ. ಅದು ಹೆಚ್ಚು ಶಿಥಿಲಾವಸ್ಥೆಯಲ್ಲಿದೆ. ಅದರಲ್ಲಿ ಸುಮಾರು ಕ್ರಿ.ಶ. 10ನೇ ಶತಮಾನದ ಬಾಗಿಲು ಚೌಕಟ್ಟು ತುಂಡು ನಂದಿ ಇತ್ಯಾದಿಗಳಿವೆ. ಮುದ್ದೂರಿನ ಮೂರನೆಯ ದೇವಾಲಯವು ರಾಮಲಿಂಗೇಶ್ವರದ ಪಶ್ಚಿಮ ಗರ್ಭಗೃಹದ ಹೊರಭಾಗದ ವಾಯುವ್ಯದಲ್ಲಿದೆ. ಅದಕ್ಕೂ ತಳಪಾಯದಲ್ಲಿ ಗರ್ಭಗೃಹ ಮತ್ತು ಅರ್ಧಮಂಟಪಗಳಿವೆ. ಗರ್ಭಗೃಹದಲ್ಲಿ ಯಾವ ಮೂರ್ತಿಗಳಿಲ್ಲ. ಅದರ ಬಾಗಿಲು ಚೌಕಟ್ಟಿನಲ್ಲಿ ಶೈವ ದ್ವಾರಪಾಲಕರು, ಲಲಾಟದಲ್ಲಿ ಗಜಲಕ್ಷ್ಮಿಯರಿದ್ದಾರೆ.

ಕಾಲ: ಸುಮಾರು ಕ್ರಿ.ಶ. 10ನೇ ಶತಮಾನದ ಕೊನೆಯ ಭಾಗ. ಈ ದೇವಾಲಯದ ಮೇಲೆ ಮನೆಯ ಗೋಡೆಯನ್ನು ಕಟ್ಟಲಾಗಿದೆ. ಮುದ್ದೂರಿನ ನಾಲ್ಕನೆಯ ಕಿರು ದೇವಾಲಯ ರಾಮಲಿಂಗೇಶ್ವರ.ಪಶ್ಚಿಮ ಗರ್ಭಗೃಹದ ಪಶ್ಚಿಮ ಹೊರಭಾಗದಲ್ಲಿದೆ. ಅದರ ತಳಪಾಯದಲ್ಲಿ ಗರ್ಭಗೃಹ ಮತ್ತು ಶಿಥಿಲಾವಸ್ಥೆಯ ಅರ್ಧ ಮಂಟಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅದರ ಬಾಗಿಲು ಚೌಕಟ್ಟಿನಲ್ಲಿ ಸೇವಕಿಯರುಳ್ಳ ಶೈವದ್ವಾರಪಾಲಕರು ಮತ್ತು ಲಲಾಟದಲ್ಲಿ ಗಜಲಕ್ಷ್ಮಿಯರಿದ್ದಾರೆ. ಸುಮಾರು ಕ್ರಿ.ಶ. 12ನೇ ಶತಮಾನ. ಇದು ಹೆಚ್ಚು ಜೀರ್ಣೋದ್ದಾರಗೊಂಡಿದೆ. ಮುದ್ದೂರಿನ ಐದನೆಯ ಕಿರು ದೇವಾಲಯವು ರಾಮಲಿಂಗೇಶ್ವರ ಪಶ್ಚಿಮ ಗರ್ಭಗೃಹದ ನೈರುತ್ಯದಲ್ಲಿದೆ. ಈ ದೇವಾಲಯದ ಹೊರಗಡೆ ಎರಡು ಕನ್ನಡ ಶಾಸನಗಳಿವೆ. ಈ ದೇವಾಲಯದ ತಳಪಾಯದಲ್ಲಿ ಗರ್ಭಗೃಹ ಮತ್ತು ಅರ್ಧಮಂಟಪಗಳಿವೆ. ಗರ್ಭಗೃಹದ ಹಿಂದಿನ ಗೋಡೆಯಲ್ಲಿ ತ್ರಿಮೂರ್ತಿಗಳುಳ್ಳ ಶಿಲ್ಪವಿದೆ. ಬದಿಗೆ ತುಂಡಾದ ಉಮಾಮಹೇಶ್ವರ ಶಿಲ್ಪವಿದೆ. ಸುಮಾರು ಕ್ರಿ.ಶ. 10–11ನೇ ಶತಮಾನ.

ಪುಷ್ಕರಣಿ ಬದಿಯ ದೇವಾಲಯಗಳು: ಮುದ್ದೂರಿನ ರಾಮಲಿಂಗೇಶ್ವರ ದೇವಾಲಯದ ಸಂಕೀರ್ಣದ ಉತ್ತರ ಭಾಗದಲ್ಲಿ ಪುಷ್ಕರಣೆಯ ಪಶ್ಚಿಮಕ್ಕೆ ಒಂದೇ ಸಾಲಿನಲ್ಲಿ ಮೂರು ದೇವಾಲಯಗಳಿವೆ. ಒಂದು ಸಿದ್ಧಲಿಂಗೇಶ್ವರ ಇನ್ನುಳಿದ ದೇವಾಲಯಗಳ ಅಂಚಿನ ಭಾಗದ ಅಧಿಷ್ಠಾನ ಭಿತ್ತಿ ಭಾಗಗಳು ಮನೆಯ ಗೋಡೆಯಲ್ಲಿ ಮುಚ್ಚಿಕೊಂಡಿರುವುದು ಎದ್ದು ಕಾಣುತ್ತವೆ.

ಸಿದ್ದಲಿಂಗೇಶ್ವರ ದೇವಾಲಯ: ಮುದ್ದೂರಿನ ಸಿದ್ದಲಿಂಗೇಶ್ವರ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅರ್ಧಗಂಬಗಳುಳ್ಳ ಮಂಟಪ ಮತ್ತು ನವರಂಗಗಳಿವೆ. ಗರ್ಭಗೃಹ ದ್ವಾರದಲ್ಲಿ ಶೈವದ್ವಾರಪಾಲಕರು, ಲಲಾಟದಲ್ಲಿ ಇರುವಳು. ಅರ್ಧಮಂಟಪದ ಕಂಬಗಳ ಮೇಲೆ ಏಕಸಾಲಿನಲ್ಲಿ ಸುಂದರವಾದ ಮೂರು ಜೋಡಿಯಲ್ಲಿ ಮಕರ ತೋರಣ ಪಟ್ಟಿಕೆಯಿದೆ. ಮಧ್ಯದ ಮಕರ ತೋರಣದಲ್ಲಿ ಮಧ್ಯ ಅಸುರನ ಮೇಲೆ ನಿಂತ ನೃತ್ಯ ಮಾಡುವ ನಟರಾಜನಿದ್ದಾನೆ. ಬದಿಗಿನ ಮಕರ ತೋರಣಗಳ ಅಲಂಕರಣದಲ್ಲಿ ಬ್ರಹ್ಮ ಮತ್ತು ವಿಷ್ಣು ಸಮಭಂಗದಲ್ಲಿ

ನಿಂತಿದ್ದಾರೆ. ಬದಿಗಿನ ತೋರಮದ ಮೇಲೆ ವಾದ್ಯಮೇಳ ಮತ್ತು ನೃತ್ಯಗಾರರಿದ್ದಾರೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ಅದರಲ್ಲಿ ಸಪ್ತಮಾತೃಕೆಯರ ಶಿಲ್ಪವಿದೆ.

ಈ ದೇವಾಲಯದಲ್ಲಿ ಅರ್ಧಮಂಟಪದ ಸ್ತಂಭ ತೋರಣವು ಕ್ರಿ.ಶ. 10ನೇ ಶತಮಾನದ ಅಂತ್ಯ, ನವರಂಗದ ಕಂಬಗಳು ಸು. ಕ್ರಿ.ಶ. 11ನೇ ಶತಮಾನದ. ಈ ದೇವಾಲಯದ ಭಿತ್ತಿ ಜೀರ್ಣೋದ್ಧಾರವಾಗಿದೆ.

ಲೋಕೇಶ್ವರ ಗುಡಿ: ಉಡಗಿ (ಸೇಡಂ ತಾಲೂಕಿ) ಯಲ್ಲಿ ಕ್ರಿ.ಶ 9–10ನೇ ಶತಮಾನದ ಲೋಕೇಶ್ವರದೇವಾಲಯದ ಅಂತರಾಳ ಮತ್ತು ನವರಂಗವಿದೆ. ಬೃಹತ್ ಮತ್ತು ಬಲಹರಿಶಿವಲಿಂಗ ಗರ್ಭಗೃಹದಲ್ಲಿದೆ. ಅದರ ಬಾಗಿಲ ಚೌಕಟ್ಟಿನಲ್ಲಿ ಪಂಚ ಶಾಖೆ (1) ಅಂತರಾಳ ಛತ್ತಿನಲ್ಲಿ ಅರಳಿದ ಮೂರು ಕಮಲದ ಅಲಂಕರಣವಿದೆ.(2) ಹೊಸ್ತಿಲ ಮುಂದೆ ಚಂದ್ರ ಶಿಲೆಯಿದೆ. ನವರಂಗದ ಕಂಬದ ಮೇಲೆ ನರ–ದ್ರಾಕ್ಷಿಯ ಚಿತ್ರ ಪಂಚ ತಂತ್ರದ ಕಥೆಯನ್ನು ನೆನಪಿಸುತ್ತದೆ. ನವರಂಗದ ಛತ್ತುಗಳಲ್ಲಿ ಸುಂದರ ಕಮಲಗಳಿವೆ.ಇದರಲ್ಲಿ ಲತಾಬಳ್ಳಿ, ಕಬ್ಬಿಣ ಆಕಾರದ ಅರೆಗಂಬ, ಮನುಷ್ಯರ ಸಾಲು, ಬಹುಮುಖವುಳ್ಳ ಅರೆಗಂಬ ಮತ್ತು ಪತ್ರವಿದೆ. ದ್ವಾರಪಾಲಕರ ಕೈಗಳಲ್ಲಿ ವಿಸ್ಮಯ ಚಿನ್ಹೆ, ಅಭಯಮುದ್ರೆ, ನಾಗ ಮತ್ತು ಗದೆಗಳಿವೆ. ಇವರ ಬದಿಗೆ ಆಳೆತ್ತರದ ಚೌರಿ ಹಿಡಿದು ನಿಂತ ಸೇವಕಿಯರ ಉಬ್ಬು ಶಿಲ್ಪಗಳಿವೆ. ಲಲಾಟದಲ್ಲಿ ಮಕರತೋರಣ, ನಡುವೆ ಕೀರ್ತಿಮುಖ, ಪಾರ್ಶ್ವಗಳಲ್ಲಿ ಮಂಗ–ಗಂಧರ್ವರನ್ನು ಚಿತ್ರಿಸಲಾಗಿದೆ. ಕೀರ್ತಿಮುಖದಿಂದ ಅರುಸರಗಳು ಇಳಿಬಿದ್ದಿವೆ.

ಈ ಪಟ್ಟಿಕೆಯ ಮೇಲಿನ ಕಪೋತದ ಬುಡದಲ್ಲಿ ಹಂಸ ಪಕ್ಷಿಗಳ ಸಾಲಿದೆ. ಅದರ ಮುಂಭಾಗದಲ್ಲಿ ಚೈತ್ಯಾಕಾರಗಳಿವೆ. ಉತ್ತರಾಂಗದಲ್ಲಿ ನಡುವೆ ಗಜಲಕ್ಷ್ಮಿ ಬದಿಗಳಲ್ಲಿ ಗಂಧರ್ವರಿದ್ದಾರೆ. ಅಂತರಾಳ ಕಂಬದಲ್ಲಿ ಪೀಠ, ಕಾಂಡ, ಕುಂಭ, ಕಳಸ ಮತ್ತು ಭೋದುಗೆಗಳಿವೆ. ಕಾಂಡ ಭಾಗದಲ್ಲಿ ಕ್ರಮವಾಗಿ ಚೌಕಪಟ್ಟಿಕೆ, ನಾಲ್ಕು ಅಷ್ಟಪಟ್ಟಿಕೆಗಳ ನಡುವೆ ಬಹುಮುಖ ಪಟ್ಟಿಕೆಗಳು, ಚೈತ್ಯಾಕಾರವುಳ್ಳ ಚೌಕಪಟ್ಟಿಕೆ, ಬಹುಮುಖ ಕುಂಭ, ಕಳಸ ನಂತರ ಬೋಧುಗೆಗಳು ಒಳಗೊಂಡಿವೆ. ಅಂತರಾಳ ಬದಿಗಿನ ಗೋಡೆಗಳಲ್ಲಿ ಆಳವಾದ ಚಿಕ್ಕ ದೇವಕೋಷ್ಠಗಳಿದ್ದು ಒಂದರಲ್ಲಿ ಸೂರ್ಯಪೀಠ ಇನ್ನೊಂದರಲ್ಲಿ ಶಿವಲಿಂಗವಿದೆ. ಬಾಗಿಲ ಚೌಕಟ್ಟಿನಲ್ಲಿ ಶೈವ ದ್ವಾರಪಾಲಕರಿರುವರು. ಕೈಗಳಲ್ಲಿ ಅಭಯ ತ್ರಿಶೂಲ, ನಾದ ಮತ್ತು ಗದೆಗಳಿವೆ. ಐದು ಶಾಖೆಗಳಿದ್ದು ಅವು ಲತಾಸುರುಳಿ, ಅರೆಗಂಬ, ಸಿಂಹಗಳ ಸಾಲು, ಅರೆಗಂಬ, ಸಿಂಹ ಮತ್ತು ಪತ್ರಗಳ ಸಾಲಿವೆ. ಲಲಾಟದಲ್ಲಿ ಗಜಲಕ್ಷ್ಮಿಯಿದ್ದರೆ ಕಪೋತದ ಬುಡದಲ್ಲಿ ಹಂಸ ಪಕ್ಷಿಗಳ ಸಾಲಿದೆ. ಅದರ ಮೇಲೆ ಚೈತ್ಯಾಕಾರಗಳಿವೆ. ಈ ಫಲಕಗಳ ಕೆಳಗಡೆ ಶ್ರೀ ನಿಧಿ ಮತ್ತು ಪದ್ಮ ನಿಧಿಯರಿದ್ದಾರೆ. ಕಂಬಗಳಿಗೆ ಪೀಠ, ಕಾಂಡ ಭಾಗದಲ್ಲಿ ಎರಡು ಚೌಕ ಪಟ್ಟಿ, ಇವುಗಳ ಮಧ್ಯ

ನಾಲ್ಕು ಕಿರಿದಾದ ಹದಿನಾರು ಮುಖಗಳ ಪಟ್ಟಿ, ಮೇಲಿನ ಚೌಕಪಟ್ಟಿ ಮೇಲೆ ಅನೇಕ ಮುಖ, ಅದರ ಮೇಲ್ಗಡೆ ದಿಂಬಿನಾಕಾರದ ಅನೇಕ ಮುಖಗಳುಳ್ಳ ಕುಂಭ ಮತ್ತು ಬೋಧುಗೆಗಳನ್ನು ಹೊಂದಿದೆ. ಈ ನಾಲ್ಕು ಕಂಬಗಳ ಕಾಂಡ ಭಾಗದ ಮೇಲಿನ ಚೌಕಪಟ್ಟಿಗಲ ನಾಲ್ಕೂ ಮುಖಗಳಲ್ಲಿ ಒಂದೊಂದು ಚಿತ್ರಗಳಿವೆ. ತಲಾ ಒಂದರ ಮೇಲೆ ಅಲಂಕಾರ ಪಟ್ಟಿಗಳಿವೆ. ನವರಂಗದ ಛತ್ತಿನಲ್ಲಿ ಮಧ್ಯ ಕಮಲ ಫಲಕಗಳಿವೆ. ಅದರ ಬಾಗಿಲು ಚೌಕಟ್ಟಿನಲ್ಲಿ ಐದು ಶಾಖೆಗಳಿದ್ದು ಅವು ಲತಾ, ಸುರುಳಿ, ದುಂಡು ಅರ್ಧಗಂಬ, ರತ್ನಸಾಲು, ಅನೇಕ ಮುಖವುಳ್ಳ ಅರ್ಧಗಂಭ ಮತ್ತು ಪತ್ರಗಳಿವೆ.

ಕಂಬ–1: ಈ ಕಂಬದ ನಾಲ್ಕು ಮುಖಗಳಲ್ಲಿ ಕ್ರಮವಾಗಿ ಜೋಡು ಹಾರಗಳಲ್ಲಿ 2 ಆನೆ, 2 ಯಕ್ಷರು (ಶ್ರೀನಿಧಿ–ಪದ್ಮನಿಧಿ). ಕಬ್ಬಿಣ ಬಿಲ್ಲು–ಬಾಣ ಹಿಡಿದು ನಿಂತ ಕಾಮ–ರತಿ ಮತ್ತು ಲತಾಬಳ್ಳಿ ಸುರುಳಿಗಳಿವೆ.

ಕಂಬ–2: ಈ ಕಂಬದ ನಾಲ್ಕು ಮುಖಗಳಲ್ಲಿ ಕ್ರಮವಾಗಿ ಜೋಡು ಹಾರಗಳಲ್ಲಿ ವಾಲಿ–ಸುಗ್ರೀವ, ಯೋಧ–ಜಿಂಕೆ, ಅರ್ಧ ಮನುಷ್ಯ–ಅರ್ಧ ಪ್ರಾಣಿರೂಪದ ನಾಗನ ಕೈಯಲ್ಲಿ ಕತ್ತಿ–ನಾಗಿಣಿ ಕೈಯಲ್ಲಿ ಕಮಲ ಮತ್ತು ಲತಾಬಳ್ಳಿಗಳು (?)

ಕಂಬ–3: ಈ ಕಂಬದಲ್ಲಿ ಕ್ರಮವಾಗಿ ಜೋಡು ಹಾರಗಳಲ್ಲಿ ನಿಂತ 2 ಅಶ್ವಾರೂಢ ಯಕ್ಷ–ಯಕ್ಷಿ 2 ಹಂಸಗಳು, 2 ಕುದುರೆಸವಾರರು ಮತ್ತು ಹನುಮ ನಾಗರಾಜ (?)ರಿದ್ದಾರೆ.

ಕಂಬ–4: ಈ ಕಂಬದಲ್ಲಿ ತ್ರಿವಿಕ್ರಮ–ಬಲಿ (?) ಶಿವ–ಪಾರ್ವತಿ, ಸೂರ್ಯ–ಕೇಶವ ಮತ್ತು ರತಿ–ಮನ್ಮಥ.

ನವರಂಗದ ಎಡಗೋಡೆಗೆ ನಿಲ್ಲಿಸಿದ ಏಳು ಶಿಲ್ಪಗಳು ಕಾಮ, ರತಿ, ಶೈವಯತಿ, ನಟರಾಜ, ವೃಷಭಾರೂಢ, ಉಮಾಮಹೇಶ್ವರ, ಕಾಲಭೈರವಿ ಮತ್ತು ಕಾರ್ತಿಕೇಯ. ನವರಂಗದ ಬಾಗಿಲು ಚೌಕಟ್ಟಿನ ಪಂಚ ಶಾಖೆಗಳಲ್ಲಿ ಲತಾ ಸುರಳಿ ಮತ್ತು ಪತ್ರಗಳಿವೆ. ಶೈವ ದ್ವಾರಪಾಲಕನ ನಾಲ್ಕು ಕೈಗಳಲ್ಲಿ ಗದೆ, ತ್ರಿಶೂಲ, ನಾಗ ಮತ್ತು ಹಸ್ತ ಮುದ್ರೆ ಇವೆ ಹಾಗೂ ಸೇವಕಿ ಇರುವಳು. ಲಲಾಟದಲ್ಲಿ ಗಜಲಕ್ಷ್ಮಿ ಇರುವಳು. ಬದಿಗೆ ಪೂರ್ಣ ಪ್ರಮಾಣದ ಎತ್ತರದ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಈ ರೀತಿಯ ಬಾಗಿಲು ಚೌಕಟ್ಟು ಈ ಭಾಗದ ಹಂದರಕಿಯ ಲೋಕೇಶ್ವರ ದೇವಾಲಯ ಗುಂಪುಗಳ ಬಾಗಿಲು ಚೌಕಟ್ಟುಗಳನ್ನು ಹೋಲುವುದು.

ಲಲಾಟದಲ್ಲಿ ಮಕರತೋರಣದ ಮಧ್ಯ ಕೆಳಗಡೆ ಗಜಲಕ್ಷ್ಮಿ ಅದರ ಕಪೋತದ ಕೆಳಗಡೆ ಹಂಸಪಕ್ಷಿಗಳ ಸಾಲಿದೆ. ಈ ಬಾಗಿಲು ಫಲಕಗಳ ಕೆಳಗಡೆ ಮುಂದಕ್ಕೆ ಮುಖ ಮಾಡಿದ ಆನೆಗಳಿವೆ ಹಾಗೂ ಫಲಕದಲ್ಲಿ ಶೈವ ದ್ವಾರಪಾಲಕರು ಮತ್ತು ಸೇವಕರಿದ್ದಾರೆ.

ಈ ದೇವಾಲಯದ ಸಂಕೀರ್ಣದಲ್ಲಿ ಭೃಂಗಿ, ಭೈರವ, ಕಾಮ, ರತಿ, ಅರ್ಧನಾರೀಶ್ವರ, ಶಿವ, ಶಿವ-ಪಾರ್ವತಿ, ಗಣೇಶ ಇತ್ಯಾದಿ ಶಿಲ್ಪಾವಶೇಷಗಳಿವೆ. ಈ ದೇವಾಲಯದ ಬಲಗಡೆ ಹೊರಗಡೆ ಸುಮಾರು 2 ಕಿ.ಮೀ. ಆಳದಲ್ಲಿ ಈ ಹಿಂದೆ ಅಗೆದಾಗ ಈ ಕಟ್ಟಡದ ಹಲವಾರು ಕುರುಹುಗಳು ಬೆಳಕಿಗೆ ಬಂದವೆಂದು ವದಂತಿಯಿರುವುದು ಗಮನೀಯ. ಈ ದೇವಾಲಯದ ಎಡಗಡೆ ಒಂದು ಹಾಳುಭಾವಿಯಿದೆ.

ಈ ದೇವಾಲಯ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗದ ಅರ್ಧಭಾಗದವರೆಗೆ ಅಧಿಷ್ಠಾನದ ಮೂಲಭಾಗಗಳು ಉಪಾನ, ಜಗತಿ, ತ್ರಿಪಟ್ಟಕುಮುದ, ಕಂಪ, ಕಂಠಪತ್ರ, ಕಂಪದ ಆರು ತರ ಹೊಂದಿದೆ. ಅದರ ನವರಂಗದ ಮುಂದೆ ಮತ್ತು ಬರಿಯ ಅಧಿಷ್ಠಾನವು ಭಿನ್ನವಾಗಿದೆ ಹಾಗೂ ಎರಡು ರೀತಿಯಲ್ಲಿದೆ. ಅವರ ಭಿತ್ತಿಭಾಗವು ಜೀರ್ಣೋದ್ಧಾರಗೊಂಡಿದೆ. ಈಗ ಶಿಖರವಿಲ್ಲ.

ಶಂಭುಲಿಂಗ ದೇವಾಲಯ (ಕೊಡ್ಲ, ಸೇಡಂ ತಾ.):ಈ ದೇವಾಲಯದ ಕೊಡ್ಲ ಗ್ರಾಮದ ಉತ್ತರಕ್ಕಿದೆ. ಇದಕ್ಕೆ ಒಂದು ಚೌಕ ಗರ್ಭಗೃಹ, ಅಂತರಾಳ ಮತ್ತು ತೆರೆದ ನವರಂಗವಿದೆ. ನವರಂಗದ ನಾಲ್ಕು ಕಂಬಗಳಿವೆ. ಕಂಬಗಳ ಕಾಂಡದ ಚೌಕ ಪಟ್ಟಿಕೆಗಳ ನಡುವೆ ಉದ್ದ ಪಟ್ಟಿಕೆಯಿದೆ. ಈ ಲಕ್ಷಣ ರಾಷ್ಟ್ರಕೂಟರ ಶೈಲಿಯಾಗಿದೆ. ಗರ್ಭಗೃಹ ದ್ವಾರಪಟ್ಟಿಯಲ್ಲಿ ಮೂರು ಶಾಖೆಗಳಿವೆ. ಕೆಳಗಡೆ ಪೂರ್ಣ ಕುಂಭಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ ಈ ದೇವಾಲಯ ಸಂಕೀರ್ಣದಲ್ಲಿ ಚತುರ್ಭುಜ ಗಣೇಶ, ಭೈರವ, ಏಳುಹೆಡೆ ನಾಗ, ಸರಸ್ವತಿ, ಸಪ್ತಮಾತೃಕೆ (ವೀರಭದ್ರ, ಗಣೇಶರಿಲ್ಲ) ಎರಡು ಶಿವಲಿಂಗಗಳು ಇತ್ಯಾದಿ ಇವೆ.

ಪಂಚಲಿಂಗೇಶ್ವರ ಗುಡಿ (ಬೆಟಗೇರಿ-ಬಿ, ಸೇಡಂ ತಾ):ಈ ದೇವಾಲಯ ಸಂಪೂರ್ಣ ಶಿಥಿಲಗೊಂಡಿದ್ದು ಅದರ ಮೂಲ ಭಾಗದಲ್ಲಿ ಒಂದೇ ಸಾಲಿನಲ್ಲಿ ಮೂರು ಗರ್ಭಗೃಹಗಳಿವೆ. ಒಂದರ ಗರ್ಭಗೃಹಕ್ಕೆ ಒಂದು ಅರ್ಧಮಂಟಪ ಮತ್ತು ತೆರೆದ ನವರಂಗವಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಅದರ ಬಾಗಿಲು ಪಟ್ಟಿಯಲ್ಲಿ ನಾಲ್ಕು ಶಾಖೆಗಳಿದ್ದು ಅಲ್ಲಿ ಸರಳ, ರತ್ನ, ಅರ್ಧಗಂಬ ಮತ್ತು ಪತ್ರಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ, ಉತ್ತರಾಂಗದಲ್ಲಿ ಕಚ್ಚುಗಳು, ಕಪೋತದಲ್ಲಿ ಚೈತ್ಯ ಮಾದರಿಗಳಿವೆ. ಅರ್ಧಗಂಭದಲ್ಲಿ ಚತುರ್ಭುಜ ಮಹಿಷಾಸುರಮರ್ದಿನಿ, ಇನ್ನೊಂದರಲ್ಲಿ ಈ ದೇವತೆ ಚಿತ್ರ, ಕಂಬಗಳಲ್ಲಿ ಹಾರಗಳು ಮತ್ತು ಚೈತನ್ಯಗಳಿವೆ.

ಇಟ್ಟಂಗೇಶ್ವರ ಗುಡಿ (ಬೇಟಗೇರ-ಬಿ, ಸೇಡಂ ತಾ.): ಈ ಗುಡಿ ಹಾಳಾಗಿದ್ದು, ಇದರ ಮುಂದಿನ ಭಾಗದಲ್ಲಿ ಇಟ್ಟಿಗೆ ಕಟ್ಟಡದ ಅವಶೇಷಗಳಿವೆ. ಇಟ್ಟಿಗೆ ಇಲ್ಲಿ ದೊರೆಯುತ್ತಿರುವುದರಿಂದ

ಈ ಚಿಕ್ಕ ಗುಡಿಯನ್ನು ಇಟ್ಟಿಗೇಶ್ವರನೆಂದು ಕರೆದಿರಬೇಕು. ಈ ಗುಡಿಯಲ್ಲಿ ಇತ್ತೀಚಿನ ಶಿವಲಿಂಗವಿದೆ.

ಈಶ್ವರ ಗುಡಿ (ಬೆಟಗೇರ–ಬಿ, ಸೇಡಂ ತಾ): ಇದೊಂದು ಇತ್ತೀಚಿನ ಚಿಕ್ಕ ಗುಡಿಯಿದ್ದು, ಅದರಲ್ಲಿರುವ ಶಿವಲಿಂಗದ ಬ್ರಹ್ಮಸೂತ್ರ ಕುತೂಹಲದ್ದಾಗಿದೆ. ಇಲ್ಲಿ ಚತುರ್ಭುಜ ಗಣೇಶನ ಶಿಲ್ಪವಿದ್ದು ಅದಕ್ಕೆ ಗಂಟೆಗಳ ಸರವಿದೆ. ಹಾಗೂ ಈ ಗುಡಿ ಬದಿಗಿನ ಮಾರುತಿ ಗುಡಿಯ ಬಾಗಿಲು ಚೌಕಟ್ಟಿಗೆ ನಾಲ್ಕು ಶಾಖೆಗಳಿವೆ. ಇವು ಸು. ಕ್ರಿ.ಶ. 10ನೇ ಶತಮಾನದವು.

ಹೆಸರಿಲ್ಲದ ದೇವಾಲಯಗಳು:

1. ಊರ ಉತ್ತರದಲ್ಲಿ ಗುಡಿಯರೆತಳಪಾಯದಲ್ಲಿ ಮೂಲತಃ ಗರ್ಭಗೃಹ ಮತ್ತು ಸ್ತಂಭಗಳುಳ್ಳ ಅರ್ಧ ಮಂಟಪಗಳಿವೆ. ನಂತರದಲ್ಲಿ ಸಭಾಮಂಟಪ ಜೋಡಣೆಯಾಗಿದ್ದು ಅದು ಹಾಳಾಗಿದೆ. ಇದರ ಭಿತ್ತಿ ಸರಳವಾಗಿದೆ. ಅಂತರಾಳದ ಗೋಡೆಯಲ್ಲಿ ಎರಡು ಅರೆಗಂಬಗಳಿವೆ, ಕಪೋತದ ಕೆಳಗಡೆಯ ತರದಲ್ಲಿ ಕುಬ್ಜರಿದ್ದು ಕೆಲವರು ಹಾರ, ಪುಷ್ಪ, ಚೌರಿ, ಕತ್ತಿ, ಗುರಾಣಿ, ಮೃದಂಗ, ಹಾವು, ಗದೆ ಮತ್ತು ಗುರಾಣಿ, ಹಣ್ಣು, ಪುಷ್ಪಗಳನ್ನು ಹಿಡಿದಿರುವುದು. ಉತ್ತರ ಗೋಡೆಯ ಇದೇ ತರದಲ್ಲಿ ಬೇಡರ ಕಣ್ಣಪ್ಪನು ಶಿವಲಿಂಗವನ್ನು ಆರಾಧಿಸುತ್ತಿರುವನು. ಈ ಚೌಕ ಪೀಠವುಳ್ಳ ಶಿವಲಿಂಗದ ಬ್ರಹ್ಮ ಸೂತ್ರದ ನಾಡಿಗಳ ಶೈಲಿ 11ನೇ ಶತಮಾನದ ಲಕ್ಷಣಗಳಿರುವುದು ಗಮನೀಯ. ಕಣ್ಣಪ್ಪ ತನ್ನ ಎಡಗೈಯಿಂದ ಕಣ್ಣನ್ನು ಕಿತ್ತುಕೊಳ್ಳುವ ದೃಶ್ಯವಿದೆ. ಅಲ್ಲಿ ಸಿಂಹ, ಆನೆ ಇತ್ಯಾದಿಗಳಿವೆ.

   ಚೌಕಾಕಾರ ಗರ್ಭ ಗೃಹದಲ್ಲಿ ಯಾವ ವಿಗ್ರಹಗಳಿಲ್ಲ. ಬಾಗಿಲ ದ್ವಾರ ಪಟ್ಟಿಕೆಯು ಶಾಖೆಗಳಿಂದ ಅಲಂಕೃತಗೊಂಡಿದೆ. ಲಲಾಟದಲ್ಲಿ ಗಜಲಕ್ಷ್ಮಿ ಇರುವಳು. ಅಂತರಾಳ ಭಿತ್ತಿನಲ್ಲಿ ಕಮಲದ ಅಲಂಕೃತವಿದೆ. ಇದರ ಮುಂದಿನ ಜೋಡು ಕಂಬಗಳ ಬುಡದಲ್ಲಿ ಕುಳಿತು ಸಿಂಹಗಳಿರುವುದು ವಿಶೇಷವಾಗಿದೆ. ಈ ಕಂಬಗಳ ಬುಡದಲ್ಲಿ ಪೀಠ, ಕಾಂಡದ ಕೆಳಗಡೆ ಕುಳಿತ ಸಿಂಹ, ನಡುವಿನ ಭಾಗ ವೃತ್ತಾಕಾರದಲ್ಲಿ ಪುಷ್ಪಗಳ ಅಲಂಕರಣ, ಮೇಲೆ ಬೋಧುಗೆಯಿದೆ. ಈ ಸಿಂಹ ಸ್ತಂಭಗಳು ಪಲ್ಲವರ ವಾಸ್ತು ಲಕ್ಷಣವಾಗಿದೆ. ಮುಂದಿನ ಸಭಾಮಂಟಪದ ಭಾಗ ಅಳಿದಿದೆ. ಆದರೆ ಇದರ ಎತ್ತರದ ಚೌಕದ ನಡುವಿನ ನೆಲ ಉಳಿದಿದೆ.

2. ಇದು ಅಲ್ಲೊಂದು ಹಾಳಾದ ದೇವಾಲಯದ ಕೊಠಡಿಯಾಗಿದೆ. ತಳಪಾಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ದೀರ್ಘ ಚತುರಸ್ರಾಕಾರದ (oblong) ಅಂಕಣ ಮತ್ತು ಸಭಾಮಂಟಪವಿದೆ. ಸಭಾಮಂಟಪದ ಕಂಬಗಳಲ್ಲೂ ಕುಂಭವಿದೆ.

3. ಇದೊಂದು ಹಾಳಾದ ದೇವಾಲಯ. ತಳಪಾಯದಲ್ಲಿ ಗರ್ಭಗೃಹ, ಅಂತರಾಳ, ದೀರ್ಘಚತುರಸ್ರಾಕಾರದ ದಾರಿಗೆ ಎರಡು ಕಡೆಗಳಲ್ಲಿ ಪ್ರವೇಶ ಮತ್ತು ಸಭಾಮಂಟಪಗಳಿವೆ. ಹೊಸ್ತಿಲ ಅಂಚಿನಲ್ಲಿ ಆನೆಗಳಿವೆ.
4. ಈ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿವೆ. ಚೌಕಾಕಾರದ ಗರ್ಭಗೃಹದಲ್ಲಿ ಯಾವ ಶಿಲ್ಪಗಳಿಲ್ಲ, ದ್ವಾರಗಳಿಲ್ಲ, ದೀರ್ಘ ಚರುರಸ್ರಾಕಾರದ ತೆರೆದ ಅಂತರಾಳವಿದೆ. ಹಾಳಾದ ಸಭಾಮಂಟಪವಿದೆ.
5. ಇದು ಹಾಳಾದ ದಕ್ಷಿಣಕ್ಕೆ ಮುಖಮಾಡಿದ ದೇವಾಲಯ. ಕೇವಲ ಅಧಿಷ್ಠಾನ ಮತ್ತು ಗರ್ಭಗೃಹ ಭಾಗ ಉಳಿದಿವೆ.
6. ಹಾಳಾದ ದೇವಾಲಯ ಪಶ್ಚಿಮಕ್ಕೆ ಮುಖಮಾಡಿದೆ. ತಳಪಾಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿವೆ. ಸಭಾಮಂಟಪದ ಅಧಿಷ್ಠಾನ ಗ್ರಾನೈಟ್ ಶಿಲೆಯದು.
7. ಈ ದೇವಾಲಯವೂ ಹಾಳಾಗಿದ್ದು ತಳಪಾಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿವೆ. ಮಂಟಪವನ್ನು ನಂತರ ಜೋಡಿಸಲಾಗಿದೆ. ಸಭಾಮಂಟಪದ ಹೊಸ್ತಿಲ ಅಂಚಿನಲ್ಲಿ ಆನೆಗಳಿವೆ.
8. ಒಂದೇ ಸಾಲಿನ ತ್ರಿಕೂಟ ಮಾದರಿಯ ಈ ದೇವಾಲಯ ಪಶ್ಚಿಮಕ್ಕೆ ಮುಖಮಾಡಿದೆ. ತಲಾ ಒಂದು ಗರ್ಭಗೃಹಕ್ಕೆ ಒಂದು ಅಂತರಾಳ ಮೂರು ಅಂತರಾಳಗಳಿಗೆ ಒಂದೇ ಸಭಾಮಂಟಪವಿದೆ. ಸಭಾಮಂಟಪಕ್ಕೆ ಮಾಳಿಗೆಗಳುಳ್ಳ ಪ್ರವೇಶ ದಕ್ಷಿಣ ಮತ್ತು ಪಶ್ಚಿಮಕ್ಕಿವೆ.
9. ಪೂರ್ವಕ್ಕೆ ಮುಖಮಾಡಿದ ಈ ದೇವಾಲಯದ ಈಗ ಕೇವಲ ಅಲ್ಪ ಭಾಗ ಉಳಿದಿದೆ. ತಳಪಾಯದಲ್ಲಿ ಗರ್ಭಗೃಹ ಅಂತರಾಳ ಮತ್ತು ಸಭಾಮಂಟಪಗಳಿವೆ. ಇದಕ್ಕೆ ಮುಂದೆ ಮಂಟಪವನ್ನು ಜೋಡಿಸಲಾಗಿತ್ತು. ಅಧಿಷ್ಠಾನದ ಮೇಲಿನ ಕಪೋತಪಟ್ಟಿಕೆಯಲ್ಲಿ ಕೂಡು ಭಾಗದಲ್ಲಿ ಪೂರ್ಣಕುಂಭ, ಆನೆ, ಸೂರ್ಯ ಚಂದ್ರ ಮುಂತಾದ ಕಿರು ಶಿಲ್ಪಗಳಿವೆ. ಸಭಾಮಂಟಪದಅಲಂಕೃತ ದುಂಡು ಕಂಬಳಗಲ್ಲಿ ಕುಂಭಗಳೂ ಇವೆ. ಛತ್ತಿನಲ್ಲಿ ಕಮಲವಿದೆ. ಭಿತ್ತಿ ಸರಳವಿದೆ. ಪೂರ್ವ ಗೋಡೆಯಲ್ಲಿ ಕಿಟಕಿಯಿದೆ.
10. ಇದೊಂದು ಹಾಳಾದ ದೇವಾಲಯವಿದ್ದು ಕೇವಲ ಅಧಿಷ್ಠಾನ ಪುರಾವೆಗಳು ಅಲ್ಲಲ್ಲಿವೆ.
11. ಪೂರ್ವಕ್ಕೆ ಮುಖಮಾಡಿದ ಹಾಳಾದ ಈ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿವೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ಮೂರ ಪಟ್ಟಿಗಳು ದುಂಡಾದ ಕುಮುದವಿದೆ. ಸರಳ ತರದ ಮೇಲೆ ಕೆಳಗಡೆ ಹಿಂಚಾಜುಗಳಿವೆ.

ಭಿತ್ತಿಯಲ್ಲಿ ಸರಳ ಅರೆಗಂಬಗಳಿವೆ. ಚೌಕ ಗರ್ಭಗೃಹದಲ್ಲಿ ವಿಗ್ರಹಗಳಿಲ್ಲ. ಇದರಲ್ಲಿ ಪಶ್ಚಿಮ ಮತ್ತು ಉತ್ತರ ಗೋಡೆಗಳಲ್ಲಿ ಒಂದೊಂದು ಗೂಡಿವೆ. ದ್ವಾರ ಚೌಕಟ್ಟು ಇತ್ಯಾದಿ ಸ್ಥಳಾಂತರವಾಗಿವೆ. ಹೊಸ್ತಿಲ ಅಂಚಿನಲ್ಲಿ ಮುಂಭಾಗದಲ್ಲಿ ಆನೆಗಳಿವೆ.

12. ಇದೊಂದು ಹಾಳಾದ ತ್ರಿಕೂಟ ದೇವಾಲಯ. ಮೂರು ದಿಕ್ಕುಗಳಲ್ಲಿ ಮೂರು ಗರ್ಭಗೃಹಗಳಿಗೊಂದು ಅಂತರಾಳಗಳಿವೆ. ಇವೆಲ್ಲವುಗಳಿಗೆ ಒಂದೇ ಸಭಾಮಂಟಪವಿದೆ. ಭಿತ್ತಿಯಲ್ಲಿ (ಗರ್ಭಗೃಹ-ಅಂತರಾಳ) ಸರಳ ಅರೆಗಂಬಗಳಿವೆ.
13. ಹಾಳಾದ ಈ ದೇವಾಲಯಕ್ಕೆ ಅಧಿಷ್ಠಾನ ಇತ್ಯಾದಿ ಭಾಗ ಉಳಿದಿವೆ.
14. ಹಾಳಾದ ಈ ದೇವಾಲಯದ ಕೆಳ ಭಾಗ ಉಳಿದಿದೆ.
15. ಹಾಳಾದ ಈ ದೇವಾಲಯದಲ್ಲಿ ಕೆಲ ಭಾಗ ಉಳಿದಿದೆ. ತಳಪಾಯದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ನಂದಿ ಮಂಟಪಗಳಿವೆ.
16. ಹಾಳಾದ ಈ ದೇವಾಲಯದ ಕೆಲವು ಪುರಾವೆಗಳು ಉಳಿದಿವೆ. ಇದೊಂದು ಏಕ ಸಾಲಿನ ತ್ರಿಕೂಟ ಮಾದರಿ ದೇವಾಲಯ. ಮೂರು ಗರ್ಭಗೃಹಗಳಿವೆ. ಏಕ ಚತುರಸ್ರಾಕಾರದ ಅಂತರಾಳ ಒಂದು ಸ್ತಂಭ ಮಂಟಪ ಕಾಣುತ್ತದೆ.
17. ಹಾಳಾದ ಈ ದೇವಾಲಯಕ್ಕೆ ಆಧುನಿಕ ಕಟ್ಟಡವಿದೆ.
18. ಹಾಳಾದ ದೊಡ್ಡ ದೇವಾಲಯ ಸಂಕೀರ್ಣದಲ್ಲಿ ಈಗ ಮನೆಗಳು ನಿರ್ಮಾಣಗೊಂಡಿವೆ. ಇಲ್ಲಿ ಐದು ಗರ್ಭಗೃಹಗಳಿಗೆ ಹೊಂದಿ ಅರ್ಧ ಮಂಟಪಗಳಿವೆ. ನಾಲ್ಕು ಮಾತ್ರ ನಾಲ್ಕು ದಿಕ್ಕುಗಳಿವೆ. ಒಂದು ಮಾತ್ರ ಪ್ರತ್ಯೇಕವಾಗಿದೆ.
19. ಪೂರ್ವಕ್ಕೆ ಮುಖ ಮಾಡಿದ ಹಾಳಾದ ಈ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಆಯತಾಕಾರ ಅಂತರಾಳ ಮತ್ತು ಸಭಾಮಂಟಪಗಳಿವೆ.
20. ಪೂರ್ವಕ್ಕೆ ಮುಖ ಮಾಡಿದ ಈ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅಂತರಾಳ, ಸಭಾಮಂಟಪಗಳಿವೆ. ಭಿತ್ತಿ, ಅಧಿಷ್ಠಾನ ಸರಳವಿದ್ದು ಭಿತ್ತಿಯಲ್ಲಿ ಅರೆಗಂಬಗಳಿವೆ. ಕಪೋತ ಕೆಳಗಡೆ ಬಾತುಕೋಳಿಗಳು ಇತ್ಯಾದಿಗಳ ಚಿತ್ರಗಳ ಸಾಲಿವೆ. ಸಭಾಮಂಟಪದಲ್ಲಿ ನಾಲ್ಕು ಕಂಬಗಳಿವೆ.
21. ಊರ ಉತ್ತರಕ್ಕಿರುವ ದೇವಾಲಯ ಹೆಚ್ಚು ಹಾಳಾಗಿದೆ. ತಳಪಾಯದಲ್ಲಿ ಗರ್ಭಗೃಹ, ತೆರೆದ ಅರ್ಧಮಂಟಪ ಮತ್ತು ಸಭಾಮಂಟಪಗಳಿವೆ. ಗರ್ಭಗೃಹದಲ್ಲಿ ವಿಗ್ರಹಗಳಿಲ್ಲ.

ಈಶ್ವರ ಗುಡಿ: ಸೇಡಂ ನಗರದ ಪಂಚಲಿಂಗೇಶ್ವರ ದೇವಾಲಯ ಸಂಕೀರ್ಣದ ಉತ್ತರ ಕಡೆಯ ದೇವಾಲಯಕ್ಕೆ ಈಶ್ವರ ಗುಡಿ ಎಂದು ಹೆಸರು. ಈ ದೇವಾಲಯದ ತಳಪಾಯದಲ್ಲಿ ಒಂದು

ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗವಿದೆ. ನವರಂಗದ ಮಧ್ಯ ಗರ್ಭಗೃಹಕ್ಕೆ ಎದುರಾಗಿ ನಂದಿಯನ್ನು ಕೂಡಿಸಲಾಗಿದೆ. ಈ ಗುಡಿಯ ಭಿತ್ತಿಯಲ್ಲಿ ಸರಳ ಚೌಕಾದ ಅರ್ಧಗಂಬಗಳ ಒಂದು ಸಾಲಿದೆ. ಗರ್ಭಗೃಹದ ಭಿತ್ತಿ ಮೇಲೆ ಮತ್ತು ಕಪೋತ, ಕೆಳಗಡೆ ಹಂಸಪಕ್ಷಿಗಳ ಸಾಲಿರುವುದು. ಅದರಲ್ಲಿಯೂ ಗರ್ಭಗೃಹ ಕ್ರಿ.ಶ. 10ನೇ ಶತಮಾನದ್ದು, ಉಳಿದ ಭಾಗ ಕ್ರಿ.ಶ. 12ನೇ ಶತಮಾನ. ಅದಕ್ಕೆ ಇತ್ತೀಚೆಗೆ ಸುಣ್ಣ ಲೇಪಿಸಿದ್ದು ಅಲ್ಲಲ್ಲಿ ಚಿಕ್ಕಪುಟ್ಟ ಬದಲಾವಣೆಗಳನ್ನು ಮಾಡಲಾಗಿದೆ.

ತ್ರಿಲಿಂಗೇಶ್ವರ ದೇವಾಲಯ: ಸೇಡಂ ಈ ದೇವಾಲಯದ ತಳಪಾಯದಲ್ಲಿ ಎರಡು ಗರ್ಭಗೃಹಗಳು ಏದುರುಬದುರಾಗಿವೆ. ತಲಾ ಒಂದಕ್ಕೆ ಅರ್ಧಮಂಟಪವಿದೆ. ಅರ್ಧಮಂಟಪದಲ್ಲಿ ಸ್ತಂಭಗಳಿವೆ. ಇವುಗಳ ಮುಂದೆ ಒಂದು ನವರಂಗವಿದೆ. ಗರ್ಭಗೃಹದಲ್ಲಿರುವ ಶಿವಲಿಂಗದ ಬ್ರಹ್ಮಸೂತ್ರ ವಿಶಿಷ್ಟವಾಗಿದೆ. ಅರ್ಧಮಂಟಪದ ಕಂಬಗಳು ತುಂಡಾಗಿ, ನೀಳವಾಗಿವೆ. ದ್ವಾರದಲ್ಲಿ ಶೈವ ದ್ವಾರಪಾಲಕರಿದ್ದಾರೆ.

ಶೈವದ್ವಾರ ಚೌಕಟ್ಟು: ಸೇಡಂನ ಚಿಕ್ಕ ಅಗಸಿ ಮತ್ತು ಅಗಸಿಹಳ್ಳಿ ದಂಡೆಯ ಮಾರುತಿ ಗುಡಿಗೆ ಈ ದ್ವಾರಚೌಕಟ್ಟಿದೆ. ಅದರ ಕಪೋತದ ಮೇಲೆ ಹಂಸಪಕ್ಷಿಗಳ ಸಾಲಿದೆ. ಮೇಲ್ಗಡೆ ಚೈತ್ಯ ನಮೂನೆಗಳಿವೆ.

ದೇಗುಲ: ಸೇಡಂನ ಮಾಧವಗುಡಿ ಬದಿಗೆ ಈ ದೇಗುಲವಿದ್ದು, ಅದಕ್ಕೆ ಗರ್ಭಗೃಹ ಮತ್ತು ಅಂತರಾಳಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ಬ್ರಹ್ಮ ಸೂತ್ರ ಎಂಟನೆಯ ಶತಮಾನದ ಶೈಲಿಯಲ್ಲಿದೆ. ದ್ವಾರದಲ್ಲಿ ಶೈವದ್ವಾರಪಾಲಕರಿದ್ದಾರೆ. ಚೌಕಟ್ಟಿನ ಮೇಲೆ ಐದು ರೇಖಾನಗರ ಶೈಲಿಯ ಶಿಖರಗಳು ನಡುವೆ ಸಿಂಹಗಳಿವೆ. ಅಂತರಾಳದಲ್ಲೂ ಹನ್ನೆರಡನೆಯ ಶತಮಾನದ ಶಿವಲಿಂಗವಿದೆ.

ಗಣೇಶ ಗುಡಿ: ಸೇಡಂನ ಈ ಗಣೇಶಗುಡಿಯಲ್ಲಿ ಒಂದು ಗರ್ಭಗೃಹವಿದೆ. ಅದರಲ್ಲಿ ಗಣೇಶನ ವಿಗ್ರಹವಿದೆ.

ಈಶ್ವರ ಗುಡಿ: ಸೇಡಂನ ಈಶ್ವರ ಗುಡಿಗೆ ಗರ್ಭಗೃಹ ಮತ್ತು ಅರ್ಧಮಂಟಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ದ್ವಾರ ಚೌಕಟ್ಟಿನ ಕೆಳಗೆ ಪೂರ್ಣಕುಂಭ, ಲಲಾಟದಲ್ಲಿ ಗಣೇಶನಿದ್ದಾನೆ.

ಲೋಕೇಶ್ವರ ದೇವಾಲಯ: ಹಂದರಕಿಯ ಲೋಕೇಶ್ವರ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪ, ಎದುರಿಗೆ ನಂದಿಮಂಟಪಗಳಿವೆ. ದ್ವಾರ ಚೌಕಟ್ಟಿನ ಹೊಸ್ತಿಲ ಬದಿಗಳಲ್ಲಿ ಆನೆಗಳಿವೆ. ಕಪೋತದಲ್ಲಿ ಚೈತ್ಯ ನಮೂನೆಗಳಿವೆ. ಅರ್ಧಮಂಟಪದ ಮತ್ತು ಗರ್ಭಗೃಹದ ಭುವನೇಶ್ವರಗಳಲ್ಲಿ ಅರಳಿದ

ಕಮಲಗಳಿವೆ. ನವರಂಗದ ಗೋಡೆಭಾಗ ಜೀರ್ಣೋದ್ಧಾರವಾಗಿದೆ. ಇದರ ಭುವನೇಶ್ವರಗಳಲ್ಲಿ ಅರಳಿದ ಕಮಲಗಳಿವೆ. ನವರಂಗದ ಗೋಡೆ ಭಾಗ ಜೀರ್ಣೋದ್ಧಾರವಾಗಿದೆ. ಇದರ ಭುವನೇಶ್ವರಿಯಲ್ಲೂ ವಿಸ್ತಾರವಾದ ವೃತ್ತಾಕಾರದ ಅರಳಿದ ಕಮಲವಿದೆ. ದ್ವಾರದ ಬದಿಗಳಲ್ಲಿ ಅಳೆತ್ತರದ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಎದುರುಗಿನ ಮಂಟಪದಲ್ಲಿ ನಂದಿ ವಿಗ್ರಹವಿದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ತ್ರಿಪಟ್ಟ, ಕುಮುದ, ಕಪೋತಗಳಿದ್ದು, ಇದು ಸುಮಾರು ಒಂದು ಮೀಟರ್ ಎತ್ತರವಿದೆ. ಗೋಡೆಯು ಸರಳವಾಗಿದ್ದು, ತ್ರಿರಥ ಮಾದರಿಯಲ್ಲಿದೆ. ದ್ರಾವಿಡ ಮಾದರಿಯ ತದನಂತರ ಕಾಲದ ಗಾರೆ ಇಟ್ಟಿಗೆಯ ಶಿಖರವಿದೆ.

ಆನೇಶ್ವರ ದೇವಾಲಯ: ಹಂದರಕಿಯ ಆನೇಶ್ವರ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳಿವೆ. ಇದಕ್ಕೆ ಹೊಂದಿ ಇನ್ನೆರಡು ಗರ್ಭಗೃಹಗಳಿವೆ. ತಲಾ ಒಂದಕ್ಕೆ ಅರ್ಧಮಂಟಪಗಳಿವೆ. ಮುಂದೆ ತೆರೆದ ಸಭಾಮಂಟಪವಿದೆ. ದೇವಾಲಯದ ಸುತ್ತಲೂ ಪ್ರದಕ್ಷಿಣಾಪಥವಿದೆ. ಇದು ತ್ರಿರಥಮಾದರಿಯಲ್ಲಿದೆ. ಗರ್ಭಗೃಹದಲ್ಲಿ ಹನ್ನೆರಡನೆಯ ಶತಮಾನದ ಶಿವಲಿಂಗವಿದೆ. ದ್ವಾರದಲ್ಲಿ ವಿವಿಧ ಶಾಖೆಗಳು ಮತ್ತು ಶೈವ ದ್ವಾರಪಾಲಕರಿದ್ದಾರೆ. ಮೇಲೆ ಹಂಸಪಕ್ಷಿಗಳ ಸಾಲಿದೆ. ಕಪೋತದಲ್ಲಿ ಐದು ರೇಖನಾಗರಶೈಲಿಯ ಶಿಖರಗಳಿವೆ. ಅರ್ಧ ಮಂಟಪದ ಕಂಬಗಳಲ್ಲಿ ಗುಳ್ಳೆಯಾಕಾರದ ಲಕ್ಷಣಗಳಿವೆ. ಉಂಗುರ ಪಟ್ಟಿಕೆಗಳಿವೆ. ಎರಡು ಚೌಕ ಮುಖಗಳಲ್ಲಿ ನೃತ್ಯ ಗಣೇಶನ ವಾದ್ಯಮೇಳ, ಶಿವಪಾರ್ವತಿ, ದೇವ-ದೇವತೆಗಳು ಶಿವನ ಪೀಠದ ಕೆಳಗೆ ನಂದಿ, ನಟರಾಜ, ವಾದ್ಯಮೇಳ, ನರಸಿಂಹ ಹಿರಣ್ಯಕಶ್ಯಪನ ಹೊಟ್ಟೆಯನ್ನು ಬಗೆಯುತ್ತಿರುವುದು, ಶಿವ ನಂದಿ ಸವಾರಿ ಮಾಡುತ್ತಿರುವುದು, ಜೊತೆಯಲ್ಲಿ ಭಕ್ತರು, ಕಿರಾತಾರ್ಜುನರ ದೃಶ್ಯ, ಶಿವ-ಅರ್ಜುನ, ಹಂದಿ ಬೇಟೆ, ಗಜ ಮರ್ಧನ ಚಿತ್ರಗಳಿವೆ. ದ್ವಾರಪಟ್ಟಿಕೆಯಲ್ಲಿ ಶೈವ ದ್ವಾರಪಾಲಕರಿದ್ದಾರೆ. ಬದಿಗೆ ಜಾಲಂದ್ರಗಳಿವೆ. ಸ್ತಂಭ ಮಕರಣತೋರಣದಲ್ಲಿ ಭಕ್ತರ ನಡುವೆ ನಟರಾಜನಿದ್ದಾನೆ. ಮಕರಗಳ ಬದಿಗಳಲ್ಲಿ ನವಿಲುಗಳಿವೆ. ತೆರೆದ ನವರಂಗಕ್ಕೆ ಕಕ್ಷಾಸನವಿದೆ. ಇದಕ್ಕೆ ಎತ್ತರದ ಅಧಿಷ್ಠಾನವಿದೆ. ಹೊರಗಡೆ ಪ್ರದಕ್ಷಿಣಾಪಥವಿದೆ. ತ್ರಿರಥ ಮಾದರಿಯಲ್ಲಿದೆ. ಶಿಖರ ಸಂಪೂರ್ಣ ಜೀರ್ಣೋದ್ಧಾರವಾಗಿದೆ.

ಜ್ಯೋತಿರ್ಲಿಂಗ ದೇವಾಲಯ:ಹಂದರಕಿಯ ಈ ದೇವಾಲಯ ಹೆಚ್ಚು ಹಾಳಾಗಿದೆ. ತಳಪಾಯದಲ್ಲಿ ಗರ್ಭಗೃಹ ಮತ್ತು ದ್ವಾರಬಾಗಿಲು ಉಳಿದುಕೊಂಡಿವೆ. ಇದು ತ್ರಿರಥ ಮಾದರಿಯಲ್ಲಿದೆ. ಅಲ್ಲಿ ಎರಡು 12ನೇ ಶತಮಾನದ ಶಿವಲಿಂಗಗಳಿವೆ. ಅವುಗಳಿಗೆ ಹತ್ತನೆಯ ಶತಮಾನದ ಚೌಕ ಪೀಠಗಳಿವೆ. ಈ ದ್ವಾರ ಚೌಕಟ್ಟಿನಲ್ಲಿ ಒಂದು ಶಾಖೆಯಲ್ಲಿ ಉದ್ದವಾದ ಐದು ಹುಡುಗರನ್ನು ತೋರಿಸಲಾಗಿದೆ ಮತ್ತು ಶೈವ ದ್ವಾರಪಾಲಕರಿದ್ದಾರೆ. ಅದರ ಹಿಂಬದಿಯಲ್ಲಿ ಒಂದು ಮೆಟ್ಟಿಲುಳ್ಳ ಬಾವಿಯಿದೆ.

ಈಶ್ವರ ಗುಡಿ : ಹಂದರಕಿಯ ಈ ದೇವಾಲಯಕ್ಕೆ ಗರ್ಭಗೃಹ, ಅರ್ಧಮಂಟಪ ಮತ್ತು ಮುಖಮಂಟಪವಿದೆ. ಇದು ತ್ರಿರಥ ಮಾದರಿಯಲ್ಲಿದೆ. ಗರ್ಭಗೃಹದಲ್ಲಿ 18ನೇ ಶತಮಾನದ ಶಿವಲಿಂಗವಿದೆ. ದ್ವಾರಪಟ್ಟಿಯಲ್ಲಿ ಇಲ್ಲಿಯೂ ನಿಂತಿರುವ ಐದು ಹುಡುಗರಿದ್ದಾರೆ. ಕೆಳಗಡೆ ಶೈವ ದ್ವಾರಪಾಲಕರಿದ್ದಾರೆ.

ನಂದಿ ಮಂಟಪಗಳು: ಹಂದರಕಿಯ ಲೋಕೇಶ್ವರ ಗುಡಿಯ ಸಂಕೀರ್ಣದಲ್ಲಿ ಎರಡು ತೆರದ ಪ್ರತ್ಯೇಕ ನಂದಿ ಮಂಟಪಗಳಿವೆ. ಅಲ್ಲಿ ನಂದಿ ವಿಗ್ರಹಗಳನ್ನು ಪ್ರತಿಷ್ಠಾಪಿಸಲಾಗಿದೆ.

ಮಠಗಳು:

1. ಒಂದು ವಿಶಾಲ ಕಟ್ಟಡದಲ್ಲಿ ಎರಡು ಕೋಣೆಗಳಿವೆ. ಮುಂದಿನ ಭಾಗ ಹಾಳಾಗಿದೆ. ಮುಂದಿನ ಆಯತಾಕಾರ ಕೋಣೆಯಲ್ಲಿ ಆರು ಕಂಬಗಳಿವೆ. ಹಿಂದಿನ ಕೋಣೆಯಲ್ಲಿ ಎರಡು ಕಂಬಗಳಿವೆ.
2. ಒಂದು ಕೋಣೆಯುಳ್ಳ ಕಟ್ಟಡ ದುಃಸ್ಥಿತಿಯಲ್ಲಿದೆ. ಪೂರ್ವಕ್ಕೆ ಮುಖ ಮಾಡಿದೆ. ಒಳಗಡೆ ನಾಲ್ಕು ಕಂಬಗಳಿವೆ.
3. ಊರಿನ ನೈರುತ್ಯದಲ್ಲಿರುವ ಒಂದು ಮಠಕ್ಕೆ ದೊಡ್ಡ ಕೋಣೆಯಿದೆ. ಒಳಗಡೆ ಎಂಟು ಕಂಬಗಳಲ್ಲಿ ನಾಲ್ಕು ಉಳಿದಿವೆ.
4. ಹಾಳಾದ ಕಟ್ಟಡಕ್ಕೆ ಎರಡು ಆಯತಾಕಾರದ ಕೋಣೆಗಳಿವೆ. ಪೂರ್ವಕ್ಕೆ ಮುಖ ಮಾಡಿದೆ. ಒಂದರಲ್ಲಿ ಎರಡು ಇನ್ನೊಂದರಲ್ಲಿ ನಾಲ್ಕು ಕಂಬಗಳಿವೆ.

ಸೂರ್ಯ ದೇವಾಲಯ: ನಿಡಗುಂದಿ (ಚಿಂಚೋಳ್ಳಿ ತಾ.) ಯ ನವಕೋಟಿ ನಾರಾಯಣ ಮತ್ತು ಕಾಳಿಕಾ ದೇವಿ ದೇವಾಲಯಗಳೆರಡೂ ರಾಷ್ಟ್ರಕೂಟರ ಕಾಲದ್ದಾಗಿವೆ. ಇದನ್ನು ನವಕೋಟಿ ನಾರಾಯಣ ದೇವಾಲಯ ಎನ್ನುವರು. ಕಂಬದಲ್ಲಿ ಕ್ರಿ.ಶ. 936ರ ಅಕಾಲವರ್ಷನ ಆಳ್ವಿಕೆಯ ಪೂರ್ಣ ಶಾಸನವಿದೆ. ಅದರಲ್ಲಿ ಅರಸನ ಬಿರುದು, ಕಾಲದ ವಿವರ ಉಳಿದಿದೆ. ಈ ದೇವಾಲಯದ ತಳಪಾಯದಲ್ಲಿ ಎರಡು ಗರ್ಭಗೃಹಗಳು ಮತ್ತು ಅಂತರಾಳಗಳಿವೆ. ಪೂರ್ವಕ್ಕೆ ಮುಖಮಾಡಿದ ಗರ್ಭಗೃಹದಲ್ಲಿ ಸೂರ್ಯನಾರಾಯಣ ವಿಗ್ರಹಕ್ಕೆ ಎತ್ತರವಾದ ಪೀಠವಿದೆ. ಇದರ ಬಾಗಿಲಚೌಕಟ್ಟಿನಲ್ಲಿ ನಾಲ್ಕು ಶಾಖೆಗಳಿವೆ. ಜೋಡಿ ಹಂಸಗಳ ಪಟ್ಟಿಕೆಯೂ ಒಳಗೊಂಡಿದೆ. ಅಂತರಾಳದ ಎರಡು ಸ್ತಂಭಗಳುಳ್ಳ ಮಕರ ತೋರಣ ವಿಶಿಷ್ಟವೆನಿಸಿದೆ. ಅದರ ಅಲಂಕಾರದ ನಡುವೆ ಸೂರ್ಯನನ್ನು ಚಿತ್ರಿಸಲಾಗಿದೆ. ಈ ತೋರಣದಲ್ಲಿ ಕಿರಿದಾಗಿ ನಡುವೆ ಸೂರ್ಯನನ್ನು ಬದಿಗಳಲ್ಲಿ ನಿಧಿಗಳನ್ನು, ದೇವತೆಗಳನ್ನು ಮತ್ತು ಮಕರ ಸವಾರರನ್ನು ಕೆತ್ತಿದ್ದಾರೆ. ನವರಂಗದಲ್ಲಿ ಎರಡು ದೇವಕೋಷ್ಠಕಗಳಿದ್ದು ಒಂದರಲ್ಲಿ ಶಿವಲಿಂಗ ಇನ್ನೊಂದರಲ್ಲಿ ಭೈರವರ

ಶಿಲ್ಪಗಳಿವೆ. ಅಲ್ಲಿ ಸೂರ್ಯನ ಶಿಲ್ಪವೂ ಇದೆ. ಒಂದು ಕಂಬದ ಮೇಲೆ ಈ ಮೇಲೆ ಹೇಳಿದ ಶಾಸನವಿದೆ. ಹೀಗಾಗಿ ಈ ದೇವಾಲಯ ಸುಮಾರು ಕ್ರಿ.ಶ. 10ನೇ ಶತಮಾನದ್ದಾಗಿದೆ. ಇದೇ ಕಾಲದ ಈ ದೇವಾಲಯದ ಎದುರಿಗಿನ ಸುಂದರ ದೇವಾಲಯ ಈಶ್ವರನದೆಂದು ಕರೆಯುವರು. ಆದಕ್ಕೆ ದ್ರಾವಿಡ ಶೈಲಿಯ ಶಿಖರವಿದೆ. ಸಂಕೀರ್ಣದಲ್ಲಿರುವ ಅನೇಕ ಶಿಲ್ಪಗಳಲ್ಲಿ ಎರಡು ಈ ಕಾಲದ ಶೈವ ದ್ವಾರಪಾಲಕರ ಶಿಲ್ಪಗಳು ವಿಶೇಷ ಗಮನವನ್ನು ಸೆಳೆಯುತ್ತವೆ.

ಬಲಭೀಮರಾಯನ ದೇವಾಲಯ: ಭೀಮರಾಯನ ಗುಡಿಯ (ಶಹಾಪುರ ತಾ.) ಬಲಭೀಮರಾಯನ ದೇವಾಲಯವನ್ನು (ಭೀಮೇಶ್ವರ ಗುಡಿ) ಸುರಪುರದ ರಾಜ ವೆಂಕಟಪ್ಪ ನಾಯಕ ನಿರ್ಮಿಸಿ ಮಾರುತಿ ವಿಗ್ರಹವನ್ನು ಪ್ರತಿಷ್ಠೆ ಮಾಡಿದನೆನ್ನುವರು. ಈ ದೇವಾಲಯದ ನವರಂಗದ ಕಂಬಗಳ ಬುಡದಲ್ಲಿ ಪದ್ಮಪೀಠದ ಮೇಲೆ ಕುಳಿತ ಸಿಂಹಗಳಿವೆ. ಈ ನಮೂನೆಯ ಮೂರು ಸಿಂಹಕಂಬಗಳು ಶಿರಿವಾಳದಲ್ಲಿ ಮತ್ತು ಜೇವರ್ಗಿಯ ಮಾರುತಿ ದೇವಾಲಯ ತೆರೆದ ಮಂಟಪದಲ್ಲೂ ಇವೆ. ಪ್ರಸ್ತುತ ದೇವಾಲಯದ ಬಾಗಿಲ ಚೌಕಟ್ಟು, ಕಂಬಗಳು ಮತ್ತು 1051ರ ಶಾಸನದಲ್ಲಿ ಕಾಣುವ ಉಲ್ಲೇಖ "ಶ್ರೀವೊಲ" ಇದರಿಂದ ಇವುಗಳನ್ನು ಶಿರಿವಾಳದಿಂದ ಇಲ್ಲಿಗೆ ತರಲಾಗಿದೆ ಎಂಬುದು ಸ್ಪಷ್ಟವಾಗಿದೆ. ಇವು ಸು. ಕ್ರಿ.ಶ. 10ನೇ ಶತಮಾದ್ದಾಗಿವೆ. ಸಿಂಹಸ್ತಂಭಗಳು ಸಮಕಾಲೀನ ಚೋಳರ ದೇವಾಲಯ ದಕ್ಷಿಣ ಭಾರತದ ತಮಿಳುನಾಡಿನಲ್ಲಿರುವುದನ್ನು ನೆನೆಯಬಹುದು. ಆದರೆ ಈ ನಮೂನೆಯ ಕಂಬಗಳು ಕರ್ನಾಟಕದ ಈ ಕಾಲದ ವಾಸ್ತುಶಿಲ್ಪ ಕಲಾಚರಿತ್ರೆಯಲ್ಲಿ ವಿರಳ ಎಂಬುದನ್ನು ಈ ಹಿಂದೆ ಎಂ.ಎಸ್. ನಾಗರಾಜರಾವ್‌ರವರು ಅಭಿಪ್ರಾಯಪಟ್ಟಿರುವರು.

ಸೂರ್ಯ ದೇವಾಲಯ: ಶಿರಿವಾಳದ ಹಾಳಾದ ಈ ದೇವಾಲಯ ಪಶ್ಚಿಮಕ್ಕೆ ಮುಖ ಮಾಡಿದೆ. ತಳಪಾಯದಲ್ಲಿ ಗರ್ಭಗೃಹ ಮತ್ತು ಅಂತರಾಳವಿದೆ. ಭಿತ್ತಿಯಲ್ಲಿ ಸರಳ ಅರೆಗಂಬಗಳು ಮತ್ತು ದ್ವಾರ ಚೌಕಟ್ಟಿನ ಅಲಂಕರಣ ಇತ್ಯಾದಿ ಈ ಕಾಲದ್ದಾಗಿದೆ.

ಶಾಲಾ ಮಾದರಿ ಶಿಖರವುಳ್ಳ ದೇವಾಲಯ:



ನಿಡಗುಂದಿಯ (ಚಿಂಚೊಳ್ಳಿ ತಾ.) ಕಾಳಿಕಾದೇವಿಯ ದೇವಾಲಯದ ಶಿಖರವು ಶಾಲಾ ಮಾದರಿಯಲ್ಲಿರುವುದು ವಿಶಿಷ್ಟವೆನಿಸಿದೆ. ಈ ದೇವಾಲಯದ ತಳಪಾಯದಲ್ಲಿ ಒಂದೇ ಸಾಲಿನಲ್ಲಿ

ಎರಡು ಗರ್ಭಗೃಹಗಳು ಮತ್ತು ಆಯತಾಕಾರದ ನವರಂಗಗಳಿವೆ. ಇದಲ್ಲದೆ ಎರಡು ಪ್ರವೇಶ ದ್ವಾರಗಳಿವೆ. ಈ ಗರ್ಭಗೃಹಗಳಲ್ಲಿ ಕ್ರಮವಾಗಿ ಶಿವಲಿಂಗ ಮತ್ತು ಕಾಳಿಕೆಯರ ವಿಗ್ರಹಗಳಿವೆ. ಬಾಗಿಲ ಚೌಕಟ್ಟಿನಲ್ಲಿ ಒಂದಕ್ಕೆ ಮೂರು ಇನ್ನೊಂದಕ್ಕೆ ನಾಲ್ಕು ಅಲಂಕಾರಿಕ ಶಾಖೆಗಳಿವೆ. ಅವು



ಲತಾಸುರುಳಿ, ರತ್ನಪಟ್ಟಿ, ಅರೆಗಂಬ ಮತ್ತು ಪತ್ರಗಲು, ಲಲಾಟದಲ್ಲಿ ಗಜಲಕ್ಷ್ಮೀ ಇರುವಳು. ಕೆಳಗಡೆ ದ್ವಾರಪಾಲಕರ ಕೈಗಳಲ್ಲಿ ಗದೆ ಮತ್ತು ಪುಷ್ಪಗಳಿವೆ. ಬದಿಗಲಲ್ಲಿ ಪೂರ್ಣಕುಂಬಗಳಿವೆ. ಅಲ್ಲಿಕೆಲವು ಶಿಲ್ಪಗಳೂ ಇವೆ. ನವರಂಗದಲ್ಲಿ ಎಂಟು ಕಂಬಗಳು ಎರಡು ಸಾಲುಗಳಲ್ಲಿ ಕಂಬಗಳ ಚೌಕಟ್ಟಿನಲ್ಲಿ ಪಂಚತಂತ್ರ, ರಾಮಾಯಣಕ್ಕೆ ಸಂಬಂಧಿಸಿದ ಕಥಾನಕ ದೃಶ್ಯಗಳಿರುವುದು ಗಮನೀಯ. ಮೂರು ಕಂಬಗಳಲ್ಲಿ ಬಲಿ, ಕುಂಬದಿಂದ ನೀರನ್ನು ಬಿಡುವದೃಶ್ಯಗಳಿವೆ. ಪಟ್ಟಿಕೆಯಲ್ಲಿ ತ್ರಿವಿಕ್ರಮ ಮತ್ತು ಭಕ್ತರಿಬ್ಬರಿದ್ದಾರೆ. ಮೂರರಲ್ಲಿ ವರಾಹ ಮತ್ತು ಲಕ್ಷ್ಮೀಯರಿದ್ದಾರೆ. ನಾಲ್ಕರಲ್ಲಿ ಉಗ್ರನರಸಿಂಹ ಮತ್ತು ಇಬ್ಬರು ಸ್ತ್ರೀಯರಿದ್ದಾರೆ. ಎರಡನೇ ಕಂಬದಲ್ಲಿ 1ನೇ ಮುಖದಲ್ಲಿ ಬಲರಾಮ ಇಬ್ಬರು ಮಲಗಿದ ವ್ಯಕ್ತಿಗಳು, 2ರಲ್ಲಿ ಕುಳಿತ ವ್ಯಕ್ತಿ- ಕೈಮುಗಿದು ನಿಂತ ದಂಪತಿಗಳು, 3ರಲ್ಲಿ ವಿಷ್ಣು (?) ಮತ್ತು ಆಕಳು ಕರುಗಳು, 4ರಲ್ಲಿ ರಾಮ-20 ಕೈವುಳ್ಳ ರಾವಣರಿದ್ದಾರೆ. ಮೂರನೆಯ ಕಂಬದಲ್ಲಿ ಕೈವುಳ್ಳ ರಾವಣರಿದ್ದಾರೆ. ಮೂರನೆ ಕಂಬದಲ್ಲಿ 1ನೇ ಮೂಖದಲ್ಲಿ ಕುಬ್ಜ-ವೀಣಾಧಾರಿ, 2ನೇ ಮುಖದಲ್ಲಿ ಸಿಂಹ ವಿಷ್ಣು, 3ನೇ ಮುಖದಲ್ಲಿ ಶ್ರೀನಿಧಿ ಪಧ್ಮನಿಧಿ, 4ನೇ ಮುಖದಲ್ಲಿ ಅಶ್ವಮುಖ ಯಕ್ಷ-ಪಧ್ಮನಿಧಿಯರಿದ್ದಾರೆ. ನಾಲ್ಕನೆಯ ಕಂಬದ 1ನೇ ಮುಖದಲ್ಲಿ ತಾಯಿ ಮಗುವಿಗೆ ಮೊಲೆ ಹಾಲನ್ನು ಕುಡಿಸುತ್ತ ಕುಳಿತಿರುವಳು. 20ರಲ್ಲಿ ನಂದಗೋಪಾಲ ದನಗಳನ್ನು ಕಾಯುತ್ತಿರುವುದನ್ನು, 3ರಲ್ಲಿ ತೊಟ್ಟಿಲಲ್ಲಿ ಮಲಗಿದ ಶಿಶು, 4ರಲ್ಲಿ ಒಬ್ಬ ವ್ಯಕ್ತಿ ಆಶ್ಚರ್ಯದಿಂದ ವೀಕ್ಷಿಸುತ್ತಿರುವನು. ಬೆಣ್ಣೆ ಕದಿಯಲು ಕೃಷ್ಣ ಮಜ್ಜಿಗೆಕೋಲಿನ ಬಳಿ ನಿಂತಿರುವನು. ಕೃಷ್ಣನನ್ನು ಕಂಬಕ್ಕೆ ಕಟ್ಟಲಾಗಿದೆ. ತಾಯಿ ಮಗು ಮತ್ತು ನಾಯಿ ಅಷ್ಟಭುಜಧಾರಿ ಭೈರವಿ ಮತ್ತು ಸುರನ ಚಿತ್ರಗಳಿವೆ. ಇಲ್ಲಿ ತಲಾ ಒಂದು ಚಿತ್ರವನ್ನು ಇಳಿಬಿಟ್ಟು ಹಾರದ ನಡುವೆ ಚಿತ್ರಿಸಲಾಗಿದೆ.



ಮೊದಲ ಕಂಬದ ಎರಡನೇ ಸಾಲಿನಲ್ಲಿರುವ ಚಿತ್ರಗಳಲ್ಲಿ ಮೂರರಲ್ಲಿ ರಾಮ-ಲಕ್ಷ್ಮಣರು ಬಿಲ್ಲುಬಾಣ ಹಿಡಿದು ನಿಂತಿದ್ದಾರೆ. ಬದಿಗೆ ಎರಡು ಮಂಗಗಳಿವೆ. ಒಂದು ಸಾಲಿನಲ್ಲಿ ಏಳು ಕಬ್ಬಿನ ವನವನ್ನು ಬಣದಿಂದ ಕತ್ತರಿಸಲಾಗಿದೆ.

ಇದು ಸಪ್ತಸಾಲು ಭೇದನದ ಸಂಕೇತ. 4ನೇ ಮುಖದಲ್ಲಿ ಬಿಲ್ಲು ಬಾಣ ಹಿಡಿದು ರಾಮಲಕ್ಷ್ಮಣರಿದ್ದಾರೆ. ಎರಡನೇ ಕಂಬದಲ್ಲಿ ಕಿರತಾರ್ಜುನರಲ್ಲಿ ಕಿರಾತನೆ ವೇಷದಲ್ಲಿ ಶಿವ ಮತ್ತು ಅರ್ಜುನರಿದ್ದಾರೆ. 2ರಲ್ಲಿ ಬೇಟೆಯಾಡುತ್ತಿರುವ ಹಂದಿಯ ಶಿವಲಿಂಗವನ್ನು ಹತ್ತಿದೆ. 3ರಲ್ಲಿ ಶಿವಲಿಂಗದಲ್ಲಿ ಶಿವ ಪಾರ್ವತಿಯರು ಪ್ರತ್ಯಕ್ಷರಾಗಿದ್ದಾರೆ. ಇಲ್ಲಿ ಶಿವಲಿಂಗವನ್ನು ಪಂಚಕುಂಭಗಳ ಮೇಲೆ ಇಡಲಾಗಿದೆ. ಹಂದಿಯು ತನ್ನ ಮುಂದಿನ ಕಾಲುಗಳನ್ನು ಲಿಂಗ ಪೀಠದ ಮೇಲಿಟ್ಟು ಬಾಯಿಂದ ಲಿಂಗವನ್ನು ಕಚ್ಚಿದೆ. ಶಿವ ನಿಂತಿದ್ದಾನೆ. ಇನ್ನೊಂದರಲ್ಲಿ ಶಿವ-ಪಾರ್ವತಿಯರಿದ್ದಾರೆ. ನಡುವೆ ಭಕ್ತನಿದ್ದಾನೆ. ಇದರಲ್ಲಿ ಶಿವ-ಪಾರ್ವತಿಯರು ಬೇಡರ ವೇಷದಲ್ಲಿದ್ದಾರೆ. ಅರ್ಜುನ ಬಿಲ್ಲು ಹಿಡಿದು ನಿಂತಿದ್ದಾನೆ. ಮಧ್ಯ ಹಂದಿಯಿದೆ. ಇಲ್ಲಿಯೂ ಇಳಿಬಿಟ್ಟು ಜೋಡಿ ಹಾರಗಳಲ್ಲಿ ತಲಾ ಒಂದು ಚಿತ್ರಗಳಿವೆ.

ಮೂರನೆಯ ಕಂಬದಲ್ಲಿ ಸಮುದ್ರಮಥನ ಚಿತ್ರವಿದೆ. 2ನೇ ಮುಖದಲ್ಲಿ ಆನೆ, ಕೆಳಗಡೆ ಹಸು ಕುದುರೆಗಳಿವೆ. ಈ ಚಿತ್ರಗಳ ಮೇಲೆ ಲಕ್ಷ್ಮಿ ಇದ್ದಾಳೆ. ಲಕ್ಷ್ಮಿ ಬದಿಗಳಲ್ಲಿ ಸೇವಕಿಯರಿದ್ದಾರೆ. 3ರಲ್ಲಿ ಶೇಷನಯನ ವಿಷ್ಣುವಿನ ನಾಭಿಯಿಂದ ಬಂದ ಕಮಲದಲ್ಲಿ ಕುಳಿತ ಬ್ರಹ್ಮರ ಪಾದವಿಡಿದು ಲಕ್ಷ್ಮೀ ಕುಳಿತಿದ್ದಾಳೆ. ಮೇಲ್ಗಡೆ ಕಿನ್ನರರು ಆಕಾಶದಲ್ಲಿ ಹಾರುತ್ತಿರುವರು. 4ನೇ ಮುಖದಲ್ಲಿ ತ್ರಿಮೂರ್ತಿಗಳಿದ್ದಾರೆ. ಉದ್ಭವ ಲಿಂಗದ ಬದಿಗಳಲ್ಲಿ ಬ್ರಹ್ಮ ಮತ್ತು ವಿಷ್ಣು ಕೈಮುಗಿದು ಕುಳಿತಿರುವರು. ಮೇಲ್ಗಡೆಯಿರುವ ಗೂಡಿನಲ್ಲಿ ಗಣೇಶನಿದ್ದಾನೆ. ಈ ಎಲ್ಲ ಶಿಲ್ಪಗಳನ್ನು ಇಳಿಬಿಟ್ಟ ಮಾಲೆಗಳ ನಡುವೆ ಚಿತ್ರಿಸಲಾಗಿದೆ. ನಾಲ್ಕನೆಯ ಕಂಬದಲ್ಲಿ 1ನೆಯ ಮುಖದಲ್ಲಿ ಗಡ್ಡಧಾರಿ ಋಷಿ ನಿಂತ ಸ್ತ್ರೀ, 2ನೇ ಮುಖದಲ್ಲಿ ದ್ವಿಭುಜಧಾರಿ ಶಿವ ಮತ್ತು ಅಸ್ಥಿ ದೇಹಾಂಗವುಳ್ಳ ಬಾಲಕರೂಪದಲ್ಲಿ ಭೃಂಗಿಯಿದ್ದಾರೆ. 2ನೆಯ ಮುಖದಲ್ಲಿ ಖಡ್ಗ ಮತ್ತು ಮೋದಕ (?) ಹಿಡಿದು ನಿಂತ ವ್ಯಕ್ತಿ ಅಶ್ವತ್ಥ ಮರಗಳಿವೆ. ತಲಾ ಒಬ್ಬರನ್ನು ಇಳಿಬಿಟ್ಟು ಮಾಲೆಗಳ ನಡುವೆ ಚಿತ್ರಿಸಲಾಗಿದೆ.



ಗರ್ಭಗೃಹ ದ್ವಾರಬದಿಗಿನ ಅರೆಗಂಬಗಳಲ್ಲಿ ಆರು ದೃಶ್ಯಗಳಿವೆ. 1ರಲ್ಲಿ ಮಿಥುನ ಭಂಗಿಯಲ್ಲಿರುವ ಪ್ರೇಮಿಗಳನ್ನು ಇಬ್ಬರು ವೀಕ್ಷಿಸುತ್ತಿರುವರು. 2ರಲ್ಲಿ ನಾಯಿ-ನರಿಗಳು ಪೀಠದ ಮೇಲಿವೆ. 3ರಲ್ಲಿ ಮಂಗ ಮತ್ತು ಸೀಳಿದ ಬಡ್ಡಿಯಲ್ಲಿ ಬಾಲಸಿಗಿಸಿಕೊಂಡ ಮಂಗವಿದೆ. 4ರಲ್ಲಿ ಆಮೆ ಮತ್ತು ಮೀನುಗಳಿವೆ. 5ರಲ್ಲಿ ಪೂರ್ಣಕುಂಭಗಳ ಮೇಲೆ ಶ್ರೀನಿಧಿ ಮತ್ತು ಪದ್ಮನಿಧಿಗಳಿದ್ದಾರೆ. 6ರಲ್ಲಿ ಎರಡು ಮೀನುಗಳಿವೆ. ತಲಾ ಒಂದನ್ನು ಇಳಿಬಿಟ್ಟು ಹಾರದಲ್ಲಿ ಚಿತ್ರಿಸಲಾಗಿದೆ.



ಇನ್ನೊಂದು ಅರೆಗಂಬದಲ್ಲೂ ಆರು ಚಿತ್ರಗಳಿವೆ. 1ರಲ್ಲಿ ಕುಬ್ಜ-ಉದ್ದ-ಗಿಡ್ಡ ವ್ಯಕ್ತಿ. 2ರಲ್ಲಿ ಜೋಡು ಮೀನುಗಳು, 3ರಲ್ಲಿ ಶ್ರೀನಿಧಿ ಮತ್ತು ಪದ್ಮನಿಧಿಗಳು, 4ರಲ್ಲಿ ಸರೋವರದ ಕಮಲದ ಮೇಲೆ ಹಂಸಪಕ್ಷಿ ಮತ್ತು ಮೀನುಗಳ ಗುಂಪಿದೆ. 5ರಲ್ಲಿ ಕಾಲಿನಲ್ಲಿ ಹೊಡೆದಾಡುತ್ತಿರುವ ಮಂಗ ಮತ್ತು ಆನೆ ಸವಾರಿ ಮಾಡುವ ಮಂಗವಿದೆ. 6ರಲ್ಲಿ ಮೀನುಗಳಿವೆ. ಅದರ ಲಲಾಟ ಪಟ್ಟಿಕೆಯ ನಡುವೆ ಗಜಲಕ್ಷ್ಮಿಯಿದ್ದಾಳೆ. ಬದಿಗಿನ ಲಲಾಟಪಟ್ಟಿ ಸ್ವಲ್ಪ ಭಿನ್ನವಾಗಿದೆ. ಪಕ್ಕದ ಗೋಡೆಯ ಅರೆಗಂಬಗಳಲ್ಲೂ ಉಬ್ಬುಶಿಲ್ಪಗಳಿವೆ. 1ರಲ್ಲಿ ರೆಕ್ಕೆಯುಳ್ಳ ಗರುಡನು, ಅಮೃತ ಕುಂಭವನ್ನು ಹಿಡಿದಿದ್ದಾನೆ. ಭಕ್ತನೊಬ್ಬ ವೀಕ್ಷಿಸುತ್ತಿದ್ದಾನೆ. 2ರಲ್ಲಿ ದಶಬಾಹು ರಾವಣನಿದ್ದಾನೆ ಮತ್ತು ಎರಡು ಪಕ್ಷಿಗಳಿವೆ. ಎಡಗಡೆಯ ಅರೆಗಂಬದಲ್ಲಿ ನಿಂತ ಬಾಲಕನ ಕೈಮೇಲೆ ಇನ್ನೊಬ್ಬ ಬಾಲಕ ನಿಂತಿದ್ದಾನೆ ಮತ್ತು ದಂಪತಿಗಳಿಬ್ಬರು ನಿಂತಿದ್ದಾರೆ. ಗಂಡನು ಬಿಲ್ಲಿನಿಂದ ಬಾಣ ಹೊಡೆಯುತ್ತಿರುವನು. 2ರಲ್ಲಿ ಒಬ್ಬ ಭಕ್ತ ಕೈಮುಗಿದು ಬಾಗಿ ಇನ್ನೊಬ್ಬನ ಮೇಲೆ ಕುಳಿತಿದ್ದಾನೆ. ಹಾಗೂ ಚತುರ್ಭುಜಧಾರಿ ವಿಷ್ಣುವಿನ ಕೈಗಳಲ್ಲಿ ಅಭಯ, ಶಂಖ, ಚಕ್ರ ಮತ್ತು ಗದೆಗಳಿವೆ. ತಲಾ ಒಬ್ಬರನ್ನು ಇಳಿಬಿಟ್ಟ ಹಾರದಲ್ಲಿ ಚಿತ್ರಿಸಲಾಗಿದೆ.

ಈ ದೇವಾಲಯಕ್ಕೆ ಎರಡು ಪ್ರವೇಶದ್ವಾರಗಳು ಪೂರ್ವ ಮತ್ತು ದಕ್ಷಿಣದಲ್ಲಿವೆ. ದಕ್ಷಿಣ ಪ್ರವೇಶದ್ವಾರ ಚೌಕಟ್ಟಿನಲ್ಲಿ ನಾಲ್ಕು ಅಲಂಕೃತ ಶಾಖೆಗಳಿವೆ. ಅವು ಪತ್ರ, ಅರೆಗಂಭ, ಸಿಂಹಸಾಲು ಮತ್ತು ತತ್ರಗಳಿವೆ. ಲಲಾಟದಲ್ಲಿ ನಾಲ್ಕು ಚೈತ್ಯ ನಮೂನೆಗಳಿವೆ. ಬುಡದಲ್ಲಿ ಶೈವದ್ವಾರಪಾಲಕರಿದ್ದಾರೆ. ಪೂರ್ವದ ಇನ್ನೊಂದು ಪ್ರವೇಶದಲ್ಲಿ ಈ ಮಾದರಿಯಂತಹ ಅಲಂಕಾರವಿಲ್ಲ. ಈ ದೇವಾಲಯದ ಭಿತ್ತಿಯು ಸರಳವಾಗಿದೆ. ಶಿಖರ ಶಾಲಾ ಮಾದರಿಯಲ್ಲಿ ದ್ರಾವಿಡ ಶೈಲಿಯಲ್ಲಿದೆ. ಸ್ತೂಪಿ ಭಾಗ ಶಿಥಿಲವಾಗಿದೆ. ಶಿಖರದ ತಳಭಾಗ ಮತ್ತು ಕಪೋತದ ಕೆಳಗಡೆ ಹಂಸ ಪಕ್ಷಿಗಳ ಸಾಲಿದೆ. ಶೈಲಿಯಿಂದ ಈ ದೇವಾಲಯದ ಕಾಲಮಾನ ಸು. ಕ್ರಿ.ಶ.

10ನೇ ಶತಮಾನ. ಈ ಕಾಲದ ಶಾಲಾ ಮಾದರಿಯ ದೇವಾಲಯಗಳು ಉತ್ತರ ಕರ್ನಾಕಟದಲ್ಲೇ ಅಪರೂಪ. ಇಂತಹ ಶಾಲಾ ಮಾದರಿ ದೇವಾಲಯಗಳು ಸುರೇಬಾನ (ರಾಷ್ಟ್ರಕೂಟ) ಮತ್ತು ಅನಂತಶಯನ ಗುಡಿಗಳಲ್ಲಿ (ವಿಜಯನಗರ) ಕಾಣಬಹುದು.

ಚಂದ್ರಲಾಂಬ ದೇವಾಲಯ: ಉತ್ತರ ಕರ್ನಾಟಕದ ಕಲಬುರ್ಗಿ ಜಿಲ್ಲೆಯ ಚಿತಾಪುರ ತಾಲೂಕಿನ ಸನ್ನತಿಯ ಚಂದ್ರಲಾ ಪರಮೇಶ್ವರಿ ದೇವಾಲಯ ಬದಿಗಿನ ಭೀಮಾ ನದಿ ದಡದ ಮೇಲಿದೆ. ನಾಲವಾರ ರೈಲ್ವೆ ಸ್ಟೇಶನ್‌ನಿಂದ ಸುಮಾರು 16 ಕಿ.ಮೀ. ಅಂತರದಲ್ಲಿದೆ. ಈ ಗ್ರಾಮವು ಈ ದೇವಾಲಯದಿಂದ ಸುಮಾರು 1 ಕಿ.ಮೀ. ದೂರದಲ್ಲಿದೆ. ಸುಮಾರು ಎರಡು ಸಾವಿರ ವರ್ಷಗಳ ಪ್ರಾಚೀನ ಜನ ನಿವೇಶನ ಪರಿಸರದಲ್ಲೇ ಈ ಸ್ಥಾನವಿದೆ. ಅಲ್ಲಿಯ ಪರಿಸರದಲ್ಲಿ ಸಮಕಾಲೀನ ಶಾಕ್ತ– ಬೌದ್ಧ ಧರ್ಮಗಳ ಪುರಾವೆಗಳು ಮತ್ತು ಸ್ಮಾರಕಗಳಾದ ಸ್ತೂಪಗಳು (ಹಾಳಾದ) ಹಾಗೂ ಅವುಗಳ ಶಿಲ್ಪಾವಶೇಷ, ಶಾಸನಗಳು ಅಲ್ಲಲ್ಲಿವೆ. ಈ ದೇವಿಯ ದೇವಾಲಯದ ಹಿಂದುಗಡೆ ಮತ್ತು ಬದಿಯ ಭೀಮಾ ನದಿಯ ತಟದಲ್ಲಿ ಒಂದು ವಿಸ್ತಾರವಾದ ವೃತ್ತಾಕಾರದ (ಚಕ್ರಾಕಾರ) ಸ್ತೂಪದ ತಳಹಂತವು ಸುಮಾರು 1986–87ರಲ್ಲಿ ಇದ್ದಿತು. ಈಗ ಆ ಭಾಗದಲ್ಲೂ ದೇವಾಲಯ ಸಮುಚ್ಛಯವನ್ನು ವೃದ್ಧಿಸಿರುವುದರಿಂದ ಅದರ ಪುರಾವೆಗಳೆಲ್ಲ ಕಣ್ಮರೆಯಾಗಿವೆ. ಮಹತ್ವದ ಸಂಗತಿಯೆಂದರೆ ಅಶೋಕನ ಮೇಜರ್ ಶಿಲಾ ಶಾಸನವು ಈ ದೇವಾಲಯದ ಚಾಮುಂಡಿ, ಬನಶಂಕರಿ ದೇವಿಯ ಪೀಠವನ್ನಾಗಿ ಬಹುಕಾಲ ಬಳಸಿದ್ದು ಇತ್ತೀಚೆಗೆ ಪ್ರಕಟವಾಯಿತು. ಹೀಗಾಗಿ ಕರ್ನಾಟಕದಲ್ಲಿ ಮೊಟ್ಟ ಮೊದಲ ಬಾರಿಗೆ ಅಶೋಕನ ಮೇಜರ್ ಶಿಲಾ ಶಾಸನ ಇಲ್ಲಿ ಶೋಧವಾಗಿರುವುದು ಗಮನೀಯ. ಪ್ರಸ್ತುತ ಲೇಖನದಲ್ಲಿ ಮುಖ್ಯವಾಗಿ ಈ ದೇವಾಲಯದ ದೇವಿಯ ಪೌರಾಣಿಕ ಅಂಶಗಳನ್ನು ಸ್ಥೂಲವಾಗಿ ಮತ್ತು ವಾಸ್ತು ಶಿಲ್ಪದ ವೈವಿಧ್ಯವನ್ನು ಮಂಡಿಸಲಾಗಿದೆ.

ಸನ್ನತಿಯ ಚಂದ್ರಲಾಂಬೆಯ ಪೌರಾಣಿಕ ಅಂಶಗಳು ವಿಭಿನ್ನ ರೀತಿಯಲ್ಲಿ ಬೆಳಕನ್ನು ಕಂಡಿದ್ದು, ಅಂಥವುಗಳಲ್ಲಿ ಮುಖ್ಯವಾಗಿ ಕೆಲವು ಕೃತಿಗಳು ಸಾಮಾನ್ಯರಿಗೂ ದೇವಿಯ ವಿಭಿನ್ನ ಮುಖಗಳನ್ನು ಪರಿಚಯಿಸಿಕೊಳ್ಳಲು ಅನುವು ಮಾಡಿವೆ. ಅವುಗಳು ಚಂದ್ರಲಾ ಪರಮೇಶ್ವರಿ (ಆರ್.ಎಚ್. ಕುಲಕರ್ಣಿ), ಶ್ರೀ ಚಂದ್ರಕಲಾ ಚರಿತಾಮೃತ (ಶ್ರೀ ಶೇಷರಾಸ್ ಹೋಳಿ), ಶ್ರೀ ಚಕ್ರಾತ್ಮಕ ಶ್ರೀ ಚಂದ್ರಲಾಂಬಾ ದೇವಾಲಯದ ಮಹಾತ್ಮೆ (ಶ್ರೀ ಜ್ಞಾನಜ್ಯೋತಿ ಶ್ರೀ ಶಂಕರಾನಂದ ಸ್ವಾಮಿಗಳು), ಗಾಡೆಸ್ ಆಫ್ ಸನ್ನತಿ (ಎಸ್. ಆರ್. ದೇಶಪಾಂಡೆ) ಮತ್ತು ಶ್ರೀಚಂದ್ರಲಾ (ಶ್ರೀ ವಸಂತ ಕುಷ್ಟಗಿ). ಇವುಗಳಲ್ಲಿ ಕೇವಲ ಕೊನೆಯ ಕೃತಿಮಾತ್ರ ಲೇಖಕರ ಗಮನಕ್ಕೆ ಬಂದಿತು. ಚಂದ್ರಲಾಂಬೆಯ ಕುರಿತ ಪೌರಾಣಿಕ ಅಂಶಗಳು ಈ ಕೃತಿಯಲ್ಲಿ ವಿಶೇಷ ಗಮನವನ್ನು ಸೆಳೆಯುತ್ತವೆ. ಈ ದೇವಿಯು ಮೂಲತಃ ಹಿಂಗುಳಾಪೀಠದಿಂದ ಬಂದವಳೆನ್ನಲಾಗಿದೆ. ಈ

ಸ್ಥಳವು ಬಲೂಚಿಸ್ಥಾನದ ಮುಕ್ತಾನದಡದ ಸಿಂಧೂ ನದಿಯಿಂದ ಸುಮಾರು 16 ಕಿ.ಮೀ. ಅಂತರದಲ್ಲಿದೆ. ಅಲ್ಲಿಯೂ ಹಿಂಗುಳಾ ದೇವಿಯ ದೇವಾಲಯವಿದೆ. ಈ ದೇವಿಯ ದರ್ಶನಕ್ಕೆ ಗೋರಖನಾಥ ಪಂಥದ ಕಾನಫಾಟೆ ಎಂಬ ಯೋಗಿಗಳು ಯಾತ್ರೆಗೆ ಬರುತ್ತಿದ್ದರೆನ್ನಲಾಗಿದೆ.

ಇನ್ನೊಂದು ಐತಿಹ್ಯದಲ್ಲಿ ವಿಂಧ್ಯಾದ್ರಿ ಬಳಿಯ ರಾಜಸೇನನಿಂಬವನ ಮಗಳಾದ ಚಂದ್ರಲೆಯ ವಿಷಯ ಕುತೂಹಲದ್ದಾಗಿದೆ. ಈಕೆಯ ಸ್ವಯಂವರಕ್ಕಾಗಿ ಕಂಬವನ್ನು ಒಡೆದು ಬೀಳಿಸುವವರನ್ನು ತಂದೆ ಆಯ್ಕೆ ಮಾಡಲು ನಿರ್ಧರಿಸಿ ಅನೇಕ ರಾಜಕುಮಾರರನ್ನು ಆಹ್ವಾನಿಸಿದನು. ಅವರೆಲ್ಲ ಪಣದ ಬೀಳಿಸದೇ ನಿರಾಶರಾಗಿ ಮರಳಿ ಹೋದರು. ರಾಜಸೇನನಿಗೆ ತುಂಬಾ ಗಾಬರಿಯಾಯಿತು. ಈ ಸಂದರ್ಭದಲ್ಲಿ ದೇವಿಯು ಈತನ ಕನಸಿನಲ್ಲಿ ಪ್ರಸನ್ನಳಾಗಿ ವಾಣಿ ನುಡಿದಳು. ಆ ಪ್ರಕಾರ ನಾರಾಯಣನೆಂಬುವನು ಆಗಮಿಸಿ ಅನಿರೀಕ್ಷಿತವಾಗಿ ಪಣದ ಕಂಬವನ್ನು ಕೆಡವಿದನು. ಅದಕ್ಕಾಗಿ ರಾಜಸೇನನು ತನ್ನ ಮಗಳಾದ ಚಂದ್ರಮತಿಯನ್ನು ಅವನಿಗೆ ಕೊಟ್ಟು ವಿವಾಹ ಮಾಡಿದನು. ನಾರಾಯಣನು ಪತ್ನಿ ಸಮೇತನಾಗಿ ಸಂಚರಿಸುತ್ತ ಭೀಮಾ ನದಿ ದಡಕ್ಕೆ ಆಗಮಿಸಿದನು. ಅಲ್ಲೊಂದು ಕುಟೀರವನ್ನು ಕಟ್ಟಿಕೊಂಡು ವಾಸಿಸತೊಡಗಿದನು.

ತದನಂತರ ಆ ಸ್ಥಳಕ್ಕೆ ಬೇಟೆಯಾಡುತ್ತ ಒಂದು ದಿವಸ ಸೇತುರಾಜನೆಂಬುವವನು ಚಂದ್ರಲೆ ಒಬ್ಬಳೇ ಕುಟೀರದಲ್ಲಿದ್ದಾಗ ಆಗಮಿಸಿದನು. ಆಕೆಯ ಸೌಂದರ್ಯಕ್ಕೆ ಮೆಚ್ಚಿ ಆಕೆಯನ್ನು ಒಲಿಸಿಕೊಂಡು ತನ್ನ ರಾಜಧಾನಿಗೆ ಕರೆತಂದನು. ಅವಳ ಬಯಕೆಯಂತೆ ಹಿಡಿದ ವ್ರತವನ್ನು ಮುಗಿಸಲು ಅಲ್ಲಿಯ ಸೋಮೇಶ್ವರ ದೇವಾಲಯದಲ್ಲಿ ಆಕೆಯನ್ನು ಇಟ್ಟನು. ಈ ಸಂದರ್ಭದಲ್ಲಿ ಈ ಕಡೆ ಆಕೆಯ ಪತಿ ನಾರಾಯಣ ಕುಟೀರಕ್ಕೆ ಮರಳಿ ಬಂದು ಚಂದ್ರಲೆಯನ್ನು ಹುಡುಕತೊಡಗಿದನು. ಕಂಗಾಲಾಗಿದ್ದ ಈತನು ಕೊನೆಗೆ ಈಕೆಯನ್ನು ಹುಡುಕಲು ಹಿಂಗುಳಾಂಬೆಯ ದೇವಸ್ಥಾನಕ್ಕೆ ಆಗಮಿಸಿದನು. ದೇವಿಯನ್ನು ಒಲಿಸಿಕೊಂಡು ಆಕೆಯ ಜೊತೆ ಅವನು ಸೇತುರಾಜನ ರಾಜಧಾನಿ ಕಡೆ ಬಂದನು. ರಾಜಧಾನಿ ಸಮೀಪಿಸುತ್ತಿದ್ದಂತೆ ಕ್ರಮೇಣವಾಗಿ ದೇವಿಯ ನೂಪುರದ ಶಬ್ದ ನಿಂತಿತು. ದೇವಿಯು ನಾರಾಯಣನಿಗೆ ಯಾವ ಕಾರಣಕ್ಕೂ ಹಿಂದಿರುಗಿ ಆಕೆಯನ್ನು ನೋಡಬಾರದೆಂದು ಭಾಷೆಯನ್ನು ತೆಗೆದುಕೊಂಡಿದ್ದನ್ನು ಆತ ಮರೆತು ಹಿಂದೆ ತಿರುಗಿ ಆಕೆಯನ್ನು ಕಾಗಿನಾ ಮತ್ತು ಭೀಮಾನದಿಗಳ ಸಂಗಮ ಸ್ಥಳದಲ್ಲಿದ್ದ ಹೊನ್ನಕುಂಟಿ (ಹೊನಕುಂಟೆ) ಹತ್ತಿರ ನೋಡಿದನು. ಇದರಿಂದ ಅವನು ಕೊಟ್ಟ ವಚನ ಮುರಿದುಹೋಯಿತು. ಪುನಃ ಆತ ಚಿಂತೆಗೀಡಾಗಿ ದೇವಿಯನ್ನು ಸ್ಮರಿಸಿದನು. ಕೊನೆಗೆ ದೇವಿ ಹಿಂಗುಳಾಂಬೆಯು ಅವನ ಕಷ್ಟಪರಿಹಾರವಾಗಲು ನಾರಿಕೇಳವನ್ನು ಕೊಟ್ಟು ಅದರಲ್ಲಿ ಐದು ಭೃಂಗಗಳಿವೆ, ಅದನ್ನು ಸೇತುರಾಜನನ್ನು ಮುತ್ತಿದವು. ಅವನು ಅವುಗಳಿಂದ ತಪ್ಪಿಸಿಕೊಳ್ಳಲು ಭೀಮಾನದಿಯಲ್ಲಿ ಮುಳುಗಿದನು. ಕೊನೆಗೆ ಅಲ್ಲೇ ಪಾತಾಳಲೋಕ ಸೇರಿದನು.

ತದನಂತರ ಕೊನೆಗೆ ಅವುಗಳು ಐದೇ ಭ್ರಂಗಗಳಾಗಿ ಉಳಿದವು. ಅವುಗಳು ಪಂಚ ಮೂಲಭೂತಗಳೆನ್ನಲಾಗಿದೆ. ಅತ್ತ ಕಡೆ ಚಂದ್ರಲೆ ಸೋಮೇಶ್ವರ ದೇವಾಲಯದಲ್ಲಿ ವ್ರತ ಮಾಡುವುದಾಗಿ ಅಲ್ಲಿ ತಂಗಿದ್ದವಳು ಕೊನೆಗೆ ಆ ದೇವರ ಉದರದಲ್ಲಿ ಅಡಗಿದಳು. ಆ ದೇವಾಲಯದಲ್ಲಿ ಆಕೆಯನ್ನು ನೋಡಲು ಬಂದ ಪತಿ ನಾರಾಯಣ ಈ ವಿಷಯವನ್ನು ತಿಳಿದು ತುಂಬ ದುಃಖಿತನಾದನು. ಈತನ ವ್ಯಥೆಯನ್ನು ನೋಡಲಾಗದೆ ಚಂದ್ರಲೆಯು ಸೀತೆಯ ರೂಪದಲ್ಲಿ ನಾರಾಯಣನಿಗೆ ಕಾಣಿಸಿದಳು. ಕೊನೆಗೆ ಆಕೆಯು ಆತನ ಸಂಸಾರಜಾಡ್ಯವನ್ನು ಕಳೆದಳೆನ್ನಲಾಗಿದೆ.

ಈ ವೃತ್ತಾಂತದಿಂದ ಈ ಸ್ಥಳಕ್ಕೆ ಒಂದು ಕಡೆ ಹಿಂಗುಳಾಂಬೆ ಮತ್ತು ಚಂದ್ರಲೆಯರು ಬಂದು ನೆಲೆಸಿದ್ದು ಗೊತ್ತಾಗುತ್ತದೆ ಹಾಗೂ ಸೋಮೇಶ್ವರ ದೇವಾಲಯದಲ್ಲಿದ್ದ ಚಂದ್ರಲೆಯ ಪಾದುಕೆಗಳು ಈಗಲೂ ಚಂದ್ರಲಾಪರಮೇಶ್ವರಿಯ ದೇವಾಲಯದಲ್ಲಿವೆ. ಅವುಗಳನ್ನು ಶ್ರದ್ಧಾ ಭಕ್ತಿಯಿಂದ ಆರಾಧಿಸಲಾಗುತ್ತಿದೆ. ಇದೂ ಅಲ್ಲದೇ ಅಲ್ಲಿಯ ಭೀಮಾ ನದಿಯ ಒಂದು ಕಡೆ ಭಾಗವನ್ನು ಇಂದಿಗೂ ಸೇತುರಾಜನ ಮಡು ಎಂದು ಕರೆಯುವರು. ಭಕ್ತಾದಿಗಳು ಅಲ್ಲಿ ಸ್ನಾನ ಮಾಡುವರು. ಅಲ್ಲಿ ಸ್ನಾನ ಮಾಡುವುದರಿಂದ ತಮ್ಮ ಕಷ್ಟ ಕಾರ್ಪಣ್ಯಗಳು ಪಾತಾಳ ಸೇರುತ್ತವೆಂದು ಹೇಳಲಾಗಿದೆ. (ಶ್ರೀ ವಸಂತ ಕುಷ್ಟಗಿ 1999, ಶ್ರೀ ಚಂದ್ರಲಾ)

ವಿಶಾಲವಾದ ಚಂದ್ರಲಾ ಪರಮೇಶ್ವರಿ ದೇವಾಲಯವು ಪೂರ್ವಕ್ಕೆ ಮುಖಮಾಡಿದೆ. ಈ ದೇವಾಲಯದ ಸುತ್ತಲು ಪ್ರಾಕಾರವಿದೆ. ಈ ದೇವಾಲಯ ಹೊರಗಡೆ ಮಾರ್ಕಂಡೇಯನ ಗುಡಿ, ಮಾರ್ಕಂಡ ಭೈರವಕೊಂಡ, ವಿಶ್ವಂಭರ ದೀಕ್ಷಿತ ಸಮಾಧಿಗಳಿವೆ. ಈ ದೇವಾಲಯದ ಮುಂದೆ ದೀಪಸ್ತಂಭಗಳಿವೆ. ಪ್ರಾಕಾರ ಮಂಟಪದಲ್ಲಿ ವಿಭಿನ್ನ ಕಾಲದ ಕಂಬಗಳಿವೆ. ಹಾಗೂ ಅಲ್ಲಿ ದ್ವಾದಶಲಿಂಗಗಳು, ಮಹಾಕಾಳಿ, ಮಹಾಸರಸ್ವತಿ ಇತ್ಯಾದಿ ಗುಡಿಗಳಿವೆ. ಇತ್ತೀಚೆಗೆ ಅಲ್ಲಿಯ ಮಹಾಕಾಳಿ ದೇವಾಲಯವನ್ನು ಸಂಪೂರ್ಣವಾಗಿ ಜೀರ್ಣೋದ್ಧಾರಗೊಳಿಸಲಾಗಿದೆ. ಈ ದೇವಾಲಯದ ಮುಂದೆ ಪ್ರಕಾರಕ್ಕೆ ಹೊಂದಿ ಎತ್ತರದ ಭವ್ಯವಾದ ಗೋಪುರವನ್ನು ಕಟ್ಟಲಾಗಿದೆ. ನಿತ್ಯ ಅನ್ನ ಸಂತರ್ಪಣೆಯ (ಪ್ರಸಾದದ) ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

ಜಾಗೃತ ಸ್ಥಾನವೆನಿಸಿದ ಚಂದ್ರಲಾ ದೇವಿಯ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಸಭಾಮಂಟಪ ಮತ್ತು ಮಹಾಮಂಟಪಗಳು ಒಳಗೊಂಡಿವೆ.ಗರ್ಭಗೃಹದಲ್ಲಿ ದೇವಿಯ ವಿಗ್ರಹವಿಲ್ಲ ಪಾದುಕೆ ಇತ್ಯಾದಿಗಳಿವೆ. ಅದರ ಬಾಗಿಲು ಚೌಕಟ್ಟಿನಲ್ಲಿ ಸರಳ ಶಾಖೆಗಳನ್ನು ಕಂಡರಿಸಲಾಗಿದೆ. ಸಭಾ ಮಂಟಪದಲ್ಲಿರುವ ಕಂಬಗಳಲ್ಲಿ ಒಂದು ಭಾಗ ಕಾಂಡ ಭಾಗ ಭಾಗದ ನಾಲ್ಕು ಮುಖಗಳಲ್ಲಿ ವಿಭಿನ್ನ ಚಿತ್ರಗಳನ್ನು ಕೆತ್ತಲಾಗಿದೆ. ಅದರ ಛತ್ತಿನಲ್ಲಿ ವಿಶಾಲವಾದ ವೃತ್ತಾಕಾರದ ಅರಳಿದ ಕಮಲದ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ. ಸಭಾಮಂಟಪದ

ಬಾಗಿಲು ಚೌಕಟ್ಟಿನಲ್ಲೂ ವಿಭಿನ್ನ ನಾಲ್ಕು ಶಾಖೆಗಳು ಇದ್ದು ಅಲ್ಲಿ ತಲಾ ಸುರುಳಿ, ರತ್ನಗಳು, ಅರ್ಧಗಂಭ ಮಾದರಿ ಮತ್ತು ಪತ್ರಶಾಖೆಗಳಿವೆ. ಕೆಳಗಡೆ ಮೂವರು ಸ್ತ್ರೀ ಪುರುಷ ದ್ವಾರಪಾಲಕರಿದ್ದಾರೆ. ಮಹಾಮಂಟಪದ ಕಾಂಡಭಾಗದಲ್ಲೂ ವಿಭಿನ್ನ ಚಿತ್ರಗಳನ್ನು ಕೆತ್ತಲಾಗಿದೆ

ಈ ಎರಡು ಮಂಟಪಗಳ ಕಂಬಗಳ ಒಂದು ಚೌಕ ಭಾಗದ ನಾಲ್ಕು ಮುಖಗಳಲ್ಲಿ ಕೆತ್ತಿದ ಚಿತ್ರಗಳಲ್ಲಿ ಪಂಚತಂತ್ರ ಇತ್ಯಾದಿ ಕಥೆಗಳನ್ನು ಕಾಣಬಹುದು. ಆ ಚಿತ್ರಗಳ ಸ್ಥೂಲ ವಿವರ ಹೀಗಿದೆ.

1. ಶಂಖ ನಿಧಿ ಮತ್ತು ಪದ್ಮ ನಿದಿ ತಲಾ ಒಂದರ ಮೂಲೆಯಲ್ಲಿ ಕುಳಿತಿರುವುದು.
2. ಕೈಮುಗಿದು ನಿಂತ ಭಕ್ತ ಮತ್ತು ಕಮಂಡಲ ಹಿಡಿದು ನಿಂತ ಸ್ತ್ರೀಯರು ತಲಾ ಒಂದರ ಮೂಲೆಯಲ್ಲಿರುವರು.
3. ಗಡ್ಡಧಾರಿ ವ್ಯಕ್ತಿ ಸವ್ಯಲಲಿತಾಸನದಲ್ಲಿ ಎಡಗೈಯನ್ನು ತಲೆಗಿಟ್ಟುಕೊಂಡು ಕುಳಿತಿರುವನು. ತೊಟ್ಟಿಲಲ್ಲಿ ಮಗು ಹಾವು.
4. ಕುಳಿತಿರುವ ಇಬ್ಬರು ನಿಧಿಗಳು ತಲಾ ಒಬ್ಬರನ್ನು ಇಳಿಬಿದ್ದ ಹಾರದಂತಹ ಹಗ್ಗದಲ್ಲಿ ಚಿತ್ರಸಲಾಗಿದೆ.
5. ಇಬ್ಬರು ನಿಧಿಗಳು ಕುಳಿತಿರುವರು. ತಲಾ ಒಬ್ಬರನ್ನು ಇಳಿಬಿದ್ದ ಹಾರದಂತಹ ಹಗ್ಗದಲ್ಲಿ ಚಿತ್ರಿಸಲಾಗಿದೆ.
6. ಲಕ್ಷ್ಮಣ(ಬಲರಾಮ ?) ಮತ್ತು ಸೀತೆ–ರಾಮ ಬಿಲ್ಲಿಡಿದು ನಿಂತಿರುವರು. ಒಂದೊಂದು ಹಾರದಲ್ಲಿ ಇವರನ್ನು ಚಿತ್ರಿಸಲಾಗಿದೆ.
7. ಕೈಮುಗಿದು ನಿಂತ ಭಕ್ತ ಮತ್ತು ಲಿಂಗದಲ್ಲಿ ಉದ್ಭವಿಸಿದ ಶಿವ, ತಲಾ ಒಬ್ಬರನ್ನು ಇಳಿಬಿದ್ದ ಹಗ್ಗದ ಮೂಲೆಯಲ್ಲಿ ಚಿತ್ರಿಸಲಾಗಿದೆ.
8. ಕುಳಿತ ಗಣೇಶ ಮತ್ತು ವೀಣಾಧಾರಿ ತಲಾ ಒಬ್ಬರನ್ನು ಹಗ್ಗದ ಮೂಲೆಯಲ್ಲಿ ಚಿತ್ರಿಸಲಾಗಿದೆ.
9. ಕುಳಿತ ವ್ಯಕ್ತಿ ಮತ್ತು ವೀಣಾಧಾರಿ, ತಲಾ ಒಬ್ಬರನ್ನು ಇಳಿಬಿದ್ದ ಹಗ್ಗದ ಮೂಲೆಯಲ್ಲಿ ಚಿತ್ರಿಸಲಾಗಿದೆ.
10. ತಾಳ ಬಾರಿಸುವವನು ಮತ್ತು ಡಮರು ಬಾರಿಸುವವನು ತಲಾ ಒಬ್ಬರನ್ನು ಇಳಿಬಿದ್ದ ಹಗ್ಗದ ಮೂಲೆಯಲ್ಲಿ ಚಿತ್ರಿಸಲಾಗಿದೆ.
11. ನೃತ್ಯಗಾರ ಮತ್ತು ಹಾಡುಗಾರ (?) ಕುಳಿತಿರುವರು. ತಲಾ ಒಬ್ಬರನ್ನು ಇಳಿಬಿದ್ದ ಹಗ್ಗದ ಮೂಲೆಯಲ್ಲಿ ತೋರಿಸಲಾಗಿದೆ.
12. ಕುಳಿತ ವ್ಯಕ್ತಿ ಕನ್ನಡಿ ಹಿಡಿದು ನಿಂತವನು (?) ಇಳಿಬಿದ್ದ ಹಗ್ಗದ ಮೂಲೆಯಲ್ಲಿರುವರು.

13. ಇಳಿಬಿದ್ದ ತಲಾ ಒಂದು ಹಗ್ಗದ ಮೂಲೆಯಲ್ಲಿ ಶಂಖ ನಿಧಿ ಮತ್ತು ಪದ್ಮ ನಿಧಿಯರು ಕುಳಿತಿರುವರು.
14. ಇಳಿಬಿದ್ದ ತಲಾ ಒಂದು ಹಗ್ಗದ ಮೂಲೆಯಲ್ಲಿ ಶಂಖ ಮತ್ತು ಪದ್ಮನಿಧಿಗಳು.
15. ಇಳಿಬಿದ್ದ ತಲಾ ಒಂದು ಹಗ್ಗದ ಮೂಲೆಯಲ್ಲಿ ನೃತ್ಯಗಾರ ಮತ್ತು ಹಾಡುಗಾರ (?)
16. ಕುಳಿತ ಶಂಖ ಮತ್ತು ಪದ್ಮನಿಧಿಗಳು (?) ಇಳಿಬಿದ್ದ ಹಗ್ಗದ ಮೂಲೆಯಲ್ಲಿರುವರು.
17. ತ್ರಿಭಂಗದಲ್ಲಿ ಅಭಯ ಹಸ್ತವನ್ನು ಹಿಡಿದು ನಿಂತವನು ಮತ್ತು ಸಮಭಂಗದಲ್ಲಿರುವ ವಿಷ್ಣು, ತಲಾ ಒಬ್ಬರು ಇಳಿಬಿದ್ದ ಹಗ್ಗದ ಮೂಲೆಯಲ್ಲಿರುವರು.

ಈ ದೇವಾಲಯದ ಪ್ರವೇಶದ್ವಾರ ಮಂಟಪದ ದ್ವಾರ ಚೌಕಟ್ಟಿನ ಮೂರು ಸರಳ ಶಾಖೆಗಳು ಫಲಕ ಮತ್ತು ಲಲಾಟಪಟ್ಟಿಕೆಯಲ್ಲೂ ಹರಿದಿವೆ. ಲಲಾಟಪಟ್ಟಿಕೆಯ ಮಧ್ಯ ಪದ್ಮಾಸನದಲ್ಲಿ ಕುಳಿತ ಕಾಳಿಕಾಂಬೆಯ ಶಿಲ್ಪವಿದೆ. ನಾಲ್ಕು ಕೈಗಳಲ್ಲಿ ಕತ್ತಿ, ಡಮರು, ತ್ರಿಶೂಲ ಮತ್ತು ಕಪಾಲಗಳಿವೆ. ಪಾದದ ಕೆಳಗೆರಡು ರುಂಡಗಳಿವೆ (?) ಶಾಖೆಗಳ ಕೆಳಗಡೆ ತಲಾ ಒಂದಕ್ಕೆ ಪೂರ್ಣ ಕುಂಭವಿದೆ. ಈ ದೇವಾಲಯದ ಬಾಗಿಲು ಚೌಕಟ್ಟುಗಳು, ಕಂಬಗಳು ಮತ್ತು ಭತ್ತಿನ ಪದ್ಮದ ಅಲಂಕಾರಗಳು ಶೈಲಿಯ ದೃಷ್ಟಿಯಿಂದ ಸುಮಾರು ಕ್ರಿ.ಶ. 10ನೇ ಶತಮಾನದ್ದಾಗಿವೆ. ಈ ದೇವಾಲಯದ ಪ್ರಾಕಾರ ಮಂಟಪದಲ್ಲಿ ಸುಮಾರು 30ಕ್ಕೂ ಹೆಚ್ಚು ವಿಭಿನ್ನ ಕಾಲದ ಕಂಬಗಳಿವೆ. ಕೆಲವು ವೃತ್ತಾಕಾರ ಕಾಂಡ ಭಾಗವನ್ನು ಹೊಂದಿವೆ. (ಕ್ರಿ.ಶ. 10ನೇ ಶತಮಾನ). ಕೆಲವು ಎರಡು ಚೌಕ ಪಟ್ಟಿಕೆಗಳು ಕಾಂಡ ಭಾಗದಲ್ಲಿವೆ (ಕ್ರಿ.ಶ. 11–12ನೇ ಶತಮಾನ). ಕೆಲವು ತೀರ ಸರಳವಾಗಿವೆ. (ಕ್ರಿ.ಶ. 19–20ನೇ ಶತಮಾನ).

ಈ ದೇವಿಯ ದೇವಾಲಯದ ಬದಿಗೆ ಒಂದು ಕಿರು ಗುಡಿಗೆ ಹೊಂದಿಸಿ ಕ್ರಿ.ಶ. 11ನೇ ಶತಮಾನದ ಬಾಗಿಲು ಚೌಕಟ್ಟನ್ನು ಕೂಡಿಸಲಾಗಿದೆ. ಅದಕ್ಕೆ ಮೂರು ಸರಳ ಶಾಖೆಗಳು ಫಲಕ ಮತ್ತು ಲಲಾಟದಲ್ಲಿ ಹರಡಿದ್ದು ಲಲಾಟ ಪಟ್ಟಿಯ ಮಧ್ಯಭಾಗದಲ್ಲಿ ರತ್ನದ ಅಲಂಕಾರವಿದೆ. ಪಟ್ಟಿಕೆಯ ಕೆಳಗಡೆ ಚೌರಿ ಹಿಡಿದು ನಿಂತ ಸೇವಕಿ ದ್ವಾರಪಾಲಕರು ಇರುವರು. ನಾಲ್ಕು ಕೈಗಳಲ್ಲಿ ಗದೆ–ಅಭಯ ಮುದ್ರೆಯಲ್ಲಿ ತ್ರಿಭಂಗದಲ್ಲಿವೆ.

ಚಂದ್ರಲಾದೇವಿ: ಚಂದ್ರಲಾಂಬ ದೇವಾಲಯ ಎಡಬದಿಗೆ ಭೈರವಿ ಅಥವಾ ಕಾಳಿಕಾಂಬೆಯ ದೇವಾಲಯವಿದ್ದು, ಅದನ್ನು ಇತ್ತೀಚೆಗೆ ಜೀರ್ಣೋದ್ಧಾರಗೊಳಿಸಲಾಗಿದೆ. ಮತ್ತು ನವೀನ ವಿಗ್ರಹವನ್ನು ಸ್ಥಾಪಿಸಲಾಗಿದೆ. ಮೂಲ ವಿಗ್ರಹ ಎರಡು ತುಂಡುಗಳಾಗಿದ್ದು, ಅದನ್ನು ಆ ದೇವಾಲಯ ಪಕ್ಕದಲ್ಲಿಡಲಾಗಿದೆ. ಈ ವಿಗ್ರಹದ ಸ್ಥೂಲ ವಿವರವನ್ನು ಈ ಹಿಂದೆ ಡಾ. ಪಿ.ಬಿ.ದೇಸಾಯಿ ಅವರು ಮೊದಲು ಮಾಡಿ ಪ್ರಕಟಿಸಿದ್ದುಂಟು. ಆದರೆ ಅದನ್ನು ಸಮಗ್ರವಾಗಿ ಪರಿಶೀಲಿಸಿ ಅಧ್ಯಯನ ಕೈಗೊಂಡಿದ್ದು ಕಾಣುವುದಿಲ್ಲ. ಸವ್ಯಲಲಿತಾಸನದಲ್ಲಿ ಈ ದೇವಿಯು

ಕುಳಿತಿದ್ದು, ಆಕೆಗೆ ನಾಲ್ಕು ಕೈಗಳಿವೆ. ಎಡಗಡೆಯ ಕೈಯಲ್ಲಿ ಕಪಾಲವನ್ನು ಹಿಡಿದಿರುವಳು ಮತ್ತು ಮೇಲಿನ ಎಡಗೈಯಲ್ಲಿ ಬೋರಲಾಗಿ ಮಲಗಿರುವ ಒಬ್ಬ ಪ್ರೇತನ ಬೆನ್ನಿಗೆ ತ್ರಿಶೂಲದಿಂದ ಇರಿದು ಅದನ್ನು ಹಿಡಿದು ಎತ್ತಿದ್ದಾಳೆ. ಜಟಾ ಮುಕುಟದಲ್ಲಿ ಪ್ರೇತದ ಮುಖವಿದೆ. ದೈತ್ಯನೆಯ ವಿಭಿನ್ನ ಸರಗಳು ಮತ್ತು ಕುಂಡಲಗಳಿವೆ. ತೋಳುಗಳಲ್ಲಿ ಮೃಗಬಂಧಗಳಿವೆ. ರುಂಡಮಾಲೆಯನ್ನು ದೇಹಕ್ಕೆ ಯಜ್ಞೋಪವೀತದಂತೆ ಧರಿಸಿರುವಳು. ಸ್ತನಗಳನ್ನು ಎದ್ದು ಕಾಣುವಂತೆ ಕಂಡರಿಸಲಾಗಿದೆ. ಸೊಂಟಕ್ಕೆ ಸೀರೆಯನ್ನು ಪಟ್ಟಿಕೆಯನ್ನು ಕಟ್ಟಿರುವಳು. ಕೈಗಳಲ್ಲಿ ಬಳೆಗಳು ಮತ್ತು ಕಾಲುಗಳಲ್ಲಿ ಕಡಗಗಳಿವೆ. ಪ್ರಮಾಣಬದ್ದ ದೇಹಾಂಗ ಎದ್ದು ಕಾಣುವುದು. ವಸ್ತ್ರಾಭರಣಗಳಿಂದ ಈಕೆಯನ್ನು ಚಾಮುಂಡಿ ಎಂದು ಗುರುತಿಸಬಹುದು. ಇದು ಒಂದು ದುಂಡು ಶಿಲ್ಪ ಆಗಿದೆ. ಅವುಗಳ ಶೈಲಿಯಿಂದ ಈ ದೇವಿ ಶಿಲ್ಪದ ಕಾಲ ಸುಮಾರು ಕ್ರಿ.ಶ. 9ನೇ ಶತಮಾನವೆಂದು ತರ್ಕಿಸಬಹುದು. ಗುಲ್ಬರ್ಗ ಜಿಲ್ಲೆಯ ಶಹಪೂರದ ಮಹಿಷಿಮರ್ಧಿನಿ ಶಿಲ್ಪ, ಚಿತಾಪೂರ ಮತ್ತು ಸೇಡಂ ತಾಲೂಕಿನಲ್ಲಿ ಕಾಣಿಸಿದ ಅನೇಕ ಚಾಮುಂಡಿ ಶಿಲ್ಪವು ಅತ್ಯಂತ ಪ್ರಾಚೀನದ್ದೆಂದು ತರ್ಕಿಸಬಹುದು.

ಈ ಸ್ಥಳದ ಉತ್ಖನನದಲ್ಲಿ ಇತ್ತೀಚೆಗೆ ಮಣ್ಣಿನ ಮಹಿಷಾಸುರಮರ್ದಿನಿ ಶಿಲ್ಪ ಮತ್ತು ಮಣ್ಣಿನ ಲಜ್ಜಾಗೌರಿ ಶಿಲ್ಪಗಳು ಬೆಳಕನ್ನು ಕಂಡಿವೆ. ಅವುಗಳ ಕಾಲ ಸುಮಾರು ಕ್ರಿ.ಶ. 2 ರಿಂದ 3ನೇ ಶತಮಾನ. ಹೀಗಾಗಿ ಸನ್ನತಿ ಪ್ರದೇಶದಲ್ಲಿ ಶಾಕ್ತ ಪಂಥವು ಆರಂಭಿಕವಾಗಿ ಲಜ್ಜಾಗೌರಿ, ಮಹಿಷಾಸುರಮರ್ದಿನಿ, ತದನಂತರ ಚಾಮುಂಡಿಯ ಆರಾಧನೆ ಸು. ಕ್ರಿ.ಶ. 9 ರಿಂದ 11ನೇ ಶತಮಾನದವರೆಗೆ ಪ್ರಸಿದ್ಧಿಯನ್ನು ಪಡೆಯಿತು. ಮುಂದೆ ಚಂದ್ರಲಾಂಬೆ ಎಂಬ ಹೆಸರು ಪ್ರಾಪ್ತವಾಯಿತೆಂದು ಹೇಳಬಹುದು.

ಚಾಮುಂಡಿ: ಸನ್ನತಿಯ ಕಾಳಿಕಾಂಬೆಯ ದೇವಾಲಯದ ಹೊರಗಡೆ ಎರಡು ಶಿಲ್ಪಗಳಿವೆ. 1. ಯಕ್ಷ, 2. ಚಾಮುಂಡಿ ಯಕ್ಷ ವಿಗ್ರಹದಲ್ಲಿ ಯಕ್ಷನು ಸವ್ಯಲಲಿತಾಸನದಲ್ಲಿ ಕುಳಿತಿರುವನು. ಬಲಗೈಯನ್ನು ತೊಡೆಯ ಮೇಲಿಟ್ಟಿರುವನು. ಎಡಗೈಯಲ್ಲಿ ಫಲವಿದೆ. ಜಟಾಮುಕುಟಧಾರಿ, ಕಿವಿಗಳಲ್ಲಿ ಓಲೆಗಳು, ಕೊರಳಲ್ಲಿ ಸರವಿದೆ. ಈ ಶಿಲ್ಪದ ಕಾಲ ಸು. ಕ್ರಿ.ಶ. 10ನೇ ಶತಮಾನ (?).

ಸನ್ನತಿಯ ಇನ್ನೊಂದು ಚಾಮುಂಡಿಯ ಶಿಲ್ಪದಲ್ಲಿ ದೇವಿಯು ಸವ್ಯಲಲಿತಾಸನದಲ್ಲಿರುವಳು. ನಾಲ್ಕು ಕೈಗಳಲ್ಲಿ ಕತ್ತಿ, ತ್ರಿಶೂಲ, ಡಮರು ಮತ್ತು ಕಪಾಲಗಳಿವೆ. ಜಠಾಮುಕುಟಧಾರಿಣಿ, ಸರಗಳನ್ನು ಮತ್ತು ಕುಂಡಲಗಳನ್ನು ಧರಿಸಿರುವಳು. ಎದ್ದು ಕಾಣುವ ಕುಚಗಳಿವೆ. ಈ ದೇವಿಯೂ ದೇಹದ ಮೇಲೆ ಯಜ್ಞೋಪವೀತದಂತೆ ರುಂಡಮಾಲೆಯನ್ನು ಧರಿಸಿರುವಳು. ಆಕೆಯ ಪಾದದ ಕೆಳಗಡೆ ಪ್ರೇತ ಮಲಗಿದೆ. ಈ ಶಿಲ್ಪದ ಕಾಲ ಸು. ಕ್ರಿ.ಶ. 11ನೇ

ಶತಮಾನದ ಆದಿ ಭಾಗ. ಶ್ರೀ ಚಂದ್ರಲಾಂಬೆ ದೇವಿಯ ವಿಭಿನ್ನ ಕಾಲದಲ್ಲಿ ಶ್ರದ್ಧಾ ಭಕ್ತಿಯಿಂದ ಉತ್ಸವಗಳು ಇಂದಿಗೂ ಜರುಗುತ್ತವೆ. ಅನೇಕರಿಗೆ ಈ ದೇವಿಯು ದೇವತೆಯಾಗಿದ್ದಾಳೆ. ಈ ದೇವಿಯು ಪೌರಾಣಿಕ ಅಂಶಗಳು ಸಮಗ್ರ ವಾಸ್ತು-ಶಿಲ್ಪ ವಿವರಗಳು ಈ ಲೇಖನದಿಂದ ಪರಿಚಯಿಸಿಕೊಳ್ಳಲು ಸಾಧ್ಯವಾಗುತ್ತದೆ.

ಜೈನ ಬಸದಿಗಳು :

ಮಳಖೇಡದ ಬಸದಿ: ಅಲ್ಲಿಯ ಒಂದು ಜೀರ್ಣೋದ್ದಾರಗೊಂಡ ಬಸದಿಯು ಪೂರ್ವಾಭಿಮುಖವಾಗಿದೆ. ತಳಪಾಯದಲ್ಲಿ ಗರ್ಭಗೃಹ, ನವರಂಗ, ಹಜಾರಗಳಿವೆ. ಗರ್ಭಗೃಹದಲ್ಲಿ ನೇಮಿನಾಥ ಮತ್ತು ಮಲ್ಲಿನಾಥ ತೀರ್ಥಂಕರರ ಶಿಲ್ಪಗಳಿವೆ. ಬಾಗಿಲ ಚೌಕಟ್ಟಿನಲ್ಲಿ ನಾಲ್ಕು ಶಾಖೆಗಳಿವೆ. ಲಲಾಟದಲ್ಲಿ ಗಜಲಕ್ಷ್ಮೀ ಇರುವಳು. ಅಲ್ಲಿ ವಿಭಿನ್ನ ಕಾಲದ ಜಿನವಿಗ್ರಹಗಳಿವೆ. ಐದು ಕಂಚಿನ (?) ಚತುಷ್ಕೂಟವೂ ಇವೆ.

ಬಸದಿ ಗುಹೆ: ಯಾದಗಿರಿ (ಯಾದಗಿರಿ ತಾ)ಯ ಜಿನ್ನಪ್ಪನ ಬೆಟ್ಟದ ಮೇಲೆ ಗುಹೆ (ಬಸದಿ)ಯಿದೆ. ಅದರೆ ಬಂಡೆಯ ಮೇಲೆ ತೀರ್ಥಂಕರನ ಉಬ್ಬುಶಿಲ್ಪವಿದೆ. ಗರ್ಭಗೃಹದ ಹಿಂದಿನ ಬಂಡೆಯ ಮೇಲೆ ತೀರ್ಥಂಕರರ ಉಬ್ಬುಶಿಲ್ಪಗಳಿವೆ. ಇದರ ಕಾಲಮಾನ ಸುಮಾರು ಕ್ರಿ.ಶ. 10ನೆಯ ಶತಮಾನ.

ಬಸದಿ:ನಲೋಗಿ (ಜೇವರ್ಗಿ ತಾ.) ಹೂಗಾರ ಓಣಿಯ ಈಶ್ವರ ದೇವಾಲಯವು ದಕ್ಷಿಣಾಭಿಮುಖವಾಗಿದೆ. ತಳಪಾಯದಲ್ಲಿ ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳಿವೆ. ಬದಿಗಳಲ್ಲಿ ಪ್ರವೇಶದ್ವಾರಗಳುಂಟು. ಗರ್ಭಗೃಹದಲ್ಲಿ ಈಗ ಶಿವಲಿಂಗವಿದೆ. ಬಾಗಿಲ ಚೌಕಟ್ಟಿನಲ್ಲಿ ಮೂರು ಶಾಖೆಗಳಿವೆ. ಲಲಾಟದಲ್ಲಿ ಜಿನಬಿಂಬವಿದೆ. ಅಂತರಾಳದಲ್ಲಿ ದೇವಕೋಷ್ಠಗಳಿವೆ. ನವರಂಗದ ಕಂಬಗಳು ದುಂಡಾಗಿ ನುಣುಪಾಗಿವೆ. ಒಂದು ಕಂಬದ ನಾಲ್ಕು ಮುಖಗಳಲ್ಲಿ ತೀರ್ಥಂಕರರ ಉಬ್ಬುಶಿಲ್ಪಗಳಿವೆ. ಭುವನೇಶ್ವರಿಯಲ್ಲಿ ಕಮಲದ ಅಲಂಕರಣವಿದೆ. ಅದರ ಬಾಗಿಲ ಚೌಕಟ್ಟಿನಲ್ಲಿ ಐದು ಶಾಖೆಗಳಿದ್ದು, ಎರಡನೆಯ ಶಾಖೆಯಲ್ಲಿ ಕುಳಿತ ತೀರ್ಥಂಕರ ಸಾಲಿದೆ. ಬದಿಗೆ ವೈಷ್ಣವ ದ್ವಾರಪಾಲಕರಿರುವರು. ಲಲಾಟದಲ್ಲಿ ಜಿನ ತೀರ್ಥಂಕರನನ್ನು ಜೀರ್ಣೋದ್ಧಾರ ಗೊಳಿಸಲಾಗಿದೆ. ಬುಡದಲ್ಲಿ ಪೂರ್ಣಕುಂಭಗಳಿವೆ. ಇದೊಂದು ಸುಮಾರು ಕ್ರಿ.ಶ. 10ನೆಯ ಶತಮಾನದ ಬಸದಿಯಾಗಿದೆ. ಕುರುಕುಂಟ (ಸೇಡಂ ತಾ.) ಊರ ಹೊರಗಡೆ ಒಂದು ದೇಗುಲವಿದೆ. ಹಾಳಾದ ಈ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅರ್ಧ ಮಂಟಪ, ತೆರೆದ ನವರಂಗಗಳಿವೆ. ನವರಂಗದ ಗೋಡೆಗಳು ಬಿದ್ದು ಹೋಗಿವೆ.

ಗರ್ಭಗೃಹ ದಲ್ಲಿ ಸಿಂಹವುಳ್ಳ ಜಿನ ಪೀಠವಿದೆ. ಆದರೆ ವಿಗ್ರಹ ಅಲ್ಲಿಲ್ಲ. ಗರ್ಭಗೃಹದ ದ್ವಾರ ಚೌಕಟ್ಟಿನಲ್ಲಿ ಮೂರು ಶಾಖೆಗಳಾದ ಲತಾಸುರುಳಿ, ಅರೆಗಂಬ, ಸಿಂಹಸಾಲುಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ ಇದ್ದಾಳೆ. ಕಕ್ಷಾಸನ ಪಟ್ಟಿಕೆಯ ಹಿಂಬದಿಯಲ್ಲಿ (ಹೊರಗಡೆ) ಬಾತುಕೋಳಿ ಗಳ ಅಲಂಕರಣವಿದೆ.





ಸಭಾ ಮಂಟಪದ ಕಂಬಗಳಲ್ಲಿ ತಲಾ ಒಂದರಲ್ಲಿ 4 ಮುಖಗಳಲ್ಲಿ ಇಳಿಬಿಟ್ಟ ಹಾರಗಳಲ್ಲಿ ವಿಭಿನ್ನ ಚಿತ್ರಗಳಿವೆ. 1ನೇ ಕಂಬದಲ್ಲಿ ನಾಲ್ಕು ಮುಖಗಳಲ್ಲಿ ಕ್ರಮವಾಗಿ ಪಾರ್ಶ್ವನಾಥರಿದ್ದಾರೆ. ಮನುಷ್ಯ-ಪ್ರಾಣಿ ರೂಪದ ನಾಗ-ನಾಗಿಣಿಯರಿದ್ದಾರೆ. ಲತಾ ಬಳ್ಳಿ ಸಾಲುಗಳಿವೆ. ಕೀರ್ತಿ ಮುಖವಿದೆ. 2ನೇ ಕಂಬದ ನಾಲ್ಕು ಮುಖಗಳಲ್ಲಿ 2 ಸಿಂಹಗಳು 3. ಪಾರ್ಶ್ವನಾಥರು, ದೇವತೆ-ಸೇವಕಿ, ಯಕ್ಷಿ-ಯಕ್ಷಿಣಿಯಿದ್ದಾರೆ. 3ನೇ ಕಂಬದಲ್ಲಿ ಪಾರ್ಶ್ವನಾಥ-ಜ್ವಾಲಾಮಾಲಿನಿ, ಯಕ್ಷಿ (?), ಕೀರ್ತಿ ಮುಖಗಳು, ಅಂಬಿಕೆ-ಯಕ್ಷ, ಕೀರ್ತಿ ಮುಖಗಳಿವೆ. 4ನೇ ಕಂಬದಲ್ಲಿ ಕೀರ್ತಿ ಮುಖಗಳು, ಪಾರ್ಶ್ವನಾಥರು, ಯಕ್ಷರು (ಒಬ್ಬರಿಗೆ ಅಶ್ವಮುಖವಿದೆ) ಇದ್ದಾರೆ.

ಅಧ್ಯಾಯ–4

ರಾಷ್ಟ್ರಕೂಟರ ಶೈವ ಶಿಲ್ಪಗಳು

ಅಧ್ಯಾಯ–4

ರಾಷ್ಟ್ರಕೂಟರ ಶೈವ ಶಿಲ್ಪಗಳು

ಕರ್ನಾಟಕದ ಶೈವ ಧರ್ಮದ ಬಗ್ಗೆ ಅಥವಾ ಶಿವ ದೇವಾಲಯಗಳ ಬಗ್ಗೆ ಮಾತನಾಡುವಾಗ ಗುಲ್ಬರ್ಗ ಜಿಲ್ಲೆಯ ಕೊಡುಗೆಯನ್ನು ವಿಶೇಷವಾಗಿಯೇ ಉಲ್ಲೇಖಿಸಬೇಕಾಗುತ್ತದೆ. ಗುಲ್ಬರ್ಗ ಜಿಲ್ಲೆಯಲ್ಲಿ ಶಾಸನೋಕ್ತ ಸುಮಾರು 222ಕ್ಕೂ ಹೆಚ್ಚು ದೇವಾಲಯಗಳು ಉಳಿದಿವೆ ಎಂದು ಅಂದಾಜು ಮಾಡಲಾಗಿದೆ. ಕೇವಲ 53ಶಾಸನೋಕ್ತ ದೇವಾಲಯಗಳು ಉಳಿದಿಲ್ಲ ಎಂದು ತಿಳಿಯಲಾಗಿದೆ. ಉಳಿದಿವೆ ಎಂದು ಅಂದಾಜು ಮಾಡಲಾಗಿರುವ ದೇವಾಲಯಗಳನ್ನೂ ಹಲವು ದೇವಾಲಯಗಳು ಸಂರಕ್ಷಣೆ ಅಥವಾ ಪುನರ್‌ನಿರ್ಮಾಣ ಮತ್ತು ದುರಸ್ತಿಯ ನೆಪದಲ್ಲಿ ಬಣ್ಣ ತಿಳಿದುಕೊಂಡು ತಮ್ಮ ಹಳೆಯ ಸ್ವರೂಪವನ್ನು ಸಂಪೂರ್ಣವಾಗಿ ಕಳೆದುಕೊಂಡಿವೆ. ಚಿತ್ತಾಪುರ ತಾಲ್ಲೂಕಿನಲ್ಲಿ ಹೆಚ್ಚು ಸಂಖ್ಯೆಯ (46) ಶಿವ ದೇವಾಲಯಗಳು ಉಳಿದಿದ್ದು ನಂತರದ ಸ್ಥಾನವನ್ನು ಜೇವರ್ಗಿ (39) ಪಡೆಯುತ್ತದೆ. ಕೊನೆಯ ಸ್ಥಾನ ಗುಲ್ಬರ್ಗಾ (1) ತಾಲ್ಲೂಕಿನದು. ಹೆಚ್ಚು ಶಿವ ದೇವಾಲಯಗಳು (23) ಹಾಳಾಗಿರುವುದು ಸುರಪುರ ತಾಲ್ಲೂಕಿನಲ್ಲಾದರೆ, ಕಡಿಮೆ ಶಿವ ದೇವಾಲಯಗಳು (1) ಹಾಳಾಗಿರುವುದು ಅಫಜಲ್‌ಪುರ ತಾಲ್ಲೂಕಿನಲ್ಲಿ. ಗುಲ್ಬರ್ಗಾ ಜಿಲ್ಲೆಯಲ್ಲಿ ಸದ್ಯದ ಮಾಹಿತಿಯ ಪ್ರಕಾರ ಉಳಿದು ಬಂದಿರುವ ಅತ್ಯಂತ ಪ್ರಾಚೀನ ಶಿವಾಲಯವೆಂದರೆ ಜೇವರ್ಗಿ ತಾಲ್ಲೂಕಿನ

ಅಂದೋಲನದಲ್ಲಿರುವ ಅಷ್ಟಲಿಂಗೇಶ್ವರ ಗುಡಿ. ರಾಷ್ಟ್ರಕೂಟ ದೊರೆ ಮೂರನೆಯ ಕೃಷ್ಣನ ಕಾಲದಲ್ಲಿ ಸ್ಪಷ್ಟವಾಗಿ ಕ್ರಿ.ಶ. 957ರಲ್ಲಿ ನಿರ್ಮಾಣಗೊಂಡಿರುವ ಗುಂಡಗೇಶ್ವರ ದೇವಾಲಯವೇ ಈಗ ಅಷ್ಟಲಿಂಗೇಶ್ವರ ದೇವಾಲಯ ಎಂಬ ಹೆಸರಿನಲ್ಲಿ ಉಳಿದು ಬಂದಿದೆ. ಉಳಿದಂತೆ ಕ್ರಿ.ಶ. 918ರಲ್ಲಿ ಮೊಘಾದಲ್ಲಿ ನಿರ್ಮಾಣವಾಗಿದ್ದ ಆದಿತ್ಯ ದೇವಾಲಯ, ಕ್ರಿ.ಶ. 939ರಲ್ಲಿ ಶಿರಿವಾಳದಲ್ಲಿ ನಿರ್ಮಾಣವಾಗಿದ್ದ ಶಿವಾಲಯ ಮತ್ತು ಚಿಂಚೋಳಿ ತಾಲ್ಲೂಕಿನ ನಿಡಗುಂದಿಯಲ್ಲಿ ನಿರ್ಮಾಣವಾಗಿದ್ದ ಶಿವ ದೇವಾಲಯಗಳು ಈಗ ಉಳಿದಿಲ್ಲ, ಕುಳಗೇರಿ, ಕಾಳಗಿ, ಉಡಗಿ, ಮುಧೋಳಗಳಲ್ಲಿ ಪ್ರಾಚೀನ ಶಿವ ದೇವಾಲಯಗಳನ್ನು ಕಾಣಬಹುದು.

ಸಾಮಾನ್ಯವಾಗಿ ಏಕಕೂಟ, ದ್ವಿಕೂಟ ಮತ್ತು ತ್ರಿಕೂಟ ದೇವಾಲಯಗಳು ಕರ್ನಾಟಕದ ಎಲ್ಲೆಡೆ ಕಾಣುವಂತೆ ಗುಲಬರ್ಗಾ ಜಿಲ್ಲೆಯಲ್ಲೂ ಇವೆ. ಈ ಜಿಲ್ಲೆಯಲ್ಲಿ ಚತುಷ್ಕೂಟ ಮತ್ತು ಪಂಚಕೂಟ ದೇವಾಲಯಗಳೂ ಇವೆ. ಇಂಗಳಗಿಯ ಸಪ್ತಲಿಂಗೇಶ್ವರ ದೇವಾಲಯವು ಚತುಷ್ಕೂಟವಾಗಿದ್ದು ಅದು ಕ್ರಿ.ಶ. 11ನೇ ಶತಮಾನದ ನಿರ್ಮಾಣವಾಗಿದೆ. ಅದೇ ಶತಮಾನದ ಇನ್ನೆರಡು ಚತುಷ್ಕೂಟ ನಿರ್ಮಾಣಗಳೆಂದರೆ, ಸುರಪುರ ತಾಲ್ಲೂಕಿನ ಕೆಂಭಾವಿಯ ರೇವಣಸಿದ್ದೇಶ್ವರ ಅಥವಾ ಮಾಳಬ್ಬೇಶ್ವರ ದೇವಾಲಯಗಳು. ಶಹಾಪುರ ತಾಲ್ಲೂಕಿನ ಸಿರಿವಾಳದ ಸಿದ್ಧಲಿಂಗೇಶ್ವರ ಗುಡಿಯು ಪಂಚಕೂಟವಾಗಿದ್ದು, ಇದು ವಿಶೇಷ ವಾಸ್ತು ಶೈಲಿ ಎನಿಸಿಕೊಂಡಿದೆ. ಸುರಪುರ ತಾಲ್ಲೂಕಿನ ಅರಕೇರಿಯಲ್ಲಿ ಸಹಸ್ರಲಿಂಗ ದೇವಾಲಯವಿದೆ. ಇಲ್ಲಿ ಒಂದೇ ದೊಡ್ಡ ಲಿಂಗದಲ್ಲಿ ಒಂದು ಸಾವಿರ ಚಿಕ್ಕ ಲಿಂಗಗಳಿರುವುದನ್ನು ಕಾಣಬಹುದು.

ಜೇವರ್ಗಿ ತಾಲ್ಲೂಕಿನ ಅಂದೋಲ, ಗಂವ್ಹಾರ, ಕುಳಗೇರಿ, ವಡಗೇರಿ, ಕೊಂಡಗುಳಿ, ಯಡ್ರಾಮಿ, ನರಬೋಳಿ, ನೆಲೋಗಿ, ಹಿಪ್ಪರಗಿಗಳಲ್ಲಿ ಪ್ರಾಚೀನ ಶಿವ ದೇವಾಲಯಗಳಿವೆ. ಬಹುತೇಕ ಇವೆಲ್ಲವೂ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣ ಗೊಂಡಿವೆ. ಬೃಹತ್ ಶಿಲಾಯುಗದ ಸಮಾಧಿಗಳೂ ಇರುವ ಅಂದೋಲಾದಲ್ಲಿನ ರಾಷ್ಟ್ರಕೂಟ ಮೂರನೆಯ ಕೃಷ್ಣನ ಕ್ರಿ.ಶ. 958ರ ಶಾಸನವು ಅಲ್ಲಿ ಗುಂಡಗೇಶ್ವರ ದೇವಾಲಯ ನಿರ್ಮಾಣಗೊಂಡಿದ್ದ ವಿಷಯವನ್ನು ದಾಖಲಿಸಿದೆ. ಅದೇ ಗುಂಡಗೇಶ್ವರ ದೇವಾಲಯವೇ ಈಗಿನ ಅಷ್ಟಲಿಂಗೇಶ್ವರ ಎಂದು ಗುರುತಿಸಲಾಗಿದೆ. ಅಂದೋಲನದಲ್ಲಿ ಈ ದೇವಾಲಯವಲ್ಲದೆ, ಇನ್ನೂ ಐದು ಶಿವಾಲಯಗಳಿದ್ದು ಅವು ಕ್ರಿ.ಶ. 11ನೆಯ ಶತಮಾನದಿಂದ 13ನೆಯ ಶತಮಾನದ ನಡುವಿನ ಅವಧಿಯಲ್ಲಿ ನಿರ್ಮಾಣವಾಗಿರುವುದಕ್ಕೆ ಶಾಸನಾಧಾರಗಳಿವೆ. ಇವುಗಳಲ್ಲಿ ಕೆಲವು ದೇವಾಲಯಗಳ ಹೆಸರು ಬದಲಾಗಿವೆ. ಗಂವ್ಹಾರದಲ್ಲಿರುವ 11ನೆಯ ಶತಮಾನದ ಶಾಸನೋಕ್ತ ಅಮೃತೇಶ್ವರ ದೇವಾಲಯದಲ್ಲಿ ವಿಶಿಷ್ಟ ಎನಿಸುವ ಐದು ಮುಖಗಳುಳ್ಳ ಲಿಂಗವಿದೆ. ಈಗ ದೇವಾಲಯ ಜೀರ್ಣೋದ್ದಾರಗೊಂಡಿದೆ. ಇದೇ ಊರಿನಲ್ಲಿರುವ ಎತ್ತರದ ಅಧಿಷ್ಠಾನದ

ಕಪಾಲೇಶ್ವರ ದೇವಾಲಯದ ಕಾಲವನ್ನು ಕ್ರಿ.ಶ. ಸುಮಾರು 10ನೆಯ ಶತಮಾನ ಎಂದು ಅಂದಾಜು ಮಾಡಲಾಗಿದೆ. ಕುಳಿಲಂಗೆರೆ, ಕುಣಿಲಂಗರೆ ಇತ್ಯಾದಿ ಹೆಸರುಗಳಿಂದ ಪ್ರಸಿದ್ಧವಾದ ಸರ್ವನಮಸ್ಯದ ಅಗ್ರಹಾರ, ಭತ್ತಗ್ರಾಮ ಕುಣಿಲಂಗೆರೆಯ ಈಗ ಕುಳಗೇರಿಯಾಗಿ ಉಳಿದಿದೆ. ಕಲ್ಯಾಣ ಚಾಲುಕ್ಯರ ಕಾಲದ 24 ಶಾಸನಗಳಿರುವ ಕುಳಗೇರಿಯು ಮಹಾ ಘಟಿಕಸ್ಥಾನವಾಗಿತ್ತು. ಬಿಬ್ಬೇಶ್ವರದ ತಪೋಧನರು ಮತ್ತು ಮಾಣಿಗಳು, ಸರ್ವೇಶ್ವರ ದೇವರಲ್ಲಿ ಓದಿ, ಕೇಳುವ ತಪೋಧನರು ಇಲ್ಲಿನ ಶಾಸನಗಳಲ್ಲಿ ಪ್ರಸ್ತಾಪಿತರಾಗಿದ್ದಾರೆ. ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ರಾಣಿಯರಲ್ಲಿ ಒಬ್ಬಳಾದ ಮಾಳಲದೇವಿಯು ತನ್ನ ಗಂಡನ ತುಲಾಭಾರ ಮಹೋತ್ಸವದ ಸಂದರ್ಭದಲ್ಲಿ ಮಾಡಲಾದ ದಾನದ ವಿಷಯವನ್ನು ಕ್ರಿ.ಶ. 1105ರ ಒಂದು ಶಾಸನ ದಾಖಲಿಸಿದೆ. ಕುಳಗೇರಿಯಲ್ಲಿ ನಾಗರಾಶಿ ಪಂಡಿತರು ಕಟ್ಟಿಸಿದ ನಾಗೇಶ್ವರ, ಭೋಗಿಸೆಟ್ಟಿ ಕಟ್ಟಿಸಿದ ಭೋಗೇಶ್ವರ ಮತ್ತು ರಾವಿ ಸೆಟ್ಟಿ ಕಟ್ಟಿಸಿದ ರಾಮೇಶ್ವರ ದೇವಾಲಯಗಳ ಉಲ್ಲೇಖ ಶಾಸನಗಳ ಮೂಲಕ ದೊರೆಯುತ್ತದೆ. ಬಹುತೇಕ ಇವೆಲ್ಲವೂ ಸ್ವರೂಪದ ಜೊತೆಗೆ ಹೆಸರನ್ನೂ ಬದಲಾಯಿಸಿಕೊಂಡಿವೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ಕಪಾಲೇಶ್ವರ, ಕಲ್ಲೇಶ್ವರ, ಅಭಿನವ ಕಲಿದೇವೇಶ್ವರ, ಕಾಲಕಂಠೇಶ್ವರ, ಕುಮಾರೇಶ್ವರ, ನೀಲಕಂಠೇಶ್ವರ, ರಾಮಲಿಂಗೇಶ್ವರ, ಶಂಭುಲಿಂಗೇಶ್ವರ, ಭೋಗೇಶ್ವರ, ಕಾಳೇಶ್ವರ, ಕಾಳಿಂಗೇಶ್ವರ, ಕೇದಾರೇಶ್ವರ, ಗಂಗಾಧರೇಶ್ವರ, ಗವರೇಶ್ವರ, ಗವಿಸಿದ್ಧೇಶ್ವರ ಇತ್ಯಾದಿ ಈಶ್ವರ ದೇವಾಲಯಗಳು ಅಧಿಕ ಸಂಖ್ಯೆಯಲ್ಲೇ ಇವೆ. ಮೂಲತಃ ಇವುಗಳ ಹೆಸರು ಬೇರೆ ಇದ್ದು, ಈಗ ಬದಲಾದ ಹೆಸರಿನಲ್ಲಿ ಉಳಿದಿವೆ. ಇವುಗಳ ಕಾಲವು ಕ್ರಿ.ಶ. 10ನೆಯ ಶತಮಾನದಿಂದ 13ನೆಯ ಶತಮಾನದವರೆಗೂ ವಿಸ್ತರಿಸುತ್ತದೆ. ಉದಾಹರಣೆಗೆ ಚಿಂಚೋಳಿ ತಾಲ್ಲೂಕಿನ ನಿಡಗುಂದಿಯ ಕ್ರಿ.ಶ. 939ರ ಶಾಸನೋಕ್ತ ನವಕೋಟಿ ನಾರಾಯಣ ದೇಗುಲವು ಈಗ ಕೇವಲ ಈಶ್ವರ ದೇವಾಲಯವಾಗಿ ಉಳಿದಿದೆ. ಚಿತ್ತಾಪುರ ತಾಲ್ಲೂಕು ಮರತೂರಿನ ಈಶ್ವರ ದೇವಾಲಯವು ತ್ರಿಕೂಟವಾಗಿದೆ. ಇದರ ಕಾಲ ಕ್ರಿ.ಶ. 1116 ಅದೇ ಚಿತ್ತಾಪುರ ತಾಲ್ಲೂಕಿನ ಬಣಬಿಯ ಈಶ್ವರ ದೇವಾಲಯವನ್ನು ಶಾಸನಗಳು ಮಲ್ಲಿಕಾರ್ಜುನ ದೇವಾಲಯ ಎಂದೇ ಸಂಬೋಧಿಸಿವೆ. ಜೇವರ್ಗಿ ತಾಲ್ಲೂಕಿನ ನೆಲೋಗಿಯ ಈಶ್ವರ ದೇವಾಲಯವು ಹಿಂದೆ ಜೈನ ಬಸದಿಯಾಗಿದ್ದಂತೆ ತೋರುತ್ತದೆ. ಗುಲಬರ್ಗಾ ಜಿಲ್ಲೆಯ ಕೆಲವು ಶಿವ ದೇವಾಲಯಗಳು ಕರಿದೇವ / ಕರಿಲಿಂಗ / ಕಲ್ಲಾಲಿಂಗ ದೇವಾಲಯ / ಗುಡಿ ಎಂಬ ಹೆಸರಿನಿಂದ ಉಳಿದಿವೆ. ಇದಕ್ಕೆ ಖಚಿತವಾದ ಕಾರಣಗಳೇನು ಎಂದು ವಿವರಿಸುವುದು ಸುಲಭವಲ್ಲ. ಲಿಂಗಕ್ಕೆ ಬಳಸಲಾದ ಕಲ್ಲಿನ ಬಣ್ಣ ಕರಿ ಎಂಬ ಕಾರಣವೇ ಆಗಲಿ, ಲಿಂಗವು ಕಲ್ಲಾದ್ದರಿಂದ ಅಂತಹ ಹೆಸರುಗಳು ಬಂದಿರಬಹುದು ಎಂಬ ಕಾರಣವೇ ಆಗಲಿ ಬಹಳ ಸರಳ ಎನಿಸಿಬಿಡುತ್ತದೆ. ಅಫಜಲ್‌ಪುರದ ಕಾಳಪ್ರಿಯ,

ನಖರೇಶ್ವ, ತ್ರೈಕೂಟದ ರೇವಣೇಶ್ವರ ದೇವಾಲಯಗಳು ಏಕಕೂಟವಾಗಿದ್ದು, ಕೇವಲ ಶಾಸನೋಲ್ಲೇಖಗಳಾಗಿ ಉಳಿದಿವೆ. ಚಿತ್ತಾಪುರ ತಾಲೂಕಿನ ಮರ್ತೂರಿನ ಕಾಳಿಂಗೇಶ್ವರ ದೇವಾಲಯವು ಏಕಕೂಟವಾಗಿದ್ದು. ವಿಜ್ಞಾನೇಶ್ವರ ಶಾಸನವು ಅಲ್ಲಿದೆ. ಮರ್ತೂರಿನಲ್ಲೇ ಇರುವ ಕಾಶಿ ವಿಶ್ವೇಶ್ವರ ದೇವಾಲಯವು ಕ್ರಿ. ಶ. 11ನೆಯ ಶತಮಾನದ ನಿರ್ಮಾಣವಾಗಿದ್ದು. ಅದು ದ್ವಿಕೂಟವಾಗಿದ್ದು, ಸಹಜವಾಗಿಯೇ ಗಮನ ಸೆಳೆಯುತ್ತದೆ. ಕ್ರಿ. ಶ. 1103ರ ನಿರ್ಮಾಣವಾದ ಕಾಳಗಿಯ ಕಾಳೇಶ್ವರ ದೇವಾಲಯವು ಆ ಭಾಗದ ಮತ್ತು ಆ ಕಾಲದ ಅತ್ಯುತ್ತಮ ನಿರ್ಮಾಣಗಳಲ್ಲೊಂದು. ಜೇವರ್ಗಿ ತಾಲ್ಲೂಕಿನ ಹಿಪ್ಪರಗಿಯ ಗೌರಿಶಂಕರ ದೇವಾಲಯವು ಮೂಲದಲ್ಲಿ ಚತುಷ್ಕೂಟವಾಗಿದ್ದು, ಈಗ ಶಿಥಿಲಾವಸ್ಥೆಯಲ್ಲಿದೆ. ಇಲ್ಲಿ ಉಳಿದಿರುವ ಪೀಠಗಳು ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರಿಗೆ ಸಂಬಂಧಿಸಿವೆ.

ಗುಲ್ಬರ್ಗ ಜಿಲ್ಲೆಯಲ್ಲಿ ಐದು ತ್ರೈಪುರುಷ ದೇವಾಲಯಗಳನ್ನು ಗುರುತಿಸಲಾಗಿದೆ. ಅಪಲ್‌ಪುರ ತಾಲ್ಲೂಕಿನ ಚಿಣಮಗೇರಿಯ ಶಾಸನೋಕ್ತ ತ್ರೈಪುರುಷ ದೇವಾಲಯವು ಈಗ ವೀರಭದ್ರ ಗುಡಿಯಾಗಿದೆ. ಇಲ್ಲಿ ಈಗಲೂ ಮೂರು ಗರ್ಭಗೃಹಗಳಿವೆ ಚಿತ್ತಾಪುರ ತಾಲ್ಲೂಕಿನ ನಾಗಾವಿಯಲ್ಲಿದ್ದ ತ್ರೈಪುರುಷ ಸಾಲೆಯು ಆ ಕಾಲದ ಘಟಿಕಾಸ್ಥಾನವಾಗಿತ್ತು ಎಂದು ತಿಳಿಸಲಾಗಿದೆ. ಈಗ ಅದು ಶಾಲೆಯ ಸ್ವರೂಪದಲ್ಲಿ ಸಂರಕ್ಷಿಸಲ್ಪಟ್ಟಿದೆ. ಜೇವರ್ಗಿ ತಾಲ್ಲೂಕಿನ ಕಲೂರು ಮತ್ತು ನರಬೋಳಿಯಲ್ಲಿದ್ದ ತ್ರೈಪುರುಷ ದೇವಾಲಯಗಳು ಈಗ ಶಿಥಿಲವಾಗಿವೆ. ಶಹಾಪುರ ತಾಲ್ಲೂಕಿನ ಹಾರಣಗೇರಿಯ ತ್ರೈಪುರುಷ ಸಾಲೆಯು ಕೇವಲ ಶಾಸನೋಕ್ತವಾಗಿದೆ.

ಆರನೆಯ ವಿಕ್ರಮಾದಿತ್ಯನ ಪಟ್ಟಬಂದೋತ್ಸವ ನಿಮಿತ್ತ ದಾಯಿಮಯ್ಯ ಎಂಬ ಅಧಿಕಾರಿ ಕಟ್ಟಿಸಿದ, ಶಾಸನೋಕ್ತ ದಾಯಿಮೇಶ್ವರ ದೇವಾಲಯವು ಈಗ ಬಸವೇಶ್ವರ ದೇವಾಲಯವಾಗಿ ಉಳಿದಿದೆ. ಬಹುಕೋನಾಕಾರ ತಳ ವಿನ್ಯಾಸವಿರುವ ದೇವಾಯದ ಗರ್ಭಗೃಹ ಮತ್ತು ಅಂತರಾಳಗಳು ನಾತ್ರ ಉಳಿದಿದ್ದು, ನವರಂಗ ಶಿಥಿಲವಾಗಿದೆ.

ನಖರೇಶ್ವರ ಹೆಸರಿನ ಸುಮಾರು ಆರು ದೇವಾಲಯಗಳು ಗುಲ್ಬರ್ಗಾ ಜಿಲ್ಲೆಯಲ್ಲಿವೆ. ಅವುಗಳ ಪೈಕಿ ಪ್ರಾಚೀನವದುದೆಂದರೆ ಸುಪಪುರ ತಾಲ್ಲೂಕಿನ ಹರಟಗಿಯ ನಖರೇಶ್ವರ ದೇವಾಲಯ. ಹಗರಟಗಿಯಲ್ಲಿ 1092 ರಿಂದ 1229 ರವರೆಗೆ ಸುಮಾರು ಹನ್ನೊಂದು ದೇವಾಲಯಗಳು ನಿರ್ಮಾಣಗೊಂಡಿವೆ. ಇಲ್ಲಿ ಗವರೇಶ್ವರ ದೇವಾಲಯವು ಇರುವುದರಿಂದ ಇದು ವರ್ತಕರು ಹೆಚ್ಚಾಗಿ ನೆಲೆಸಿದ್ದ ಸ್ಥಳ ಇಂದು ತಿಳಿಯಬಹುದಾಗಿದೆ. ಆದ್ದರಿಂದ ಸಹಜವಾಗಿಯೇ ಇಲ್ಲಿ ಹೆಚ್ಚು ದೇವಾಲಯಗಳು ನಿರ್ಮಾಣವಾಗಿವೆ ಮತ್ತು ಅವುಗಳಿಗೆ ಹೆಚ್ಚು ದಾನ ದತ್ತಿ ದೊರೆತಿದೆ. ಅಫಜಲ್‌ಪುರದಲ್ಲಿ ತ್ರೈಕೋಟೆಶ್ವರ ಜೊತೆಗೆ ನಖರೇಶ್ವರ ಕಾಳಪ್ರಿಯದೇವ ಮತ್ತು ಒಂದು ಬಸದಿಯ ಉಲ್ಲೇಖ ಮಾತ್ರ ಇದ್ದು ಬಹುತೇಕ ಎಲ್ಲ

ದೇವಾಲಯಗಳೂ ನಾಶವಾಗಿವೆ. ಸುರಪುರ ತಾಲ್ಲೂಕಿನ ದೇವಪುರದ ಕ್ರಿ. ಶ 1114ರ ಶಾಸನೋಕ್ತ ನಗ (ಖ)ರೇಶ್ವರದೇವಾಲಯವು ಈಗ ರಾಮಲಿಂಗೇಶ್ವರ ಎಂಬ ಹೆಸರಿನ ದೇವಾಲಯವಾಗಿ ಉಳಿದಿದೆ. ಈ ದೇವಾಲಯ ಜೀರ್ಣೋದ್ಧಾರ ಗೊಂಡಿದೆ. ಗುಲ್ಬರ್ಗಾ ತಾಲ್ಲೂಕಿನ ಜೇವಣಗೀಯ ಕ್ರಿ. ಶ 1126 ಶಾಸನೋಕ್ತನಖರೇಶ್ವರ ದೇವಾಲಯ, ಜಿಬ್ಬೇಶ್ವರ ದೇವಾಲಯ ಮತ್ತು ಜಂಬುನಾಥ ದೇವಾಲಯಗಳ ಪೈಕಿ ಯಾವ ದೇವಾಲಯವೂ ಉಳಿದಿಲ್ಲ.

ಅಫಜಲ್‌ಪುರ ತಾಲ್ಲೂಕಿನ ಮಾಶಾಳದ ಶಾಸನೋಕ್ತ ಹೆಸರು ಮಾಸಿವಳ. ಇಲ್ಲಿ ಕ್ರಿ.ಶ. 115ರಲ್ಲಿ ಕಲ್ಯಾಣ ಚಾಲುಕ್ಯ ಯುವರಾಜ ಮಲ್ಲಿಕಾರ್ಜುನನಿಂದ ನಿರ್ಮಾಣಗೊಂಡಿರುವ ಒಂದು ತ್ರಿಕೂಟ ದೇವಾಲಯವು ಮಹಾದೇವ, ಆದಿತ್ಯ ಮತ್ತು ಕೇಶವ ದೇವರುಗಳ ಹೆಸರಿನಲ್ಲಿದ್ದು, ಶಿಥಿಲಾವಸ್ಥೆಯಲ್ಲಿ ಯಾಳಭಾವಿ ತೋಟದ ದೇಗುಲ ಎಂಬ ಹೆಸರಿನಲ್ಲಿ ಉಳಿದಿರುವ ಈ ದೇವಾಲಯದ ಒಂದು ಗರ್ಭಗೃಹದಲ್ಲಿ ಮಾತ್ರ ಲಿಂಗವಿದೆ. ಉಳಿದ ಎರಡು ಗರ್ಭಗೃಹಗಳಲ್ಲಿ ಇದ್ದಿರಬೇಕಾದ ಯಾವುದೇ ವಿಗ್ರಹಗಳಿಲ್ಲ. ಇಲ್ಲಿನ ನರಸಿಂಹ-ಈಶ್ವರ ದ್ವಿಕೂಟ ದೇವಾಲಯವೂ ಸಹ ಶಿಥಿಲಾವಸ್ಥೆಯಲ್ಲಿದೆ. ಶಾಸನೋಕ್ತ ತಿಪ್ಪೇಶ್ವರ ದೇವಾಲಯವು ಈಗ ಈಶ್ವರ ದೇವಾಲಯ ಎಂಬ ಹೆಸರಿನಲ್ಲಿ ಶಿಥಿಲವಾಗಿ ಉಳಿದಿದೆ.

ನಾಗಲಿಂಗ/ ನಾಗೇಶ್ವರ/ ನಾಗಲಿಂಗೇಶ್ವರ ಹೆಸರಿನ ದೇವಾಲಯಗಳ ಪೈಕಿ ಜೇವರ್ಗಿ ತಾಲ್ಲೂಕಿನ ಕುಳಗೇರಿಯಲ್ಲಿ ನಾಗರಾಸಿ ಪಂಡಿತರು ಕ್ರಿ.ಶ. 1100ರಲ್ಲಿ ಕಟ್ಟಿಸಿದ ನಾಗೇಶ್ವರ ದೇವಾಲಯವೇ ಪ್ರಾಚೀನ. ರಾಷ್ಟ್ರಕೂಟ ಪ್ರಭಾವ ಇರುವ ಇದು ಮೊದಲಿಗೆ ತ್ರಿಕೂಟ ಹಾಗೂ ತ್ರೈಪುರುಷ ದೇವಾಲಯವಾಗಿದ್ದಂತೆ ತೋರುತ್ತದೆ. ಅಂತರಾಳದ ಮೊದಲಿಗಿರುವ ಮಕರ ತೋರಣದಲ್ಲಿ ಬ್ರಹ್ಮ, ವಿಷ್ಣು ಮತ್ತು ಶಿವನ ಶಿಲ್ಪಗಳಿವೆ. ಒಂದು ಗರ್ಭಗೃಹ ಮಾತ್ರ ಉಳಿದಿದ್ದು, ಉಳಿದ ಎರಡರ ಅಂತರಾಳಗಳು ಉಳಿದಿವೆ. ಅಂತರಾಳದ ಎರಡು ಕಡೆಗಳಲ್ಲಿ ಇರುವ ಆಳೆತ್ತರದ ಚಾಮರಧಾರಿ ಪರಿಚಾರಿಕೆಯರು ಗಮನ ಸೆಳೆಯುತ್ತಾರೆ. ನವರಂಗದ ದೇವಕೋಷ್ಠಗಳಲ್ಲಿ ಉಮಾಮಹೇಶ್ವರ ಮತ್ತು ಅನಂತಪದ್ಮನಾಭನ ಶಿಲ್ಪಗಳಿವೆ. ಇಲ್ಲಿಯ ದೇವರನ್ನು ಅಮಿತಲಿಂಗ ವಿಷಪ್ರಹಾರಿ ನಾಗೇಶ್ವರ ಎಂಬ ಹೆಸರಿನಿಂದ ಕರೆಯುತ್ತಾರೆ. ಚಿಂಚೋಳಿ ತಾಲ್ಲೂಕಿನ ಶಿರೋಳಿಯಲ್ಲಿರುವ ಹರಿಹರ ದೇವಾಲಯವೇ ಕ್ರಿ.ಶ. 1154ರ ಶಾಸನೋಕ್ತ ನಾಗಲಿಂಗ ದೇವಾಲಯ.

ಚಿಂಚೋಳಿ ತಾಲ್ಲೂಕಿನ ರುಮ್ಮನಗೂಡು, ಚಿತ್ತಾಪುರ ತಾಲ್ಲೂಕಿನ ಕಾಳಗಿ, ಸುರಪುರ ತಾಲ್ಲೂಕಿನ ಯಾಳಗಿ ಮತ್ತು ಹುಣಸಗಿಗಳಲ್ಲಿ ನೀಲಕಂಠೇಶ್ವರ ದೇವಾಲಯಗಳಿದ್ದು, ಇವುಗಳ ಪೈಕಿ ಯಾಳಗಿಯ ದೇವಾಲಯ ಮಾತ್ರ ಕ್ರಿ.ಶ. 10ನೆಯ ಶತಮಾನಕ್ಕೆ ಸೇರುತ್ತದೆ. ಉಳಿದ ಎಲ್ಲ ದೇವಾಲಯಗಳು ಕ್ರಿ.ಶ. 12ನೆಯ ಶತಮಾನಕ್ಕೆ ಸೇರುತ್ತವೆ. ಯಾಳಗಿಯ ಗುಗ್ಗರಬಾವಿ

ಓಣಿಯಲ್ಲಿರುವ ನೀಲಕಂಠೇಶ್ವರ ದೇವಾಲಯವು ಇಲ್ಲಿನ ಅತಿ ಪ್ರಾಚೀನ ದೇವಾಲಯವಾದರೂ, ಇಲ್ಲಿ ಇನ್ನೂ ಹಲವು ದೇವಾಲಯಗಳಿವೆ. ಆದರೆ, ಎಲ್ಲವೂ ಶಿಥಿಲಾವಸ್ಥೆಯಲ್ಲಿವೆ. ಚಿತ್ತಾಪುರ ತಾಲ್ಲೂಕಿನ ಕಾಳಗಿಯಲ್ಲಿರುವ ಹತ್ತು ದೇವಾಲಯಗಳ ಪೈಕಿ ನೀಲಕಂಠೇಶ್ವರ ದೇವಾಲಯವೂ ಒಂದು. ಕಾಳಗಿಯಲ್ಲಿನ ಪ್ರಾಚೀನ ಶಾಸನೋಕ್ತ ದೇವಾಲಯವೆಂದರೆ ಸೋಮೇಶ್ವರ ದೇವಾಲಯ. ಶಾಸನೋಕ್ತ ಸ್ವಯಂಭು ಕಾಳೇಶ್ವರ ದೇವಾಲಯವೇ ಈಗಿನ ಕಾಳೇಶ್ವರ ದೇವಾಲಯ. ಇದೊಂದು ದೇವಾಲಯ ಸಂಕೀರ್ಣ. ಎಲ್ಲ ದೇವಾಲಯಗಳೂ ಸೇರಿದಂತೆ ಒಂದು ವಿಶಾಲ ಸಭಾ ಮಂಟಪ ಇರುವುದು ಇಲ್ಲಿನ ವಾಸ್ತುವಿಶೇಷ. ರಾಷ್ಟ್ರಕೂಟ ಮತ್ತು ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳ ಅಧ್ಯಯನಕ್ಕೆ ಕಾಳಗಿಯ ಒಂದು ಪ್ರಮುಖ ನೆಲೆ. ಸುರಪುರ ತಾಲ್ಲೂಕಿನ ಹುಣಸಗಿಯ ನೀಲಕಂಠೇಶ್ವರ ದೇವಾಲಯವು ತ್ರಿಕೂಟವಾಗಿದ್ದು ಮೂರು ಗರ್ಭಗೃಹಗಳಿಗೆ ಸೇರಿದಂತೆ ಒಂದೇ ನವರಂಗವಿದೆ. ಪ್ರಧಾನ ಗರ್ಭಗೃಹದಲ್ಲಿ ಮಾತ್ರ ಶಿವಲಿಂಗವಿದ್ದು ಉಳಿದೆರಡು ಗರ್ಭಗೃಹಗಳು ಖಾಲಿಯಾಗಿವೆ.

ಕಲಿ ದೇವರು/ ಕಲ್ಲಾಲಿಂಗ/ ಅಭಿನವ ಕಲಿದೇವರು ಇತ್ಯಾದಿ ಹೆಸರಿನ ದೇವಾಲಯಗಳೂ ಗುಲಬರ್ಗಾ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ಈ ಹೆಸರಿನ ದೇವಾಲಯಗಳು ಅಫಜಲ್‌ಪುರ ತಾಲ್ಲೂಕಿನಲ್ಲಿ ಹೆಚ್ಚಾಗಿ ಕಾಣಿಸುವುದು ವಿಶೇಷ ಎನಿಸುತ್ತದೆ. ಪಂಚಲಿಂಗ, ಪಂಚಲಿಂಗೇಶ್ವರ ಹೆಸರಿನ ಐದು ದೇವಾಲಯಗಳು ಗುಲಬರ್ಗಾ ಜಿಲ್ಲೆಯಲ್ಲಿವೆ. ಗುಲಬರ್ಗಾ ತಾಲ್ಲೂಕಿನ ಚಿಂಚೋಳಿಯಲ್ಲಿ ಕಾಗಿಣಾ ನದಿಯ ದಂಡೆಯ ಮೇಲೆ, ಊರ ಹೊರಗಿರುವ ಪಾಪನಾಶಿನಿ ಬುಗ್ಗೆಯಲ್ಲಿ ಪಂಚಲಿಂಗಗಳಿವೆ. ಪ್ರತ್ಯೇಕ ದೇವಾಲಯ ಇಲ್ಲವಾದರೂ ಭಕ್ತರಿಗೆ ಈ ದೇವರ ಬಗ್ಗೆ ಆಸಕ್ತಿ ಹೆಚ್ಚು. ಚಿತ್ತಾಪುರ ತಾಲ್ಲೂಕಿನ ತೆಂಗಳಿ, ಮರ್ತೂರು, ಜೇವರ್ಗಿ ತಾಲ್ಲೂಕಿನ ನರಬೋಳಿ ಮತ್ತು ಸೇಡಂ ತಾಲ್ಲೂಕಿನ ಸೇಡಂನಲ್ಲಿ ಪಂಚಲಿಂಗೇಶ್ವರ ದೇವಾಲಯಗಳಿವೆ. ತೆಂಗಳಿಯ ಪಂಚಲಿಂಗೇಶ್ವರ ದೇವಾಲಯವು ತ್ರಿಕೂಟವಾಗಿದ್ದು, ಮೂರು ಗರ್ಭಗೃಹಗಳಿದ್ದರೂ, ನವರಂಗ ಮಾತ್ರ ಒಂದೇ ಇದೆ. ಅದೇ ಚಿತ್ತಾಪುರ ತಾಲ್ಲೂಕಿನ ಪ್ರಸಿದ್ಧ ಮರ್ತೂರಿನ ಪಂಚಲಿಂಗ ದೇವಾಲಯವು ಮೊದಲಿಗೆ ಏಕಕೂಟವಾಗಿದ್ದು ಈಗ ಪಂಚಕೂಟವಾಗಿ ಬದಲಾವಣೆಗೊಂಡಿದೆ.

ಮೂಲ ಪ್ರಧಾನ ಗರ್ಭಗೃಹವು ಏಕಕೂಟವಾಗಿದ್ದು. ಅದರ ಎರಡು ಪಕ್ಕಗಳಲ್ಲೂ ಎರಡೆರಡು ಗರ್ಭಗೃಹಗಳು ನಿರ್ಮಾಣವಾಗಿ, ಒಟ್ಟಾರೆ ದೇವಾಲಯವು ಪಂಚಕೂಟದಂತೆ ತೋರುತ್ತದೆ. ಜೇವರ್ಗಿ ತಾಲ್ಲೂಕಿನ ನರಬೋಳಿಯ ಪಂಚಲಿಂಗೇಶ್ವರ ದೇವಾಲಯದ ಗರ್ಭಗೃಹದಲ್ಲಿ ಚತುರ್ಮುಖ ಲಿಂಗವಿದೆ. ಸೇಡಂನ ಪಂಚಲಿಂಗೇಶ್ವರ ದೇವಾಲಯದಲ್ಲಿ ದ್ವಿಕೂಟ ಮತ್ತು ತ್ರಿಕೂಟಗಳು ಪ್ರತ್ಯೇಕವಾಗಿದ್ದು, ಐದು ಗರ್ಭಗೃಹಗಳಲ್ಲೂ ಒಂದೊಂದು

ಲಿಂಗವಿದೆ. ಹಿಂದೆ ಬೇರೆ ಬೇರೆ ಹೆಸರಿನ ಶಿವಾಲಯಗಳಿದ್ದು, ಈಗ ಬಸವಣ್ಣ/ಬಸವೇಶ್ವರ ದೇವಾಲಯ ಎಂದು ನಾಮಕರಣಗೊಂಡಿರುವ ಹಲವು ದೇವಾಲಯಗಳಿವೆ. ಅವುಗಳ ಪೈಕಿ ಜೇವರ್ಗಿ ತಾಲ್ಲೂಕಿನ ವಡಕೇರಿಯ ಕ್ರಿ.ಶ. 1077ರ ದಾಯಿಮೇಶ್ವರ ದೇವಾಲಯವು ಈಗ ಬಸವೇಶ್ವರ ದೇವಾಲಯವಾಗಿದೆ. ಆಳಂದ ತಾಲ್ಲೂಕಿನ ಮಾಡಿಯಾಳದ ಕ್ರಿ.ಶ. 1098ರ ಶಾಸನೋಕ್ತ ಭೋಗೇಶ್ವರ ದೇವಾಲಯವು ಈಗ ಬಸವಣ್ಣನ ಗುಡಿಯಾಗಿದೆ. ಚಿತ್ತಾಪುರ ತಾಲ್ಲೂಕಿನ ಕೊಲ್ಲೂರಿನ ಕ್ರಿ.ಶ. 12ನೆಯ ಶತಮಾನದ ಶಾಸನೋಕ್ತ ಸೋಮೇಶ್ವರ ದೇವಾಲಯವು ಈಗ ಬಸವೇಶ್ವರ ದೇವಾಲಯವಾಗಿದೆ.

ಶಹಾಪುರ ತಾಲ್ಲೂಕಿನ ತಡಿಬಿಡಿಯ ಕ್ರಿ.ಶ. 1208ರ ಶಾಸನೋಕ್ತ ಬ್ರಹ್ಮೇಶ್ವರ ದೇವಾಲಯವೇ ಈಗ ಜೀರ್ಣೋದ್ಧಾರ ಗೊಂಡಿರುವ ತ್ರಿಕೂಟ ಸಂಗಮೇಶ್ವರ ದೇವಾಲಯ ಎಂದು ಭಾವಿಸಲಾಗಿದೆ. ಚಿತ್ತಾಪುರ ತಾಲ್ಲೂಕಿನ ಹಲಕರಟಿಯ ಶಾಸನೋಕ್ತ ಬಿಬ್ಬೇಶ್ವರ ದೇವಾಲಯವೇ ಈಗ ಕತ್ತಲಗುಡಿ ಎಂಬ ಹೆಸರಿನಲ್ಲಿ ಉಳಿದಿರುವ ತ್ರಿಕೂಟ ಶಂಭುಲಿಂಗೇಶ್ವರ ದೇವಾಲಯ. ಜೇವರ್ಗಿ ತಾಲ್ಲೂಕಿನ ಕುಳಗೇರಿಯಲ್ಲಿ ಕ್ರಿ.ಶ. 1052ರ ವೇಳೆಗೆ ಬಿಬ್ಬೇಶ್ವರ ದೇವಾಲಯ ನಿರ್ಮಾಣವಾದ ಉಲ್ಲೇಖವಿದೆ.

ಗುಲಬರ್ಗಾ ಜಿಲ್ಲೆಯಲ್ಲಿ ಭೋಗೇಶ್ವರ/ಭೋಗಲಿಂಗೇಶ್ವರ ಹೆಸರಿನ ದೇವಾಲಯಗಳಿವೆ. ಅಫಜಲ್‌ಪುರ ತಾಲ್ಲೂಕಿನ ಬಂದರವಾಡದ ಭೋಗಲಿಂಗೇಶ್ವರ ದೇವಾಲಯವನ್ನು ಮೂಲ ವಿನ್ಯಾಸಕ್ಕೆ ಭಂಗ ಬರದಂತೆ ಜೀರ್ಣೋದ್ಧಾರ ಮಾಡಲಾಗಿದೆ. ಚಿಂಚೋಳಿ ತಾಲ್ಲೂಕಿನ ಕೋಡ್ಲಿಯ ಭೋಗಲಿಂಗೇಶ್ವರ ದೇವಾಲಯದ ಕಾಲವು ಕ್ರಿ.ಶ. ಸುಮಾರು 12ನೆಯ ಶತಮಾನವಾಗಿದ್ದು ಪ್ರಾಚೀನ ಸ್ವರೂಪವನ್ನು ಉಳಿಸಿಕೊಂಡಿದೆ. ಆಳಂದ ತಾಲ್ಲೂಕಿನ ಮಾಡಿಯಾಳ, ಶಿರೂರು ದರ್ಗಾ, ಹಿರೇ ಝುಳಕಿ, ಗುಲಬರ್ಗಾ ತಾಲ್ಲೂಕಿನ ಹರಸೂರು, ಚಿತ್ತಾಪುರ ತಾಲ್ಲೂಕಿನ ಹೊನಗುಂಟಿ, ರಾಜಾಪುರ, ಜೇವರ್ಗಿ ತಾಲ್ಲೂಕಿನ ಕುಳಗೇರಿ ಮತ್ತು ಯನಗುಂಟಿಗಳಲ್ಲಿ ಭೋಗೇಶ್ವರ ದೇವಾಲಯಗಳಿವೆ. ಇವುಗಳಲ್ಲಿ ಪ್ರಾಚೀನವಾದುದೆಂದರೆ ಕುಳಗೇರಿಯಲ್ಲಿ ಭೋಗಿಸೆಟ್ಟಿ ಕ್ರಿ.ಶ. 1080ರಲ್ಲಿ ನಿರ್ಮಿಸಿದ ಭೋಗೇಶ್ವರ ದೇವಾಲಯ. ಯನಗುಂಟಿಯ ಭೋಗೇಶ್ವರ ದೇವಾಲಯವು ಚತುಷ್ಕೂಟವಾಗಿದೆ. ಹರಸೂರಿನ ಶಾಸನೋಕ್ತ ಚೋರಲಿಂಗೇಶ್ವರ ದೇವಾಲಯಕ್ಕೆ ಈಗ ಭೋಗೇಶ್ವರ ದೇವಾಲಯ ಎಂಬ ಹೆಸರಿದೆ. ಆಳಂದ ತಾಲ್ಲೂಕಿನ ಹಿರೇ ಝುಳಕಿಯ ಭೋಗೇಶ್ವರಕ್ಕೆ ವಿಷಪ್ರಹಾರಿ ಭೋಗೇಶ್ವರ ಎಂದೂ, ಜೇವರ್ಗಿ ತಾಲ್ಲೂಕಿನ ಕುಳಗೇರಿಯ ನಾಗೇಶ್ವರಕ್ಕೆ ವಿಷಪ್ರಹಾರಿ ನಾಗೇಶ್ವರ ಎಂಬ ಹೆಸರೂ ಇರುವುದು ವಿಶೇಷವಾಗಿದೆ. ಗುಲಬರ್ಗಾ ಜಿಲ್ಲೆಯಲ್ಲಿ ಮಲ್ಲಿಕಾರ್ಜುನ ಹೆಸರಿನ ಸುಮಾರು ಇಪ್ಪತ್ತಾರು ದೇವಾಲಯಗಳಿವೆ. ಹೆಚ್ಚಿನ ಸಂಖ್ಯೆಯ ತಲಾ ಆರು) ದೇವಾಲಯಗಳಿರುವುದು ಚಿತ್ತಾಪುರ

ಮತ್ತು ಸುರಪುರಗಳಲ್ಲಾದರೆ ಅಫಜಲ್‌ಪುರದಲ್ಲಿ ಕೇವಲ ಒಂದು ಮಲ್ಲಿಕಾರ್ಜುನ ದೇವಾಲಯವಿದೆ. ಕೆಲವು ದೇವಾಲಯಗಳು ಶಾಸನಗಳಲ್ಲಿ ಮಾತ್ರ ಉಳಿದಿವೆ. ಆಳಂದ ತಾಲ್ಲೂಕಿನ ಕಡಗಂಭ, ಬೋಧನ, ಶಹಾಪುರ ತಾಲ್ಲೂಕಿನ ಅಣಬಿ, ಸುರಪುರ ತಾಲ್ಲೂಕಿನ ಹುಣಸಗಿಯ ಮಲ್ಲಿಕಾರ್ಜುನ ದೇವಾಲಯಗಳು ಈಗ ಉಳಿದಿಲ್ಲ. ಚಿತ್ತಾಪುರ ತಾಲ್ಲೂಕಿನ ಕಾಳಗಿಯ ಗೊಂಕೇಶ್ವರ ದೇವಾಲಯ, ಹಲಕರಟಿಯ ಮಲ್ಲಯ್ಯನ ಗುಡಿ, ಜೇವರ್ಗಿ ತಾಲ್ಲೂಕಿನ ಯಾತನೂರಿನ ಮಲಖಾನ್ ಗುಡಿ, ಕೊಂಡುಗುಳಿಯ ಸೋಮೇಶ್ವರ ಸುರಪುರ ತಾಲ್ಲೂಕಿನ ಹೆಮ್ಮಡಗಿಯ ಬಸವೇಶ್ವರ ದೇವಾಲಯಗಳ ಶಾಸನೋಕ್ತ ಹೆಸರು ಮಲ್ಲಿಕಾರ್ಜುನ ದೇವಾಲಯ. ಚಿತ್ತಾಪುರ ತಾಲ್ಲೂಕಿನ ಪೇಠ ಶಿರೂರಿನ ಮಲ್ಲಿಕಾರ್ಜುನ ದೇವಾಲಯದ ಹಿಂದಿನ ಹೆಸರು ರೆಬ್ಬೇಶ್ವರ ದೇವಾಲಯ.

ಸುರಪುರ ತಾಲ್ಲೂಕಿನ ಕೆಂಬಾವಿಯ ರೇವಣ ಸಿದ್ದೇಶ್ವರ ದೇವಾಲಯವು ಕ್ರಿ.ಶ. 1054 ರಲ್ಲಿ ಮಾಳೆಯಬ್ಬರಸಿ ಕಟ್ಟಿಸಿದ ಮಾಳಬ್ಬೇಶ್ವರ ದೇವಾಲಯ. ಚಿಂಚೋಳಿ ತಾಲ್ಲೂಕಿನ ಮಿರ್‍ಯಾಣದ ಮೂರು ದೇವರ ಗುಡಿಯು ಕ್ರಿ.ಶ. 10–11 ನೆಯ ಶತಮಾನದ ರಚನೆ. ಇಲ್ಲಿಯ ಕದಂಬ ನಾಗರ ಶಿಖರಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ಈ ದೇವಾಲಯದ ಗರ್ಭಗೃಹಗಳಲ್ಲಿ ಎರಡು ಪಶ್ಚಿಮಾಭಿಮುಖವಾಗಿಯೂ, ಒಂದು ಪೂರ್ವಾಭಿಮುಖವಾಗಿಯೂ ಇದ್ದು, ಈ ಮೂರು ಪ್ರತ್ಯೇಕ ದೇವಾಲಯಗಳನ್ನೂ ಒಟ್ಟಿಗೆ ಮೂರು ದೇವರ ಗುಡಿ ಎಂದು ಕರೆಯಲಾಗುತ್ತದೆ.

ಗುಲಬರ್ಗಾ ಜಿಲ್ಲೆಯಲ್ಲಿ ರಾಮಲಿಂಗ/ ರಾಮಲಿಂಗೇಶ್ವರ ಹೆಸರಿನ 26 ದೇವಾಲಯಗಳಿವೆ. ಚಿಂಚೋಳಿ ತಾಲ್ಲೂಕು ಒಂದರಲ್ಲೇ ಆರು ರಾಮಲಿಂಗೇಶ್ವರ ದೇವಾಲಯಗಳಿವೆ. ಇವುಗಳ ಚಿಂಚೋಳಿ ತಾಲ್ಲೂಕಿನ ಮೊಘಾದಲ್ಲಿರುವ ಕ್ರಿ.ಶ. 918ರ ರಾಮಲಿಂಗೇಶ್ವರ ದೇವಾಲಯವೇ ಪ್ರಾಚೀನ. ಕ್ರಿ.ಶ. 1010ರ ವೇಳೆಗೆ ಆ ದೇವಾಲಯದ ಹೆಸರು ಸ್ವಯಂಭು ರಾಮನಾಥನ ಹೆಸರಿನಿಂದ ಉಳಿದಿತ್ತು. ಅಫಜಲ್‌ಪುರ ತಾಲ್ಲೂಕಿನ ಮಾಶಾಳ, ಆಳಂದ ತಾಲ್ಲೂಕಿನ ಹೊಡಲ, ಚಿಂಚೋಳಿ ತಾಲ್ಲೂಕಿನ ಮೊಘಾ, ರಾಮತೀರ್ಥ, ಪಾಸ್ತಾಪುರ, ಕೋಡ್ಲಿ, ರುಮ್ಮನಗೂಡು, ರಟ್ಕಲ್ಲು, ಚಿತ್ತಾಪುರ ತಾಲ್ಲೂಕಿನ ಕೊಲ್ಲೂರು, ನಾಗಾವಿ, ಪೇಠ ಶಿರೂರು, ರಾಜಾಪುರ, ಜೇವರ್ಗಿ ತಾಲ್ಲೂಕಿನ ಕುಳಗೇರಿ, ಅಂಕಲಗಿ, ಯಡ್ರಾಮಿ, ಕಟ್ಟೆ ಸಂಗಾವಿ, ಶಹಾಪುರ ತಾಲ್ಲೂಕಿನ ಕನ್ನೆ ಕೋಳೂರು, ಮುಡಬೊಳ, ತುಮಕೂರು, ಅಣಬಿ, ದೇವರ ಹಯ್ಯಾರಿ, ಹುರಸಗುಂಡಗಿ, ಸುರಪುರ ತಾಲ್ಲೂಕಿನ ರಾಜನ ಕೋಳೂರು, ಮುದನೂರು, ದೇವಪುರ ಮತ್ತು ಸೇಡಂ ತಾಲ್ಲೂಕಿನ ಮುಧೋಳಗಳಲ್ಲಿ ರಾಮಲಿಂಗ/ರಾಮಲಿಂಗೇಶ್ವರ/ಪ್ರಸನ್ನ ರಾಮಲಿಂಗೇಶ್ವರ ದೇವಾಲಯಗಳಿದ್ದು, ಇವುಗಳ ಪೈಕಿ

ರುಮ್ಮನಗೂಡು ದ್ವಿಕೂಟ ದೇವಾಲಯವಾಗಿದ್ದು, ರಟ್ಕಲ್ಲು ತ್ರಿಕೂಟವಾಗಿದೆ. ಸುರಪುರ ತಾಲ್ಲೂಕಿನ ಮುದನೂರು ವಚನಕಾರ ಜೇಡರ ದಾಸಿಮಯ್ಯನ ಜನ್ಮಸ್ಥಳ ಎಂದು ತಿಳಿದಿದೆ. ಇಲ್ಲಿನ ಶಾಸನೋಕ್ತ ರಾಮೇಶ್ವರ, ಲಕ್ಷ್ಮಣೇಶ್ವರ ಇತ್ಯಾದಿ ದೇವಾಲಯಗಳನ್ನು ಈಗ ಗುರುತಿಸಲಾಗುತ್ತಿಲ್ಲ. ಕ್ರಿ.ಶ. 1146ರ ಒಂದು ಶಾಸನದಲ್ಲಿಯೇ ಮುದಿನೀರ ರಾಮೇಶ್ವರ ದೇವರು ಮತ್ತು ಅಲ್ಲಿನ ವಿದ್ಯಾಸತ್ರದ ಉಲ್ಲೇಖವಿದೆ.

ಅಫಜಲ್‌ಪುರ ತಾಲ್ಲೂಕಿನ ಅಫಜಲ್‌ಪುರ, ಗೊಬ್ಬೂರು, ಆಳಂದ ತಾಲ್ಲೂಕಿನ ಪಡಸಾವಳಿಗೆ, ಚಿತ್ತಾಪುರ ತಾಲ್ಲೂಕಿನ ಕಾಳಗಿ, ಜೇವರ್ಗಿ ತಾಲ್ಲೂಕಿನ ಕೋಣಸಿರಸಗಿ, ಸುರಪುರ ತಾಲ್ಲೂಕಿನ ಕೆಂಬಾವಿಗಳಲ್ಲಿ ರೇವಣೇಶ್ವರ/ರೇವಣ ಸಿದ್ದೇಶ್ವರ ದೇವಾಲಯಗಳಿವೆ. ಇವುಗಳ ಪೈಕಿ ಸುರಪುರ ತಾಲ್ಲೂಕಿನ ಕೆಂಬಾವಿಯ ಶಾಸನೋಕ್ತ ಮಾಳಬ್ಬೇಶ್ವರ ಚತುಷ್ಕೂಟ ದೇವಾಲಯವು ಈಗ ರೇವಣ ಸಿದ್ದೇಶ್ವರ ದೇವಾಲಯ ಎಂಬ ಹೆಸರಿನಲ್ಲಿ ಉಳಿದಿದ್ದು ಅದರ ನಿರ್ಮಾಣದ ಕಾಲ ಕ್ರಿ.ಶ. 1054. ಗೊಬ್ಬೂರಿನ ರೇವಣೇಶ್ವರ ದೇವಾಲಯವು ಕ್ರಿ.ಶ. 11ನೆಯ ಶತಮಾನಕ್ಕೆ ಸೇರಿದ್ದು, ಉಳಿದ ದೇವಾಲಯಗಳು ಕ್ರಿ.ಶ. 12ನೆಯ ಶತಮಾನಕ್ಕೆ ಸೇರುತ್ತವೆ.

ಲೋಕೇಶ್ವರ, ಶಂಕರನಾರಾಯಣ, ಶಂಕರಲಿಂಗ, ಶಂಭುಲಿಂಗ, ಶಾಂತಲಿಂಗೇಶ್ವರ, ಸಪ್ತಲಿಂಗೇಶ್ವರ, ಸರ್ವೇಶ್ವರ, ಸಿದ್ದಸಾತೇಶ್ವರ ಇತ್ಯಾದಿ ಹೆಸರಿನ ದೇವಾಲಯಗಳೂ ಗುಲಬರ್ಗಾ ಜಿಲ್ಲೆಯಲ್ಲಿ ಹೆಚ್ಚೆನಿಸುವಷ್ಟು ಸಂಖ್ಯೆಯಲ್ಲೇ ಇವೆ. ಸಂಗಮನಾಥ/ಸಂಗಮೇಶ್ವರ ದೇವಾಲಯಗಳು ಚಿಂಚೋಳಿ ತಾಲ್ಲೂಕಿನ ಕೇಶ್ವಾರ, ರಟ್ಕಲ್ಲು, ದೇಗುಲಮಡಿ, ಜೇವರ್ಗಿ ತಾಲ್ಲೂಕಿನ ಅಂದೋಲ, ಕಟ್ಟೆಸಂಗಾಮಿ, ಶಹಾಪುರ ತಾಲ್ಲೂಕಿನ ಸಂಗಮ, ತಡಿಬಿಡಿ ಮತ್ತು ಸುರಪುರ ತಾಲ್ಲೂಕಿನ ಏವೂರು, ಅರಕೇರಿ ಮತ್ತು ವಜ್ಜಲಗಳಲ್ಲಿವೆ. ಇವುಗಳ ಪೈಕಿ ಪ್ರಾಚೀನವಾದುದು ಶಹಾಪುರ ತಾಲ್ಲೂಕಿನ ಬೇಚರಾಕ್ ಸಂಗಮದ ಸಂಗಮೇಶ್ವರ ದೇವಾಲಯ. ಅದರ ಕಾಲ ಕ್ರಿ.ಶ. 1067. ಸುರಪುರ ತಾಲ್ಲೂಕಿನ ಅರಕೇರಿಯ ಸಂಗಮೇಶ್ವರ ದೇವಾಲಯವು ಹಿಂದೆ ತ್ರೈಪುರುಷ ದೇವಾಲಯವಾಗಿದ್ದ ಸುಳಿವುಗಳಿದ್ದು, ಇಲ್ಲಿ ಸ್ಥಾನಕ ಬ್ರಹ್ಮನ ಮೂರ್ತಿ ಇದೆ. ಇಲ್ಲಿ ಒಂದೇ ಪೀಠದ ಮೇಲೆ ಒಂದು ಸಹಸ್ರ ಲಿಂಗಗಳಿರುವುದು ವಿಶೇಷ ಎನಿಸುತ್ತದೆ. ಅರಕೇರಿಯ ಸಹಸ್ರಲಿಂಗ ದೇವಾಲಯವನ್ನು ಜೋಗಬ್ಬರಸಿಯು ಕ್ರಿ.ಶ. 1033ರ ವೇಳೆಗೆ ನಿರ್ಮಿಸಿದಂತೆ ಶಾಸನದಿಂದ ತಿಳಿಯುತ್ತದೆ. ನಾಲ್ಕು ಅಡಿ ಎತ್ತರದ ಶಿವಲಿಂಗದಲ್ಲಿ 20 ಸ್ತರಗಳಲ್ಲಿ ಒಂದು ಸಾವಿರ ಲಿಂಗಗಳನ್ನು ಕೆತ್ತಲಾಗಿದೆ.

ಸೋಮೇಶ್ವರ/ಸ್ವಯಂಭು ಸೋಮೇಶ್ವರ ಹೆಸರಿನ 12 ದೇವಾಲಯಗಳನ್ನು ಗುಲ್ಬರ್ಗ ಜಿಲ್ಲೆಯಲ್ಲಿ ಗುರುತಿಸಲಾಗಿದೆ. ಇವುಗಳ ಪೈಕಿ ಪ್ರಾಚೀನವಾದುದು ಚಿತ್ತಾಪುರ ತಾಲ್ಲೂಕಿನ ಕಾಳಗಿಯ ಸ್ವಯಂಭು ಸೋಮೇಶ್ವರ ದೇವಾಲಯ. ಇವರ ಶಾಸನೋಕ್ತ ಕಾಲ ಕ್ರಿ.ಶ. 1033.

ಅಫಜಲ್‌ಪುರ ತಾಲ್ಲೂಕಿನ ಬ. ದರವಾಡ, ಆಳಂದ ತಾಲ್ಲೂಕಿನ ಆಳಂದ, ಚಿಂಚನಸೂರು, ಗುಲಬರ್ಗಾ ತಾಲ್ಲೂಕಿನ ಗುಲಬರ್ಗಾ, ಚಿಂಚೋಳಿ ತಾಲ್ಲೂಕಿನ ಚೇಂಗಟಾ, ಚಿತ್ತಾಪುರ ತಾಲ್ಲೂಕಿನ ಸನ್ನತಿ, ಕೊಲ್ಲೂರು, ಕಾಳಗಿ, ದಿಗ್ಗಾಂವಿ, ಜೇವರ್ಗಿ ತಾಲ್ಲೂಕಿನ ಕೊಂಡಗುಳಿ, ಯಡ್ರಾಮಿ ಮತ್ತು ಸುರಪುರ ತಾಲ್ಲೂಕಿನ ಏವೂರುಗಳಲ್ಲಿ ಸೋಮೇಶ್ವರ/ಸ್ವಯಂಭು ಸೋಮೇಶ್ವರ ದೇವಾಲಯಗಳಿವೆ. ಇವುಗಳಲ್ಲಿ ಕೆಲವು ಶಿಥಿಲವಾಗಿವೆ ಮತ್ತು ಕೆಲವು ಬೇರೆ ಹೆಸರಿನಲ್ಲಿ ಉಳಿದಿವೆ.

ಸಿದ್ದೇಶ್ವರ ಹೆಸರಿನ ಏಳು ದೇವಾಲಯಗಳು ಗುಲಬರ್ಗಾ ಜಿಲ್ಲೆಯಲ್ಲಿವೆ. ಇವುಗಳ ಪೈಕಿ ಶಹಾಪುರ ತಾಲ್ಲೂಕಿನ ಮುಡಬೋಳದ ಸಿದ್ದೇಶ್ವರ ದೇವಾಲಯವೇ ಪ್ರಾಚೀನ ಎನ್ನಬಹುದು. ಅದರ ಕಾಲ ಕ್ರಿ.ಶ. 1072. ಆಳಂದ ತಾಲ್ಲೂಕಿನ ಲಾಡ್ ಚಿಂಚೋಳಿ, ಚಿಂಚೋಳಿ ತಾಲ್ಲೂಕಿನ ಕೇಶ್ವಾರ, ಚಿತ್ತಾಪುರ ತಾಲ್ಲೂಕಿನ ಕಾಳಗಿ, ನಾಗಾವಿ, ಶಹಾಪುರ ತಾಲ್ಲೂಕಿನ ಮುಡಬೋಳ, ಸುರಪುರ ತಾಲ್ಲೂಕಿನ ಕರಡಕಲ್ಲು ಮತ್ತು ಯಾದಗಿರಿ ತಾಲ್ಲೂಕಿನ ಯರಗೊಳದಲ್ಲಿ ಸಿದ್ದೇಶ್ವರ ದೇವಾಲಯಗಳಿವೆ.

ಶಹಾಪುರ ತಾಲ್ಲೂಕಿನ ಶಿರವಾಳದಲ್ಲಿ ಕ್ರಿ.ಶ. 1178ರಲ್ಲಿ ನಿರ್ಮಾಣವಾದ ಸಿದ್ಧಸಾತೇಶ್ವರ ದೇವಾಲಯವೇ ಈಗಿನ ಸಿದ್ದಲಿಂಗೇಶ್ವರ ದೇವಾಲಯ. ಈ ಪಂಚಕೂಟ ದೇವಾಲಯದಲ್ಲಿ ಕದಂಬೇಶ್ವರ, ಎರಹೇಶ್ವರ, ಚಟ್ಟೇಶ್ವರ, ಸಿದ್ಧಸಾತೇಶ್ವರ ಮತ್ತು ಸೋಮೇಶ್ವರ ಹೆಸರಿನ ಐದು ಗರ್ಭಗೃಹಗಳಿವೆ.

ಗುಲಬರ್ಗಾ ಜಿಲ್ಲೆಯ ಅಫಜಲ್‌ಪುರ ತಾಲ್ಲೂಕಿನ ಚಿನಮಳ್ಳಿ, ಬಂದರವಾಡ, ಗೊಬ್ಬೂರು, ಮಾಶಾಳ ಮತ್ತು ಮಣ್ಣೂರು, ಆಳಂದ ತಾಲ್ಲೂಕಿನ ಆಳಂದ, ನಿಂಬರ್ಗಿ, ಚಿಂಚನಸೂರು, ಚಿಂಚೋಳಿ ತಾಲ್ಲೂಕಿನ ಮೊಘಾ, ಕೇಶ್ವರ, ರುಮ್ಮನಗೂಡು, ಚಿತ್ತಾಪುರ ತಾಲ್ಲೂಕಿನ ಕಾಳಗಿ, ಕೊಲ್ಲೂರು, ದಿಗ್ಗಾಂವಿ, ನಾಗಾವಿ, ಇಂಗಳಗಿ, ತೆಂಗಳಿ, ಪೇಠರೂರು, ಮರ್ತೂರು, ಜೇವರ್ಗಿ ತಾಲ್ಲೂಕಿನ ಅಂದೋಲ, ಕುಳಗೇರಿ, ವಡಗೇರಿ, ಅಂಕಲಗಿ, ನರಬೋಳಿ, ಸುರಪುರ ತಾಲ್ಲೂಕಿನ ಮುದನೂರು, ಏವೂರು, ಅರಕೇರಿ, ಹುಣಸಗಿ, ಕೆಂಬಾವಿ, ಹಗರಟಗಿ, ಸೇಡಂ ತಾಲ್ಲೂಕಿನ ಹಂದರಕಿ, ಶಹಾಪುರ ತಾಲ್ಲೂಕಿನ ಶಿರವಾಳ, ಅಣಬಿ ಮತ್ತು ತಡಿಬಿಡಿಗಳಲ್ಲಿ ಪ್ರಮುಖ ಶಿವಾಲಯಗಳಿವೆ.

ಶಿಲ್ಪಗಳು: ಈ ಜಿಲ್ಲೆಯಲ್ಲಿ ಈ ಕಾಲದ ವೈವಿಧ್ಯಮಯವಾದ ಶಿಲ್ಪಗಳು ಅನೇಕ ಸ್ಥಳಗಳಲ್ಲಿ ಗೋಚರಿಸಿವೆ. ಅವುಗಳು ಶೈವ, ವೈಷ್ಣವ, ಶಾಕ್ತ, ಜೈನ ಮತ್ತು ಬೌದ್ಧ ಮತಗಳಿಗೆ ಅಲ್ಲದೆ ಲೌಕಿಕ ಶಿಲ್ಪಗಳಲ್ಲಿ ವೀರಗಲ್ಲುಗಳು, ಸತಿಕಲ್ಲುಗಳು, ನಿಷಧಿಗಳು ಹಾಗೂ ಸ್ಮಾರಕ ಶಿಲ್ಪಗಳು ಒಳಗೊಂಡಿವೆ.

ಶೈವ ಶಿಲ್ಪಗಳು: ಸೇಡಂ ನಗರದಿಂದ ಹತ್ತು ಕಿ.ಮೀ. ಅಂತರದಲ್ಲಿರುವ ಲೋಕೇಶ್ವರ ಗುಡಿ ಪರಿಸರದಲ್ಲಿ ಕ್ರಿ.ಶ. 9ನೆಯ ಶತಮಾನದ ಇಪ್ಪತ್ತು ಶಿಲ್ಪಗಳಿವೆ. ಆ ದೇವಾಲಯವು ಈ ಕಾಲದ್ದೇ ಶಿಲ್ಪಗಳಲ್ಲಿ ವೃಷಭ ಸಮೇತ ಉಮಾಮಹೇಶ್ವರ, ಕಮಂಡಲ ಹಿಡಿದು ನಿಂತಿರುವ ಗಡ್ಡದಾರಿಯತಿ, ಅಪಸ್ಮಾರನ ಮೇಲೆ ನೃತ್ಯಮಾಡುತ್ತ ಕಾಲಾರಿಯನ್ನು ಇರಿದು ಚಿಮ್ಮುತ್ತಿರುವ ನಟರಾಜ, ಕಾಲಾರಿಯನ್ನು ಚಿಮ್ಮುತ್ತಿರುವ ಕಾಲಭೈರವ, ಪಂಚಮುಖಿ ಕಾರ್ತಿಕೇಯ, ತ್ರಿಭಂಗಿ ಅಂಜಲಿ ಮುದ್ರೆಯಲ್ಲಿ ನಿಂತಿರುವ ಭೃಂಗಿ, ಕಬ್ಬಿನ ಬಿಲ್ಲು ಬಾಣ ಹಿಡಿದು ನಿಂತಿರುವ ಕಾಮ, ರತಿ, ಅರ್ಧನಾರೀಶ್ವರ, ಭೈರವ ಇತ್ಯಾದಿ ಶಿಲ್ಪಗಳು ಪ್ರಮುಖವೆನಿಸಿವೆ. ರಾಷ್ಟ್ರಕೂಟರ ಕಾಲಕ್ಕೆ ಸೇರಿದ ಇಷ್ಟೊಂದು ಸಂಖ್ಯೆಯ ಶಿಲ್ಪಗಳು ಒಂದೆಡೆ ಪ್ರಥಮ ಬಾರಿ ಕರ್ನಾಟಕ ಮತ್ತು ದಕ್ಷಿಣ ಮಹಾರಾಷ್ಟ್ರಗಳಲ್ಲಿ ಕಂಡುಬಂದಿಲ್ಲ. ರಾಷ್ಟ್ರಕೂಟರ ರಾಜಧಾನಿಯಾಗಿ ಮೆರೆದ ಮಳಖೇಡ ಈ ಗ್ರಾಮದಿಂದ ಕೇವಲ 8ಕಿ.ಮೀ. ಅಂತರದಲ್ಲಿದೆ. ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳು ಬಾದಾಮಿ ಚಾಲುಕ್ಯರ ಕಾಲದ ಕೆಲವು ಲಕ್ಷಣಗಳನ್ನು ಈ ಶಿಲ್ಪಗಳಲ್ಲಿ ಕಾಣಬಹುದು. ಈ ಶಿಲ್ಪಗಳಲ್ಲಿ ಯತಿಯು ತನ್ನ ಬಲಗೈಯನ್ನು ಹೆಂಗಸರಂತೆ ಕೆಳಗೆ ಇಳಿಬಿಟ್ಟು ನಿಂತಿರುವುದು, ಮೂರು ಕಾಮ-ರತಿಯರ ಪ್ರತ್ಯೇಕ ಶಿಲ್ಪಗಳಿರುವುದು ಇತ್ಯಾದಿ ಅಪರೂಪವಾಗಿದೆ. ಈ ಶಿಲ್ಪ ಸಮೂದಹದಲ್ಲಿ ಹೆಚ್ಚಿನ ಶಿಲ್ಪಗಳು ಶೈವಧರ್ಮಕ್ಕೆ ಸೀಮಿತವಾಗಿರುವುದರಿಂದ ಈ ಸ್ಥಳವು ಒಂದು ಪ್ರಮುಖ ಶೈವಕೇಂದ್ರವಾಗಿದ್ದಿತೆಂದು ಹೇಳಬಹುದು.

ಗಣೇಶ: ದ್ವಿಭುಜ ಮತ್ತು ಚತುರ್ಭುಜ ಮಾದರಿಯ ಗಣೇಶ ಶಿಲ್ಪಗಳಲ್ಲಿ ಕೆಲವು ಮಹತ್ವದ್ದಾಗಿವೆ. ಈ ಭಾಗದಲ್ಲಿ ಚತುರ್ಭುಜ ಗಣೇಶನ ಶಿಲ್ಪಗಳು ಮಳಖೇಡ, ಉಡಗಿ, ಯಡಗಾ, ದೇವನೂರ, ಕೊಡ್ಲ, ಸೇಡಂ, ಬೊಮ್ಮನಹಳ್ಳಿ, ಸೆಟ್ಟಿಉಢ, ಹಂದರಕಿ, ನೀಲಹಳ್ಳಿ, ಅಡಿಕಿ, ಕುರುಕುಂಟಾ, ಬೆನಕನಹಳ್ಳಿ, ಬೆಟಗೇರಿ (ಕೆ), ಹುಳಗೋಳ, ಕಾಚೂರು, ತೆಲಕೂರು, ಹಾಳಬಾಳ, ಮುಗನೂರು, ದೇವನೂರ ಮುಂತಾದ ಗ್ರಾಮಗಳಲ್ಲಿವೆ. ಸಾಮಾನ್ಯವಾಗಿ ಗಣೇಶನ ಕೈಗಳಲ್ಲಿ ದಂತ, ಪರಶು, ಕಮಲ ಮತ್ತು ಮೋದಕಗಳಿವೆ. ಕುಳಿತ ಭಂಗಿಯಲ್ಲಿದ್ದು ವಿವಿಧ ವಸ್ತ್ರಾಭರಣಗಳನ್ನು ಧರಿಸಲಾಗಿದೆ. ಆದರೆ ಹಾಳಬಾಳ(ಟಿ) ಅಗಸಿ ಮುಂದಿನ ಶಿಲ್ಪವು ವಿಶಿಷ್ಟವೆನಿಸಿದೆ. ಇದೊಂದು ದುಂಡು ಶಿಲ್ಪದಲ್ಲಿ ವಸ್ತ್ರಾಭರಣಗಳನ್ನು ದೇಹದ ಎರಡೂ ಬದಿಗಳಲ್ಲಿ ಅಲಂಕರಿಸಿರುವುದೇ ಮುಖ್ಯ ಕಾರಣವಾಗಿದೆ. ಕುಳಿತ ಭಂಗಿಯ ಈ ಚತುರ್ಭುಜ ಗಣೇಶನ ಕೈಗಳಲ್ಲಿ ದಂತ, ಪರಶು, ಕಮಲ ಮತ್ತು ಫಲಗಳಿವೆ. ತನ್ನ ವಾಹನ ಮೂಷಕ ಪೀಠದಲ್ಲಿದೆ. ಕೊರಳಲ್ಲಿ ಧರಿಸಿದ ಗೆಜ್ಜೆಸರ ಮುಂಭಾಗದಲ್ಲಿ ಅರ್ಧವೃತ್ತಾಕಾರದಲ್ಲಿದೆ. ಈ ಗೆಜ್ಜೆಗಳು ಚೌಕಾಕಾರದಲ್ಲಿವೆ. ಹಿಂಭಾಗದಲ್ಲಿ ಎರಡು ವೃತ್ತಗಳ ಮಧ್ಯ ಪದ್ಮದಳಗಳ ಶಿರಚಕ್ರವಿದೆ.

ಈ ಪದ್ಮದಳಗಳ ಮಧ್ಯೆ ಕೇಶವನ್ನು ಉದ್ದವಾಗಿ ಹೆಣೆದು ಕೆಳಗೆ ಇಳಿಬಿಡಲಾಗಿದೆ. ತ್ರಿಕೋನಾಕಾರಾದ ಜಟಾಮುಕುಟದ ತುದಿಯಲ್ಲಿ ಪದ್ಮದಳಗಳ ಅಲಂಕರಣವಿದೆ. ಕೆಳಗಡೆ ಅಗಲವಾದ ಗೆಜ್ಜೆಯನ್ನು ಧರಿಸಲಾಗಿದೆ. ಬೀದರ ಮತ್ತು ಗುಲ್ಬರ್ಗಾಪ್ರದೇಶದಲ್ಲಿ ಈ ಲಕ್ಷಣವುಳ್ಳ



ಗಣೇಶನ ಶಿಲ್ಪಗಳು ವಿರಳವೆಂದುತರ್ಕಿಸಬಹುದು. ರಟ್ಟೆಗೆ ಸರಳ ದುಂಡಾಕಾರದ ಪಟ್ಟಿಗಳನ್ನು, ಉದರಕ್ಕೆ ನಾಗನನ್ನು ಹಾಗೂ ದೇಹದಲ್ಲಿ ಯಜ್ಞೋಪವೀತವನ್ನು ಧರಿಸಿರುವನು. ಈ ಶಿಲ್ಪದ ಕಾಲ ಕ್ರಿ.ಶ. 10ನೆಯ ಶತಮಾನ. ಚತುರ್ಭುಜನಾದ ಈತನು ಕುಳಿತ ಭಂಗಿಯಲ್ಲಿರುವನು. ಶಿಲ್ಪ ಅಲ್ಲಲ್ಲಿ ಮುಕ್ಕಾಗಿದೆ. ಅಡಿಕೆ ಗ್ರಾಮದ ಮಾರುತಿ ಮಂದಿರದ ಬದಿಗಿನ ಕುಳಿತ ಚತುರ್ಭುಜ ಗಣೇಶನು ಉದರಕ್ಕೆ ನಾಗರವನ್ನು ಕಟ್ಟಿರುವನು. ಕೈಗಳಲ್ಲಿ ದಂತ, ಪರಶು, ಪದ್ಮ ಮತ್ತು ಮೋದಕಗಳಿವೆ. ಹಣೆ ಮತ್ತು ಭುಜಗಳಲ್ಲಿ ಮಣಿಹಾರಗಳನ್ನು ಕೊರಳಲ್ಲಿ ಸರಗಳನ್ನು ಮತ್ತು ಆದರೆ ಕೊಡ್ಲ ಗ್ರಾಮದ ಶಂಭುಲಿಂಗ ದೇವಾಲಯದ ಬದಿಗಿರುವ ಚತುರ್ಭುಜಧಾರಿ ಗಣೇಶನ ಶಿಲ್ಪದಲ್ಲಿ ದೇಹಾಂಗದಲ್ಲಿ ಯಜ್ಞೋಪವೀತವನ್ನು ನಾಗರಹಾವಿನಿಂದ ಧರಿಸಿರುವುದು ವಿಶೇಷವೆನ್ನಬಹುದು. (ಈ ಲಕ್ಷಣವುಳ್ಳ ಗಣೇಶನ ಶಿಲ್ಪ ಬೀದರ ಜಿಲ್ಲೆಯ ನಾರಾಯಣಪುರ,



ಬಸವಕಲ್ಯಾಣ ಇತ್ಯಾದಿ ಕಡೆಗಳಲ್ಲಿ ಲೇಖಕರಿಗೆ ಕಂಡು ಬಂದಿವೆ) ಆತ ಜಟಾಮುಕುಟಧಾರಿ, ಅದರ ಕಾಲ ಸು. ಕ್ರಿ.ಶ. 10ನೆಯ ಶತಮಾನ.

ಬೆಟಗೇರಿ (ಕೆ) ಗ್ರಾಮದ ಮಾರುತಿ ಗುಡಿಯಲ್ಲಿರುವ ಗಣೇಶನು ತನ್ನ ಕೈಗಳಲ್ಲಿ ದಂಡ, ರುದ್ರಾಕ್ಷಿ, ಪರಶು ಮತ್ತು ಮೋದಕಗಳನ್ನು ಹಿಡಿದಿರುವನು. ಕಿರೀಟಧಾರಿಯಾಗಿದ್ದಾನೆ. ಕೊರಳಲ್ಲಿ

ಗಂಟೆಗಳ ಸರಗಳಿವೆ. ಈ ಶಿಲ್ಪದ ಕಾಲ ಸು. ಕ್ರಿ.ಶ.10ನೆಯ ಶತಮಾನ. ಈ ಶಿಲ್ಪದಲ್ಲಿ ಗಣೇಶ ರುದ್ರಾಕ್ಷಿ ಸರವನ್ನು ಹಿಡಿದಿರುವುದು ಗಮನೀಯ.

ದ್ವಿಭುಜ ಗಣೇಶ: ದ್ವಿಭುಜ ಗಣೇಶನ ಶಿಲ್ಪಗಳು ಕೊಡ್ಲ, ಬೆಟಗೇರಿ (ಕೆ), ಮಳಖೇಡ, ಮುಗುಟ, ಕಾಚೂರು, ಮೂಗನೂರು, ಹಾಳಬಾಳ (ಟಿ), ಅಡಕಿಯ ಮಾರುತಿ ಮಂದಿರಗಳಲ್ಲಿ, ಜೀರನಹಳ್ಳಿ ಈಶ್ವರ ದೇವಾಲಯ ಮತ್ತು ಮುಗನೂರಿನ ರಾಮೇಶ್ವರ ದೇವಾಲಯಗಳಲ್ಲಿವೆ (ಸೇಡಂ ತಾ) ಅವುಗಳಲ್ಲಿ ಬೋಳುತಲೆಯ ಶಿಲ್ಪದಲ್ಲಿ ಸೊಂಟಕ್ಕೆ ಗೆಜ್ಜೆಹಾರವನ್ನು ಮತ್ತು ಉದರಕ್ಕೆ ನಾಗರವನ್ನು ಕಟ್ಟಿರುವುದು ವಿಶೇಷವೆನ್ನಬಹುದು. ಈ ಶಿಲ್ಪಗಳ ಕಾಲ ಸು. ಕ್ರಿ.ಶ. 10ನೆಯ ಶತಮಾನ. ದ್ವಿಭುಜ ಗಣೇಶ ಶಿಲ್ಪಗಳು ಕಾಣಿಸಿವೆ.
ಶಿರಿವಾಳದಲ್ಲಿ ಎರಡು ದ್ವಿಭುಜ ಗಣೇಶ ವಿಗ್ರಹಗಳಿವೆ. ಕೈಗಳಲ್ಲಿ ದಂಡ ಮತ್ತು ಮೋದಕಗಳಿವೆ. ಜಟಾಮುಕುಟ, ಗೆಜ್ಜೆಸರ, ಉದರಕ್ಕೆ, ನಾಗಪಟ್ಟಿ, ಬಳೆ, ತೋಳ್ಬಳೆ ಇತ್ಯಾದಿ ವಸ್ತ್ರಾಭರಣ ಧರಿಸಿದ್ದಾನೆ. ಇಲ್ಲಿಯ ಇನ್ನೊಂದು ಇದೇ ರೀತಿಯ ಗಣೇಶನ ಶಿಲ್ಪದಲ್ಲಿ ಮುಖ ಇನ್ನಿತರ ಭಾಗಗಳು ಒಡೆದಿವೆ.

ಕಾರ್ತಿಕೇಯ: ದಂಡಾಪುರದಲ್ಲಿ ನವಿಲು ಸವಾರಿ ಮಾಡುತ್ತಿರುವ ಕಾರ್ತಿಕೇಯ ಶಿಲ್ಪ ಈ ಕಾಲದ್ದಾಗಿದೆ.

ಶಿವಲಿಂಗಗಳು: ಸೇಡಂ ತಾಲ್ಲೂಕಿನ ಸೇಡಂ, ಹಂದರಕಿ, ಹಾಳಬಾಳ (ಟಿ), ಆರ್. ಬೊಮ್ಮನಹಳ್ಳಿ, ತೆಲಕೂರು, ಬಿಜ್ಜನಹಳ್ಳಿ, ಮಳಖೇಡ, ಬೆಟಗೇರ (ಬಿ), ಕೊಡ್ಲ ಮತ್ತು ಸೇಡಂ ಗ್ರಾಮಗಳಲ್ಲಿವೆ. ಈ ಶಿವಲಿಂಗಗಳಲ್ಲಿ ಕ್ರಿ.ಶ. 9ನೆಯ ಶತಮಾನ ಹಾಗೂ ಕ್ರಿ.ಶ. 11–12ನೆಯ ಶತಮಾನಗಳ ಸಾಮಾನ್ಯ ಲಕ್ಷಣವುಳ್ಳ ಬ್ರಹ್ಮ ಸೂತ್ರಗಳು ಎರಡು ನಮೂನೆಯದ್ದಾಗಿವೆ. ಒಂದನೆಯ ಮಾದರಿಯ ಕ್ರಿ.ಶ. 9ನೆಯ ಶತಮಾನದ ಶಿವಲಿಂಗಗಳು ಸೇಡಂ ಮತ್ತು ಹಂದರಕಿ ಗ್ರಾಮಗಳಲ್ಲಿವೆ ಹಾಗೂ ಎರಡನೆಯ ಮಾದರಿಯ ಕ್ರಿ.ಶ. 11–12ನೆಯ ಶತಮಾನದ ಶಿವಲಿಂಗಗಳು ಇನ್ನಿತರ ಕಡೆಗಳಲ್ಲಿವೆ. ಭಿನ್ನವೆನಿಸಿದ ಮೂರನೆಯ ನಮೂನೆಯ ಬ್ರಹ್ಮಸೂತ್ರವುಳ್ಳ ಶಿವಲಿಂಗಗಳು ಸೇಡಂ, ಅರೆಬೊಮ್ಮನಹಳ್ಳಿ, ಕೊಡ್ಲ, ಬೆಟಗೇರಿ (ಕೆ) ಇತ್ಯಾದಿ ಗ್ರಾಮಗಳಲ್ಲಿವೆ.

ಮೊದಲನೆಯ ನಮೂನೆಯ ಬ್ರಹ್ಮಸೂತ್ರ ಲಕ್ಷಣವುಳ್ಳ ಶಿವಲಿಂಗದ ಮುಖದಲ್ಲಿ ಅತಿ ಕಿರಿ ಅಂತರದ ಉದ್ದವಾದ ಎರಡು ಸಮಾನಾಂತರ ಲಂಬಕೋನ ಗೆರೆಗಳಿರುತ್ತವೆ. ಆ ಗೆರೆಗಳು ಸ್ವಲ್ಪ ಮೇಲ್ಭಾಗದಿಂದ ಅರ್ಧವೃತ್ತಾಕಾರದಲ್ಲಿ ಕೂಡಿರುತ್ತವೆ. ಈ ಲಂಬ ಗೆರೆಗಳ ಮೇಲಿನ ಭಾಗದಿಂದ ಅರ್ಧವೃತ್ತಾಕಾರದಲ್ಲಿ ಒಂದು ಗೆರೆ ಎರಡು ಬದಿಗೆ ಇಳಿಬಿದ್ದು, ಅದರ ಎರಡು ತುದಿಗಳು ಬದಿಗೆ ವಿಸ್ತರಿಸಿ ಲಿಂಗದ ಹಿಂಬದಿಯಲ್ಲಿ ಸುತ್ತಿ ಒಂದೆಡೆ ಸಂದಿಸಿವೆ. ಇದನ್ನು ನಾಡಿ

ಎನ್ನುವರು. ಈ ಲಕ್ಷಣದ ಬ್ರಹ್ಮ ಸೂತ್ರ ಸೇಡಂ ಗ್ರಾಮದ ತ್ರಿಲಿಂಗೇಶ್ವರ ಮತ್ತು ಮಾಧವಗುಡಿ ಮತ್ತು ಕೋಡ್ಲ, ಬೆಟಗೇರ(ಬಿ)ಗಳಲ್ಲಿವೆ. ಈ ಲಕ್ಷಣದಲ್ಲಿ ಸ್ವಲ್ಪ ಭಿನ್ನತೆಯನ್ನು ಕಾಣಬಹುದು. ಮಧ್ಯದ ಲಂಬಗೆರೆಗಳು ನೇರವಾಗಿ ಮೇಲಿವೆ. ಇಂತಹ ಲಕ್ಷಣದ ಬ್ರಹ್ಮ ಸೂತ್ರವುಳ್ಳ ಶಿವಲಿಂಗ ಅರೆಬೊಮ್ಮನಹಳ್ಳಿಯಲ್ಲಿದೆ. ಎರಡನೆಯ ನಮೂನೆಯಲ್ಲಿ ಮಧ್ಯ ಸಮಾನಾಂತರ ಗೆರೆಗಳಿಗೆ ಮತ್ತು ಸಮಾನಾಂತರವಾಗಿ ಇನ್ನೆರಡು ಗೆರೆಗಳಿದ್ದು ಅದರ ಮಧ್ಯ ಬಾಹುಗಳ ಬದಿಗಳಿಂದ ನಾಡಿಗಳು ವಿಸ್ತಾರವಾಗಿರುವುದನ್ನು ಬೆಟಗೇರ(ಕೆ) ಗ್ರಾಮದಲ್ಲಿ ಕಾಣಬಹುದು. ಕೊನೆಯ ನಮೂನೆಯಲ್ಲಿ ಎರಡನೆಯ ಮಾದರಿಯಂತೆ ಬ್ರಹ್ಮಸೂತ್ರವನ್ನು ತೋರಿಸಿದ್ದು ಅದರ ಮಧ್ಯದಲ್ಲಿ ಎರಡರ ಬದಲು ಮೂರು ಲಂಬಕೋನ ಗೆರೆಗಳು ಹಾಗೂ ಅರ್ಧವೃತ್ತಾಕಾರದಲ್ಲಿ ಒಂದರ ಬದಲು ಎರಡು ನಾಡಿಗಳು ಸಮಾನಾಂತರವಾಗಿ ಸ್ವಲ್ಪ ಕೆಳಗೆ ಸಾಗಿ ಅವುಗಳು ಬದಿಗಳನ್ನು ವಿಸ್ತರಿಸಿವೆ. ಈ ಲಕ್ಷಣದ ಶಿವಲಿಂಗ ಕೊಡ್ಲ ಗ್ರಾಮದ ಶಂಭುಲಿಂಗೇಶ್ವರ ದೇವಾಲಯದ ಬದಿಗಿದೆ. ಒಟ್ಟಾರೆ ಈ ನಮೂನೆಯ ಲಕ್ಷಣವುಳ್ಳ ಬ್ರಹ್ಮಸೂತ್ರಗಳು ಈ ಭಾಗದಲ್ಲಿ ಮಾತ್ರ ಸೀಮಿತವಾಗಿರುವುದು ವಿಶೇಷವೆನ್ನಬಹುದು. ಅವುಗಳ ಕಾಲಮಾನ ಗುರುತಿಸುವ ಅಧ್ಯಯನ ನಡೆಯಬೇಕಾಗಿದೆ.

ಶಿವಲಿಂಗ ಪೀಠಗಳು ಚೌಕಾಕಾರ, ಆಯತಾಕಾರ ಮತ್ತು ವೃತ್ತಾಕಾರದಲ್ಲಿವೆ. ಈ ಭಾಗದ ಚೌಕಾಕಾರ ನಮೂನೆಯ ಪೀಠಗಳ ಕಾಲ ಸು. ಕ್ರಿ.ಶ. 9–10ನೆಯ ಶತಮಾನ ಮತ್ತು ಆಯತಾಕಾರ ಪೀಠಗಳ ಕಾಲ ಕ್ರಿ.ಶ. 11–12ನೆಯ ಶತಮಾನ. ವೃತ್ತಾಕಾರ ಪೀಠಗಳ ಕಾಲ ಕ್ರಿ.ಶ. 12ನೆಯ ಶತಮಾನದ ನಂತರವೆಂದು ತರ್ಕಿಸಬಹುದು.

ರಾವೂರಿನ ರಾಮಲಿಂಗ ಗುಡಿಯ ಶಿವಲಿಂಗದ ಮುಖದಲ್ಲಿರುವ ಬ್ರಹ್ಮಸೂತ್ರವಿದೆ. ಈ ಕಾಲದ ಈ ಭಾಗದ ಅನೇಕ ದೇವಾಲಯಗಳಲ್ಲಿ ಈ ಮಾದರಿಯ ಶಿವಲಿಂಗಗಳಿವೆ. ಉದಾಹರಣೆಗೆ ಸೇಡಂ, ಹಂದರಕಿ, ತುನ್ನೂರು ಇತ್ಯಾದಿ ಕಡೆಗಳಲ್ಲಿವೆ. ಇಂಥಹದು ಬಳ್ಳಾರಿ ಜಿಲ್ಲೆಯ ಕುಡಿತಿನಿ ಇನ್ನಿತರ ಕಡೆಗಳಲ್ಲಿವೆ. ಆದರೆ ಕಲ್ಲೂರಿನಲ್ಲಿ (ಚಿತಾಪೂರ ತಾ) ಸಾಲಿಬಸವೇಶ್ವರ ದೇವಾಲಯದಲ್ಲಿರುವ ಶಿವಲಿಂಗದ ಬ್ರಹ್ಮಸೂತ್ರವು ಸು. ಕ್ರಿ.ಶ. 9ನೆಯ ಶತಮಾನದ್ದಾಗಿದೆ.

ಶಿವ: ಮುದ್ದೂರಿನ ರಾಮತೀರ್ಥದ ಬಳಿಯ ದೇವಾಲಯದ ಹಿಂಬದಿಯ ಗೋಡೆಯಲ್ಲಿ ಸುಂದರವಾದ ಒಂದು ಶಿವನ ಶಿಲ್ಪವಿದೆ. ಕುಳಿತ ಭಂಗಿಯಲ್ಲಿದ್ದಾನೆ. ಚತುರ್ಭುಜಧಾರಿ ಮೇಲಿನ ಕೈಗಳಲ್ಲಿ ತ್ರಿಶೂಲ ಮತ್ತು ನಾಗಗಳಿವೆ. ಮೇಲಿನ ಕೈಗಳು, ತಲೆ, ಮುಖ ಭಾಗಗಳು ಶಿಥಿಲವಾಗಿವೆ. ಶಿವನ ಬದಿಗಳಲ್ಲಿ ಸೇವಕಿಯರು ನಿಂತಿದ್ದಾರೆ. ಕಾಲ ಸು. ಕ್ರಿ.ಶ. 10ನೆಯ ಶತಮಾನ.

ಅರ್ಧನಾರೀಶ್ವರ: ಸಮಭಂಗದಲ್ಲಿ ನಿಂತಿರುವ ದೇವತೆಯ ಅರ್ಧಭಾಗ ಸ್ತ್ರೀ, ಅರ್ಧಪುರುಷ ಭಾಗವನ್ನು ಕಂಡರಿಸಿದ ಅರ್ಧನಾರೀಶ್ವರ ಶಿಲ್ಪವಾಗಿದೆ. ಚತುರ್ಭುಜಧಾರಣಿ ಅಭಯದಲ್ಲಿ ಅಕ್ಷಮೂಲವಿದೆ. ತ್ರಿಶೂಲ, ಕಮಲ ಮತ್ತು ಸೊಂಟಕ್ಕೆ ಇಡಲಾಗಿದೆ. ಈ ಶಿಲ್ಪದ ನಡುವಿನ ಭಾಗ ಮುರಿದು ಎರಡು ಭಾಗಗಳಾಗಿದೆ. ಕಿರೀಟಮುಕುಟ, ಓಲೆ, ಸರ, ತೋಳ್ಬಳೆ, ಬಲೆ, ಉದರಪಟ್ಟಿ, ವಸ್ತ್ರ–ಪಟ್ಟಿ, ಹಾರಗಳನ್ನು ಧರಿಸಲಾಗಿದೆ. ಮೊಟ್ಟೆಯಾಕಾರದ ಪ್ರಭಾವಳಿಯಿದೆ. ಈ ಶಿಲ್ಪದ ಮಧ್ಯಭಾಗ ಮುರಿದಿದೆ. ಇದರ ಬಲಕ್ಕೆ ಶಿವನ ರೂಪ, ಎಡಕ್ಕೆ ಪಾರ್ವತಿಯ ರೂಪವಿದೆ. ಚತುರ್ಭುಗಳಲ್ಲಿ ಬಲಗೈಗಳಲ್ಲಿ ಜಪಮಾಲೆ, ತ್ರಿಶೂಲ, ಹಿಂದಿನ ಎಡಗೈಯಲ್ಲಿ ಕಮಲ ಹಿಡಿದಿದೆ ; ಮುಂದಿನ ಎಡಗೈ ತೊಡೆಯ ಮೇಲಿದೆ. ದೇಹದ ಎಡಭಾಗದಲ್ಲಿ ಒಂದು ಕುಚವಿದೆ. ಜಟಾ ಕರಂಡ ಮುಕುಟ ಮಂಡಲ ಹಾರ, ಉದರಪಟ್ಟಿ, ವಸ್ತ್ರಪಟ್ಟಿ, ಬಳೆ, ಕಾಡಗಧಾರಣೆ ಇದೆ.

ಶಿವ: ನಿಂತ ಭಂಗಿ ಚತುರ್ಭುಜಧಾರಿ ಕೈಗಳು ಅಭಯ, ತ್ರಿಶೂಲ, ಡಮರುಗಳಿವೆ ಮತ್ತು ಕೊನೆಯ ಕೆಳಗಡೆ ಕೈಯನ್ನು ಸೊಂಟಕ್ಕೆ ಇಟ್ಟಿರುವನು. ಜಟಾಮುಕುಟ, ಓಲೆ, ಬಳೆ, ಸರ, ವಸ್ತ್ರ–ಪಟ್ಟಿ ಯಜ್ಞೋಪವೀತ ಧರಿಸಿರುವನು.

ಶಿವ–ಪಾರ್ವತಿ: ಶಿವ–ಪಾರ್ವತಿಯರು ನಂದಿಯ ಮೇಲೆ ಕುಳಿತಿರುವರು. ಚತುರ್ಭುಜಧಾರಿ ಶಿವನ ಕೈಗಳಲ್ಲಿ ಅಭಯ (ಅಕ್ಷಯ ಮಾಲೆ), ತ್ರಿಶೂಲ ಹಿಡಿದಿರುವನು. ಪಾರ್ವತಿಯ ಭುಜದ ಮೇಲೆ ಎಡ ಕೈ (ಮೇಲಿನದು) ಹಾಕಿ ಅಪ್ಪಿಕೊಂಡಿರುವನು. ಪಾರ್ವತಿ ಶಿವನ ತೊಡೆಯ ಮೇಲೆ ಕುಳಿತಿರುವಳು. ಶಿವ ಜಟಾಮುಕುಟ, ಓಲೆ, ಸರ, ಯಜ್ಞೋಪವೀತ, ಬಳೆ, ಕಡಗ, ವಸ್ತ್ರಾಭರಣ ಧರಿಸಿದ್ದಾನೆ.

ನಟರಾಜ:ಮುದ್ನೂರಿನ ಲಕ್ಷ್ಮಣತೀರ್ಥ ದಂಡೆಯ ಮೇಲಿರುವ ಸಿದ್ದಲಿಂಗ ದೇವಸ್ಥಾನದ ಮುಂದೆ ನಟರಾಜನ ಭವ್ಯ ಶಿಲ್ಪವಿದೆ. ಅದು ಭುವನೇಶ್ವರಿ ಭಾಗ. ಅದರ ಪಟ್ಟಿಕೆಯ ಮೇಲೆ ವೃತ್ತಾಕಾರದ ಪಟ್ಟಿ ನಡುವೆ ಅಷ್ಟಭುಜವುಳ್ಳ ನಟರಾಜ ಅಸುರನ ಮೇಲೆ ನಿಂತು ನೃತ್ಯ ಮಾಡುತ್ತಿರುವನು. ಆರು ಕೈಗಳಲ್ಲಿ ತ್ರಿಶೂಲ, ನಾಗ, ಡಮರು, ಅಭಯಮುದ್ರೆ, ಗಂಟೆ, ನಾಗಗಳಿವೆ. ಉಳಿದೆರಡು ಕೈಗಳನ್ನು ನೃತ್ಯಕ್ಕೆ ತಕ್ಕಂತೆ ಬದಿಗಳಲ್ಲಿ ಬಾಗಿಸಲಾಗಿದೆ. ಅದರ ಸುತ್ತಲಿನ ವೃತ್ತಪಟ್ಟಿಕೆಯ ಮೇಲೆ ವಾಹನಾರೂಢ ಅಷ್ಟದಿಕ್ಪಾಲಕರ ಉಬ್ಬುಶಿಲ್ಪಗಳಿವೆ. ಜೊತೆಯಲ್ಲಿ ವಾದ್ಯಮೇಳ, ನೃತ್ಯಮೇಳ ಮತ್ತು ದೇವಗಣರಿದ್ದಾರೆ. ಇದೊಂದು ಅಪರೂಪದ ಶಿಲ್ಪವಾಗಿದೆ. ಕಾಲ ಸು. ಕ್ರಿ.ಶ. 10ನೆಯ ಶತಮಾನ. ಕೊಲ್ಲೂರಿನ (ಚಿತಾಪುರ ತಾ.) ಶಿವಲಿಂಗದ ಬ್ರಹ್ಮಸೂತ್ರ ನಾಡಿಗಳು ಸಮಾಂತಾರ ಉದ್ದರೇಖೆಯ ನಡುವಿನ ಪಾರ್ಶ್ವದ ಭಾಗದಿಂದ ಬಾಣದ ತಲೆಯಂತೆ ಕೆಳಗಡೆ ಓರೆಯಾಗಿ ಇಳಿದಿವೆ. ಶಿರಿವಾಳದ ಒಂದು ಬಾವಿ

ಹತ್ತಿರ ಶಿವಲಿಂಗವಿದ್ದು, ಅದರ ಮುಖಭಾಗ ವೃತ್ತಾಕಾರದಲ್ಲಿ ಕೆಳಭಾಗ ಅಷ್ಟ ಮುಖದಲ್ಲಿದೆ. ಮುಖಭಾಗದಲ್ಲಿ ಚಿತ್ರಿಸಿದ ಬ್ರಹ್ಮಸೂತ್ರ ಸು. ಕ್ರಿ.ಶ. 10ನೆಯ ಶತಮಾನ ಶೈಲಿಯಲ್ಲಿದೆ.

ನಂದಿ: ನಂದಿ ಶಿಲ್ಪಗಳು ಸೇಡಂ ತಾಲೂಕಿನ ಬೆಟಗೇರ (ಬಿ), ಸೇಡಂ, ಹಂದರಕಿ, ಹಾಳಬಾಳ (ಟಿ), ಸುವಾರ್, ಉಡಗಿ, ಲಿಂಗನಹಳ್ಳಿ, ಕೊಳಕುಂದು, ನೀಲಹಳ್ಳಿ, ಕೋಡ್ಲ ಇತ್ಯಾದಿ ಕಡೆಗಳಲ್ಲಿ ದೊರಕುತ್ತವೆ. ಹಂದರಕಿಯ ಆನೇಶ್ವರ ಗುಡಿಯ ಮುಂದೆ ನಂದಿಯನ್ನು ಪ್ರತ್ಯೇಕ ಪೀಠದ ಮೇಲೆ ಕೂಡಿಸಲಾಗಿದೆ. ಕುಳಿತ ಭಂಗಿಯ ಈ ಶಿಲ್ಪಗಳು ವೈವಿಧ್ಯಮಯವಾಗಿದೆ. ಈ ಕಾಲದ ನಂದಿವಿಗ್ರಹಗಳು ಉಡಗಿ, ಹಂದರಕಿ ಇತ್ಯಾದಿ ಕಡೆಗಳಲ್ಲಿವೆ.

ಉಡಗಿ (ಸೇಡಂ ತಾ.) ಉಡಗಿ ಗ್ರಾಮದ ಲೋಕೇಶ್ವರ ದೇವಾಲಯದಲ್ಲಿರುವ ಹೆಚ್ಚಿನ ಶೈವ ಶಿಲ್ಪಗಳ ಸಂಗಡ ಕಾಮ-ರತಿಯರ ಶಿಲ್ಪಗಳು ಅಲ್ಲಿವೆ. ಅವುಗಳ ಕಲಾ ಲಕ್ಷಣಗಳು ಹೀಗಿವೆ.

ಕಾಮ: ದ್ವಿಭಂಗ, ದ್ವಿಭುಜ, ಕೈಗಳಲ್ಲಿ ಬಾಣ ಮತ್ತು ಕಬ್ಬಿನ ಬಿಲ್ಲು, ಉದ್ದದ ಕಿರೀಟ ಮುಕುಟ, ಕರ್ಣಕುಂಡಲ, ಗೆಜ್ಜೆ ಸರಗಳು, ಯಜ್ಞೋಪವೀತ, ಉದರಪಟ್ಟಿ, ಸೊಂಟಪಟ್ಟಿ, ಭುಜಪಟ್ಟಿ ಇತ್ಯಾದಿ (ಚಿತ್ರ 101, 104,107). ಈತನ ದೇಹಾಂಗದ ಸುತ್ತ ಕೊರೆದಿದ್ದು ಅದರ ತುದಿಯಿಂದ ಹೂಗಳ ಅಲಂಕಾರವಿದೆ. ಬಲಗೈಯಲ್ಲಿ ಬಾಣ, ಎಡಗೈಯಲ್ಲಿ ಕಬ್ಬಿನ ಬಿಲ್ಲಿದ್ದಹಾಗಿದೆ. ಕಾಲುಗಳು ಮುರಿದು ಹೋಗಿವೆ. ಮುಖ, ದೇಹಾಂಗ ಮುಕ್ಕಾಗಿದೆ. ಕಿರೀಟ, ಮುಕುಟ, ಮಂಡಲ, ಉದರಪಟ್ಟಿ, ವಸ್ತ್ರಪಟ್ಟಿ ಧರಿಸಿರುವನು. ಈ ಶಿಲ್ಪ ಬದಿಯ ಬಾವಿಯಲ್ಲಿದೆ. ಈತನ ಸಮಭಂಗದಲ್ಲಿ ನಿಂತಿದ್ದು ದ್ವಿಭುಜಗಳಿವೆ. ಕೈಗಳಲ್ಲಿ ಬಲಗೈ ಭಾಗ ಶಿಥಿಲಗೊಂಡಿದೆ. ಎಡಗೈಯಲ್ಲಿ ಬಿಲ್ಲಿದೆ. ತಲೆಯ ಬದಿಗೆ ಬೆನ್ನಿಗೆ ಕಟ್ಟಿದ ಬತ್ತಳಿಕೆಗಳಿವೆ. ಕಿರೀಟ, ಮಕುಟ, ಕುಂಡಲ, ಹಾರ, ಯಜ್ಞೋಪವೀತ, ಬಳೆ, ತೋಳ್ಬಳೆ, ಪಟ್ಟಿ, ವಸ್ತ್ರ ಧರಿಸಿದ್ದಾನೆ.

ರತಿ: ತ್ರಿಭಂಗಿ, ದ್ವಿಭುಜೆ, ಬಾಣ ಮತ್ತು ಕಬ್ಬಿನ ಬಿಲ್ಲು, ಕರಂಡ ಮುಕುಟ, ಕುಂಡಲ, ಹಾರ, ಕುಚಹಾರ ಹೊಂದಿ ಸೀರೆಯನ್ನು ಸೊಂಟಕ್ಕೆ ಕಟ್ಟಿರುವಳು.

ಯತಿ: ತ್ರಿಭಂಗ, ಬಲಗೈಶಿಥಿಲ, ಎಡಗೈಯಲ್ಲಿ ಕಮಂಡಲವಿದ್ದು, ಅದು ಹೆಂಗಸರು ಹಿಡಿದಂತೆ ಬಗ್ಗಿಸಲಾಗಿದೆ. ಉದ್ದವಾದ ಗಡ್ಡ, ಕೇಶರಾಶಿ, ತಲೆಬದಿಗೆ ಹಂಡಿಲೆ, ಯಜ್ಞೋಪವೀತ, ಸರಳ ವಸ್ತ್ರದ ಕಚ್ಚೆಯಿದೆ. ತೊಡೆ ಭಾಗದಲ್ಲಿ ಈ ಶಿಲ್ಪ ಭಿನ್ನಗೊಂಡಿದೆ.

ಕಾಲಾರಿ ಶಿವ: ಶಿವನು ಅಪಸ್ಮಾರನ ಮೇಲೆ ನಿಂತು ತಾಂಡವವಾಡುತ್ತಿರುವನು. ಚತುರ್ಭುಜಧಾರಿ ಶಿವನು ಕೆಳಬಲಗೈ ಮತ್ತು ಮೇಲಿನ ಎಡಗೈಯಲ್ಲಿ ಹಿಡಿದ ತ್ರಿಶೂಲದಿಂದ ತನ್ನ ತಲೆ ಎದುರಿಗಿರುವ ಕಾಲಾರಿಯ ಹೊಟ್ಟೆಗೆ ತಿವಿದು ಮೇಲಕ್ಕೆ ಚಿಮ್ಮುತ್ತಿರುವನು. ಮೇಲಿನ ಬಲಗೈಯಲ್ಲಿ ಡಮರು ಮತ್ತು ಕೆಳಗಿನ ಎಡಗೈಯಲ್ಲಿ ಕಪಾಲವನ್ನಿಡಿದಿರುವನು. ಉದ್ದ ಜಟಾಮುಕುಟದಿಂದ ಅದರ ಕೇಶವ ಉಂಗುರ ಗುಚ್ಛಗಳು ಮೇಲಿಂದ ಭುಜದ ಮೇಲೆ ಬಿದ್ದಿವೆ.

ಕುಂಡಲ, ಯಜ್ಞೋಪವೀತ, ಬಳೆ, ತೋಳಬಳೆ, ಸೊಂಟಕ್ಕೆ ಪಟ್ಟಿ, ವಸ್ತ್ರದ ಹಾರ, ಕಡಗಗಳನ್ನು ಧರಿಸಿರುವನು. ಕಾಲಾರಿಯ ಬಲಗೈಯಲ್ಲಿ ಖಡ್ಗವಿದೆ. ತನ್ನ ಎಡಗಾಲನ್ನು ಮುಂದಕ್ಕೆ ಬಗ್ಗಿಸಿ ಮೇಲಕ್ಕೆ ಎತ್ತಿದ್ದಾನೆ.

ವೃಷಭಾರೂಢ ಉಮಾಮಹೇಶ್ವರ: ತ್ರಿಭಂಗಿಯ ಉಮೆ ಸಂಗಡ ನಿಂತಿರುವನು. ನಾಲ್ಕು ಕೈಗಳಿವೆ. ಮೂರು ಕೈಗಳು ಮತ್ತು ವೃಷಭನ ಶಿರೋಭಾಗ ಮುರಿದಿದೆ. ಉಳಿದ ಮೇಲಿನ ಎಡಗೈಯನ್ನು ಉಮೆಯ ಎಡ ಭುಜದ ಮೇಲೆ ಹಾಕಿರುವನು. ಬಲಗಾಲಿನ ಹಿಂಬದಿಗೆ ವೃಷಭ ಮತ್ತು ಎಡಗಾಲನ್ನು ಕುಳಿತ ಅಪಸ್ಮಾರನ ತಲೆಮೇಲಿಟ್ಟಿರುವನು. ಉಮೆಯ ಎಡಕ್ಕೆ ಕೈಜೋಡಿಸಿಕೊಂಡು ಒಬ್ಬ ಋಷಿ ನಿಂತಿದ್ದಾನೆ. ಶಿವನ ತಲೆಯ ಎಡಕ್ಕೆ ನವಿಲನ್ನು ಸವಾರಿ ಮಾಡುತ್ತಿರುವ ಕಾರ್ತಿಕೇಯನಿದ್ದಾನೆ. ಮಹೇಶ್ವರನು ಜಟಾಮುಕುಟ, ಕುಂಡಲ, ವಿವಿಧ ಹಾರ, ಯಜ್ಞೋಪವೀತ, ವಸ್ತ್ರದ ಹಾರಗಳನ್ನು ಧರಿಸಿರುವನು. ಉಮೆಯು ತುರುಬನ್ನು ಕಟ್ಟಿದ್ದಾಳೆ. ಕುಂಡಲ, ಹಾರ, ಪಟ್ಟಿ, ಕಡಗಗಳನ್ನು ಧರಿಸಿದ್ದಾಳೆ. ಸೊಂಟಕ್ಕೆ ಕಟ್ಟಿದ ವಸ್ತ್ರದ ನಿರಿಗೆ ಎಡತೊಡೆಯ ಮೇಲೆ ಇಳಿಬಿಟ್ಟಿರುವಳು. ಈ ದೃಶ್ಯವು ಅಲ್ಪ ಆಯುಷಿಯಾಗಿದ್ದ ಕಾರ್ತಿಕೇಯನನ್ನು ಉಳಿಸಲು ಅಪಸ್ಮಾರನನ್ನು ತಡೆಹಿಡಿದಿರುವುದನ್ನು ಸೂಚಿಸುತ್ತದೆ.

ಕಾಲಭೈರವಿ: ಅಪಸ್ಮಾರನ ತಲೆಯ ಮೇಲೆ ನಿಂತು ತಾಂಡವವಾಡುತ್ತ ಮೇಲಿನ ಬಲಗೈ ಮತ್ತು ಎಡಗೈಗಳಲ್ಲಿ ಹಿಡಿದ ತ್ರಿಶೂಲದಿಂದ ಕಾಲಾರಿಯನ್ನು ಚಿಮ್ಮುತ್ತಿರುವಳು. ಈಕೆಯ ಎಡಬದಿಗೆ ಪ್ರೇತ ನೃತ್ಯ ಮಾಡುತ್ತಿರುವನು. ಚತುರ್ಭುಜಳಾದ ಈಕೆಯ ಕೆಳ ಬಲಗೈಯಲ್ಲಿ ಡಮರು ಮತ್ತು ಕೆಳ ಎಡಗೈಯಲ್ಲಿ ಕಪಾಲವಿದೆ. ಕರಂಡ ಮಕುಟ, ಕುಂಡಲ, ಹಾರ, ರುಂಡಮಾಲ, ವಸ್ತ್ರದ ಹಾರ, ಸೊಂಟಕ್ಕೆ ಬಳೆ, ಕಡಗಗಳನ್ನು ಧರಿಸಿರುವಳು.

ಕಾರ್ತಿಕೇಯ: ಸಮಭಂಗದಲ್ಲಿ ನಿಂತ ಈತನು ಚತುರ್ಭುಜಧಾರಿಯಾಗಿದ್ದಾನೆ. ಬಲಗಾಲು ಬದಿಗೆ ನವಿಲುಗಳಿವೆ. ಪಂಚಮುಖಗಳುಳ್ಳ ಈತನ ಕೈಗಳಲ್ಲಿ ಅಭಯಹಸ್ತದಲ್ಲಿ ಜಪಮಾಲೆ, ಪಾಶ, ಅಂಕುಶ ಮತ್ತು ಶಿಥಿಲ ಹಸ್ತಗಳಿವೆ. ಜಟಾಮಕುಟ, ಹಾರ, ಬಳೆ, ಕಡಗ, ಉದರಪಟ್ಟಿ, ಸೊಂಟಪಟ್ಟಿ, ವಸ್ತ್ರದ ಪಟ್ಟಿಗಳನ್ನು ಧರಿಸಿರುವನು. ಸೊಂಟದ ಬದಿಗೆ ಕಟ್ಟಿದ ವಸ್ತ್ರ ಕೆಳಗಡೆ ಇಳಿಬಿಡಲಾಗಿದೆ.

ತ್ರಿಭಂಗಿಯಲ್ಲಿ ನಿಂತ ಈ ದೇವರಿಗೆ ಮೂರು ಮುಖಗಳಿವೆ. ಚತುರ್ಭುಜ, ಕೆಳಗಿನ ಕೈಗಳು ಅಂಜಲಿಮುದ್ರೆಯಲ್ಲಿವೆ. ಮೇಲಿನ ಕೈಗಳಲ್ಲಿ ಪಾಶ ಮತ್ತು ಕುಂಭಗಳಿರುವುದು ಗಮನೀಯ. ಈ ಶಿಲ್ಪವನ್ನು ಗುರುತಿಸಬೇಕಾಗಿದೆ. ಜಟಾಮುಕುಟ, ಕುಂಡಲ, ಹಾರ, ಬಳೆ, ತೋಳುಬಳೆ, ಸೊಂಟಕ್ಕೆ ವಸ್ತ್ರ, ಕಡಗಗಳನ್ನು ಧರಿಸಿರುವನು.

ಭೃಂಗಿ: ಈತನ ತ್ರಿಭಂಗಿಯಲ್ಲಿದ್ದಾನೆ. ಕುತ್ತಿಗೆ ಭಾಗವು ಮುರಿದು ಎರಡು ಭಾಗವಾಗಿದೆ. ಪಾದಗಳು, ಬಲಗೈ ಮತ್ತು ಬಿಲ್ಲು ಮುರಿದಿವೆ. ಎಡಗೈಯಲ್ಲಿ ಬಿಲ್ಲಿದೆ. ಕಿರೀಟ, ಮಕುಟ, ಕುಂಡಲ, ಹಾರ, ಉದರಪಟ್ಟಿ, ಯಜ್ಞೋಪವೀತ, ಪಟ್ಟಿ, ವಸ್ತ್ರ ಧರಿಸಿದ್ದಾರೆ. (ಈ ಶಿಲ್ಪ ಈಗ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನ ಸಂಸ್ಥೆಯ ವಸ್ತು ಸಂಗ್ರಹಾಲಯದಲ್ಲಿದೆ.)

ಮನುಷ್ಯರ ಗುರಿ ಪರಮೇಶ್ವರನ ಸಾಕ್ಷಾತ್ಕಾರದ ಮೂಲ ಗುರಿ. ಭೃಂಗಿ ಅವನು ಅಸ್ಥಿಪಂಜರ ಅಷ್ಟೆ. ಆಕರ್ಷಕವಲ್ಲದವನು. ಸುಂದರತೆಯನ್ನು ಇಷ್ಟಪಡುತ್ತಾರೆ. ಎಷ್ಟೇ ಗಂಡಸು ಸುಂದರವಿದ್ದರೂ ಅವರನ್ನು ನೋಡುವುದಿಲ್ಲ. ಹೆಣ್ಣನ್ನು ನೋಡುತ್ತಾರೆ. ಆದರೆ ಯಾವುದು ಆಕರ್ಷಕವೆನಿಸುತ್ತದೆ ಅದು ನಶ್ವರ. ಇದನ್ನು ಭೃಂಗಿಯ ಮೂಲಕ ತೋರಿಸಿದ್ದಾರೆ. ಭೃಂಗಿ ಶಿವನ ಪರಮಭಕ್ತ. ಶಿವನನ್ನು ಬಿಟ್ಟರೆ ಬೇರೆ ಯಾರನ್ನೂ ಪಾರ್ವತಿಯನ್ನೊಳಗೊಂಡು ಪೂಜೆ ಮಾಡುತ್ತಿರಲಿಲ್ಲ. ನಂತರ ಪಾರ್ವತಿ ಶಿವನಲ್ಲಿ ಸೇರುತ್ತಾಳೆ. ಶಿವನನ್ನು ಪ್ರದಕ್ಷಿಣೆ ಹಾಕಿದರೆ ಪಾರ್ವತಿಯನ್ನು ಪ್ರದಕ್ಷಿಣೆ ಹಾಕಿದಂತಾಗುತ್ತದೆ. ಇಂತಹ ಸಂದರ್ಭದಲ್ಲಿ ಭೃಂಗಿಯು ಇಬ್ಬರ ಮಧ್ಯದಲ್ಲಿ ತೂತನ್ನು ಕೊರೆದು ಶಿವನ ಭಾಗವನ್ನು ಮಾತ್ರ ಪ್ರದಕ್ಷಿಣೆ ಹಾಕುತ್ತಾನೆ. ಪಾರ್ವತಿ ಸಿಟ್ಟಿಗೆದ್ದು ಅವನ ಚರ್ಮ, ಮಾಂಸವನ್ನೆಲ್ಲ ತೆಗೆದುಬಿಡುತ್ತಾಳೆ. ಇದು ಪ್ರಕೃತಿ ಅಂಶ. ನಿಲ್ಲುವುದಕ್ಕೂ ಆತನಿಗೆ ಆಗುವುದಿಲ್ಲ. ಆಗ ಅವನ ಭಕ್ತಿಯನ್ನು ಮೆಚ್ಚಿ ಶಿವ ಒಂದು ಕಾಲನ್ನು ಕೊಡುತ್ತಾನೆ. ಈ ರೀತಿ ಮನುಷ್ಯ ದೇವರ ಪ್ರಾಪಂಚಿಕ ವಿಷಯದಲ್ಲಿ ಮುಳುಗಿ ಜೀವನ ಅರ್ಥ ಮಾಡಿಕೊಳ್ಳದೆ ನಿಜವಾದ ಅರ್ಥವನ್ನು ಕೊಡುವುದಕ್ಕಿಂತ ಆ ಪರಮೇಶ್ವರನ ಸಾಕ್ಷಾತ್ಕಾರ ಮಾಡಿಕೊಳ್ಳುವುದೇ ಪರಮಗುರಿ ಎಂಬುದು ಇಲ್ಲಿ ತಿಳಿಯುತ್ತದೆ.

ದೇವತೆ: ಈ ದೇವಾಲಯದ ಸಂಕೀರ್ಣದ ಗೋಡೆಯಲ್ಲಿದೆ. ಚತುರ್ಭುಜಗಳು ಮೇಲಿನ ಕೈಗಳಲ್ಲಿ ಕಮಲ ಮತ್ತು ಕುಂಭಗಳಿದ್ದು ಕೆಳಗಿನ ಕೈಗಳು ಮುರಿದಿವೆ. ಬಹುಶಃ ಅಂಜಲಿ ಮುದ್ರೆಯಿರಬಹುದು.

ಶಿವ: ಈತನು ಸಮಭಂಗದಲ್ಲಿರವನು; ದ್ವಿಭುಜ, ಎಡಗೈಯಲ್ಲಿ ಕಮಂಡಲ, ಬದಿಗೆ ಸೇವಕ ನಿಂತಿದ್ದು ಆತನಿಗೆ ಜಟಾಮಕುಟವಿದೆ. ಇಲ್ಲಿ ಇನ್ನೊಂದು ಶಿಲ್ಪವು ಹೆಚ್ಚು ಶಿಥಿಲಗೊಂಡಿದ್ದು ಕೇವಲ ತಲೆಯಿಂದ ಎದೆ ಭಾಗದವರೆಗೆ ಉಳಿದಿದೆ. ಜಟಾಮಕುಟ, ಕುಂಡಲ, ಹಾರಗಳು ಉಳಿದಿವೆ. ಮುದ್ನೂರಿನ ರಾಮಲಿಂಗೇಶ್ವರ ದೇವಾಲಯದ ಒಂದು ಗೂಡಿನಲ್ಲಿ ಶಿವನ ಸುಂದರ ಶಿಲ್ಪವಿದೆ. ಚತುರ್ಭುಜ ಧಾರಿಯಾದ ಶಿವನು ಪದ್ಮಾಸನದಲ್ಲಿ ಕುಳಿತಿದ್ದಾನೆ. ಕೈಗಳಲ್ಲಿ ಅಭಯ (ಒಡೆದಿದೆ). ತ್ರಿಶೂಲ, ನಾಗ ಮತ್ತು ಫಲಗಳಿವೆ. ಮುಖದ ಭಾಗ ಮುಕ್ಕಾಗಿದೆ. ಬದಿಗಳಲ್ಲಿ ಸೇವಕಿಯರು ತ್ರಿಭಂಗಿಯಲ್ಲಿ ನಿಂತಿದ್ದಾರೆ. ವಸ್ತ್ರಾಭರಣಧಾರಿಯಾಗಿದ್ದಾನೆ.

ಭೈರವ: ತುಂಬಾ ಸುಂದರವಾದ ಈ ದುಂಡು ಶಿಲ್ಪದಲ್ಲಿ ಬೆತ್ತಲೆಯ ಭೈರವನು ಸವ್ಯಲಲಿತಾಸನದಲ್ಲಿದ್ದಾನೆ. ಮೂರು ಕೈಗಳು ಮುರಿದುಹೋಗಿವೆ. ತ್ರಿಶೂಲ ಬಲಗೈಯಲ್ಲಿದೆ. ಕೇಶವನ್ನು ಉಂಗುರ ಉಂಗುರವಾಗಿ ಹೆಣೆದು ತಲೆಯ ಎರಡೂ ಬದಿಗೆ ಹಿಂಬದಿಯಿಂದ ಭುಜದವರೆಗೆ ಇಳಿಬಿಟ್ಟಿರುವನು. ಕೋರೆಹಲ್ಲುಗಳಿವೆ. ಉಬ್ಬಿದ ಕಣ್ಣುಗಳಿವೆ. ಎರಡು ರೀತಿಯ ಕುಂಡಲಗಳಿವೆ. ಮೂರು ರೀತಿಯ ಹಾರಗಳಿವೆ. ನಾಗನನ್ನು ಯಜ್ಞೋಪವೀತದಂತೆ ಧರಿಸಿರುವನು. ಗೆಜ್ಜೆ ಪಟ್ಟಿಯನ್ನು ಸೊಂಟಕ್ಕೆ ಕಟ್ಟಿರುವನು. ತೋಳಲ್ಲಿ, ಎದೆ ಮೇಲೆ ನಾಗಬಂಧಗಳಿವೆ. ರಾಜಾಪುರದ ಭೈರವಶಿಲ್ಪದಲ್ಲಿ ಭೈರವನು ಸವ್ಯಲಲಿತಾಸನದಲ್ಲಿ ಪ್ರೇತನ ಮೇಲೆ ಕಾಲಿಟ್ಟು ಕುಳಿತಿದ್ದಾನೆ. ಈ ಲಕ್ಷಣ ಅಪರೂಪದ್ದಾಗಿದೆ. ಹತ್ತು ಭುಜಗಳಿವೆ. ಬಲಗಡೆಯ ಕೈಗಳು ಮುರಿದಿವೆ.

ಉಮಾ-ಮಹೇಶ್ವರ: ನಂದಿ ಮೇಲೆ ಕುಳಿತಿದ್ದಾರೆ. ಮಹೇಶ್ವರನ ತೊಡೆಯ ಮೇಲೆ ಉಮೆ ಕುಳಿತಿರುವಳು. ಇದಕ್ಕೆ ಬಣ್ಣ ಲೇಪನ ಮಾಡಲಾಗಿದೆ.

ಕಾಮ: ಈ ಶಿಲ್ಪದಲ್ಲಿ ಈತನು ಸಮಭಂಗದಲ್ಲಿದ್ದಾನೆ ಹಾಗೂ ದ್ವಿಭುಜ. ಒಂದು ಕೈ ಮುರಿದಿದೆ. ಇನ್ನೊಂದು ಕೈಯಲ್ಲಿ ಕಮಂಡಲವಿದೆ. ಕೆಳಗೆ ಬಲಕ್ಕೆ ಸೇವಕನಿದ್ದಾನೆ. ಜಟಾಮಕುಟ, ಕುಂಡಲ, ಹಾರ, ವಸ್ತ್ರ, ಕಡಗ ಧರಿಸಿದ್ದಾನೆ. ಉಡ್ಲಿಗಿಯ ಈ ಶಿಲ್ಪಗಳನ್ನು ಶೈಲಿಯ ದೃಷ್ಟಿಯಿಂದ ಎರಡು ಕಾಲಗಳನ್ನಾಗಿ ವಿಂಗಡಿಸಬಹುದು. ಮೇಲೆ ತಿಳಿಸಿದ ಕಾಮ, ರತಿ, ಯತಿ, ಕಾಲಾರಿಶಿವ, ಕಾಲಾರಿ ಭೈರವಿ, ಕಾರ್ತಿಕೇಯ, ಭೈರವ ಶಿಲ್ಪಗಳು ಸು. ಕ್ರಿ.ಶ. 9ನೇ ಶತಮಾನದ ಆದಿಭಾಗ ; ಉಳಿದ ಶಿಲ್ಪಗಳಲ್ಲಿ ನಾಲ್ಕು, ಕಾಮ, ಭೃಂಗಿ, ಅರ್ಧನಾರೀಶ್ವರ, ದೇವ, ದೇವತೆ, ಶಿಲಾಬಾಲಿಕೆ ಇತ್ಯಾದಿಗಳು. ಕ್ರಿ.ಶ. 9ನೇ ಶತಮಾನದ ಅಂತ್ಯಕ್ಕೆ ಸೇರಿವೆ. ರಾಷ್ಟ್ರಕೂಟರ ಕಾಲಕ್ಕೆ ಸೇರಿದ ಈ ಶಿಲ್ಪಗಳ ಸ್ಥಳ ಉಡ್ಲಿ ಗ್ರಾಮವು, ರಾಷ್ಟ್ರಕೂಟರ ಕಾಲದಲ್ಲಿ ರಾಜಧಾನಿಯಾಗಿದ್ದ ಮಳಖೇಡಕ್ಕೆ ಕೇವಲ 10 ಕಿ.ಮೀ. ಅಂತರದಲ್ಲಿರುವುದು ಗಮನೀಯ. ಉತ್ತರ ಕರ್ನಾಟಕದಲ್ಲೇ ಇಷ್ಟೊಂದು ಸಂಖ್ಯೆಯ ಈ ಕಾಲದ ಶಿಲ್ಪಗಳು ಒಂದೆಡೆ ಪ್ರಥಮ ಬಾರಿಗೆ ಶೋಧವಾಗಿರುವುದು ಗಮನಾರ್ಹವಾಗಿದೆ. ಇಲ್ಲಿ ಕಾಮನ ಶಿಲ್ಪಗಳು ವಿವಿಧ ರೀತಿಯಿಂದ ಇರುವುದು ಗಮನೀಯ. ಶೈವ ಶಿಲ್ಪಗಳು ಅಧಿಕವಾಗಿವೆ. ಇದರಿಂದ ಈ ಕಾಲದಲ್ಲಿ ಇದೊಂದು ಖ್ಯಾತ ಶೈವ ಕೇಂದ್ರವಾಗಿದ್ದಿತು. ತುಲನಾತ್ಮಕವಾಗಿ ಹೇಳಬೇಕೆಂದರೆ ಈ ಶಿಲ್ಪಗಳು ಬಾದಾಮಿ ಚಾಲುಕ್ಯರ ಕಾಲದ ಐಹೊಳೆ, ಪಟ್ಟದಕಲ್ಲು, ಬಾದಾಮಿಯ ಕೆಲ ಶಿಲ್ಪಗಳನ್ನು ಶೈಲಿಯಿಂದ ಸಾಮೀಪ್ಯವನ್ನು ಪಡೆದಿರುವುದನ್ನು ನೆನಪಿಸಬಹುದು.

ಭೈರವ: ಭೈರವನ ಶಿಲ್ಪಗಳು ಉಡಗಿ, ತೆಲಕೂರ, ಹಾಳಬಾಳ (ಟಿ), ನೀಲಹಳ್ಳಿ, ಕುರಕುಂಟ, ಕೊಡ್ಲ ಇತ್ಯಾದಿ ಗ್ರಾಮಗಳಲ್ಲಿವೆ. ಈ ಶಿಲ್ಪಗಳಲ್ಲಿ ಭೈರವನು ಕುಳಿತ ಅಥವಾ ನಿಂತ ಭಂಗಿಯಲ್ಲಿರುವನು. ನಗ್ನ ಭಂಗಿ, ಚತುರ್ಭುಜಧಾರಿ ಕೈಗಳಲ್ಲಿ ಕಠೋರಿ, ತ್ರಿಶೂಲ, ಢಮರು ಮತ್ತು ಕಪಾಲಗಳು, ರುಂಡಗಳ ಮಾಲೆ ಮತ್ತು ವಿವಿಧ ಆಭರಣಗಳನ್ನು ಧರಿಸಿರುತ್ತಾನೆ. ಈ ಭಾಗದಲ್ಲೂ ಕುಳಿತ ಭಂಗಿಯ ಭೈರವನ ಶಿಲ್ಪಗಳು ವಿರಳ. ಈ ಮಾದರಿಯ ಶಿಲ್ಪಗಳು ತೆಲಕೂರು ಮತ್ತು ಉಡಗಿ, ಹಾಳಬಾಳ (ಟಿ) ಗ್ರಾಮಗಳಲ್ಲಿದ್ದು ಅವುಗಳಲ್ಲಿ ಉಡಗಿ ಮತ್ತು ಹಾಳಬಾಳ (ಟಿ) ಶಿಲ್ಪಗಳು ಕುತೂಹಲದ್ದಾಗಿವೆ.

ಉಡಗಿ ಗ್ರಾಮದ ಲೋಕೇಶ್ವರ ದೇವಾಲಯದ ಎದುರಿಗಿನ ಆಲದಗಿಡದ ಕಟ್ಟೆಯ ಗೂಡಿನಲ್ಲಿ ಈ ಮಾದರಿಯ ಭೈರವನ ಶಿಲ್ಪವಿದೆ. ಈ ಶಿಲ್ಪ ತುಂಬಾ ಮನಮೋಹಕವಾಗಿದೆ. ಈ ಶಿಲ್ಪದ ಮೂರು ಕೈಗಳು ಒಡೆದಿವೆ. ಭೈರವನು ರುಂಡಮಾಲೆಯ ಬದಲು ನಾಗರಹಾವನ್ನು ಧರಿಸಿರುವನು. ಗೆಜ್ಜೆಗಳ ಪಟ್ಟಿಯನ್ನು ಸೊಂಟಕ್ಕೆ ಧರಿಸಿರುವನು. ಉಳಿದ ಒಂದು ಕೈಯಲ್ಲಿ ತ್ರಿಶೂಲವಿದೆ. ತಲೆಯ ಕೇಶವು ಉಂಗುರ ಉಂಗುರದಂತೆ ಹಿಂದಕ್ಕೆ ಎಳೆದು ಹೆರಳನ್ನು ಕಟ್ಟಲಾಗಿದೆ. ಅದರ ಕಾಲ ಸುಮಾರು ಕ್ರಿ.ಶ. 9ನೆಯ ಶತಮಾನ. ಈ ಭಾಗದಲ್ಲಿಯೇ ಈ ಭೈರವನ ಶಿಲ್ಪ ಅತ್ಯಂತ ಪ್ರಾಚೀನವಾಗಿದೆ.

ಹಾಳಬಾಳ (ಟಿ) ಗ್ರಾಮದ ಮಾರುತಿ ಮಂದಿರದ ಮುಂದಿನ ಭೈರವ ಶಿಲ್ಪ ಅಲ್ಲಲ್ಲಿ ಒಡೆದಿದೆ. ಎದೆಯ ಭಾಗ ಮುರಿದು ಎರಡು ಭಾಗಗಳಾಗಿವೆ. ತಲೆಯ ಹಿಂದಕ್ಕೆ ಕೇಶವನ್ನು ಎಳೆದುಕೊಂಡು ಮಧ್ಯದಿಂದ ಎಡಗಡೆಗೆ ಐದು ಮತ್ತು ತಲೆಯ ಮಧ್ಯ ಉದ್ದನೆಯ ಬೈತಲೆಯಿದೆ. ಹಣೆಗೆ ಕೇಶದಿಂದ ಪಟ್ಟಿಯನ್ನು ಕಟ್ಟಿಕೊಂಡಿರುವನು. ಕಿವಿಗಳಲ್ಲಿ ದುಂಡಾದ ಅಗಲ ಓಲೆಗಳು, ಕೊರಳಲ್ಲಿ ತ್ರಿಕೋನಾಕಾರದ ಗೆಜ್ಜೆ ಸರಗಳು, ಉದರಕ್ಕೆ ದುಂಡಾದ ಪಟ್ಟಿಯನ್ನು, ಸೊಂಟಕ್ಕೆ ಚತುರಾಕಾರದ ಗೆಜ್ಜೆಗಳುಳ್ಳ ಉಡದಾರ, ರಟ್ಟೆಗಳಲ್ಲಿ ನಾಗಬಂಧ ಮತ್ತು ಕಾಲುಗಳನ್ನು ಕಡಗಗಳನ್ನು ಧರಿಸಿರುವನು. ಮಹತ್ವದ ಸಂಗತಿಯೆಂದರೆ ಯಜ್ಞೋಪವೀತಕ್ಕೆ ರುಂಡಗಳನ್ನು ಮೇಲ್ಭಾಗದಲ್ಲಿ ಗೆಜ್ಜೆಗಳನ್ನು ಪೋಣಿಸಿರುವುದು ಗಮನಾರ್ಹ. ಈ ಶಿಲ್ಪದ ಕಾಲ ಸು. ಕ್ರಿ.ಶ. 10ನೆಯ ಶತಮಾನ.

ತ್ರಿಭಂಗದಲ್ಲಿರುವ ಭೈರವನ ಶಿಲ್ಪಗಳಲ್ಲಿ ಅಡಕಿ ಗ್ರಾಮದ ಮಾರುತಿ ಮಂದಿರದ ಮುಂದಿನ ಶಿಲ್ಪ ವಿಶೇಷವಾಗಿದೆ. ಈ ಶಿಲ್ಪದಲ್ಲಿ ಚತುರ್ಭುಜಧಾರಿ ಭೈರವ ತನ್ನ ಬಲಗೈಗಳಲ್ಲಿ ಕತ್ತಿ ಮತ್ತು ಢಮರುಗಳನ್ನು ಮತ್ತು ಮೇಲಿನ ಎಡಗೈಯಲ್ಲಿ ತ್ರಿಶೂಲದ ಬದಲು ನಾಗವನ್ನು ಹಿಡಿದಿರುವುದು ಗಮನೀಯ. ಕೆಳಗಿನ ಕೈ ಒಡೆದಿದೆ. ತಲೆಯ ಮೇಲೆ ನಾಗನನ್ನು ಧರಿಸಿರುವನು. ತಲೆಯ ಸುತ್ತಲೂ ಅರ್ಧವೃತ್ತಾಕಾರದಲ್ಲಿ ಕೇಶಗಳನ್ನು ಉಂಗುರಾಕಾರದಲಿ,

ಅಲಂಕರಿಸಿಕೊಂಡಿರುವನು. ನಾಗಸರ್ಪವನ್ನೇ ಯಜ್ಞೋಪವೀತವನ್ನಾಗಿ ಧರಿಸಿರುವನು. ದುಂಡಾದ ಗೆಜ್ಜೆಗಳ ಉಡದಾರ ಧರಿಸಿರುವನು. ರುಂಡಮಾಲೆಯ ಬದಲು ನಾಗಸರ್ಪಗಳನ್ನು ಹಗ್ಗದಂತೆ ಹೆಣೆದು ಮೊಣಕಾಲಿನವರೆಗೆ ಧರಿಸಿರುವುದು ವಿಶೇಷ. ಈ ಶಿಲ್ಪದ ಕಾಲ ಸು. ಕ್ರಿ.ಶ. 10ನೆಯ ಶತಮಾನ.

ಪಾರ್ವತಿ: ಉಡಗಿಯ ಲೋಕೇಶ್ವರ ದೇವಾಲಯದ ಪರಿಸರದಲ್ಲಿ ಪಾರ್ವತಿಯ ಶಿಲ್ಪಗಳಿವೆ. ಒಂದರಲ್ಲಿ ದ್ವಿಭುಜದಾರಿ ಮತ್ತೊಂದರಲ್ಲಿ ಚತುರ್ಭುಜಧಾರಿಯಾಗಿದ್ದಾಳೆ.

ಬ್ರಹ್ಮ: ಸಮಭಾಗದಲ್ಲಿ ಬ್ರಹ್ಮನು ಕೈಮುಗಿದು ನಿಂತಿದ್ದಾನೆ. ಮೂರು ಮುಖಗಳಿವೆ.

ಶೈವದ್ವಾರಪಾಲಕರು: ನಿಡಗುಂದಿಯ ಸೂರ್ಯನಾರಾಯಣ ದೇವಾಲಯದ ಹತ್ತಿರ ಆಳೆತ್ತರದ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಒಂದರಲ್ಲಿ ಜಟಾಧಾರಿಯಾದ,





ತ್ರಿಭಂಗಿಯಲ್ಲಿ ನಿಂತ ದ್ವಾರಪಾಲಕನಿಗೆ ಚತುರ್ಭುಜಗಳಿವೆ. ಕೈಗಳಲ್ಲಿ ಅಭಯ-ಅಕ್ಷಮಾಲೆ, ಡಮರು, ತ್ರಿಶೂಲ ಮತ್ತು ಗದೆಗಳಿವೆ. ದಪ್ಪನೆಯ ಜಟೆಯಲ್ಲಿ ನಾಗಸರ್ಪದ ಅಲಂಕರಣೆ ಎದ್ದು ಕಾಣುವುದು. ಓಲೆ, ಸರ, ಯಜ್ಞೋಪವೀತ, ಸರಗಳುಳ್ಳ ವಸ್ತ್ರಪಟ್ಟಿ ಇತ್ಯಾದಿ ಆಭರಣಗಳನ್ನು ಧರಿಸಲಾಗಿದೆ. (ಕ್ರಿ.ಶ. 10ನೆಯ ಶತಮಾನ). ಶಿರಿವಾಳದ ಒಂದು ಶೈವ ದ್ವಾರಪಾಲಕ ಶಿಲ್ಪವು ಗುಲ್ಬರ್ಗಾದ ವಸ್ತುಸಂಗ್ರಹಾಲಯದಲ್ಲಿದೆ. ಈ ದ್ವಾರಪಾಲಕನು ಚತುರ್ಭುಜಧಾರಿ. ಕೈಗಳಲ್ಲಿ

ನಾಗ, ಒಡೆದ ತ್ರಿಶೂಲಗಳಿವೆ. ಕೆಳಗಿನ ಎಡಗೈ ಯನ್ನು ಸೊಂಟಕ್ಕೆ ಇಟ್ಟಿದ್ದಾನೆ. ಮುಖ, ಕಾಲುಗಳು, ಎಡಕ್ಕೆ ಶಿಥಿಲವಾಗಿವೆ. ಕಿವಿಗಳಲ್ಲಿ ಮಕರ ಕುಂಡಲಗಳಿವೆ. ಕೊರಳಲ್ಲಿ ಸರಗಳಿವೆ. ಉದರಪಟ್ಟಿ, ಯಜ್ಞೋಪವೀತ, ತೋಳಪಟ್ಟಿ, ಬಳೆ, ಸೊಂಟಕ್ಕೆ ವಸ್ತ್ರಪಟ್ಟಿಗಳಿವೆ. ಮುಖದ ಸುತ್ತಲಿನ ಪ್ರಭಾವಳಿಯ ಅಲಂಕರಣವು ಸುಂದರವಾಗಿದೆ. ಕಾಲ ಸು. ಕ್ರಿ.ಶ. 10ನೆಯ ಶತಮಾನ. ಈ ಕಾಲದ ಇದೇ ರೀತಿಯ ಹೆಚ್ಚು ಶಿಥಿಲವಾದ ಇನ್ನೊಂದು ಶೈವದ್ವಾರ ಪಾಲಕ ಶಿಲ್ಪವು ಶಿರಿವಾಳದಲ್ಲಿದೆ. ಈ ಎರಡು ಶಿಲ್ಪಗಳಿಗೂ ಏಕ ಲಕ್ಷಣಗಳಿರುವುದರಿಂದ ಇವು ಒಂದು ದೇವಾಲಯಕ್ಕೆ ಸೇರಿದವುಗಳಾಗಿವೆ.

ಭೈರವ: ರಾಜಾಪುರದ ಭೈರವ ಶಿಲ್ಪದಲ್ಲಿ ಅಪರೂಪದ ಲಕ್ಷಣಗಳಿವೆ. ಈ ಶಿಲ್ಪದಲ್ಲಿ ಭೈರವನು ಸವ್ಯಲಲಿತಾಸನದಲ್ಲಿ ಕುಳಿತಿದ್ದಾನೆ. ಇಳಿಬಿಟ್ಟ ಎಡಗಾಲನ್ನು ಮೇಲಿನ ಪ್ರೇತದ ಮೇಲಿಟ್ಟಿದ್ದಾನೆ. ಹತ್ತು ಭುಜಗಳಿದ್ದು, ಬಲಗಡೆಯ 4 ಕೈಗಳು ಶಿಥಿಲವಾಗಿವೆ. ಎಡಗಡೆಯ ಕೆಳಗಿನ ಕೈಯನ್ನು ಸೊಂಟಕ್ಕೆ ಬಗ್ಗಿಸಿ ಇಟ್ಟಿದ್ದಾನೆ. ಅದರ ಮೇಲಿನ ಕೈಯನ್ನು ಬದಿಗೆ ಚಾಚಿ ಬಗ್ಗಿಸಿದ್ದಾನೆ. ಅದರ ಮೇಲಿನ ಮೂರು ಕೈಗಳಲ್ಲಿ ವಿಭಿನ್ನ ಉಪಕರಣಗಳಿವೆ. ಕಿರೀಟ ಮುಕುಟಧಾರಿಯಾಗಿದ್ದು, ಯಜ್ಞೋಪವೀತದಂತೆ ರುಂಡಗಳ ಮಾಲೆಯನ್ನು ದೇಹದ ಮೇಲೆ ಧರಿಸಿದ್ದಾನೆ. ಓಲೆ, ಸರ, ಬಳೆ ಇತ್ಯಾದಿ ವಸ್ತ್ರ ಆಭರಣಗಳಿಂದ ಭೂಷಿತನಾಗಿದ್ದಾನೆ. ಕಾಲಮಾನ ಸು. ಕ್ರಿ.ಶ. 10ನೆಯ ಶತಮಾನ.

ಅಧ್ಯಾಯ–5

ವೈಷ್ಣವ ಶಿಲ್ಪಗಳು

ಅಧ್ಯಾಯ–5

ವೈಷ್ಣವ ಶಿಲ್ಪಗಳು

ವೈಷ್ಣವ ಶಿಲ್ಪಗಳು: ವೈಷ್ಣವ ಶಿಲ್ಪಗಳು ಈ ಭಾಗದಲ್ಲಿ ತುಂಬಾ ಕಡಿಮೆ. ಅವುಗಳು ಸೇಡಂ ತಾಲೂಕಿನ ಅಡಕಿ ಮತ್ತು ಸೇಡಂಗಳಲ್ಲಿವೆ. ಒಂದು ಶಿಲ್ಪದಲ್ಲಿ ಮಧ್ಯೆ ಒಂದು ಮಡಿಕೆಯಲ್ಲಿ ಕಡಗೋಲನ್ನಿಡಲಾಗಿದೆ. ಈ ಕಡಗೋಲಿಗೆ ನಾಗಲೋಕದ ವಾಸುಕಿ ಸರ್ಪವನ್ನು ಸುತ್ತಲಾಗಿದೆ. ಆ ಸರ್ಪದ ದೇಹಾಂಗವನ್ನು ಒಂದು ಕಡೆಗೆ ಮೂವರು ಸುರರು ಮತ್ತೊಂದು ಕಡೆಗೆ ಮೂವರು ಅಸುರರು ಹಿಡಿದು ಅಮೃತವನ್ನು ಕಡೆಯುತ್ತಿರುವರು. ಅವರ ಬಲಗಡೆಯ ಅಂಚಿನಲ್ಲಿ ಕತ್ತಿ–ಗುರಾಣಿ ಹಿಡಿದು ನಿಂತ ವೀರನು ಮತ್ತು ರೆಕ್ಕೆಯುಳ್ಳ ಗರುಡರಿದ್ದಾರೆ. ಅವರ ಎಡಗಡೆಗೆ ಅಂಚಿನಲ್ಲಿ ಮಂಗಗಳು ಮತ್ತು ಚೌರಿ ಹಿಡಿದ ಸೇವಕಿಯಿದ್ದಾಳೆ. ಕಡಗೋಲಿನ ಮೇಲೆ ವಿಷ್ಣುವನ್ನು ಚಿತ್ರಿಸಲಾಗಿದೆ. ಈ ಸುಂದರ ಶಿಲ್ಪದ ಕಾಲ ಕ್ರಿ.ಶ. 10ನೆಯ ಶತಮಾನ.

ವಿಷ್ಣು: ಮುದ್ನೂರಿನ ರಾಮತೀರ್ಥದ ಬದಿಗೆ ಒಂದು ಶಿಲ್ಪವಿದ್ದು ಅಲ್ಲಿ ನಾಗಸರ್ಪಗಳ ಹೆಡೆಯನ್ನು ಹೊಂದಿದ ವಿಷ್ಣುವಿಗೆ ಎಂಟು ಕೈಗಳಿವೆ. ಆತನ ಎಡಬದಿಗೆ ಅಡ್ಡವಾಗಿ ಏಕಸಾಲಿನಲ್ಲಿ ಅವತಾರಗಳ ಚಿತ್ರಗಳಿವೆ. ಈ ಶಿಲ್ಪದ ಲಕ್ಷಣದಿಂದ ಈ ದೇವತೆಯ ಹೆಸರನ್ನು ಗುರುತಿಸಲಾಗಿದೆ.

ಸೂರ್ಯನ ಶಿಲ್ಪಗಳು :

ನಿಡಗುಂದಿಯ (ಚಿಂಚೋಳ್ಳಿ ತಾ.) ಅನೇಕ ಶಿಲ್ಪಗಳಲ್ಲಿ ಒಂದು ಈ ಕಾಲದ ಸೂರ್ಯನ ಶಿಲ್ಪ ಪೀಠ ವಿಶೇಷ ಗಮನಸೆಳೆಯುತ್ತದೆ. ಅಲ್ಲಿ ಏಳು ಅಶ್ವಗಳನ್ನೊಳಗೊಂಡ ರಥವನ್ನು ಅರುಣ ನಡೆಸುವುದು. ಈ ರಥದ ಚಕ್ರಗಳನ್ನು ಅದರ ಬದಿಗಳಲ್ಲಿ ಚಿತ್ರಿಸಿರುವುದು ವಿಶೇಷವೆನಿಸಿದೆ.





ಇದು ಉತ್ತರ ಭಾರತದ ಶೈಲಿಯನ್ನು ನೆನಪಿಸುವುದು. ಇಂಥಹುದೇ ಪೀಠವುಳ್ಳ ಸೂರ್ಯನ ಶಿಲ್ಪವು ಗುರುಮಠಕಲ್ಲಿನಲ್ಲಿದೆ. ಆದರೆ ಅದು ವಿಜಯನಗರದ ಕಾಲದಲ್ಲಿ ನಿರ್ಮಿಸಿದ್ದಾಗಿದೆ. ನಿಡಗುಂದಿಯ ಸೂರ್ಯನ ಶಿಲ್ಪದಲ್ಲಿ ಸೂರ್ಯನು ಕಮಲದ ಮೊಗ್ಗುಗಳನ್ನು ಕೈಗಳಲ್ಲಿ ಹಿಡಿದಿದ್ದಾನೆ. ಈ ಕಮಲಗಳು ಕಿರೀಟಮುಕುಟ ಮತ್ತು ಹಾರದ ಲಕ್ಷಣಗಳು ಹೈದರಾಬಾದ್ ಕರ್ನಾಟಕದಲ್ಲಿ ಅಪರೂಪವೆನಿಸಿವೆ. ಈ ಭಾಗಗಳಲ್ಲಿ ಸೂರ್ಯನ ಶಿಲ್ಪಗಳು ಹಂದರಕಿ, ಸೇಡಂ, ಕೊಳಕುಂದ, ಹಾಳಬಾಳ ಇತ್ಯಾದಿ ಸ್ಥಳಗಳಲ್ಲಿದ್ದು ಅವುಗಳಲ್ಲಿ ಹಾಳುಬಾಳ (ಬಿ)ದಲ್ಲಿನ ವಿಗ್ರಹ ಮಹತ್ವದ್ದಾಗಿದೆ. ಪೀಠಗಳಲ್ಲಿ ಏಳು ಅಶ್ವಗಳಿದ್ದು ಸೂರ್ಯನು ಸಮಭಂಗಿಯಲ್ಲಿ ನಿಂತಿದ್ದಾನೆ. ದ್ವಿಭುಜಧಾರಿಯಾದ ಈತನ ಕೈಗಳಲ್ಲಿ ಪದ್ಮಗಳಿರುತ್ತವೆ. ಸೇಡಂ ಗ್ರಾಮದ ಪಂಚಲಿಂಗೇಶ್ವರ ದೇವಾಲಯದ ಒಂದು ಗೂಡಿನಲ್ಲಿ ಸೂರ್ಯಪೀಠದ ಮೇಲೆ ಗಣೇಶನ ಶಿಲ್ಪವನ್ನು ಕೂಡಿಸಲಾಗಿದೆ.

ಮೂಲತಃ ಈ ಪೀಠ ಸೂರ್ಯನದಾಗಿದ್ದು, ಅದರಲ್ಲಿ ಏಳು ಅಶ್ವಗಳು ತಮ್ಮ ಮುಖಗಳನ್ನು ಮತ್ತು ನಾಲ್ಕು ಕಾಲುಗಳನ್ನು ಮುಂದೆ ಮಾಡಿ ಚಿತ್ರಿಸಿರುವುದು ಮತ್ತು ಬದಿಗಳಲ್ಲಿ ಉಷಾಪ್ರತ್ಯುಷರಿದ್ದಾರೆ. ಆತನ ತಲೆ ಮತ್ತು ಪಾದಗಳು ಒಡೆದಿವೆ. ಹಾರ, ಯಜ್ಞೋಪವೀತ, ಪಟ್ಟಿ, ಬಳೆಗಳನ್ನು ಧರಿಸಿರುವನು. ಇಲ್ಲಿ ಸೂರ್ಯನಿಗೆ ಪಂಚೆ ಉಡಿಸಿರುವುದು ಅಪರೂಪವೆನಿಸಿದೆ. ಈ ಶಿಲ್ಪದ ಕಾಲಮಾನ ಸು. ಕ್ರಿ.ಶ. 10ನೆಯ ಶತಮಾನ (?).

ನಾಗ ಶಿಲ್ಪಗಳು: ಕರಕಮುಕ್ಷಿ (ಗುಲ್ಬರ್ಗಾ ಜಿ.)ಯ ನಾಗಶಿಲ್ಪವು ವಿಶಿಷ್ಟವಾಗಿದೆ. ಇದಕ್ಕೆ ಮಾನವರೂಪವಿದ್ದು ಇಲ್ಲಿ ಕಾಲುಗಳಿಂದ ಸೊಂಟದವರೆಗಿದ್ದು, ದೇಹದಿಂದ ಮೇಲಿನವರೆಗೆ ಜೋಡು ನಾಗಸರ್ಪಗಳ ರೂಪದಿಂದ ಚಿತ್ರಿಸಿದ ಉಬ್ಬುಶಿಲ್ಪವಾಗಿದೆ. ಸೊಂಟಕ್ಕೆ ವಸ್ತ್ರವನ್ನು ಕಾಲುಗಳಲ್ಲಿ ಕಡಗಗಳನ್ನು ಧರಿಸಲಾಗಿದೆ. ಒಂದಕ್ಕೆ ಏಳು ಹೆಡೆಗಳು ಇನ್ನೊಂದಕ್ಕೆ ಏಕ ಹೆಡೆಯಿದೆ. ಬದಿಗಳಲ್ಲಿ ಏಕ ಹೆಡೆಯ ನಾಗಗಳನ್ನು ಉದ್ದವಾಗಿ ಕೆತ್ತವಾಗಿದೆ. (ಕಾಲ ಕ್ರಿ.ಶ. 10–11ನೆಯ ಶತಮಾನ)

ಸೇಡಂ ತಾಲೂಕಿನಲ್ಲಿ ನಾಗ–ನಾಗಿಣಿಯರ, ಮನುಷ್ಯ–ಪ್ರಾಣಿ ರೂಪದ ಶಿಲ್ಪಗಳು ಅಡಕಿ, ಸಂಗಾವಿ, ಕುರಕುಂಟ, ತುರನೂರು, ಕೋಡ್ಲ ಮುಂತಾದ ಸ್ಥಳಗಳಲ್ಲಿವೆ. ಕೇವಲ ನಾಗರಹಾವಿನ ಶಿಲ್ಪಗಳು ಹೆಚ್ಚಿನ ಗ್ರಾಮಗಳಲ್ಲಿದ್ದು ಅವುಗಳಲ್ಲಿ ಕೊಡ್ಲ ಗ್ರಾಮದ ಶಿಲ್ಪಗಳು ಗಮನಾರ್ಹವೆನಿಸಿವೆ. ಅರ್ಧ ಮನುಷ್ಯ, ಅರ್ಧ ಪ್ರಾಣಿ(ಹಾವು) ರೂಪವುಳ್ಳ ನಾಗನ ಕೈಗಳಲ್ಲಿ ಕತ್ತಿ ಮತ್ತು ಗುರಾಣಿಗಳಿವೆ. ತಲೆಯ ಮೇಲೆ ಸರ್ಪದ ಹೆಡೆಗಳಿವೆ. ಹಾವಿನ ದೇಹಾಂಗ ದುಂಡಾಗಿ ಮಡಿಚಿರುತ್ತದೆ. ಈ ಮಾದರಿ ಅಡಕಿ ಗ್ರಾಮದ ಮಾರುತಿ ಮಂದಿರದ ಮುಂದಿನ ನಾಗಶಿಲ್ಪದಲ್ಲಿ ನಾಗನು ಕೈಗಳಲ್ಲಿ ಕತ್ತಿ ಮತ್ತು ಗುರಾಣಿಗಳನ್ನು ಹಿಡಿದಿರುವನು.



ವಿಶೇಷವೆಂದರೆ ತಲೆಯ ಮೇಲಿನ ಸರ್ಪದ ಐದು ಹೆಡೆಗಳಲ್ಲಿ ಅಗಲವಾದ ಸಮಾನಾಂತರವಾಗಿ ಮಡಿಚಿದೆ. ಅದರ ಬಾಲಕ್ಕೆ ಸಮಾನಾಂತರವಾಗಿ ಕೆಳಗೆ ಮತ್ತು ಬದಿಗಳಲ್ಲಿ ನಾಗಸರ್ಪಗಳಿವೆ. ಕೈಗಳ ಬದಿಗಳಲ್ಲಿ ಒಂದೊಂದು ನಾಗಗಳಿರುವುದು ಗಮನೀಯ.

ಕಿರೀಟಮುಕುಟ, ಕುಂಡಲ, ಸರ, ಯಜ್ಞೋಪವೀತ, ಗೆಜ್ಜೆಗಳುಳ್ಳ ಉದರಪಟ್ಟಿ ಧರಿಸಿರುವನು. ಈ ಶಿಲ್ಪದ ಕಾಲ ಸು.ಕ್ರಿ.ಶ. 10ನೆಯ ಶತಮಾನ. ಸಂಗಾವಿ ಶಿಲ್ಪದಲ್ಲಿ ಸ್ವಲ್ಪ ವಿಭಿನ್ನ ಲಕ್ಷಣಗಳುಳ್ಳ ನಾಗಶಿಲ್ಪವಿದೆ. ಅದರ ತಂದೆಯ ಸುತ್ತಲೂ ಒಂಬತ್ತು ಹೆಡೆಗಳಿವೆ. ಎಡಗೈ ಬದಿಗೆ ನಾಗಸರ್ಪವಿದೆ. ಬಲಕ್ಕೆ ಕೆಳಗಡೆ ಐದು ನಾಗಗಳನ್ನು (?) ಸಮಾನಾಂತರವಾಗಿ ಚಿತ್ರಿಸಲಾಗಿದೆ. ಈ ಶಿಲ್ಪದ ಕಾಲ ಸು. ಕ್ರಿ.ಶ. 11ನೆಯ ಶತಮಾನ.

ನಾಗಸರ್ಪಗಳು ಮತ್ತು ಮನುಷ್ಯರೂಪದ ಸೇವಕರು ಇತ್ಯಾದಿ ಚಿತ್ರವುಳ್ಳ ಶಿಲ್ಪಗಲು ಈ ಭಾಗದಲ್ಲಿ ಕಂಡುಬಂದಿರುವುದು ಗಮನಾರ್ಹ. ಈ ಮಾದರಿಯ ಶಿಲ್ಪವೊಂದು ಸೇಡಂ ತಾಲೂಕಿನ ಕೋಡ್ಲ ಗ್ರಾಮದ ಹತ್ತಿರದ ಚೌಡಮ್ಮನ ಗುಡಿಯ ಎದುರಿಗಿದೆ. ಈ ಶಿಲ್ಪದ ಕೆಳಗಡೆ ನಾಗರಹಾವುಗಳು, ಮಧ್ಯ ಏಳು ಹೆಡೆಯುಳ್ಳ ನಾಗನನ್ನು ಪ್ರಮುಖವಾಗಿ ಚಿತ್ರಿಸಲಾಗಿದೆ. ಅದರ ಬಲಕ್ಕೆ ಒಂದು, ಎಡಕ್ಕೆ ಎರಡು ನಾಗರಹಾವುಗಳಿವೆ. ಇವುಗಳ ಮೇಲಿನ ಭಾಗದಲ್ಲಿ ಇಬ್ಬರು ಸೇವಕರ ಮಧ್ಯೆ ಒಂದು ಪೂರ್ಣಕುಂಭವಿರುವುದು ಗಮನೀಯ.



ಈ ಸೇವಕರು ಕೊರಳಲ್ಲಿ ಗೆಜ್ಜೆಗಳ ಸರವನ್ನು, ಕುಂಭದ ಮೇಲೆ ತೆಂಗಿನಕಾಯಿಯನ್ನು ಇಡಲಾಗಿದೆ. ಈ ಕುಂಬವು ಮಂಗಳ ಚಿಹ್ನೆಯನ್ನು ಸೂಚಿಸುತ್ತದೆ. ಇದೊಂದು ಸ್ಮಾರಕವಿರಬಹುದು. ಈ ಮಾದರಿಯ ಶಿಲ್ಪಗಳು ವಿರಳವಾಗಿವೆ. ಈ ಶಿಲ್ಪದ ಕಾಲ ಸು. ಕ್ರಿ.ಶ. 10ನೆಯ ಶತಮಾನ. ಈ ಮೇಲಿನ ಮಾದರಿಯ ನಾಗ–ನಾಗಿಣಿಯರ ಶಿಲ್ಪಗಳು ಕುರಕುಂಟಾ ಇನ್ನಿತರ ಕಡೆಗಳಲ್ಲಿವೆ. ಗಮನಿಸಬೇಕಾದ ಸಂಗತಿಯೆಂದರೆ ಈ ನಾಗ–ನಾಗಿಣಿಯರ ಶಿಲ್ಪಗಳ ಕೆಳಗಡೆ ಚೈತ್ಯ ನಮೂನೆಯಲ್ಲಿ ಮನುಷ್ಯರ ಮುಖಗಳನ್ನು ಚಿತ್ರಿಸಲಾಗಿದೆ. ಕಾಲ ಸು.ಕ್ರಿ.ಶ. 10ನೆಯ ಶತಮಾನ.

ನಾಗಗಳು (ಸರ್ಪರೂಪ): ನಾಗಸರ್ಪವುಳ್ಳ ಶಿಲ್ಪಗಳು ಕೊಡ್ಲ ಗ್ರಾಮದ ಶಂಭುಲಿಂಗ ಗುಡಿಯ ಪರಿಸರದಲ್ಲಿರುವ ಐದು ಶಿಲ್ಪಗಳು ಗಮನೀಯ. ಅದರ ಒಂದರಲ್ಲಿ. ಒಂಬತ್ತು ಹೆಡೆಯ ಸರ್ಪವಿದ್ದು ಅದರ ದೇಹಾಂಗ ಒಂದು ಸಾಲಿನಲ್ಲಿ ಎರಡು ಗಂಟುಗಲಂತೆ

ಸಮಾನಾಂತರ ಸಾಲುಗಳಲ್ಲಿ ಚಿತ್ರಿಸಲಾಗಿದೆ. ಮಧ್ಯದ ಹೆಡೆಕುತ್ತಿಗೆಗೆ ಚಿಕ್ಕ ರತ್ನ (?) ಪಟ್ಟಿಯಿರುವುದು ವಿಶೇಷ. ಅಲ್ಲಿಯ ಇನ್ನೊಂದು ಶಿಲ್ಪದಲ್ಲಿ ದಂಪತಿಗಳ (?) ಎರಡು ನಾಗಗಳಿವೆ. ಅವುಗಳು ಒಂದಕ್ಕೊಂದು ಗಂಟು ಹಾಕಿಕೊಂಡು ಕೂಡಿವೆ. ಒಂದರ ಏಳು ಹೆಡೆಗಳು ಇನ್ನೊಂದಕ್ಕೆ ಮೂರು ಹೆಡೆಗಳಿವೆ. ಐದು ಅರ್ಧವೃತ್ತಾಕಾರದಲ್ಲಿದೆ. ಇದರ ಕಾಲ ಸು. ಕ್ರಿ.ಶ. 10ನೆಯ ಶತಮಾನ.

ಭೈರವಿ: ಭೈರವಿಯ ಶಿಲ್ಪಗಳು ಈ ಭಾಗದಲ್ಲಿ ಮತ್ತು ಹಾಳಬಾಲ (ಟಿ) ಗ್ರಾಮದ ಹಾರಕೋಡ ಸ್ವಾಮಿ ಮಠದ ಮುಂದೆ, ಕುರಕುಂಟದ ಸಂಗಮೇಶ್ವರ ದೇವಾಲಯದ ಎದುರುಗಡೆ ಮಾತ್ರ ಕಂಡಿಬಂದಿದೆ. ಈಕೆಯು ಕುಳಿತ ಭಂಗಿಯಲ್ಲಿದ್ದು ಚತುರ್ಭುಜಧಾರಿಯಾಗಿದ್ದಾಳೆ. ಕೈಗಳಲ್ಲಿ ಕತ್ತಿ, ತ್ರೀಶೂಲ, ಡಮರುಮತ್ತು ಕಲಾಪಗಳಿವೆ. ಕಿರೀಟಮುಕುಟ, ಕುಂಡಲ, ಹಾರ, ಪಟ್ಟಿ, ಬಳೆ, ಕಡಗ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿರುವಳು. ರುಂಡಮಾಲೆಯನ್ನು ಧರಿಸಿರುವಳು. ಪ್ರಭಾಮಂಡಲಗಳಲ್ಲಿ ಪದ್ಮಗಳ ಅಲಂಕಾರ, ಪ್ರಭಾವಳಿಯ ಅರ್ಧವೃತ್ತಾಕಾರದಲ್ಲಿ ಸಮಾಂತರ ರೇಖೆಗಳಿವೆ. ಪೀಠದಲ್ಲಿ ಮಲಗಿದ ಶವವಿದೆ. ಬಾಯಿಯಿಂದ ಕೋರೆ ಹಲ್ಲುಗಳನ್ನು ತೋರಿಸುವುದು ಅಪರೂಪವೆನಿಸಿದೆ. ಈ ಶಿಲ್ಪದ ಕಾಲ ಸು. ಕ್ರ.ಶ. 10ನೆಯ ಶತಮಾನ. ಈ ಮಾದರಿಯ ಭೈರವಿಯ ಶಿಲ್ಪಗಳು ಬೀದರ ಮತ್ತು ಗುಲ್ಬರ್ಗಾ ಪ್ರದೇಶಗಳಲ್ಲಿ ವಿರಳ.

ಚಾಮುಂಡಿ: ಚಾಮುಂಡಿಯ ಶಿಲ್ಪಗಳು ಈ ಭಾಗದಲ್ಲಿ ವಿರಳ. ಈ ಶಿಲ್ಪವೊಂದು ಈ ಭಾಗದ ಕೊಡ್ಲ ಗ್ರಾಮದಿಂದ ಸುಮಾರು ಒಂದು ಕಿ.ಮೀ. ಅಂತರದಲ್ಲಿ ಮತ್ತು ಅಲ್ಲಿ ಶುಂಭುಲಿಂಗನ ಗುಡಿಯ ಹತ್ತಿರವಿರುವ ಚೌಡಮ್ಮನ ಗುಡಿಯಲ್ಲಿದೆ. ಈ ದೇವಿಯ ಶಿಲ್ಪವನ್ನು



ಆಯತಾಕಾರದ ಪೀಠದಲ್ಲಿ ಕೂರಿಸಲಾಗಿದೆ. ಈ ಪೀಠದಲ್ಲಿ ಮೂರು ಸಿಂಹಗಳಿವೆಈ
ದೇವಿಯ ಆಸನ ಪೀಠದಲ್ಲಿ ಬಲಭಾಗದ ಅಕ್ಕಪಕ್ಕ ಒಂದೊಂದು ರುಂಡಗಳ ಚಿಹ್ನೆಗಳಿವೆ. ಕುಳಿತ ಭಂಗಿಯಲ್ಲಿರುವ ಈಕೆಯ ಬಲಗಾಲು ಸ್ವಲ್ಪ ಮಡಚಿ ಕೆಳಗೆ ಇಳಿಬಿಟ್ಟ ಪ್ರತ್ಯೇಕವಾದ ದುಂಡನೆಯ ಪೀಠದ ಮೇಲಿಟ್ಟಿರುವುದು ಗಮನಾರ್ಹ. ಎಡಗಾಲನ್ನು ಮಡಿಚಿರುವಳು. ಈಕೆಯು ಚತುರ್ಭುಜಧಾರಿಯಾಗಿದ್ದಾಳೆ. ಕೈಗಳಲ್ಲಿ ಕತ್ತಿ, ಚಕ್ರ, ಶಂಖ ಮತ್ತು ಕಮಲಗಳಿವೆ. ಈ ದೇವಿಯ ಕೈಗಳ ಬದಿಯಲ್ಲಿ ಸಿಂಹಸವಾರರಿದ್ದಾರೆ. ದೇವಿಯ

ತಲೆಯ ಬದಿಗೆ ಒಬ್ಬೊಬ್ಬ ಚೌರಿ ಹಿಡಿದು ನಿಂತ ಸೇವಕಿಯರಿದ್ದಾರೆ. ಈ ಸೇವಕಿಯರ ಕೈಗಳು ವರದ ಮುದ್ರೆಯಲ್ಲಿವೆ. ಈಕೆಯ ಜಟಾಮುಕುಟ ಎತ್ತರದ ಕೊಳವೆಯಂತಿದೆ. ಪ್ರಭಾಮಂಡಲವಿದೆ. ಓಲೆಗಳು, ಮಣಿಮುತ್ತಿನ ಮೂರು ಸರಗಳು, ಹಾರ, ದುಂಡುಪಟ್ಟಿ, ದುಂಡಾದ ಬಳೆಗಳು, ಕಡಗಗಳು ಇತ್ಯಾದಿ ಆಭರಣಗಳನ್ನು ಧರಿಸಿರುವಳು. ಈ ಶಿಲ್ಪದ ಪ್ರಭಾವಳಿ ಅರ್ಧವೃತ್ತಾಕಾರದಲ್ಲಿದೆ. ಈ ಮಾದರಿಯ ಶಿಲ್ಪವು ಬೀದರ, ಗುಲ್ಬರ್ಗ ಪ್ರದೇಶಗಳಲ್ಲಿಯೇ ವಿರಳ. ಅದರ ಕಾಲ ಸು. ಕ್ರಿ.ಶ. 10ನೆಯ ಶತಮಾನ. ಇದೊಂದು ಜೈನಯಕ್ಷಿ ಇರಬಹುದೇ? ಆದರೆ ಕಿರೀಟ ಮುಕುಟದಲ್ಲಾಗಲಿ, ಅಥವಾ ಪೀಠದಲ್ಲಾಗಲಿ ಜಿನಬಿಂಬವಿಲ್ಲ.

ಮಾಲಗತ್ತಿ (ಸುರಪುರ ತಾ.) ಗ್ರಾಮದ ಪೂರ್ವಕ್ಕೆ ಅಣಿಕೇರಿ ಬಸವಂತ್ರಾಯನ ಹೊಲದಲ್ಲಿ ಕಾಲುವೆಯನ್ನು ಅಗೆಯುವಾಗ ಸಿಕ್ಕ ಒಂದು ಭವ್ಯವಾದ ಚಾಮುಂಡಿ ವಿಗ್ರಹವನ್ನು ನಮ್ಮ ವಿದ್ಯಾರ್ಥಿ ಎನ್.ಎಚ್. ದೇಸಾಯಿ ಬೆಳಕಿಗೆ ತಂದರು. ಪದ್ಮಾಸನದಲ್ಲಿ ಕುಳಿತ ಈ ದೇವಿಯು ಚತುರ್ಭುಜ ಧಾರಿಣಿ. ಕೆಳ ಬಲಗೈ ಅಭಯ ಹಸ್ತದಲ್ಲಿ ರುದ್ರಾಕ್ಷಿ ಮಾಲೆಯಿದೆ. ಮೇಲಿನ ಕೈಯಲ್ಲಿ ಡಮರು ಇದೆ. ಮೇಲಿನ ಎಡಗೈಯಲ್ಲಿ ಖಟ್ವಾಂಗವಿದೆ. ಕೆಳಗಿನ ಎಡಗೈಯಲ್ಲಿ ಕಮಲವಿದೆ. ಕಿರೀಟ ಮುಕುಟ, ಓಲೆ, ಸರ, ತೋಳಬಳೆ, ಕೈಬಳೆ, ಪಟ್ಟಿ, ವಸ್ತ್ರ ಇತ್ಯಾದಿ ವಸ್ತ್ರಾಭರಣಗಳಿಂದ ಅಲಂಕೃತವಾಗಿರುವಳು. ದೇಹಕ್ಕೆ ರುಂಡಮಾಲೆಯನ್ನು ವಿಶೇಷವಾಗಿ ಧರಿಸಿದ್ದಾಳೆ. ಮತ್ತೊಂದು ವಿಶಿಷ್ಟ ಅಂಶವೆಂದರೆ ದೇವಿಯ ತಲೆಯ ಸುತ್ತಲಿನ ಮಕರ ತೋರಣದ ಅಲಂಕರಣದಲ್ಲಿ ಹೂಬಳ್ಳಿಗಳ ವೃತ್ತಗಳ ಸಾಲಿದೆ. (ಕ್ರಿ.ಶ. 10–11ನೆಯ ಶತಮಾನ).

ಮಹಿಷಾಸುರಮರ್ದಿನಿ: ಶಿರವಾಳದಲ್ಲಿ ಈ ಕಾಲದ ಎರಡು ಮಹಿಷಾಸುರಮರ್ದಿನಿಯರ ಉಬ್ಬು ಶಿಲ್ಪಗಳಿವೆ. ಒಂದು ಊರಿನ ಹಳ್ಳದ ದಂಡೆಯಲ್ಲಿದೆ. ದೇವಿಯ ಕೋಣದ ಮೇಲೆ ಎಡಗಾಲನ್ನು ಮೆಟ್ಟಿ ನಿಂತಿದ್ದಾಳೆ. ಮೇಲಿನ ಬಲಗೈಯಿಂದ ತ್ರಿಶೂಲವನ್ನು ಅದಕ್ಕೆ ಇರಿದಿರುವಳು. ಕೆಳ ಎಡಗೈಯಿಂದ ಇದರ ಮುಖವನ್ನು ಬಿಗಿಯಾಗಿ ಹಿಡಿದಿದ್ದಾಳೆ. ಮುಖ, ಕುಚ ಇತ್ಯಾದಿ ಭಾಗಗಳು ಒಡೆದಿವೆ. ಉಳಿದ ಕೈಗಳಲ್ಲಿ ಕತ್ತಿ ಮತ್ತು ಶಂಖಗಳಿವೆ. ಆಕೆಯ ವಾಹನ ಸಿಂಹ ಬಲಗಡೆಯಿದೆ. ವಸ್ತ್ರಾಭರಣ ಧರಿಸಿದ್ದಾಳೆ. ಇನ್ನೊಂದು ಈ ಕಾಲದ ಶಿಲ್ಪದಲ್ಲಿ ದೇವಿಯು ತನ್ನ ಎಡಗಾಲನ್ನು ಕೋಣದ ಮುಖದ ಮೇಲೆ ಮೆಟ್ಟಿದ್ದಾಳೆ. ಕೆಳ ಎಡಗೈಯಿಂದ ಇದರ ಬಾಲವನ್ನು ಮೇಲಕ್ಕೆ ಎತ್ತಿ ಹಿಡಿದಿರುವಳು. ಕೆಳ ಬಲಗೈಯಿಂದ ತ್ರಿಶೂಲವನ್ನು ಇದರ ಶಿರಕ್ಕೆ ಇರಿದಿದ್ದಾಳೆ. ಉಳಿದ ಕೈಗಳಲ್ಲಿ ಚಕ್ರ, ಬಿಲ್ಲು, ಶಂಖ ಮತ್ತು ಬಾಣಗಳಿವೆ. ವಸ್ತ್ರಾಭರಣಧಾರಿಯಾಗಿದ್ದಾಳೆ.

ಶಹಪೂರ ನಗರದ (ಶಹಪುರ ತಾ.) ದೇವಿಗುಡಿಯಲ್ಲಿರುವ ಮಹಿಷಾಸುರಮರ್ದಿನಿ ಶಿಲ್ಪ ವಿಶಿಷ್ಟವೆನಿಸಿದೆ. ತಲೆಯಲ್ಲಿಯ ಕೇಶಾಲಂಕಾರವು ಉಂಗುರ ಉಂಗುರವಾಗಿದೆ. ಕಿರೀಟ ಮುಕುಟವಿಲ್ಲ. ಎಂಟು ಭುಜಗಳುಳ್ಳ ಈ ದೇವಿಯು ಬಲಗೈಯಲ್ಲಿ ಹಿಡಿದು ತ್ರಿಶೂಲದಿಂದ ಕಾಲಿಂದ ಮೆಟ್ಟಿದ ಸುರನ ಹೊಟ್ಟೆಗೆ ಇರಿದಿದ್ದಾಳೆ. ಕೈಗಳಲ್ಲಿ ಬಾಣ, ಗದಾ, ಚಕ್ರ, ಶಂಖ, ಬಿಲ್ಲು, ಕಪಾಲ, ಗುರಾಣಿಗಳಿವೆ. ಒಂದು ಕೈಯಿಂದ ಸುರನನ್ನು ಒತ್ತಿ ಹಿಡಿದಿದ್ದಾಳೆ. ಹಣೆಯ ನಡುವೆ ಮೂರನೆಯ ಕಣ್ಣಿದೆ. ಮಾವಿನಕಾಯಿ ನಮೂನೆಯ ಸರ ಧರಿಸಿದ್ದಾಳೆ.

ಇದರ ಕಾಲ ಸುಮಾರು ಕ್ರಿ.ಶ. 10ನೆಯ ಶತಮಾನ. (ಇ.ದ.,ಸಂ.14, ಪು.24) ಈ ಭಾಗದಲ್ಲಿ ಮಹಿಷಾಸುರಮರ್ದಿನಿ ಶಿಲ್ಪಗಳು ಕುಕ್ಕುಂದ ಹತ್ತಿರ ತೆಲ್ಲೂರ, ತುರನೂರ ಇತ್ಯಾದಿ ಸ್ಥಳಗಳಲ್ಲಿವೆ. ಈ ಶಿಲ್ಪಗಳಲ್ಲಿ ದೇವಿಗೆ ನಾಲ್ಕು ಅಥವಾ ಎಂಟು ಕೈಗಳಿವೆ. ಕುಕ್ಕುಂದ ಗ್ರಾಮದಿಂದ ಉತ್ತರಕ್ಕೆ ಎರಡು ಕಿ.ಮೀ. ಅಂತರದಲ್ಲಿ ಪ್ರಸಿದ್ಧ ಭವಾನಿ ಗುಡಿಯಲ್ಲಿ ಒಂದು ಮಹಿಷಾಸುರಮರ್ದಿನಿ ಶಿಲ್ಪವಿದೆ. ತುರನೂರಿನ ಶಿಲ್ಪದಲ್ಲಿ ದೇವಿಯು ಚತುರ್ಭುಜದಾರಿಣಿಯಾಗಿದ್ದಾಳೆ. ಎರಡೂ ಕೈಗಳೂ ಒಡೆದಿವೆ. ಒಂದು ಕೈಯಿಂದ ಕೋಣದ ನಾಲಿಗೆಯನ್ನು ಬಿಗಿಯಾಗಿ ಹಿಡಿದಿರುವಳು. ಕೋಣದ ಬೆನ್ನಿಗೆ ತ್ರಿಶೂಲದಿಂದ ಇರಿದಿದ್ದಾಳೆ. ಇನ್ನೊಂದು ಕೈಯಲ್ಲಿ ಚಕ್ರವಿದೆ. ಈಕೆಯ ಬಲಗಡೆ ಕೆಳಗೆ ಸಿಂಹವಿದೆ. ಈ ಶಿಲ್ಪದ ಕಾಲ ಸು. ಕ್ರಿ.ಶ. 10ನೆಯ ಶತಮಾನ. ಕೊಲ್ಲೂರಿನಲ್ಲಿ ಸಿಕ್ಕ ಮಹಿಷಾಸುರ ಮರ್ದಿನಿ ಶಿಲ್ಪದಲ್ಲಿ ದೇವಿಯು ಚತುರ್ಭುಜಧಾರಿಣಿಯಾಗಿದ್ದಾಳೆ. ಎರಡು ಕೈಗಳೂ ಒಡೆದಿವೆ. ಒಂದು ಕೈಯಿಂದ ಕೋಣದ ನಾಲಿಗೆಯನ್ನು ಬಿಗಿಯಾಗಿ ಹಿಡಿದಿರುವಳು. ಕೋಣದ ಬೆನ್ನಿಗೆ ತ್ರಿಶೂಲದಿಂದ ಇರಿದಿದ್ದಾಳೆ. ಇನ್ನೊಂದು ಕೈಯಲ್ಲಿ ಚಕ್ರವಿದೆ. ಈಕೆಯ ಬಲಗಡೆ ಕೆಳಗೆ ಸಿಂಹವಿದೆ.

ಈ ಶಿಲ್ಪದ ಕಾಲ ಸು. ಕ್ರಿ.ಶ. 10ನೆಯ ಶತಮಾನ. ಕೊಲ್ಲೂರಿನಲ್ಲಿ ಸಿಕ್ಕ ಮಹಿಷಾಸುರ ಮರ್ದಿನಿ ಶಿಲ್ಪದಲ್ಲಿ ದೇವಿಗೆ ಮೂರು ಕಣ್ಣುಗಳಿವೆ. ಶಹಪುರದಲ್ಲಿ ಎಂಟು ಕೈಗಳಿವೆ. ಇವುಗಳಲ್ಲಿ ತ್ರಿಶೂಲದಿಂದ ಸುರನಿಗೆ ಇರಿಯುತ್ತಿರುವುದು ಬಾಣ, ಗದಾ, ಚಕ್ರ, ಶಂಖ, ಬಿಲ್ಲು, ಕಪಾಲ, ಗುರಾಣಿ ಮತ್ತು ಸುರನನ್ನು ಒಂದು ಕೈಯಿಂದ ಹಿಡಿದಿದ್ದಾನೆ.

ಭೈರವಿ: ಭೈರವಿಯ ಶಿಲ್ಪಗಳು ಈ ಭಾಗದಲ್ಲಿ ಮತ್ತು ಹಾಳಬಾಳ (ಟಿ) ಗ್ರಾಮದ ಹಾರಕೋಡ ಸ್ವಾಮಿ ಮಠದ ಮುಂದೆ, ಕುರಕುಂಟದ ಸಂಗಮೇಶ್ವರ ದೇವಾಲಯದ ಎದುರುಗಡೆ ಮಾತ್ರ ಕಂಡುಬಂದಿವೆ. ಈಕೆಯು ಕುಳಿತ ಭಂಗಿಯಲ್ಲಿದ್ದು ಚತುರ್ಭುಜಧಾರಿಯಾಗಿದ್ದಾಳೆ. ಕೈಗಳಲ್ಲಿ ಕತ್ತಿ, ತ್ರಿಶೂಲ, ಡಮರು ಮತ್ತು ಕಲಾಪಗಳಿವೆ. ಕಿರೀಟಮುಕುಟ, ಕುಂಡಲ, ಹಾರ, ಪಟ್ಟಿ, ಬಳೆ, ಕಡಗ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿರುವಳು. ರುಂಡಮಾಲೆಯನ್ನು ಧರಿಸಿರುವಳು. ಪ್ರಭಾಮಂಡಲಗಳಲ್ಲಿ ಪದ್ಮಗಳ ಅಲಂಕಾರ,

ಪ್ರಭಾವಳಿಯ ಅರ್ಧವೃತ್ತಾಕಾರದಲ್ಲಿ ಸಮಾಂತರ ರೇಖೆಗಳಿವೆ. ಪೀಠದಲ್ಲಿ ಮಲಗಿದ ಶವವಿದೆ. ಬಾಯಿಯಿಂದ ಕೋರೆ ಹಲ್ಲುಗಳನ್ನು ತೋರಿಸಿರುವುದು ಅಪರೂಪವೆನಿಸಿದೆ. ಈ ಶಿಲ್ಪದ ಕಾಲ ಸು. ಕ್ರಿ.ಶ. 10ನೆಯ ಶತಮಾನ. ಈ ಮಾದರಿಯ ಭೈರವಿಯ ಶಿಲ್ಪಗಳು ಬೀದರ ಮತ್ತು ಗುಲ್ಬರ್ಗಾ ಪ್ರದೇಶಗಳಲ್ಲಿ ವಿರಳ.

ಗಜಲಕ್ಷ್ಮೀ: ಕೊಡ್ಲ ಗ್ರಾಮದ ಮಾರುತಿ ಮಂದಿರದ ಹತ್ತಿರ ಗಜಲಕ್ಷ್ಮೀ ಶಿಲ್ಪವಿದೆ. ಈಕೆಯ ಮತ್ತು ಆನೆಗಳ ಅಕ್ಕಪಕ್ಕ ಸೇವಕಿಯರಿದ್ದಾರೆ. ಎರಡು ಆನೆಗಳು ದೇವಿಯನ್ನು ಅಭಿಷೇಕ ಮಾಡಿಸುತ್ತಿವೆ. ಇದರ ಸು. ಕ್ರಿ.ಶ. 10ನೆಯ ಶತಮಾನ. ಈ ಮಾದರಿಯ ಶಿಲ್ಪಗಳು ಈ ಪ್ರದೇಶದಲ್ಲಿ ವಿರಳ ಮತ್ತು ಧಾರವಾಡ ಜಿಲ್ಲೆಯ ಹಾನಗಲ್ಲ ತಾಲೂಕಿನ ಅಕ್ಕಿ ಆಲೂರು ಇತ್ಯಾದಿ ಕಡೆಗಳಲ್ಲಿರುವುದು ಲೇಖಕರ ಗಮನಕ್ಕೆ ಬಂದಿದೆ.

ಅಧ್ಯಾಯ– 6

ಜೈನ ಶಿಲ್ಪಗಳು

ಅಧ್ಯಾಯ– 6

ಜೈನ ಶಿಲ್ಪಗಳು

ಜೈನ ಶಿಲ್ಪಗಳು: ಜೈನಧರ್ಮದ ಶಿಲ್ಪಗಳು ಸೇಡಂ ತಾಲೂಕಿನ ಸೇಡಂ, ಅಡಕಿ, ಮಳಖೇಡ, ಕುರಕುಂಟಾ, ಬೆಟಗೇರ ಇನ್ನಿತರ ಕಡೆಗಳಲ್ಲಿವೆ. ಈ ಜಿಲ್ಲೆಯಲ್ಲಿ ಜೈನರ ಅನೇಕ ಪ್ರಮುಖ ಕೇಂದ್ರಗಳಿದ್ದವು. ಮಳಖೇಡ ಗ್ರಾಮದಲ್ಲಿ ಜೈನ ಶಿಲ್ಪಾವಶೇಷಗಳಿವೆ.

ಮಹಾವೀರ: ಈ ಜಿಲ್ಲೆಯಲ್ಲಿ ಈ ಕಾಲದ ಕೆಲವು ಮಹಾವೀರನ ಶಿಲ್ಪಗಳು ಅಲ್ಲಲ್ಲಿ ಕಂಡುಬಂದಿವೆ. ಕುಳಿತ ಭಂಗಿಯಲ್ಲಿರುವ ಈತನ ಬಹು ಸುಂದರವಾದ ಶಿಲ್ಪ ಗುಲಬರ್ಗಾದ ವಸ್ತು ಸಂಗ್ರಹಾಲಯದಲ್ಲಿದೆ. ಇದನ್ನು ಹರಸೂರಿನಿಂದ ಸ್ಥಳಾಂತರಿಸಲಾಗಿದೆ ಎನ್ನುವರು. ಪದ್ಮಾಸನದಲ್ಲಿ ಕುಳಿತಿರುವನು. ತಲೆಯ ಬದಿಗಳಲ್ಲಿ ಸೇವಕರಿದ್ದಾರೆ. ತಲೆಯ ಮೇಲೆ ಮುಕ್ಕೊಡೆಯಿದೆ. ಬದಿಗಳಲ್ಲಿ ಲತಾಸುರುಳಿಗಳು ಮತ್ತು ಮೇಲೆ ಕೀರ್ತಿಮುಖ ಇರುವುದು. ಈ ಲತಾ ಸುರುಳಿಗಳು ಬದಿಗಳಲ್ಲಿಯ ಮಕರಗಳಿಂದ ಬಂದಿವೆ. (ಚಿತ್ರ 202) ಈ ಸ್ಥಳದ ಇನ್ನೊಂದು ಮಹಾವೀರ ಶಿಲ್ಪದಲ್ಲಿ ಮಕರ ತೋರಣ, ಲತಾಸುರುಳಿ ಮತ್ತು ಕೀರ್ತಿಮುಖದ ಅಲಂಕಾರಗಳಿಲ್ಲ (ಚಿತ್ರ 160). ಮತ್ತೊಂದು ಮಹಾವೀರ ಶಿಲ್ಪದಲ್ಲಿ ಮಕರಗಳು ಸೇವಕಿಯರು, ಮುಕ್ಕೊಡೆ, ನಡುವೆ ಪದ್ಮಾಸನದಲ್ಲಿ ಮಹಾವೀರನು ಕುಳಿತಿರುವನು. ಸಮಭಂಗಿಯಲ್ಲಿ ನಿಂತಿರುವನು. ತಲೆಯ ಮೇಲೆ ಮುಕ್ಕೊಡೆ ಮತ್ತು ಅದರ ಮೇಲೆ ಜಿನಬಿಂಬ, ತಲೆಯ

ಬದಿಗಳಲ್ಲಿ ಚೌರಿ ಚಿಹ್ನೆಗಳು, ಪಾದದ ಬದಿಯಲ್ಲಿ ಯಕ್ಷ-ಯಕ್ಷಿಯರು, ಪಾದ ಪೀಠದಲ್ಲಿ ಮಧ್ಯ ಮುಂದಕ್ಕೆ ಮುಖಮಾಡಿ ಕುಳಿತ ಸಿಂಹ, ಈ ಸಿಂಹದ ಬದಿಗಳಲ್ಲಿ ಕುಳಿತ ಎರಡು ಸಿಂಹಗಳು, ಈ ಶಿಲ್ಪದ ಪ್ರಭಾವಳಿ ತ್ರಿಕೋನಾಕಾರದಲ್ಲಿದೆ. ಮತ್ತು ಅದರ ಕಾಲಮಾನ ಕ್ರಿ.ಶ. 10ನೆಯ ಶತಮಾನ.

ಬಸದಿ:



ಕೇಶ್ವರ (ಚಿಂಚೋಳ್ಳಿ ತಾ.) ಗ್ರಾಮದ ಕುಂಬಾರ ಓಣಿಯಲ್ಲಿ ಪಾರ್ಶ್ವನಾಥನ ಬಸದಿಯಿದೆ. ಅಲ್ಲಿಯ ಒಂದು ಶಾಸನದ ಪ್ರಕಾರ ಮಸಣಯ್ಯನು ಈ ಪಾರ್ಶ್ವನಾಥನ ಚೈತ್ಯಾಲಯವನ್ನು ನಿರ್ಮಿಸಿದನೆಂದು ಮತ್ತು ಕ್ರಿ.ಶ. 1385ರಲ್ಲಿಯ ಇನ್ನೊಂದು ಶಾಸನದ ಪ್ರಕಾರ ಈ ಬಸದಿಯನ್ನು ಜೀರ್ಣೋದ್ಧಾರ ಮಾಡಲಾಯಿತೆಂದು ತಿಳಿಯುತ್ತದೆ. ಪಾಳುಬಿದ್ದ ಈ ಬಸದಿಯು ಪೂರ್ವಾಭಿಮುಖವಾಗಿದೆ. ತಳಪಾಯಕ್ಕೆ ತೆರೆದ ಅಂತರಾಳ, ನವರಂಗ ಮತ್ತು ಮುಖಮಂಟಪಗಳಿವೆ. ಇದು ಸು. ಕ್ರಿ.ಶ. 10ನೆಯ ಶತಮಾನದ್ದು.

ಪಾರ್ಶ್ವನಾಥ: ಸೇಡಂ ನಗರದ ಜೈನಬಸದಿಯ ಗರ್ಭಗೃಹದಲ್ಲಿ ಪಾರ್ಶ್ವನಾಥನ ಬೃಹತ್ ಶಿಲ್ಪವಿದೆ. ಈ ಶಿಲ್ಪದಲ್ಲಿ ಪಾರ್ಶ್ವನಾಥನು ಸಮಭಂಗದಲ್ಲಿದ್ದು ತಲೆಯ ಮೇಲೆ ಏಳು ಸರ್ಪದ ಹೆಡೆಗಳಿವೆ. ಆ ಹೆಡೆಗಳ ಮೇಲೆ ಮುಕ್ಕೊಡೆ ಮತ್ತು ಪೀಠದಲ್ಲಿ ಬದಿಗೆ ಮುಖಮಾಡಿ ನಿಂತ ಸಿಂಹಗಳ ಮಧ್ಯೆ ಎದುರು ಮುಖಮಾಡಿ ನಿಂತ ಸಿಂಹವಿದೆ. ಪಾರ್ಶ್ವನಾಥನ ಕುತ್ತಿಗೆಯ ಬದಿಗಳಲ್ಲಿ ಜಿನಬಿಂಬಗಳು, ಅವರ ಕೆಳಗಡೆ ಚೌರಿಗಳು, ತೋಳ ಬದಿಗಳಲ್ಲಿ ಜೋಡಿ ಅರ್ಧಗಂಭಗಳಿಂದ ಆವೃತ್ತವಾಗಿರುವ ಗೂಡಗಳಲ್ಲಿ ಸಮಭಂಗಿಯ ಮಹಾವೀರರಿದ್ದಾರೆ. ಪಾರ್ಶ್ವನಾಥನ ಬದಿಗೆ ಧರಣೇಂದ್ರ ಯಕ್ಷ ಮತ್ತು ಪದ್ಮಾವತಿಯರಿದ್ದಾರೆ.

ಈ ಮೇಲಿನ ಬಸದಿಯ ನವರಂಗದಲ್ಲಿ ಪದ್ಮಾಸನದಲ್ಲಿರುವ ಪಾರ್ಶ್ವನಾಥನ ಶಿಲ್ಪವಿದೆ. ಈ ಶಿಲ್ಪದಲ್ಲಿ ಪಾರ್ಶ್ವನಾಥನ ಕೈಗಳು ಯೋಗಮುದ್ರೆಯಲ್ಲಿವೆ. ನಾಗನ ಏಳು ಹೆಡೆಗಳು ತಲೆ ಸುತ್ತಲಿವೆ. ಹೆಡೆಗಳ ಮೇಲೆ ಮುಕ್ಕೊಡ, ಅದರ ಮೇಲೆ ಕೀರ್ತಿಮುಖ, ಬದಿಗೆ ಅಪ್ಸರೆಯರು

ಎರಡು ಅರ್ಧಗಂಭಗಳ ಮೇಲೆ ಅಡ್ಡವಾಗಿ ಕೂಡಿಸಿರುವ ಮಕರಪಟ್ಟಿ, ಅದಕ್ಕೆ ಬೆನ್ನನ್ನು ಅನಿಸಿ ಕುಳಿತಿರುವನು. ಚೌರಿ ಹಿಡಿದು ನಿಂತಿರುವ ಸೇವಕಿಯರು ಅರ್ಧಗಂಭಗಳ ಬದಿಗೆ ಮತ್ತು ಮಕರಪಟ್ಟಿಗಳ ಮೇಲೆ ನಿಂತಿರುವನು. ಈ ಶಿಲ್ಪದ ಪ್ರಭಾವಳಿ ಪಟ್ಟಿ ಸರವಾಗಿದೆ. ಅದು ಸಮಾರಾಗಿ ಅರ್ಧವೃತ್ತಾಕಾರದಲ್ಲಿದೆ. ಅದರ ಕಾಲಮಾನ ಕ್ರಿ.ಶ. 11–12ನೆಯ ಶತಮಾನ.

ಚೌವೀಸ್ ತೀರ್ಥಂಕರ :



ಅಡಕಿ ಗ್ರಾಮದ ಮಾರುತಿ ಮಂದಿರದ ಬದಿಗೆ ಚೌವೀಸ್ ತೀರ್ಥಂಕರ ಶಿಲ್ಪವಿದ್ದು ಅದರ ಮುಖ, ತೊಡೆ, ಕೈಭಾಗಗಳು ಮುಕ್ಕಾಗಿವೆ. ಈ ಶಿಲ್ಪದ ಮಧ್ಯ ಪ್ರಮುಖವಾಗಿ ಒಬ್ಬ ತೀರ್ಥಂಕರ ಪದ್ಮಪೀಠದ ಮೇಲೆ ಪದ್ಮಾಸನದಲ್ಲಿ ಯೋಗಮುದ್ರೆಯಲ್ಲಿರುವನು. ತಲೆಯ ಮೇಲೆ ಮುಕ್ಕೊಡೆ ಹಾಗೂ ತಲೆಯ ಸುತ್ತಲೂ ಸರಳ ಪ್ರಭಾಮಂಡಲ, ಚೌಕಾದ ದಿಂಬಿಗೆ ಬೆನ್ನು ಅನಿಸಿ ಕುಳಿತಿರುವನು. ಪೀಠದಲ್ಲಿರುವ ಚಿತ್ರಗಳು ಮುಕ್ಕಾಗಿವೆ. ಪೀಠದ ಅಂಚಿನಲ್ಲಿ ಯಕ್ಷ-ಯಕ್ಷಿಯರನ್ನು ಚಿಕ್ಕಗೂಡಿನಲ್ಲಿ ತೋರಿಸಲಾಗಿದೆ. ತೀರ್ಥಂಕರನ ದೇಹಾಂಗದ ಬದಿಗಳಲ್ಲಿ ಏಳುಹೆಡೆಗಳುಳ್ಳ ಸರ್ಪವುಳ್ಳ ಸಮಭಂಗದಲ್ಲಿರುವ ಪಾರ್ಶ್ವನಾಥರು ತಲೆಯ ಬದಿಗಳಲ್ಲಿ ಮೊದಲು ಚೌರಿಗಳು ನಂತರ ಜಿನಗಳು, ಒಂದೊಂದು ಮುಕ್ಕೊಡೆ, ತಲೆ ಭಾಗದ ಬದಿಗಳಲ್ಲಿ ಎರಡೆರಡು ಮತ್ತು ಅದರ ಬದಿಗಳಲ್ಲಿ ಮೂರು ಮೂರು ಹಾಗೂ ಅದರ ಮೇಲೆ ಎರಡು ಸಾಲುಗಳು ಕ್ರಮವಾಗಿ ಐದು ಮತ್ತು ನಾಲ್ಕು ಜಿನಬಿಂಬಗಳಿವೆ. ಆದರೆ ಮೇಲಿನ ಸಾಲಿನಲ್ಲಿ ಮಧ್ಯದ ಇಬ್ಬರು ತೀರ್ಥಂಕರರು ಸಮಭಂಗಿಯಲ್ಲಿ ನಿಂತಿದ್ದಾರೆ. ಉಳಿದವರು ಪದ್ಮಾಸನದಲ್ಲಿ ಕುಳಿತಿರುವರು. ಈ ಎಲ್ಲ ತೀರ್ಥಂಕರರು ಮುಂಚಾಚಿದ ಪೀಠಗಳ ಮೇಲೆ ಆಸೀನರಾಗಿದ್ದಾರೆ. ಈ ಶಿಲ್ಪದ ಕಾಲ ಸು. ಕ್ರಿ.ಶ. 10–11ನೇ ಶತಮಾನ. ಈ ಶಿಲ್ಪದ ಪ್ರಭಾವಳಿ ತ್ರಿಕೋನಾಕಾರದಲ್ಲಿದೆ.

ವೃಷಭನಾಥ: ಕೆಂಬಾವಿ (ಸುರಪುರ ತಾ.) ಮಾದರಿ ಪ್ರಾಥಮಿಕ ಶಾಲೆಯ ಆವರಣದಲ್ಲಿ ವೃಷಭನಾಥನ ವಿಗ್ರಹವನ್ನು ಶ್ರೀ ನಿಂಗನಗೌಡ ದೇಸಾಯಿ ವರದಿ ಮಾಡಿದ್ದಾರೆ.

ಕಿವಿ, ಮುಖ, ಮೂಗು, ಮುಕ್ಕಾಗಿ ಇದೊಂದು ಬೃಹತ್ (3x2) ದುಂಡು ಶಿಲ್ಪದಲ್ಲಿ ತೀರ್ಥಂಕರ ಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತಿದ್ದಾನೆ. ಕೈಗಳು ಯೋಗ ಮುದ್ರೆಯಲ್ಲಿವೆ. ತಲೆಯಲ್ಲಿ ಉಂಗುರ ಕೂದಲುಗಳಿದ್ದು ಅವುಗಳು ಆತನ ಭುಜಗಳ ಮೇಲೂ ಬಿದ್ದಿವೆ. ತಲೆಯ ಸುತ್ತ ವೃತ್ತಾಕಾರದ ಸರಳ ಪ್ರಭಾವಳಿಯಿದೆ. ಸೊಂಟ ದುಂಡಾಗಿ ಮತ್ತು ಸ್ವಲ್ಪ ದಪ್ಪವಾಗಿದೆ. ಪೀಠದಲ್ಲಿ ವೃಷಭದ ಚಿನ್ಹೆ ಇರುವುದರಿಂದ ಈತ ಋಷಭನಾಥನೆಂದು ಗುರುತಿಸಲಾಗಿದೆ. (10ನೇ ಶತಮಾನ). ಇದೇ ರೀತಿಯ ಈ ಕಾಲದ ತೀರ್ಥಂಕರ ಶಿಲ್ಪ ಗುಲ್ಬರ್ಗ ವಸ್ತು ಸಂಗ್ರಹಾಲಯದಲ್ಲಿದೆ. ಅದರ ಪ್ರಭಾವಳಿ ಭಾಗ ಮುಂದಿದೆ. ಅಲ್ಲಿ ಕೇಶವು ಭುಜಗಳ ಮೇಲೆ ಹರಿದಿಲ್ಲ ಮತ್ತು ವಾಹನ ಚಿನ್ಹೆಯಿಲ್ಲ.

ತೀರ್ಥಂಕರ: ಬೆಟಗೇರಿ(ಬಿ) ಗ್ರಾಮದ ಬತ್ತಲಗುಡಿಯಲ್ಲಿ ಕುಳಿತ ತೀರ್ಥಂಕರನ ಶಿಲ್ಪವಿದೆ.



ತಲೆಯಲ್ಲಿ ಉಂಗುರಗೂದಲನ್ನು ಅಪೂರ್ವವಾಗಿ ಚಿತ್ರಿಸಲಾಗಿದೆ. ಕಿವಿಗಳು ಭುಜಕ್ಕೆ ಮುಟ್ಟಿವೆ. ಈ ಶಿಲ್ಪದ ಕಾಲ ಸು. ಕ್ರಿ.ಶ. 11ನೆಯ ಶತಮಾನ. ಕೊಳಕುಂದ ಮತ್ತು ಈ ಗ್ರಾಮದಲ್ಲಿ (ಒಂದು ಗೂಡಿನಲ್ಲಿ) ಕಾಲು ಮತ್ತು ಕೈಗಳು ಒಡೆದ ಪಾರ್ಶ್ವನಾಥನ ಶಿಲ್ಪಗಳಿವೆ. ಪಾರ್ಶ್ವನಾಥನ ಬದಿಗಳಲ್ಲಿ ಅರ್ಧಗಂಭಗಳುಳ್ಳ ತೋರಣವಿದೆ.

ಸ್ತಂಭಶಿಲ್ಪ: ಅಡಕಿ ಗ್ರಾಮದ ಮಾರುತಿ ಮಂದಿರದ ಮುಂದಿನ ಒಂದು ಕಂಬದ ಮೇಲೆ ಒಂದು



ದುಂಡಾಕಾರದ ಶಿಲ್ಪ (ಅರೆಕಂಬದಂತೆ) ಪಟ್ಟಿಯಿದೆ. ಅದರ ಸುತ್ತಲೂ ಅರ್ಧಗಂಭಗಳಿವೆ. ಈ ಜಿನಬಿಂಬಗಳು ಜೈನಯತಿಗಳಿರಬಹುದೆಂದು ಸಂಶಯ ಬರುತ್ತದೆ. ಏಕೆಂದರೆ ಕೆಲವರಿಗೆ ಗಡ್ಡಗಳಿವೆ. ಈ ದುಂಡು ಶಿಲ್ಪಪಟ್ಟಿಕೆಯ ಮೇಲೆ ಪದ್ಮದಳಗಳ ಅಲಂಕರಣವಿದೆ. ಈ ಮಾದರಿಯ ಶಿಲ್ಪಗಳು ಜೈನಧರ್ಮದಲ್ಲಿ ವಿರಳವೆನ್ನಬಹುದು. ಸೇಡಂ ನಗರದ ಬಸದಿಯಲ್ಲಿ ನಾಲ್ಕೈದು ಯಕ್ಷಿಣಿಯರ ಶಿಲ್ಪಗಳಿರುವುದು ವಿಶೇಷವೆನ್ನಬಹುದು. ಅವುಗಳು ಸರಸ್ವತಿ, ಅಂಬಿಕ, ಜ್ವಾಲಾಮಾಲಿನಿ ಇತ್ಯಾದಿ.

ಅಂಬಿಕ: ಈ ಮೇಲಿನ ಶಿಲ್ಪಗಳ ಬದಿಯಲ್ಲಿ ಎತ್ತರದ ತ್ರಿಭಂಗಿಯಲ್ಲಿ ಅಂಬಿಕೆಯ ಒಂದು ಶಿಲ್ಪವಿದ್ದು ಆಕೆಯ ಎರಡೂ ಕೈಗಳೂ ಒಡೆದಿವೆ. ಕೆಳಗಡೆ ಎಡಕ್ಕೆ ಒಂದು ಸಿಂಹ ಮತ್ತು ಒಬ್ಬ ಹುಡುಗ ನಿಂತಿದ್ದಾರೆ. ಬಲಗಡೆ ಚೌರಿಹಿಡಿದು ನಿಂತ ಸೇವಕಿ, ಈಕೆಯು ಕೇಶವನ್ನು ಎಳೆದು ವೃತ್ತಾಕಾರದ ತುರುಬನ್ನು ಕಟ್ಟಿಕೊಂಡಿದ್ದಾಳೆ. ತಲೆಯ ಮೇಲೆ ಜಿನಬಿಂಬವಿದೆ. ಈಕೆಯನ್ನು ಎರಡು ಅರ್ಧಗಂಭಗಳಿಗೆ ಹೊಂದಿದ ಮಾವಿನ ಗೊಂಚಲುಗಳುಳ್ಳ ತೋರಣದ ಮಧ್ಯೆ ಚಿತ್ರಿಸಲಾಗಿದೆ. ಈಕೆಯು ತಲೆಯವರೆಗೆ ಇಳಿಬಿಟ್ಟ ಹಾರವನನ್ನು ಧರಿಸಿದ್ದಾಳೆ. ಕರ್ಣಕುಂಡಲ, ಸರ, ಕುಚಹಾರ, ಪಟ್ಟಿ ಇತ್ಯಾದಿ ಆಭರಣಗಳನ್ನು ಧರಿಸಿದ್ದಾಳೆ. ಪ್ರಭಾವಳಿಯು ತ್ರಿಕೋನಾಕಾರದಲ್ಲಿದೆ. ಈ ಶಿಲ್ಪದ ಕಾಲ ಸು. ಕ್ರಿ.ಶ. 11ನೆಯ ಶತಮಾನ. ಇಂಗಳಿಗಿಯ (ಚಿತ್ತಾಪುರ ತಾ.) ಜೈನ ಅಂಬಿಕ ಯಕ್ಷಿ ಅಲ್ಲಿಯ ಬಸದಿಯ ನವರಂಗದಲ್ಲಿದೆ. ಕುಳಿತ ಭಂಗಿಯಲ್ಲಿರುವ ಆಕೆಯ ಎಡಕ್ಕೆ ಒಬ್ಬ ಬಾಲಕ ನಿಂತಿದ್ದು ಬಲಕ್ಕೆ ಕುಳಿತ ಸಿಂಹವಿದೆ. ಇದೊಂದು ದುಂಡು ಶಿಲ್ಪವೆನಿಸಿದೆ. ತುರುಬನ್ನು ಅರ್ಧವೃತ್ತಾಕಾರದಲ್ಲಿ ಕಟ್ಟಿದ್ದಾಳೆ. ಓಲೆಗಳು ದಪ್ಪ ಇವೆ. ಇಂಥಹ ಲಕ್ಷಣವುಳ್ಳ ಅಂಬಿಕೆಯ ಶಿಲ್ಪವೊಂದು ಹರಸ ಗುಂಡಿಯಲ್ಲಿದೆ. ಈ ಎರಡರ ಕಾಲಮಾನ ಸು. ಕ್ರಿ.ಶ. 10ನೆಯ ಶತಮಾನ ಜ್ವಾಲಾಮಾಲಿನಿ.

ಈ ಮೇಲಿನ ಬಸದಿಯ ಹೊರಗಡೆಗೆ ಒಂದು ಶಿಲ್ಪವಿದ್ದು, ಅದರ ಹಲವಾರು ಭಾಗಗಳು ಮುಕ್ಕಾಗಿವೆ. ಈ ಶಿಲ್ಪದಲ್ಲಿ ಪದ್ಮಾಸನದಲ್ಲಿ ಕುಳಿತ ದೇವಿಯು ಚತುರ್ಭುಜಧಾರಿಯಾಗಿದ್ದಾಳೆ. ಅವಳು ಹಿಡಿದ ಉಪಕರಣಗಳು ಅಸ್ಪಷ್ಟವಾಗಿವೆ. ತಲೆಯ ಕೇಶಗಳು ಬದಿಗಳಲ್ಲಿ ಹರಡಿವೆ. ಇದೊಂದು ಜ್ವಾಲಾಮಾಲಿನಿ ಶಿಲ್ಪವಿರಬಹುದೇ ? ಈ ಶಿಲ್ಪದ ಕಾಲ ಸು. ಕ್ರಿ.ಶ. 10ನೆಯ ಶತಮಾನ.

ತೀರ್ಥಂಕರರ ಪೀಠ: ದೋರನಹಳ್ಳಿ (ಶಹಪುರ ತಾ.)ಊರಲ್ಲಿ ಒಂದು ತೀರ್ಥಂಕರರ ಪೀಠವಿದೆ. ಅದರ ಮುಂಭಾಗದಲ್ಲಿ ಮೂರು ಗೂಡುಗಳಲ್ಲಿ ಮೂರು ಕುಳಿತ ಸಿಂಹಗಳಿವೆ. (ಕ್ರಿ.ಶ. 10ನೆಯ ಶತಮಾನ) ಶಿರಿಯಾಳದ ಈ ಕಾಲದ ಪೀಠದಲ್ಲಿ ಮೂರು ಸಿಂಹಗಳಿವೆ.

ಜೈನ ಯಕ್ಷಿ ಅಂಬಿಕ: ಹಸೂರಿನ ಜೈನ ಯಕ್ಷಿ ಅಂಬಿಕಳ ದುಂಡು ಶಿಲ್ಪವು ಗುಲ್ಬರ್ಗದ ವಸ್ತುಸಂಗ್ರಹಾಲಯದಲ್ಲಿದೆ. ಈಕೆಯು ಸವ್ಯಲಲಿತಾಸನದಲ್ಲಿ ಕುಳಿತಿರುತ್ತಾಳೆ. ದ್ವಿಭುಜಧಾರಿಣಿ. ಬಲಗೈಯಲ್ಲಿ ಮಾವಿನ ಗೊಂಚಲನ್ನು ಹಿಡಿದು ಮಡಚಿದ ಬಲಗಾಲಿನ ಮಂಡಿಯ ಮೇಲಿಟ್ಟಿದ್ದಾಳೆ. ಎಡಗೈಯನ್ನು ಎಡಗಾಲಿನ ಮೇಲಿಟ್ಟಿದ್ದಾಳೆ. ದಪ್ಪನೆಯ ಕೇಶವಿನ್ಯಾಸವಿದೆ. ಓಲೆ, ಸರ, ಬಳೆ, ಕಡಗ, ವಸ್ತ್ರಗಳ ಧಾರಿಣಿ. ಬಾಲಕನೊಬ್ಬ ಆಕೆಯ ಬಲಕ್ಕೆ ನಿಂತಿದ್ದಾನೆ. ಎಡಕ್ಕೆ ಸಿಂಹವಿದೆ. ತಲೆಯ ಸುತ್ತಲೂ ದಪ್ಪನೆಯ ಹಗ್ಗದಂತಹ ಮಕರತೋರಣವಿದೆ. ಈ ಶಿಲ್ಪದ

ವಿನ್ಯಾಸವು ಈ ಊರಿನ ಯಕ್ಷ ಶಿಲ್ಪವನ್ನು ಹೋಲುವುದರಿಂದ ಈ ಎರಡೂ ಏಕಕಾಲದವು. ಒಂದೇ ಬಸದಿಯ ಮುಂದೆ ಜೊತೆಯಲ್ಲಿ ಅಲ್ಲಿ ನಿಲ್ಲಿಸಿದವುಗಳಾಗಿವೆ.

ಪದ್ಮನಿಧಿ: ಹಾಳ್‌ಹನುಮನಹಳ್ಳಿ (ಸೇಡಂ ತಾ.)ಯಲ್ಲಿ ಶ್ರೀನಿಧಿಯ ಶಿಲ್ಪವಿದೆ. ಕುಳಿದ ಸವ್ಯಲಲಿತಾಸನದಲ್ಲಿ ಇರುವನು. ಅದರ ಎಡಭಾಗದ ಪ್ರಭಾವಳಿ ಮುರಿದಿದೆ. ಕೈಗಳಲ್ಲಿ ಪದ್ಮಗಳಿವೆ. ಕಿರೀಟ ಮುಕುಟ, ಓಲೆ, ಸರ, ಬಳೆ ಇತ್ಯಾದಿ ವಸ್ತ್ರಾಭರಣಗಳನ್ನು ಧರಿಸಿರುವನು. (ಕ್ರಿ.ಶ. 10ನೆಯ ಶತಮಾನ). ಹಾಳಹನುಮನಹಳ್ಳಿಯಲ್ಲಿ (ಸೇಡಂ ತಾ.) ಯಕ್ಷನ ಶಿಲ್ಪವಿದೆ. ಬಹುತೇಕ ಇದು ಶಂಖನಿಧಿ ಇರಬೇಕು.

ಜೈನ ಯಕ್ಷ ಧರಣೇಂದ್ರ: ಗುಲ್ಬರ್ಗದ ವಸ್ತುಸಂಗ್ರಹಾಲಯದಲ್ಲಿ ಹರಸಗುಂಡಗಿಯ ಜೈನ ಯಕ್ಷ ಶಿಲ್ಪವಿದೆ. ಈತನು ಸವ್ಯಲಲಿತಾಸದಲ್ಲಿ ಕುಳಿತಿದ್ದು, ಎಡ ಕೈಯಲ್ಲಿ ಮೋದಕವಿದೆ ? ಬಲಗೈಯನ್ನು ಉದ್ದವಾಗಿ ಮಡಚಿದ ಬಲಗಾಲಿನ ಮೊಂಡೆಯ ಮೇಲಿಟ್ಟಿರುವದು. ಈ ಕಾಲಿಗೆ ಅಡ್ಡಲಾಗಿ ಒಂದು ಪಟ್ಟಿಯನ್ನು ಕಟ್ಟಲಾಗಿದೆ. ಕಿರೀಟ ಮುಕುಟ, ಓಲೆ, ಸರ, ಬಳೆ, ಯಜ್ಞೋಪವೀತ, ವಸ್ತ್ರ, ಕಡಗ ಇತ್ಯಾದಿ ಆಭರಣಗಳನ್ನು ಧರಿಸಿರುವನು. ಬಲಗಡೆಗೆ ಆನೆಯ ಮುಖವಿದೆ. ತಲೆಯ ಬದಿಗಳಲ್ಲಿ ಮಕರಗಳ ಬಾಯಿಂದ ಹೊರಬಂದ ಹಗ್ಗವು ತಲೆಯ ಮೇಲಿನ ಕೀರ್ತಿಮುಖಕ್ಕೆ ಸೇರಿದೆ. ಈ ಮಕರತೋರಣ ಪಟ್ಟಿಕೆ ದಪ್ಪನಾಗಿ ಅರ್ಧವೃತ್ತಾಕಾರದಲ್ಲಿರುವುದು ವಿಶೇಷ (ಕ್ರಿ.ಶ. 10ನೆಯ ಶತಮಾನ). ಈತನು ಧರಣೇಂದ್ರನಾಗಿದ್ದಾನೆ. ಧರಣೇಂದ್ರ ಯಕ್ಷ ಶಿಲ್ಪ ಶಿರಿವಾಳದಲ್ಲಿದೆ. ದ್ವಿಭುಗಳಿವೆ. ಬಲಕ್ಕೆ ಹಿಂದುಗಡೆ ಆನೆಯಿದೆ. ಕೈಗಳು ಮುರಿದಿವೆ.

ಸೇವಕ: ಸೇವಕ ಶಿಲ್ಪವೊಂದು ದೋರನಹಳ್ಳಿ (ಶಹಪುರ ತಾ) ಯಲ್ಲಿ ಪತ್ತೆಯಾಗಿದೆ. ಸೇವಕನು ತ್ರಿಭಂಗಿಯಲ್ಲಿ ನಿಂತಿದ್ದಾನೆ. ಇದರ ಕೆಳಭಾಗ ತೊಡೆಗಳವರೆಗೆ ಮಾತ್ರ ತೋರಿಸಲಾಗಿದೆ. ಕೈಗಳಲ್ಲಿ ಹಿಡಿದ ದಂಡವು ಬಹುತೇಕ ಚೌರಿಯಿರಬೇಕು. ಕಿರೀಟ ಮುಕುಟ, ತೋಳಬಳೆ, ಬಳೆ, ವಸ್ತ್ರ ಮತ್ತು ಪೆಟ್ಟಿಕೆಗಳನ್ನು ಧರಿಸಿದ್ದಾನೆ. ಇದರಲ್ಲಿ ಸರಳತೆ ಎದ್ದು ಕಾಣುತ್ತದೆ. ಕೊರಳಲ್ಲಿ ಯಾವ ಆಭರಣಗಳನ್ನು ಧರಿಸಿಲ್ಲ. ಈ ಶಿಲ್ಪದಲ್ಲಿ ಮುಖ, ಕೈ, ಬಲತೋಳು ಮುಕ್ಕಾಗಿವೆ. ಅರ್ಧವೃತ್ತಾಕಾರ ಪ್ರಭಾವಳಿ ತಲೆ ಸುತ್ತಲಿದೆ. ಈ ಲಕ್ಷಣಗಳಿಂದ ಈ ಸೇವಕನ ಜೈನ ಬಸದಿಗೆ ಸಂಬಂಧಿಸಿದ್ದೆಂದು ತರ್ಕಿಸಬಹುದು. (10ನೆಯ ಶತಮಾನ).

ಅಧ್ಯಾಯ–7

ಇತರೆ ಸಂಕೀರ್ಣ ಶಿಲ್ಪಗಳು

ಅಧ್ಯಾಯ–7

ಇತರೆ ಸಂಕೀರ್ಣ ಶಿಲ್ಪಗಳು

ಬೌದ್ಧ ಶಿಲ್ಪಗಳು: ಬುದ್ಧ : ಏವೂರು, ಸುರಪುರ ತಾಲೂಕಿನ ಚಿಕ್ಕ ಹಳ್ಳಿಯಲ್ಲಿ ಸ್ವಯಂಭು ಸೋಮೇಶ್ವರ ದೇವಾಲಯದ ಹತ್ತಿರ ಮಾರುತಿ ಮಂದಿರದ ಹಿಂದಿನ ಗೋಡೆಯಲ್ಲಿ ಅನೇಕ ಶಿಲ್ಪಗಳಿವೆ. ಅದರಲ್ಲಿ ಒಂದು ಬುದ್ಧನದು. ಉತ್ತರೀಯ ಧರಿಸಿ ಕುಳಿತ ಈ ಬುದ್ಧನ ಬದಿಗೆ ಒಂದು ಕೋಲಿರುವುದು ವಿಶೇಷವಾಗಿದೆ. ಅದೇ ರೀತಿ ಈ ಕಾಲದ ಅಲ್ಲಿಯ ತೀರ್ಥಪುಷ್ಕರಣಿಯ ಬದಿಗಿನ ಒಂದು ಶಿಲ್ಪದಲ್ಲಿ ಸಮುದ್ರಮಂಥನ ಶಿಲಾಪಟ್ಟಿಕೆಯಿದೆ.

ಮಕರತೋರಣಗಳು: ಸಾಮಾನ್ಯವಾಗಿ ದೇವಾಲಯಗಳ ಗರ್ಭಗೃಹಗಳ ಮುಂದಿನ ಅರ್ಧಮಂಟಪ ಭಾಗದಲ್ಲಿ ಸ್ತಂಭಗಳುಳ್ಳ ಮಕರತೋರಣ ಅಲ್ಲಲ್ಲಿ ಇರುವುದು ಕಂಡುಬಂದಿದೆ. ಉದಾಹರಣೆಗೆ ನಿಡಗುಂದಿಯ ಸೂರ್ಯನಾರಾಯಣ, ಮುದ್ನೂರಿನ ಸಿದ್ಧಲಿಂಗೇಶ್ವರ ಇತ್ಯಾದಿ ಮುಖ್ಯವೆನಿಸಿವೆ. ನಿಡಗುಂದಿಯ ಮಕರತೋರಣದಲ್ಲಿ ಸೂರ್ಯನನ್ನು ಮುದ್ನೂರಿನ ಮಕರತೋರಣದಲ್ಲಿ ತ್ರಿಮೂರ್ತಿಗಳು ನೃತ್ಯ ಮತ್ತು ವಾದ್ಯಮೇಳಗಳ ಜೊತೆ ಚಿತ್ರಿಸಲಾಗಿದೆ. ಹಾಗೂ ಆಕಾಶದಲ್ಲಿ ಹಾರುವ ಅಪ್ಸರೆಯರಿದ್ದಾರೆ. ಕಾಲ ಸು. ಕ್ರಿ.ಶ. 10ನೆಯ ಶತಮಾನ. (ಇ.ದ., ಸಂ.14, ಪು.124). ಶಿರಿವಾಳದ ಮಲ್ಲಿಕಾರ್ಜುನ ಗುಡಿಯ ನವರಂಗದ ಛತ್ತಿನಲ್ಲಿಯ ಶಿಲ್ಪಫಲಕದಲ್ಲೂ ನಟರಾಜನ ಸುತ್ತಲು ಅಷ್ಟದಿಕ್ಪಾಲಕರುಳ್ಳ ಬೋದುಗೆ ಶಿಲ್ಪಗಳು 11ನೇ ಶತಮಾನದ ಅನೇಕ ದೇವಾಲಯಗಳಲ್ಲಿ ಕಾಣಬಹುದು.

ಸಿಂಹಕಂಬಗಳು: ಜೇವರ್ಗಿ (ಗುಲಬರ್ಗ ಜಿ.)ಯ ಊರಹೊರಗಿನ ಮಾರುತಿ ಮಂದಿರದಲ್ಲಿ ನಾಲ್ಕು ಸ್ತಂಭಗಳು ಈ ಕಾಲದ್ದಾಗಿವೆ. ಅವು ವೃತ್ತಾಕಾರ ಮತ್ತು ಉದ್ದವಾಗಿವೆ. ಎರಡು ಕಂಬಗಳ ಬುಡದಲ್ಲಿ ಉದ್ದವಾಗಿ ಸಿಂಹಗಳು ನಿಂತಿವೆ. ಈ ಸಿಂಹಗಳು ತಮ್ಮ ಮುಂದಿನ ಕಾಲುಗಳನ್ನು ಮೇಲಕ್ಕೆತ್ತಿ, ಕುಳಿತ ಒಬ್ಬ ಕುಬ್ಜನ ಮೇಲಿಟ್ಟಿವೆ. ತಲಾ ಒಂದು ಸಿಂಹಗಳ ಬಾಯಿಯಿಂದ ಮಣಿಸರವು ಹೊರಬಿದ್ದು ಕಾಲುಗಳ ನಡುವೆ ಜೋತಾಡುತ್ತಿವೆ. ಅವುಗಳ ತೆರೆದ ಬಾಯಿಯ ಮೇಲಿನ ದವಡೆಯಿಂದ ಎರಡು ಹಲ್ಲುಗಳು ಕಾಣಿಸುತ್ತಿವೆ. ಸಿಂಹವನ್ನು ಕುಬ್ಜನೊಬ್ಬ ಸವಾರಿ ಮಾಡುತ್ತಿರುವನು. ತಲಾ ಒಂದರ ಬಾಲದಿಂದ ಕಟ್ಟಲಾಗಿದೆ. ತಲೆಯ ಕೂದಲನ್ನು ಸುಂದರವಾಗಿ ಹಿಂದಕ್ಕೆ ಚಾಚಲ್ಪಟ್ಟಿದೆ. ಎದ್ದು ಕಾಣುವ ಕಣ್ಣುಗಳಿವೆ. ತಲಾ ಒಂದರೆ ತಲೆಯ ಮೇಲೆ ಚೈತ್ಯ ನಮೂನೆಗಳಿವೆ. ಕಂಬದ ಮೇಲೆ ಕಳಸ ಮತ್ತು ಬೋದುಗೆಯಿದೆ. ಈ ಸಿಂಹಕಂಬದ ಮೇಲೆ ಲಲಾಟವಿದ್ದು ಅಲ್ಲಿ ಮಕರತೋರಣದ ಅಲಂಕರಣವಿದೆ. ನಡುವೆ ಕುಳಿತ ಜಿನನ ಬಸದಿಗಳಲ್ಲಿ ಚೌರಿ ಬೀಸುವ ಸೇವಕರಿದ್ದಾರೆ. ಬದಿಗೆ ಮಕರಗಳ ಸವಾರರು ಮತ್ತು ಮೇಲೆ ವಾದ್ಯ ಮೇಳದವರನ್ನು ಚಿತ್ರಿಸಲಾಗಿದೆ. ಇದರ ಕಾಲ ಸು. ಕ್ರಿ.ಶ. 10ನೆಯ ಶತಮಾನ. ಈ ಸಿಂಹಕಂಬಗಳನ್ನು ಶಿರಿವಾಳದಿಂದ ಇಲ್ಲಿಗೆ ತಂದಿರಬೇಕೆಂದು ತರ್ಕಿಸಬಹುದು. ಕಾರಣ ಈ ಮಾದರಿಯ ಕಂಬಗಳು ಅಲ್ಲಿ ಮಾತ್ರವೇ ಇವೆ.

ವೀರಗಲ್ಲುಗಳು: ಈ ಜಿಲ್ಲೆಯಲ್ಲಿ ಈ ಕಾಲದ ಅನೇಕ ವೀರಗಲ್ಲುಗಳು ಹೊರಬಂದಿವೆ. ಸೇಡಂ ತಾಲೂಕಿನ ಕೊಡ್ಲ (2) ಬೆನಕನಹಳ್ಳಿ (1), ಕುರಕುಂಟ (4), ಹನುಮನಹಳ್ಳಿ (1), ನಾಚವಾರ (1), ಕೊಳಕುಂದ (2), ಮುಗನೂರ (3), ಸಿದ್ದನಮಡು, ಕುಕ್ಕುಂದ (3), ಅರೆಬೊಮ್ಮನಹಳ್ಳಿ (1) ಇತ್ಯಾದಿ ಗ್ರಾಮಗಳಲ್ಲಿ ಈ ಕಾಲದ ವೀರಗಲ್ಲುಗಳಿವೆ. ಕೊಳಕುಂದ ಗ್ರಾಮದ (ಮಾರುತಿ ಮಂದಿರದ ಮುಂದೆ) ವೀರಗಲ್ಲುಗಳಲ್ಲಿ ಭರ್ಚಿಯನ್ನು ಎರಡು ಕೈಗಳಿಂದ ಮುಂದೆ ಮಾಡಿ ಹಿಡಿದು ನಿಂತ ವೀರನನ್ನು ಪ್ರಮುಖವಾಗಿ ಚಿತ್ರಿಸಲಾಗಿದೆ. ಆತನ ಮೇಲೆ ಮಡಿದ ವೀರ ಪೀಠದ ಮೇಲೆ ಕುಳಿತಿದ್ದು ಬದಿಗೆ ಅಪ್ಸರೆಯರು ನಿಂತಿದ್ದಾರೆ. ಅವರು ಒಂದು ಕೈಯಲ್ಲಿ ಚೌರಿ ಹಿಡಿದಿದ್ದಾರೆ. ಅದರ ಕಾಲ ಸು. ಕ್ರಿ.ಶ. 10ನೆಯ ಶತಮಾನ. ಆದರೆ ಮುಗನೂರಿನ ವೀರಗಲ್ಲಿನ ಒಂದು ಕುದುರೆ ಬದಿಗೆ ಭರ್ಚಿಯಿಂದ ವೀರನು ವೈರಿಯನ್ನು ಇರಿಯುತ್ತಿರುವನು. ಆತನ ಮೇಲೆ ಒಂದೇ ಸಾಲಿನಲ್ಲಿ ಮಡಿದ ವೀರನನ್ನು ಅಪ್ಸರೆಯರಿಬ್ಬರು ಒಯ್ಯುತ್ತಿರುವುದು ಮತ್ತು ಮಡಿದ ವೀರನು ಲಿಂಗದ ಮುಂದೆ ಕುಳಿತಿರುವನು. ಅದರ ಕಾಲ ಸು. ಕ್ರಿ.ಶ. 11ನೆಯ ಶತಮಾನ. ಅಲ್ಲಿಯ ಇನ್ನೊಂದು ವೀರಗಲ್ಲಿನಲ್ಲಿ ವೀರನು ಬಿಲ್ಲನ್ನು ಹಿಡಿದು ನಿಂತಿದ್ದಾನೆ. ಈ ಗ್ರಾಮದ ರಾಮಲಿಂಗ ದೇವಾಲಯದ ಮುಂದಿರುವ ವೀರಗಲ್ಲಿನಲ್ಲಿ ಕುದುರೆ ಏರಿದ ವೀರನು ಭರ್ಚಿಯಿಂದ ತನ್ನ ಎದುರಾಳಿಯನ್ನು ತಿವಿದಿದ್ದಾನೆ. ಅವನ ಮೇಲ್ಭಾಗದಲ್ಲಿ

ಇಬ್ಬರು ಅಪ್ಸರೆಯರು ಮಡಿದ ವೀರನನ್ನು ಒಯ್ಯುತ್ತಿರುವರು. ಬದಿಗೆ ಕಿರಿದಾಗಿ ಲಿಂಗದ ಮುಂದೆ ಮಡಿದ ವೀರನು ಆಸೀನನಾಗಿರುವುದನ್ನು ಚಿತ್ರಿಸಲಾಗಿದೆ. ಶಾಸನವುಳ್ಳ ಕೆಲವು ವೀರಗಲ್ಲುಗಳನ್ನು ಇನ್ನೊಂದು ಲೇಖನದಲ್ಲಿ ಅಧ್ಯಯನ ಮಾಡಲಾಗಿದೆ. ಕುಕ್ಕುಂದ ಗ್ರಾಮದ ಮಾರುತಿ ಗುಡಿಯ ಹೊರಗಡೆಯ ಒಂದನೆಯ ವೀರಗಲ್ಲಿನಲ್ಲಿ ವೀರನು ಬಲಗೈಯಲ್ಲಿ ಕತ್ತಿಯನ್ನು ಮೇಲಕ್ಕೆತ್ತಿ ಹಿಡಿದು ನಿಂತಿರುವುದನ್ನು ಪ್ರಮುಖವಾಗಿ ಚಿತ್ರಿಸಲಾಗಿದೆ. ತನ್ನ ಎಡಗೈಯಿಂದ ಎದುರಾಳಿಯ ಎದೆಯನ್ನು ಹಿಡಿದಿದ್ದಾನೆ. ಈ ದೃಶ್ಯದ ಮೇಲೆ ಅಪ್ಸರೆಯರು ವೀರನನ್ನು ಒಯ್ಯುತ್ತಿರುವರು. ಅದರ ಮೇಲೆ ಮಡಿದ ವೀರನು ಲಿಂಗದ ಮುಂದಿರುವನು ಮತ್ತು ಬದಿಗೆ ಸೂರ್ಯನ ಚಿತ್ರವಿದೆ.

ಅದರ ಕಾಲ ಸು. ಕ್ರಿ.ಶ. 12ನೆಯ ಶತಮಾನ. ಅಲ್ಲಿಯ ಎರಡನೆಯ ವೀರಗಲ್ಲು ಮತ್ತು ಬೆಟಗೇರಿ(ಬಿ)ಯ ಒಂದು ಶಿಲ್ಪ ಗೋಗ್ರಹಣಕ್ಕೆ ಸೀಮಿತವಾಗಿದೆ. ಕುಕ್ಕುಂದ ಗ್ರಾಮದ ವೀರಗಲ್ಲಿನಲ್ಲಿ ಗೋಗ್ರಹಣದ ಬಗ್ಗೆ ತಿಳಿಸಲು ಹಸುಗಳ ಸಾಲನ್ನು ಯುದ್ಧ ದೃಶ್ಯದ ಮೇಲೆ ಚಿತ್ರಿಸಲಾಗಿದೆ. ಈ ಯುದ್ಧದ ದೃಶ್ಯದಲ್ಲಿ ಪ್ರಮುಖವಾಗಿ ತೋರಿಸಿದ ವೀರನು ಕೈಗಳಲ್ಲಿ ಕತ್ತಿ ಮತ್ತು ಗುರಾಣಿಗಳನ್ನು ಹಿಡಿದಿರುವನು. ಆತನ ಎದುರಾಳಿಯನ್ನು ಕಿರಿದಾಗಿ ಚಿತ್ರಿಸಲಾಗಿದೆ. ಅದರ ಮೇಲೆ ಅಪ್ಸರೆಯರು ಮಡಿದ ವೀರನನ್ನು ಒಯ್ಯುತ್ತಿರುವರು. ಈ ವೀರಗಲ್ಲಿನ ಬದಿಗಿನ ಇನ್ನೊಂದು ವೀರಗಲ್ಲಿನಲ್ಲಿ ಪ್ರಮುಖವಾಗಿ ಚಿತ್ರಿಸಿದ ನಿಂತ ವೀರನಿದ್ದಾನೆ. ಆತನ ಸೊಂಟಕ್ಕೆ ಮಡಿಚಿದ ಕೈಯಲ್ಲಿ ಕಠಾರಿಯಿದೆ. ಎಡಗೈಯನ್ನು ಮಡಿಚಿ ಎದೆಯನ್ನು ಹಿಡಿದಿದ್ದಾನೆ. ಮೇಲೆ ಅವನು ಲಿಂಗದ ಮೇಲೆ ಕುಳಿತಿರುವನು. ಅರೆಬೊಮ್ಮನಹಳ್ಳಿ ಗ್ರಾಮದ ಮಲ್ಲಿಕಾರ್ಜುನ ಗುಡಿಯಲ್ಲಿರುವ ವೀರಗಲ್ಲಿನ ಮೇಲಿನ ಒಂದು ಭಾಗವಿದೆ. ಅದರಲ್ಲಿ ವೀರನು (ಮಡಿದ) ಎತ್ತರದ ಪೀಠದ ಮೇಲೆ ಬಲಗೈಯನ್ನು ಬಗ್ಗಿಸಿ ಕುಳಿತಿರುವನು. ಬೆನ್ನಿಗೆ ದಿಂಬನ್ನು ಇಟ್ಟುಕೊಂಡಿರುವನು. ಅವನ ಬಲಕ್ಕೆ ಒಬ್ಬ ಮಹಿಳೆಯು ಕುಳಿತಿರುವಳು. ಬಹುಶಃ ಅವಳು ಅವನ ಮಡದಿಯಿರಬೇಕು. ಅವನ ಎಡಗೈ ಬದಿಗೆ ಒಬ್ಬ ಸೇವಕಿಯಿರುವಳು. ಕುಳಿತ ವೀರನ ಕುತ್ತಿಗೆಯಿಂದ ಉದ್ದ ಈಟಿಯು ಹಾದಿದೆ. ಅವನು ಬಲಗೈಯನ್ನು ಬಗ್ಗಿಸಿ ಸೊಂಟಕ್ಕೆ ಇಟ್ಟಿರುವನು ಮತ್ತು ಎಡಗೈಯನ್ನು ಎತ್ತಿ ಹಿಡಿದಿದ್ದಾನೆ. ಆ ಕೈಯಲ್ಲಿ ಒಂದು ವಸ್ತುವನ್ನು ಹಿಡಿದ ಹಾಗೆ ಕಾಣುತ್ತದೆ. ಈ ಶಿಲ್ಪದ ಕಾಲ ಸು. ಕ್ರಿ.ಶ. 9ನೆಯ ಶತಮಾನ.

ಬೆಟಗೇರಿ (ಬಿ) ಗ್ರಾಮದ ಊರಗಸಿಯಲ್ಲಿ ಒಂದು ವೀರಗಲ್ಲಿನಲ್ಲಿ ಪ್ರಮುಖವಾಗಿ ವೀರನನ್ನು ಚಿತ್ರಿಸಲಾಗಿದೆ. ಮೇಲಿನ ಭಾಗದಲ್ಲಿ ಮಡದಿ ವೀರನನ್ನು ಅಪ್ಸರೆಯರಿಬ್ಬರು ಒಯ್ಯುತ್ತಿರುವರು. ಬದಿಗೆ ಲಿಂಗವಿದೆ. ಹನುಮನಹಳ್ಳಿಯ ಮಾರುತಿ ಮಂದಿರದ ಮುಂದಿರುವ ವೀರಗಲ್ಲಿನಲ್ಲಿ ಪ್ರಮುಖವಾಗಿ ಬಿಲ್ಲುಬಾಣ ಹಿಡಿದ ಎದುರಾಳಿ (ಕಿರುಚಿತ್ರ) ಸಂಗಡ ಯುದ್ಧ

ಮಾಡುತ್ತಿರುವನು. ಅದರ ಮೇಲೆ ಅಪ್ಸರೆಯರು ಮಡಿದ ವೀರನನ್ನು ಒಯ್ಯುತ್ತಿರುವುದು ಹಾಗೂ ಅದರ ಮೇಲೆ ಲಿಂಗದ ಮುಂದೆ ಮಡಿದ ವೀರನು ಕುಳಿತಿರುವುದನ್ನು ಚಿತ್ರಿಸಲಾಗಿದೆ. ಅದರ ಕಾಲ ಸು. ಕ್ರಿ.ಶ. 12ನೆಯ ಶತಮಾನ. ಕುಕ್ಕುಂದ ಗ್ರಾಮದ ಒಂದು ವೀರಗಲ್ಲಿನಲ್ಲಿ ಪ್ರಮುಖವಾಗಿ ಎಡಗೈನಲ್ಲಿ ಗುರಾಣಿಯನ್ನು ಹಿಡಿದ ವೀರನಿದ್ದಾನೆ. ಆತನ ಮೇಲೆ ಮಡಿದ ವೀರನನ್ನು ಒಯ್ಯುವ ಚಿತ್ರವಿದೆ. ಅದರ ಮೇಲೆ ಮಡಿದ ವೀರ ಲಿಂಗದ ಮುಂದೆ ಕುಳಿತಿರುವನು. ಅದರ ಕಾಲ ಸು. ಕ್ರಿ.ಶ. 12ನೆಯ ಶತಮಾನ. ಈ ವೀರಗಲ್ಲಿನಲ್ಲಿ ವೀರನು ಎಡಗೈಯಲ್ಲಿ ಕತ್ತಿಯನ್ನು ಹಿಡಿದಿರುವುದಂದ ಇವನು ಎಡಗೈ ಭಂಟನೆನ್ನಬಹುದು. ಕೊಳಕುಂದ ಗ್ರಾಮದ ಒಂದು ವೀರಗಲ್ಲಿನಲ್ಲಿ ವೀರನು ಬಿಲ್ಲಿನಿಂದ ಎದುರಾಳಿ ಸಂಗಡ ಯುದ್ಧಮಾಡುತ್ತಿರುವವನು. ಆತನ ಮೇಲೆ ಮಡಿದ ವೀರನನ್ನು ಅಪ್ಸರೆಯರಿಬ್ಬರು ಒಯ್ಯುತ್ತಿದ್ದರು. ಅದರ ಕಾಲ ಸು. 10ನೆಯ ಶತಮಾನ.

ಎರಡು ದೃಶ್ಯಗಳುಳ್ಳ ಈ ವೀರಗಲ್ಲು ಮುಗ್ನೂರಿನ (ಸೇಡಂ ತಾ.) (ಚಿತ್ರ 173) ರಾಮಲಿಂಗೇಶ್ವರ ದೇವಾಲಯ ಮುಂದಿದೆ. ಕೆಳಗಿನ ದೃಶ್ಯದಲ್ಲಿ ವೀರನು ಶುಲದಿಂದ ವೈರಿಯನ್ನು ಇರಿದಿದ್ದಾನೆ. ಈರ್ವರು ನಿಂತಿದ್ದು ವೀರನ್ನು ಭವ್ಯವಾಗಿ ಚಿತ್ರಿಸಿ ಅವನ ಮಹತ್ವವನ್ನು ಇಲ್ಲಿ ಹೆಚ್ಚಿಸಿರುವುದು ಸೂಚಿತವಾಗಿದೆ. ಚಿಕ್ಕ ಗಾತ್ರದಲ್ಲಿ ವೀರನ ಬಲಗಾಲಿನ ಪಕ್ಕದಲ್ಲಿ ಒಂದು ಕುದುರೆ ಸವಾರನ ಚಿತ್ರವೂ ಇದೆ. ಎರಡನೇ ತಲದಲ್ಲಿ ಏಕಸಾಲಿನಲ್ಲಿ ಮಡಿದ ವೀರನ್ನು ಇಬ್ಬರು ಅಪ್ಸರೆಯರು ಹೊತ್ತೊಯ್ಯುತ್ತಿದ್ದರು. ಇದರ ಎಡಗಡೆಗೆ ವೀರ ಶಿವಲಿಂಗಕ್ಕೆ ಮೂರುಖಮಾಡಿ ಕೈಮುಗಿದು ಕುಳಿತಿರುವನು.ದೋರನಹಳ್ಳಿಯಲ್ಲಿ (ಶಹಪುರ ತಾ) ಮುರಿದ ವೀರಗಲ್ಲಿದೆ. ಅದರ ನಡುವಿನ ಪಟ್ಟಿಕೆಯಲ್ಲಿ ಶಾಸನವಿದೆ. ಆಕಳುಗಳನ್ನು ಏಕಸಾಲಿನಲ್ಲಿ ಚಿತ್ರಿಸಲಾಗಿದೆ. ಹೀಗಾಗಿ ಈ ಶಿಲ್ಪದ ಕಾಲ 10ನೇ ಶತಮಾನದ್ದಾಗಿದೆ.



ಮಿರ್ಯಾಣದ ವೀರಗಲ್ಲಿನಲ್ಲಿ 3 ದೃಶ್ಯಗಳಿವೆ. ಕೆಳದೃಶ್ಯದಲ್ಲಿ ವೀರನು ಉದ್ದ ಭರ್ಚಿಯಿಂದ ವೈರಿಯ ದೇಹಕ್ಕೆ ಇರಿದು ನಿಂತಿದ್ದಾನೆ. ಅವನು ಹೊಡೆಯಲು ಬಲಗೈಯನ್ನು ಮೇಲಕ್ಕೆತ್ತಿ ನಿಂತಿದ್ದಾನೆ. ನಡುವೆ ಒಬ್ಬ ಸೇವಕ ನಿಂತಿರುವನು. ದೃಶ್ಯಗಳು ವೀರ ಭರ್ಜಿಯಿಂದ ಕುದುರೆ ಸವಾರನಾಗಿ ಇರಿದು ನಿಂತಿದ್ದಾನೆ. ಇದರಿಂದ ಕುದುರೆ ಸವಾರ ತನ್ನ ತಲೆಯನ್ನು ಬಗ್ಗಿಸಿಕೊಂಡು ಕುಳಿತಿದ್ದಾನೆ. ಮೂರರಲ್ಲಿ ಎತ್ತರ ವೇದಿಕೆಯ ಮೇಲೆ

ಮಡಿದ ವೀರನು ಸವ್ಯಲಲಿತಾಸನದಲ್ಲಿ ಕುಳಿತಿರುವನು. ಬಲಗೈಯಲ್ಲಿ ಬಲತೊಡೆಯ ಮೇಲಿಟ್ಟಿದ್ದಾರೆ. ಎಡಗೈಯನ್ನು ಉದ್ದವಾಗಿ ಮಡಿಚಿದ ತಲೆಯ ಮೇಲೆ ಮುಂದಕ್ಕೆ ಚಾಚಿ ಕೈಯನ್ನು ಇಟ್ಟಿದ್ದಾನೆ. ಆ ಸೇವಕಿಯರಿಬ್ಬರು ಆತನ ಬದಿಗಳಲ್ಲಿ ಚೌರಿಹಿಡಿದು ನಿಂತಿರುವರು. (10ನೇ ಶತಮಾನದ ಮಧ್ಯಭಾಗ)

ಆತ್ಮಾಹುತಿ ಸ್ತಂಭ: ಅತನೂರಿನಲ್ಲಿ (ಗುಲ್ಬರ್ಗಾ ಜಿ.) ವಿಶಿಷ್ಟವಾದ ಉದ್ದನೆಯ ಏಕಸ್ತಂಭವನ್ನು ನಿಲ್ಲಿಸಲಾಗಿದೆ. ಅದಕ್ಕೆ ಚೌಕಾಕಾರ ಪೀಠವಿದೆ. ಕಾಂಡ ಭಾಗದಲ್ಲಿ ಕ್ರಮವಾಗಿ ಎರಡು ಪಟ್ಟಿಗಳ ನಡುವೆ ಉದ್ದನೆಯ ಅಷ್ಟಮುಖಗಳ ಪಟ್ಟಿಕೆಯಿದೆ. ಮೇಲ್ಗಡೆ ಉದ್ದನೆಯ ಆಯತಾಕಾರ ಪಟ್ಟಿಕೆಯಿದೆ. ಇದರ ಮೇಲ್ಗಡೆ ವೃತ್ತ ಮತ್ತು ಕಳಸ ತುದಿಯಿದೆ. ಕೆಳಗಿನ ಪಟ್ಟಿಕೆಯಲ್ಲಿ ಕುಂಭ ಇತ್ಯಾದಿ ಚಿತ್ರಗಳಿವೆ. ನಡುವಿನ ಪಟ್ಟಿಕೆ ಸರಳವಾಗಿದೆ. ಮೇಲಿನ ಆಯತಾಕಾರದ ಚೌಕ ಪಟ್ಟಿಕೆಯ ತಲಾ ಒಂದು ಮುಖಗಳಲ್ಲಿ ಮೂರು ಅಂಕಣಗಳಲ್ಲಿ ವಿಭಿನ್ನ ಚಿತ್ರಗಳಿವೆ. ಇದೊಂದು ಆತ್ಮಾಹುತಿಯ ಅಪರೂಪದ ಸ್ತಂಭವಾಗಿದೆ. (11ನೇ ಶತಮಾನದ)

ಕಿರಣಸ್ತಂಭ: ಕಾಲಗಿಯಲ್ಲಿ ಒಂದು ಅಪರೂಪದ ಕಿರುಸ್ತಂಭದ ಮೇಲ್ಭಾಗದ ಚೌಕಪಟ್ಟಿಕೆಯ ಹೊರ ಮಗ್ಗುಲಿನಲ್ಲಿ ವಿವಿಧ ಅಂಕಣಗಳಿವೆ. ಅದರ ಮೇಲ್ಭಾಗದಲ್ಲಿ ಕಮಲದ ಅಂಕಣವಿದೆ. ಬುಡ ಭಾಗಾ ಚೌಕಾ ಪಟ್ಟಿಕೆಗಳಿಂದ ಕೂಡಿದೆ. ಇದೆ ಶೈಲಿಯಲ್ಲಿ ಈ ಕಿರಣ ಸ್ತಂಭದ ಕಾಲ ಸು. ಕ್ರಿ>ಶ. 10ನೇ ಶತಮಾನ.

ಆತ್ಮ ಬಲಿದಾನ: ಶಿಲ್ಪ ಮರತೂರಿನಲ್ಲಿ ಒಂದು ಅಪರೂಪದ ಇದೇ ಕಾಲದ ಆತ್ಮ ಬಲಿದಾನ ಶಿಲ್ಪವಿದೆ. ಅದರಲ್ಲಿ ಒಬ್ಬ ವ್ಯಕ್ತಿಯು ಒಂದು ಪೂರ್ಣ ಕುಂಭದ ಮೇಲೆ ಪಾದಗಳನ್ನು ಇಟ್ಟು ಒಬ್ಬ ವ್ಯಕ್ತಿ ಕುಳಿತುಕೊಳ್ಳುವ ರೀತಿಯಲ್ಲಿ ತೋರಿಸಲಾಗಿದೆ. ಬಹುತೇಕ ಕುಂಭದ ಮೇಲಿಟ್ಟ ಶುಲದ ಮೇಲೆ ಕುಳಿತಿರುವಂತಿದೆ. ಅದರ ತುದಿ ಎದೆಯಿಂದ ಹೊರಬಂದಿದೆ. ಕೈಯಲ್ಲಿ ಹಿಡಿದ ಆಯುಧಗಳು ಮತ್ತು ಮುಖ ಭಾಗ ಶಿಥಿಲವಾಗಿದೆ.

ದಂಪತಿಗಳ ಶಿಲ್ಪ: ಅರೇಬೋಮ್ಮನಹಳ್ಳಿಯಲ್ಲಿ (ಸೇಡಂ ತಾ) ಮಲ್ಲಿಕಾರ್ಜುನ ದೇವಾಲಯದ ಮುಂದೆ ಅರಸು ಮನೆತನದ ದಂಪತಿಗಳ ಶಿಲ್ಪವಿದೆ. ಇದರಲ್ಲಿ ಹೆಚ್ಚು ವಸ್ತ್ರಾಭರಣಗಳನ್ನು ಧರಿಸಿದ ವ್ಯಕ್ತಿ ಪೀಠದ ಮೇಲೆ ದಿಂಬಿಗೆ ವಾಲಿಕೊಂಡು ಕುಳಿತಿರುವನು. ಅವನ ಬಲಗಡೆ ಅವನ ಪತ್ನಿ ಬಲಗೈಯನ್ನು ಮೇಲಕ್ಕೆತ್ತಿ ನಿಂತಿದ್ದಾಳೆ. ಇವನ ಎಡಗಡೆ ಇನ್ನೊಬ್ಬ ಪತ್ನಿ ಪೀಠದ ಮೇಲೆ ಕುಳಿತಿದ್ದಾಳೆ. ಇವರ ವಸ್ತ್ರಾಭರಣಗಳಿಂದ ಇವರು ರಾಜ ಮತ್ತು ರಾಣಿಯರ ಶಿಲ್ಪವಿಬೇಕೆಂದು ಹೇಳಬಹುದು.

ಮುಖ್ಯ ಲಕ್ಷಣಗಳು:

1. ಕಪ್ಪು ಡಾಲರೈಟ್ ಮತ್ತು ಸುಣ್ಣದ ಕಲ್ಲು ನಿರ್ಮಾಣಕ್ಕೆ ಬಳಸಲಾಗಿದೆ.
2. ಗುಲ್ಬರ್ಗ ಜಿಲ್ಲೆಯಲ್ಲಿ ಈ ಕಾಲದ ಶೈವ, ವೈಷ್ಣವ, ಜೈನ, ಬೌದ್ಧ, ಶಾಕ್ತ ಪರಂಪರೆಯ ದೇವಾಲಯಗಳು, ಶಿಲ್ಪಗಳು ಹಾಗೂ ಲೌಕಿಕ ಸ್ಮಾರಕ ಶಿಲ್ಪಗಳಲ್ಲಿ ವೀರಗಲ್ಲುಗಳಿವೆ.
3. ಅಧಿಷ್ಠಾನದಲ್ಲಿ ಕಪೋತಬಂಧವಿದೆ. ಇಲ್ಲಿ ತ್ರಿಪಟ್ಟಕುಮುಧವನ್ನು ಅಲ್ಲಲ್ಲಿ ಬಳಸಲಾಗಿದೆ. ಕೆಲವಡೆ ಇದರ ವೇರಿ ಮತ್ತು ಗ್ರೀಜ಼ ಎತ್ತರವಿದೆ. ಚೈತ್ಯ ನಮೂನೆಗಳಿವೆ. ಅರೆಗಂಬಗಳು ಅಗಲವಾಗಿವೆ.
4. ಮುಂಚಾಚು ಮತ್ತು ಹಿಂಚಾಚುಗಳಿವೆ ಹಾಗೂ ದ್ವಿರಥ ಮತ್ತು ತ್ರಿರಥವುಳ್ಳ ಭಿತ್ತಿಯು ಅಧಿಷ್ಠಾನದಿಂದ ಆರಂಭವಾಗಿದೆ.
5. ಭುವನೇಶ್ವರಿಯಲ್ಲಿ (ನವರಂಗದ/ಅರ್ಧಮಂಟಪ) ಅರಳಿದ ಕಮಲದ ಅಲಂಕರಣ ಎದ್ದು ಕಾಣುತ್ತದೆ. ಕೆಲವೊಮ್ಮೆ ಅಷ್ಟ ದಿಕ್ಪಾಲಕರಿದ್ದಾರೆ. ಆದರೆ ಈ ಲಕ್ಷಣ ಬಹುತೇಕ ಈ ಭಾಗದಲ್ಲಿ ತದನಂತರ ಕಾಲದಲ್ಲಿ ಆರಂಭವಾದಂತೆ ಕಾಣುತ್ತದೆ.
6. ದ್ವಾರದಲ್ಲಿ ಕೆಲವೆಡೆ ನಿಧಿಗಳಿವೆ. ಕೆಲವೆಡೆ ಪೂರ್ಣ ಕುಂಭಗಳಿವೆ.
7. ಶಾಖೆಯಲ್ಲಿ ಉದ್ದವಾಗಿ ಏಕಸಾಲಿನಲ್ಲಿ 4 ಗಣಗಳನ್ನು ಒಬ್ಬರ ಮೇಲೆ ಒಬ್ಬರು ಇರುವುದನ್ನು ತೋರಿಸಲಾಗಿದೆ. ಇವರು ಹುಡುಗರಂತೆ ಕಾಣುವರು. ಕೆಲವೊಮ್ಮೆ ಇವರು ನೃತ್ಯಭಂಗಿಯಲ್ಲಿರುವರು. ಈ ಪ್ರದೇಶದಲ್ಲಿ ಮಾತ್ರ ಈ ಲಕ್ಷಣ ಈ ಕಾಲದಲ್ಲಿ ಕಂಡುಬರುತ್ತದೆ.
8. ಅಪರೂಪವಾಗಿ ಶಿವಲಿಂಗಗಳ ಮೇಲೆ ಮೂರು ರೀತಿಯ ಬ್ರಹ್ಮಸೂತ್ರಗಳನ್ನು ತೋರಿಸಲಾಗಿದೆ. ಒಂದು ಸಾಮಾನ್ಯ ಲಕ್ಷಣವಾದರೆ, ಇನ್ನೆರಡು ಸ್ವಲ್ಪ ಭಿನ್ನವೆನಿಸಿವೆ. ಇವುಗಳಲ್ಲಿ ಒಂದಕ್ಕೆ ಬ್ರಹ್ಮಸೂತ್ರರೇಖೆ ಲಂಬರೇಖೆಗಳ ಪಟ್ಟಿಕೆಯ ಮೇಲೆ ಸುತ್ತುವರಿದಿದೆ.
9. ಹೊಸ್ತಿಲ ಅಂಚಿನಲ್ಲಿ ಆನೆಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ ಬದಿಗಳಲ್ಲಿ ಶಾಖೆಗಳುಹರಿದಿವೆ.
10. ಬಸದಿಗಳಿದ್ದರೆ ಲಲಾಟದಲ್ಲಿ ಜಿನಬಿಂಬವನ್ನು ಚಿತ್ರಿಸಲಾಗಿದೆ.
11. ಸರ್ವತೋಭದ್ರ ಮಾದರಿ ಮತ್ತು ಉತ್ತರದ ಸರಳವಾದ ಭೂಮಿಜ (ರೇಖನಾಗರ) ಮಾದರಿ ಶಿಖರಗಳುಳ್ಳ ದೇವಾಲಯಗಳು ಹಾಗೂ ಶಾಲಾ ಮಾದರಿಯ ಶಿಖರವುಳ್ಳ ದೇವಾಲಯ ಈ ಭಾಗದಲ್ಲಿ ವಿರಳವಾಗಿ ಗೋಚರಿಸಿರುವುದು ಮಹತ್ವದ ಸಂಗತಿಯಾಗಿದೆ.

12. ಕಂಬಗಳ ಕಾಂಡದಲ್ಲಿ ಎರಡು ಚೌಕ ಪಟ್ಟಿಕೆಗಳು ಇವುಗಳಲ್ಲಿ ಇಳಿಬಿಟ್ಟ ಜೋಡು ಹಾರಗಳಲ್ಲಿ ವಿಭಿನ್ನ ಚಿತ್ರಗಳಿವೆ. ರಾಮಾಯಣ, ಮಹಾಭಾರತ ಇತ್ಯಾದಿ ಕಥಾನಕ ಚಿತ್ರಗಳು ಅಲ್ಲಲ್ಲಿ ಚಿತ್ರಿಸಲಾಗಿದೆ.
13. ಕಂಬಗಳ ಬುಡದಲ್ಲಿ ಕುಳಿತ ಸಿಂಹಗಳಿರುವ ಉದಾಹರಣೆಗಳು ಪಲ್ಲವರ ಲಕ್ಷಣವನ್ನು ನೆನಪಿಸುತ್ತವೆ. ಇಂತಹವು ಈ ಕಾಲದಲ್ಲಿ ಉತ್ತರ ಕರ್ನಾಟಕದಲ್ಲಿ ಕೇವಲ ಈ ಭಾಗದಲ್ಲಿ ಕಣಿಸಿರುವುದು ಈ ಕಾಲದ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ಅವಲೋಕನ ಮಾಡಲು ಸಹಕಾರಿಯಾಗಿದೆ.
14. ಅರ್ಧಮಂಟಪದಲ್ಲಿ ಸ್ತಂಭಗಳುಳ್ಳ ಅಲಂಕೃತ ಮಕರತೋರಣ ಇಲ್ಲಿಯೂ ಕಾಣಿಸಿವೆ. ಅದರಲ್ಲಿ ಸೂರ್ಯನ ಜೊತೆಯಲ್ಲಿ ವಿಭಿನ್ನ ಚಿತ್ರಗಳು ಕಾಣಿಸಿರುವುದು ಗಮನಾರ್ಹ. ಕೆಲವೆಡೆ ತ್ರಿಮೂರ್ತಿಗಳ ಚಿತ್ರಗಳಿವೆ (ಸಾಮಾನ್ಯವಾದವು).
15. ಒಂದು ಸ್ಥಳದ ಕುಳಿತ ಭೈರವಿಗೆ ಕೋರೆಹಲ್ಲುಗಳಿರುವುದು ಗಮನೀಯ.
16. ಶಾಹಾಪುರದ ಮುಕುಟವಿಲ್ಲದ ಮಹಿಷಾಸುರಮರ್ದಿನಿ ಶಿಲ್ಪದಲ್ಲಿ ಮುಕ್ಕಣ್ಣು ಇರುವುದು ಅಪರೂಪವೆನಿಸಿದೆ.
17. ಭವ್ಯವಾದ ಆಳೆತ್ತರ ದ್ವಾರಪಾಲಕ ಶಿಲ್ಪಗಳಲ್ಲಿ ಶೈವ ಪರಂಪರೆಗೆ ಸೇರಿದವು ಮಾತ್ರ ಕೆಲವು ಕಡೆಗಳಲ್ಲಿ ಕಾನಿಸಿಕೊಡಿವೆ.
18. ಬಸದಿಯ ಸಭಾಮಂಟಪದ ಕಂಬಗಳಲ್ಲೂ ಚಿತ್ರಗಳಿರುವುದು ವಿರಳವೆನಿಸಿದೆ. ಯಕ್ಷ-ಯಕ್ಷಿಯರ ಶಿಲ್ಪಗಳಲ್ಲಿ ತೋರಣದಲ್ಲಿ ದಪ್ಪನೆಯ ಹಗ್ಗದ ಅಲಂಕರಣೆ ವಿಶೇಷವೆನಿಸಿದೆ.
19. ಬುದ್ಧನ ಒಂದು ಶಿಲ್ಪ ವಿಷ್ಣುವಿನ ಅವತಾರಕ್ಕೇ ಸೇರಿದ್ದೇ? ಅಥವಾ ಬೌದ್ಧ ಮತಕ್ಕೇ ಸೇರಿದ್ದೇ ? ಎಂಬುದನ್ನು ಪರಾಮರ್ಶಿಸಬೇಕಾಗಿದೆ.
20. ಈ ಸ್ಮಾರಕ ಶಿಲ್ಪಗಳಲ್ಲಿ ವೀರಗಲ್ಲುಗಳಲ್ಲಿ ದಕ್ಷಿಣ ಕರ್ನಾಟಕದಲ್ಲಿ ತೋರಿಸಿದಂತಹ ದೃಶ್ಯತರಗಳು ಭಿನ್ನವೆನಿಸಿವೆ. ಒಟ್ಟಾರೆ ಪ್ರಸ್ತುತ ಈ ವಿಷಯದ ಸಂಬೋಧನೆ, ಅಧ್ಯಯನ ಈ ಕಾಲದ ಸಾಂಸ್ಕೃತಿಕ ಎತಿಹಾಸದ ಪುನರ್ರಚನೆಗೆ ತುಂಬಾ ಪ್ರಯೋಜನಕಾರಿಯಾಗಿದೆ ಎಂದು ಭಾವಿಸಬಹುದು.

ಅಧ್ಯಾಯ–8

ರಾಷ್ಟ್ರಕೂಟರ ಕಾಲದ ದೇವಾಲಯ ವಾಸ್ತುಶಿಲ್ಪ ಶೈಲಿಯ ಲಕ್ಷಣಗಳು

ಅಧ್ಯಾಯ–8

ರಾಷ್ಟ್ರಕೂಟರ ಕಾಲದ ದೇವಾಲಯ ವಾಸ್ತುಶಿಲ್ಪ ಶೈಲಿಯ ಲಕ್ಷಣಗಳು

ಸುಮಾರು ಕ್ರಿ.ಶ. 8ನೆಯ ಶತಮಾನದ ಮಧ್ಯಭಾಗದಿಂದ ಎರಡು ಶತಮಾನಗಳಿಗೂ ಸ್ವಲ್ಪ ಹೆಚ್ಚುಕಾಲ ರಾಷ್ಟ್ರಕೂಟರು ದಖ್ಖನಿನ ಮತ್ತು ದಕ್ಷಿಣದ ರಾಜಕೀಯ ಹಾಗೂ ಸಾಂಸ್ಕೃತಿಕ ಬೆಳವಣಿಗೆಗಳ ಅಗ್ರಾಸನವಹಿಸಿದ್ದರು. ವಿಶೇಷವಾಗಿ ಈ ಮಾತು ಕಲೆ ಮತ್ತು ವಾಸ್ತು ಶಿಲ್ಪಗಳ ಕ್ಷೇತ್ರಕ್ಕೆ ಅನ್ವಯಿಸುತ್ತದೆ. ದಂತಿದುರ್ಗ, 1ನೇಕೃಷ್ಣ, ಧೃವ, 1ನೇ ಅಮೋಘವರ್ಷ, 3ನೇ ಇಂದ್ರ, 3ನೇ ಕೃಷ್ಣ ಇಂತಹ ರಾಷ್ಟ್ರಕೂಟ ಅರಸರು ವಾಸ್ತುಶಿಲ್ಪದ ಪೋಷಕರಾಗಿದ್ದರು. ಅವರಲ್ಲಿ ಕೆಲವರು ತಾವೇ ದೇವಾಲಯಗಳನ್ನು ಕಟ್ಟಿಸಿದರು. ಇನ್ನೂ ಕೆಲವರು, ಬೇರೆಯವರು ಕಟ್ಟಿಸಿದ ದೇವಾಲಯಗಳಿಗೆ ಉದಾರವಾದ ಕಾಣಿಕೆಗಳನ್ನು, ದಾನಗಳನ್ನು ನೀಡಿದರು. ಅರಸರಂತೆಯೇ ಅವರ ಕೆಲವು ಸಾಮಂತರು, ಗಂಗವಂಶದ 2ನೇ ಭೂತುಗನಂಥವರು,ಬಂಕೆಯನಂತಹ ಉನ್ನತ ಅಧಿಕಾರಿಗಳು ಬಸದಿಗಳ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದರು. ಬದಾಮಿ ಚಾಲುಕ್ಯರ ಆಳ್ವಿಕೆಯಲ್ಲಿ ದೇವಾಲಯ ನಿರ್ಮಾಣರು ಕೆಲವು ಕೇಂದ್ರಗಳಿಗೆ ಸೀಮಿತವಾಗಿದ್ದರೆ, ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಹೆಚ್ಚು ಹೆಚ್ಚು ನಗರಗಳಲ್ಲಿ ಮತ್ತು ಗ್ರಾಮಗಳಲ್ಲಿ ದೇವಾಲಯಗಳು ಮತ್ತು ಬಸದಿಗಳು ನಿರ್ಮಾಣಗೊಂಡವು. ಅದೇ ಸಮಯದಲ್ಲೇ ರಾಷ್ಟ್ರಕೂಟರು ಎಲ್ಲೋರಾ ಮತ್ತು ಎಲಿಫೆಂಟಾಗಳ್ಲಿ ಬಂಡೆಗಳನ್ನು ಕೊರೆದು ನಿರ್ಮಿಸಿದ ವಾಸ್ತುಶಿಲ್ಪ ರಚನೆಗಳನ್ನು

ಮುಂದುವರೆಸಿದರು. ಹೀಗೆ ರಾಷ್ಟ್ರಕೂಟರವಾಸ್ತು ಶಿಲ್ಪವು ಎರಡು ನಿರ್ದಿಷ್ಟ ವಿಭಾಗಗಳಲ್ಲಿ ಅಧ್ಯಯನ ಯೋಗ್ಯವಾಗಿದೆ. ಅವು 1) ಕಲ್ಲಿನಲ್ಲಿ ಕೊರೆದ ವಾಸ್ತುಶಿಲ್ಪ, ಹಾಗೂ 2) ನಿರ್ಮಾಣ ವಾಸ್ತುಶಿಲ್ಪ. ಕೆಳಗಿನ ಅಂತಸ್ತಿನ ಮಂಟಪದಲ್ಲಿ 14 ಕಂಬಗಳೂ ಮೇಲಿನ ಅಂತಸ್ತಿನ ಮಂಟಪದಲ್ಲಿ 18 ಕಂಬಗಳೂ ಇವೆ. ಗೋಡೆಗಳ ಮೇಲೆ ನಿಯತವಾದ ಅಂತರದಲ್ಲಿ ದೊಡ್ಡದಾದ ಶಿಲ್ಪಗಳಿವೆ. ಶಿವನು ಅಂಧಕನನ್ನು ಸಹರಿಸುತ್ತಿರುವುದು, ನಟರಾಜ, ಶಿವ ಮತ್ತು ಪಾರ್ವತಿಪಗಡೆಯಾಡುತ್ತಿರುವುದು, ಶಿವ-ಪಾರ್ವತಿಯರ ವಿವಾಹ, ಶಿವನು ಮಾರ್ಕಂಡೆಯನನ್ನು ರಕ್ಷಿಸುತ್ತಿರುವುದು, ಗಣೇಶ, ಗೋವರ್ಧನಧಾರಿ ಕೃಷ್ಣ, ಲಿಂಗೋದ್ಭವ ಶಿವ, ತ್ರಿವಿಕ್ರಮ, ನರಸಿಂಹನು ಹಿರಣ್ಯಕಶಿಪುವನ್ನು ಸಂಹರಿಸುತ್ತಿರುವುದು, ಅರ್ಧನಾರೀಶ್ವರ, ವರಾಹ ಮತ್ತು ಆದಿಶೇಷನ ಮೇಲೆ ಮಲಗಿರುವ ವಿಷ್ಣು ಈ ಶಿಲ್ಪಗಳು ಕಂಡುಬರುತ್ತದೆ. ಗರ್ಭಗೃಹದಲ್ಲಿ ವರ್ತುಲಾಕಾರದ ಪೀಠವೊಂದಿದ್ದು, ಅದರ ಮೇಲೆ ಲಿಂಗವಿದೆ. ರಾಷ್ಟ್ರಕೂಟರ ಕಾಲದಲ್ಲಿ ವರ್ತುಲಾಕಾರದ ಪೀಠವು ತುಂಬಾ ಸಾಮಾನ್ಯವಾಗಿದೆ.

ಎಲ್ಲೋರಾದ ಸ್ಮಾರಕಗಳಲ್ಲಿ 16ನೆಯ ಗುಹೆಯು, ಕೈಲಾಸ ದೇವಾಲಯವೆಂದು ಹೆಸರಾಗಿರುವುದು, ರಾಷ್ಟ್ರಕೂಟ ಸ್ಮಾರಕ ಕಟ್ಟಡಗಳಲ್ಲಿ ಅತ್ಯುತ್ತಮವಾದುದು ಎಂದು ಹೇಳಬಹುದು. ದಖ್ಖನಿನ ಗುಹಾಂತರ್ಗತ ವಾಸ್ತುಶಿಲ್ಪ ಪರಾಕಾಷ್ಠೆಯನ್ನು ಅದು ತೋರಿಸಿತ್ತದೆ. ಕೈಲಾಸ ದೇವಾಲಯವನ್ನು ಒಂದು ಏಕಶಿಲಾ ಗುಡ್ಡದಲ್ಲಿ ಕೊರೆಯಲಾಗಿದ್ದು, ಸುಮಾರು 3300 ಚದರ ಮೀಟರುಗಳಷ್ಟು ವಿಸ್ತೀರ್ಣವನ್ನು ಒಳಗೊಂಡಿದೆ. 38 ಮೀಟರ ಎತ್ತರವಾಗಿದೆ. ಕಲ್ಲಿನಲ್ಲಿ ಕೊರೆದ ಈ ದೇವಾಲಯವನ್ನು ನಿರ್ಮಿಸಿದವನು 1ನೇ ಕೃಷ್ಣ. ಅದ್ಭುತ ಸೌಂದರ್ಯದಿಂದ ಶೋಭಿಸುತ್ತಿರುವ ಈ ನಿರ್ಮಿತಿಯನ್ನು ಕುರಿತು ಬರೋಡಾ ತಾಮ್ರಫಲಕ ಶಾಸನವು ಹೀಗೆ ಹೇಳುತ್ತದೆ. "ಆಕಾಶದಲ್ಲಿ ಸಂಚಾರ ಮಾಡುವ ವಿಧ್ಯಾದರರು ಎಳಾಪುರದ ಈ ಅದ್ಭುತ ಸೃಷ್ಟಿಯನ್ನು ನೋಡಿ ಆಶ್ಚರ್ಯಪಡುತ್ತಾರೆ. ಇವು ಬ್ರಹ್ಮ ಮತ್ತು ಶಿವ ಇವರ ನಿವಾಸಗಳೇ ಸರಿ. ಇಂತಹ ಅಚ್ಚರಿಯನ್ನು ಈ ಮೊದಲೂ ಬೇರೆಲ್ಲೂ ನಾವು ಕಾಣಲಿಲ್ಲ ಎಂದು ಉದ್ಗರಿಸುತ್ತಾರೆ. ಅಷ್ಟೇಕೆ, ಈ ದೇವಾಲಯದ ಶಿಲ್ಪಿಯೇ ಮತ್ತೆ ಇಂಥದೇ ಒಂದು ಕೃತಿಯನ್ನು ತಾನು ನಿರ್ಮಿಸಬಲ್ಲನೆ ಎಂದು ತನ್ನ ಸಾಮರ್ಥ್ಯವನ್ನು ಕುರಿತು ಸಂದೇಹಪಡುತ್ತಾನೆ"

ಪಶ್ಚಿಮಕ್ಕೆ ಮುಖವಾಗಿರುವ ಈ ದೇವಾಲಯವು ಒಂದು ವಿಶಾಲವಾದ ಅಂಗಳದಲ್ಲಿದೆ. ಒಂದು ಪ್ರವೇಶದ್ವಾರ ನಂದಿಮಂಟಪ, ಸುಮಾರು 17 ಮೀಟರ್ ಎತ್ತರದ ಏಕಶಿಲಾ ಸ್ತಂಭಗಳು ತ್ರಿ-ಆಯಾಮವಿರುವ ಆನೆಗಳ ವಿಗ್ರಹಗಳಿವೆ. ದೇವಾಲಯವು ಎರಡು ಅಂತಸ್ತುಗಳನ್ನು ಹೊಂದಿದೆ. ಕೆಳ ಅಂತಸ್ತಿನಲ್ಲಿ ತಳಭಾಗದಲ್ಲಿ ಭಾರಿ ಆನೆಗಳನ್ನು ಕೆತ್ತಲಾಗಿದೆ, ಇಡೀ ದೇವಾಲಯವನ್ನು ಈ ಆನೆಗಳು ಹೊತ್ತಿರುವಂತೆ ಕಾಣಿಸುತ್ತದೆ. ಮೇಲಂತಸ್ತಿನಲ್ಲಿ 16 ಕಂಬಗಳ

ಮಂಟಪವಿದೆ, ಹಿಂಭಾಗದಲ್ಲಿ ಗರ್ಭಗೃಹವಿದೆ, ಅದರ ಸುತ್ತ ಐದು ಸಣ್ಣ ಗರ್ಭಗೃಹಗಳಿವೆ. ಮುಖ್ಯ ಶಿಖರದ ಸುತ್ತ ಐದು ಸಣ್ಣ ಶಿಖರಗಳಿವೆ. ಮುಖ್ಯ ಶಿಖರವು ದ್ರಾವಿಡ ಶೈಲಿಯಲ್ಲಿದ್ದು ಮೂರು ಹಂತಗಳಲ್ಲಿದೆ. ಮೇಲ್ತುದಿಯಲ್ಲಿ ಅಷ್ಟಭುಜಾಕೃತಿಯ ಸ್ತೂಪವಿದೆ. ಶಿಖರದ ಗಮನಾರ್ಹವಾದ ಒಂದು ಅಂಶ, ಶುಕನಾಸ ಮುಂಚಾಚು. ಇದು ಪಟ್ಟದಕಲ್ಲಿನಲ್ಲಿ ಬಾದಾಮಿ ಚಾಲುಕ್ಯರು ನಿರ್ಮಿಸಿದ ವಿರೂಪಾಕ್ಷ ಮತ್ತು ಮಲ್ಲಿಕಾರ್ಜುನ ದೇವಾಲಯಗಳ ಇಂಥವೇ ಚಾಚುಗಳನ್ನು ನೆನಪಿಗೆ ತರುತ್ತದೆ. ಗರ್ಭಗೃಹ ಮತ್ತು ಮಂಟಪಗಳಲ್ಲಿ ದೇವಕೋಷ್ಠಗಳಿದ್ದು, ಅಪಾರ ಸೌಂದರ್ಯವುಳ್ಳ ಶಿಲ್ಪಕಲಾಕೃತಿಗಳು ಅಲ್ಲಿ ತುಂಬಿವೆ. ಕೈಲಾಸ ದೇವಾಲಯವು ವಾಸ್ತಿಶಿಲ್ಪದ ಅಚ್ಚರಿ ಮಾತ್ರವಲ್ಲ, ಅತೀವ ಸುಂದರವಾದ ಮೂರ್ತಿಶಿಲ್ಪಗಳ ಭಂಡಾರವೂ ಆಗಿದೆ.

ಇಲ್ಲಿನ ಶಿಲ್ಪಕಲಾ ಯೋಜನೆಯೇ ವಿಸ್ತಾರವಾದದ್ದು. ಕಥನಾತ್ಮಕ ಶಿಲ್ಪಗಳು, ಮಹಾಭಾರತದ ದೃಶ್ಯಗಳು, ಕೃಷ್ಣನ ಜೀವನದ ಘಟನೆಗಳು ಮತ್ತು ರಾಮಾಯಣ ಸಂದರ್ಭಗಳು ಇವುಗಳ ಕೆತ್ತನೆಯು ಗೋಡೆಗಳ ಮೇಲೆ, ಮಂಟಪಕ್ಕೆ ಏರಿ ಹೋಗುವ ಮೆಟ್ಟಿಲುಗಳ ಪಾರ್ಶ್ವಗಳಲ್ಲಿ ಚಿತ್ರಿಸಲಾಗಿವೆ. ಕೆಳ ಅಂತಸ್ತಿನ ಶಿಲ್ಪಗಳಲ್ಲಿ ಗಜಾಸುರ ಸಂಹಾರ ಶಿವ, ದಕ್ಷಿಣಾಮೂರ್ತಿ, ಗಂಗಾ, ಯಮುನಾ, ನರಸಿಂಹ, ಚಾಮುಂಡಾ, ಲಕ್ಷ್ಮೀ ತ್ರಿಪುರ ಸಂಹಾರ ಶಿವ, ಕೈಲಾಸಪರ್ವತವನ್ನು ಎತ್ತಲು ಪ್ರಯತ್ನಿಸುತ್ತಿರುವ ರಾವಣ ಮೊದಲಾದವು ಮುಖ್ಯವಾದವು. ಪ್ರಧಾನ ಗರ್ಭಗೃಹದ ಭಾಗದಲ್ಲಿ ಗಂಗಾಧರನಾದ ಶಿವ, ಗಜೇಂದ್ರನನ್ನು ಕಾಪಾಡುತ್ತಿರುವ ವಿಷ್ಣು, ಅಂಧಕಾರಸುರವಧೆ, ನಟರಾಜ, ಶಿವ, ಬ್ರಹ್ಮ, ವಿಷ್ಣು, ದುರ್ಗಾ, ವಾಲಿ-ಸುಗ್ರೀವರ ಕಾಳಗ, ಜಟಾಯುವು ರಾವಣನ್ನು ಆಕ್ರಮಿಸುತ್ತಿರುವುದು. ಲಿಂಗೋದ್ಭವ ಶಿವ ವಿಗ್ರಹಗಳಿವೆ. ಮುಖ್ಯ ದೇವಾಲಯದ ಬಲಭಾಗಕ್ಕೆ ಇರುವ ಲಂಕೇಶ್ವರ ಗುಡಿ ಮತ್ತು ನಾರಿಮಂಟಪಗಳಲ್ಲಿ ಸೂರ್ಯ, ವರಾಹ, ಪಾರ್ವತಿ, ಗಣೇಶ, ಮೂರು ಮುಖದ ಶಿವ, ಶಿವ ಮತ್ತು ಪಾರ್ವತಿ, ನದೀ ದೇವತೆಗಳು ಈ ಸುಂದರವಾದ ಕೆಲವು ಮೂರ್ತಿಗಳಿವೆ. ಕೈಲಾಸ ದೇವಾಲಯದ ಶಿಲ್ಪಗಳು, ಪಟ್ಟದಕಲ್ಲಿನ ವಿರೂಪಾಕ್ಷ ದೇವಾಲಯ ಮತ್ತು ಕಾಂಚಿಯ ಕೈಲಾಸನಾಥ ದೇವಾಲಯಗಳಲ್ಲಿರುವ ಅಂಥವೇ ವಿಗ್ರಹಗಳಿಂದ ಬಹುಮಟ್ಟಿಗೆ ಪ್ರಭಾವಿತವಾಗಿರುವಂತೆ ತೋರುತ್ತದೆ.

ಎಲ್ಲೋರದ ಜೈನಗುಹೆಗಳು ರಾಷ್ಟ್ರಕೂಟರ ವಾಸ್ತುಶಿಲ್ಪ ಚಟುವಟಿಕೆಯ ಕೊನೆಯ ಹಂತವನ್ನು ಪ್ರತಿನಿಧಿಸುತ್ತವೆ. ಇವುಗಳಲ್ಲಿ ಕೆಲವು ಏಕಶಿಲಾಮಯವಾದವು. 30ನೆಯ ಗುಹೆ, ಛೋಟಾ ಕೈಲಾಸ ಎಂದು ಪ್ರಸಿದ್ಧವಾಗಿರುವುದು, ವಾಸ್ತವವಾಗಿ ಕೈಲಾಸ ದೇವಾಲಯದ ಪ್ರತಿ ಕೃತಿಯೇ ಆಗಿದೆ. ಆದರೆ ಅದು ಪೂರ್ಣಗೊಂಡಿಲ್ಲ. ಇದಕ್ಕೆ ಮೂರು ಅಂತಸ್ತುಗಳ ವಿಮಾನವಿದೆ. ಎಲ್ಲೋರದಲ್ಲಿರುವ ರಾಷ್ಟ್ರಕೂಟ ಕಾಲದ ಇತರ ಎರಡಂತಸ್ತಿನ ಜೈನ ರಚನೆಗಳು

ಇಂದ್ರಸಭಾ ಮತ್ತು ಜಗನ್ನಾಥ ಸಭಾಂಗಣ. ಇಂದ್ರಸಭಾ (32ನೆಯ ಗುಹೆ) ಎಲ್ಲೋರದಲ್ಲಿರುವ ಅತ್ಯಂತ ಸುಂದರವಾದ ಜೈನ ಕಲಾಕೃತಿ. ಈ ಏಕಶಿಲಾ ಗುಡಿಯು ಒಂದು ಅಂಗಳದ ನಡುವೆ ಇದೆ, ಒಳಗೆ ಕೆತ್ತಿರುವ ಇಂದ್ರ ಮತ್ತು ಶಚೀದೇವಿಯರ ವಿಗ್ರಹಗಳಿಂದಾಗಿ ಆ ಹೆಸರು ಪಡೆದಿದೆ. ಎಲ್ಲೋರಾದ ಇಂದ್ರಸಭೆ, ಛೋಟಾ ಕೈಲಾಸ, ಜಗನ್ನಾಥ ಸಭೆ, ಮತ್ತು 31 ಹಾಗೂ 34ನೇ ಗುಹಾಲಯಗಳಲ್ಲಿ ಗೊಮ್ಮಟನ ಶಿಲ್ಪಗಳಿವೆ. ಕ್ರಿ.ಶ. 10ನೇ ಶತಮಾನದಲ್ಲಿ ಕೊರೆದು ನಿರ್ಮಿಸಲಾದ ಇಂದ್ರಸಭೆಯಲ್ಲಿಯೇ ಬಾಹುಬಲಿಯ ನಾಲ್ಕು ಶಿಲ್ಪಗಳಿವೆ.

ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ, ಬಾದಾಮಿ ಚಾಲುಕ್ಯರ ಕಾಲದಿಂದ ಮೊದಲುಗೊಂಡು 10ನೆಯ ಶತಮಾನದವರೆಗೆ, ಗರ್ಭಗೃಹದ ಮುಂದೆ, ಆಚೀಚೆ ಗೊಮ್ಮಟ ಮತ್ತು ಪಾರ್ಶ್ವನಾಥ ಮೂರ್ತಿಗಳನ್ನು ಕಂಡರಿಸಿರುವುದು. ಬಾದಾಮಿ ಮತ್ತು ಐಹೊಳೆಯ ಗುಹಾಲಯಗಳಲ್ಲಿ ಇವನ್ನು ವರಾಂಡದ ಗೋಡೆಗಳ ಮೇಲೆ ಕೆತ್ತಿದ್ದರೆ ಎಲ್ಲೋರದ ಗುಹಾಲಯಗಳಲ್ಲಿ ಸಭಾಮಂಟಪದ ಗೋಡೆಗಳ ಮೇಲೆ ಈ ಶಿಲ್ಪಗಳನ್ನು ಮೂಡಿಸಿದ್ದಾರೆ. ಹೀಗೆ ಪಾರ್ಶ್ವನಾಥ ಮತ್ತು ಗೊಮ್ಮಟದ ಮೂರ್ತಿಗಳನ್ನು ಕೊರೆಯುವ ಸಂಪ್ರದಾಯ ಕೇವಲ ಕರ್ನಾಟಕಕ್ಕೆ ಸೀಮಿತವಾಗಿರದೆ, ತಮಿಳುನಾಡಿನಲ್ಲಿಯೂ ಕಂಡುಬರುತ್ತದೆ. ಉದಾಹರಣೆಗೆ ಮೇಲ್‌ಸಿತ್ತಮೂರು (8–9ನೇ ಶತಮಾನ), ಚಿತ್ತಾಮೂರು, ಕಲುಗುಮಲೈ, ಕಾರೈಕೋಯಿಲ್ (8–9ನೇ ಶತಮಾನ,) ತಿರುಮಲೈ, ಅರಮಲೈ ಮತ್ತು ವಳ್ಳಿಮಲೈಗಳಲ್ಲಿರುವ ಪಾರ್ಶ್ವನಾಥ ಮತ್ತು ಬಾಹುಬಲಿ ಮೂರ್ತಿಗಳನ್ನು ಉಲ್ಲೇಖಿಸಬಹುದು. ಇವು 8ನೆಯ ಶತಮಾನದ ನಂತರದವಾದ್ದರಿಂದ ಅವುಗಳ ಮೇಲೆ ಕರ್ನಾಟಕದ ಪ್ರಭಾವವಾಗಿರುವುದನ್ನು ಗಮನಿಸಬೇಕಾಗುತ್ತದೆ.

ವಳ್ಳಿಮಲೆಯ ಕೆಲವು ಮೂರ್ತಿಗಳು ಕರ್ನಾಟಕದ ಗಂಗ ಅರಸ 1ನೇ ರಾಚಮಲ್ಲನ ಪ್ರೇರಣೆಯಿಂದ ಆದುವೆನ್ನುವುದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು. ರಾಷ್ಟ್ರಕೂಟರ ಕಾಲದಲ್ಲಿ ಸಿದ್ದಪಡಿಸಿದ ಬಾಹುಬಲಿಮೂರ್ತಿಗಳು, ಅದರಲ್ಲೂ ವಿಶೇಷವಾಗಿ ಎಲ್ಲೋರದ ಜೈನ ಗುಹಾಲಯಗಳಲ್ಲಿ ಕಂಡುಬರುವ ಶಿಲ್ಪಗಳಲ್ಲಿ ಜಿನಸೇನಾಚಾರ್ಯರ ಮಹಾಪುರಾಣದ ಪ್ರಭಾವ ಕಂಡುಬರುತ್ತದೆ. ಬಾದಾಮಿ ಚಾಲುಕ್ಯರ ಕಾಲದ ಬಾಹುಬಲಿ ಶಿಲ್ಪವಾದರೋ ಜೈನಪುರಾಣಗಳನ್ನೇ ಆಧರಿಸಿ ಸೃಷ್ಟಿಸಲಾದ ಮೂರ್ತಿಗಳೆಂಬುದರಲ್ಲಿ ಸಂದೇಹವಿಲ್ಲ. ಆದರೆ ಆ ಕಾಲಕ್ಕೆ ಪ್ರಚಲಿತವಿದ್ದ ಪುರಾಣ ಗ್ರಂಥಗಳಾವುವು ಎಂಬುದು ತಿಳಿದುಬಂದಿಲ್ಲ. ಜಿನಸೇನಾಚಾರ್ಯ ಮತ್ತು ಗುಣಭದ್ರಾಚಾರ್ಯರು ಮಹಾಪುರಾಣವನ್ನು ರಚಿಸುವಾಗ ಪ್ರಚಲಿತವಾಗಿದ್ದ ಪರಂಪರಾಗತ ಪವಿತ್ರ ಗ್ರಂಥಗಳಿಂದಲೂ ಶಾಸ್ತ್ರಗ್ರಂಥಗಳಿಂದಲೂ ಅನೇಕ ವಿಚಾರಗಳನ್ನು ಆಯ್ದುಕೊಂಡರು. ಮಹಾಪುರಾಣದಲ್ಲಿ ಬಾಹುಬಲಿಗೆ ಸಂಬಂಧಿಸಿದ ಘಟನೆಗಳನ್ನು ವಿವರವಾಗಿ, ಸ್ಪಷ್ಟವಾಗಿ

ಬರೆದಿರುವುದರಿಂದ, ಬಾಹುಬಲಿ ಮೂರ್ತಿಗಳನ್ನು ಸಿದ್ದಪಡಿಸುವಾಗ ಈ ವಿವರಗಳು ಮಾರ್ಗದರ್ಶಿಯಾದುವು. ರಾಷ್ಟ್ರಕೂಟರ ಕಾಲದಲ್ಲಿ ಬಾದಾಮಿ ಚಾಲುಕ್ಯ ಮಾದರಿಯ ಬಾಹುಬಲಿ ಮೂರ್ತಿಗಳನ್ನು ಕೆತ್ತಿದರೂ ಅವುಗಳಲ್ಲಿ ಕೆಲವು ಹೊಸ ಲಕ್ಷಣಗಳನ್ನು ಅಳವಡಿಸಿಕೊಳ್ಳಲಾಯಿತು. ಎಲ್ಲೋರದ ಇಂದ್ರಸಭೆಯ ಗರ್ಭಗೃಹದ ಹೊರಭಾಗದಲ್ಲಿರುವ ಬಾಹುಬಲಿಮೂರ್ತಿ, ಎಲ್ಲೋರದ ಜೈನಶಿಲ್ಪಗಳಲ್ಲೇ ಅತ್ಯುತ್ತಮವಾದ ಶಿಲ್ಪ. ನೀಳವಾದ ಕೇಶರಾಶಿಯಿಂದ ಕೂಡಿದ ಬಾಹುಬಲಿ ಕಾಯೋರ್ತ್ಸರ್ಗದಲ್ಲಿದ್ದಾನೆ, ಮಾಧವೀಲತೆಯು ಕೈಕಾಲುಗಳಿಗೆ ತೊಡರಿಕೊಂಡಿದೆ. ಈ ಬಳ್ಳಿಯನ್ನೇ ವಿಗ್ರಹದ ಅಕ್ಕ ಪಕ್ಕಗಳಲ್ಲಿ ಬಳ್ಳಿ ಸುರುಳಿಗಳಾಗಿ ಅಲಂಕಾರ ಚಿಹ್ನೆಯಾಗಿ ಉಪಯೋಗಿಸಲಾಗಿದೆ. ಬ್ರಾಹ್ಮೀ ಮತ್ತು ಸೌಂದರಿಯರು ಕೈಯಲ್ಲಿ ಬಳ್ಳಿಯನ್ನು ಹಿಡಿದುಕೊಂಡಿರುವುದು ಗಮನಾರ್ಹ. ಇನ್ನೊಂದು ವಿಶೇಷ ಈ ಮೂರ್ತಿಯ ಪಾದಗಳ ಬಳಿ ಜಿಂಕೆ, ಸರ್ಪ, ಇಲಿ, ಚೇಳು ಮತ್ತು ಕಾಡುನಾಯಿ ಮೊದಲಾದ ವಿವಿಧ ಪ್ರಾಣಿಗಳನ್ನು ಕೆತ್ತಿರುವುದು. ಬಾಹುಬಲಿಯ ಬಲಗಡೆ ಅಂಜಲಿ ಹಸ್ತದಲ್ಲಿರುವ ಮೂರ್ತಿಯನ್ನು ಭರತ ಚಕ್ರವರ್ತಿಯ ಶಿಲ್ಪವೆಂದು ವಿದ್ವಾಂಸರು ಗುರುತಿಸಿದ್ದಾರೆ.

ಚಾಲುಕ್ಯ ಕಾಲದ ಶಿಲ್ಪಗಳಲ್ಲಿ ಹುತ್ತಗಳು ಮತ್ತು ಸರ್ಪಗಳು ಮಾತ್ರ ಕಂಡುಬರುತ್ತವೆ. ಆದರೆ ಇಲ್ಲಿ ಬಗೆಬಗೆಯ, ಪರಸ್ಪರ ವೈರವಿರುವ ಪ್ರಾಣಿಗಳನ್ನು ಕೆತ್ತಲಾಗಿದೆ. ಇಂದ್ರಸಭೆಯನ್ನು ಸಿದ್ದಪಡಿಸುವ ವೇಳೆಗೆ ಜಿನಸೇನಾಚಾರ್ಯರು ಮಹಾಪುರಾಣವನ್ನು ಬರೆದು ಮುಗಿಸಿದ್ದರು. ತಪವನ್ನಾಚರಿಸುತ್ತಿದ್ದ ಬಾಹುಬಲಿಯನ್ನು ಜಿನಸೇನಾಚಾರ್ಯರು ವರ್ಣಿಸುವ ಸಂದರ್ಭ ಕಾವ್ಯಮಯವಾಗಿದೆ. ಬಾಹುಬಲಿಯ ತಲೆಗೂದಲನ್ನು ವರ್ಣಿಸುವ ಸಂದರ್ಭದಲ್ಲಿ ಅವು ವಕ್ರವಾದ ತುದಿಗಳನ್ನುಳುವು ಎಂದಿರುವುದು ಬಾಹುಬಲಿಯ ಗುಂಗುರುಗೂದಲಿನ ಕಡೆಗೆ ಬೆರಳು ತೋರಿಸುತ್ತದೆ. ಜಿನಸೇನಾಚಾರ್ಯರ ಈ ವರ್ಣನೆಯನ್ನು ಆಧರಿಸಿ ರಾಷ್ಟ್ರಕೂಟರ ಕಾಲದಲ್ಲಿ ಬಾಹುಬಲಿಯನ್ನು ಗುಂಗುರುಕೂದಲುಗಳಿಂದ ಅಲಂಕರಿಸುವ ಸಂಪ್ರದಾಯವು ಆರಂಭಗೊಂಡಿರಬೇಕೆಂದು ತೋರುತ್ತದೆ.

ಜಿನಸೇನರ ಬಾಹುಬಲಿ ವರ್ಣನೆಯಲ್ಲಿ ಇನ್ನೊಂದು ಹೆಚ್ಚಿನ ಅಂಶವನ್ನು ಗುರುತಿಸಬಹುದು. ಗೊಮ್ಮಟನ ಪಾದಗಳ ಬಳಿ ಪರಸ್ಪರ ಆಜನ್ಮ ವೈರವುಳ್ಳ ಹಾವು–ನವಿಲು ಮೊದಲಾದ ಪ್ರಾಣಿ ಪಕ್ಷಿಗಳು ತಮ್ಮ ವೈರವನ್ನು ಮರೆತು ಅವನ ಸುತ್ತಮುತ್ತ ವಾಸಮಾಡುತ್ತಿದ್ದುವೆಂದು ವರ್ಣಿಸಲಾಗಿದೆ. ಈ ವರ್ಣನೆಗೆ ಅನುಸಾರವಾದ ಶಿಲ್ಪವನ್ನು ಇಂದ್ರಸಭೆಯಲ್ಲಿ ನೋಡಬಹುದು. ಹಾವು–ಇಲಿ, ಕಾಡುನಾಯಿ–ಜಿಂಕೆ ಇಂತಹ ಪರಸ್ಪರ ವೈರಿಗಳಾದ ಪ್ರಾಣಿಗಳು, ವಿಷಯುಕ್ತವಾದ ಚೇಳುಗಳು ಮೊದಲಾದವನ್ನು ಬಾಹುಬಲಿಯ ಪಾದಗಳ ಬಳಿ ಕೆತ್ತಿದ್ದು, ಅವು ವೈರವನ್ನು ಮರೆತು ಶಾಂತಿಯಿಂದ, ನೆಮ್ಮದಿಯಾಗಿ

ಜೀವಿಸುತ್ತಿದ್ದುವು ಎಂಬ ಅರ್ಥಬರುವಂತೆ ಈ ಶಿಲ್ಪವನ್ನು ಕಂಡರಿಸಲಾಗಿದೆ. ಪ್ರಾಚೀನ ಘಾರಾಪುರಿಯಾದ ಈಗಿನ ಎಲಿಫೆಂಟಾ ಮುಂಬಯಿಯಿಂದ ಆರು ಮೈಲು ದೂರದಲ್ಲಿರುವ ಒಂದು ನಡುಗಡ್ಡೆ. ಇಲ್ಲಿನ ಗುಹಾಲಯಗಳು ರಾಷ್ಟ್ರಕೂಟರ ಕಾಲದವು. ಇಲ್ಲಿನ ಮುಖ್ಯ ಗುಹಾಲಯವು 130 ಅಡಿ ಚಚ್ಚೌಕವಾಗಿದೆ. ಇದರಲ್ಲಿ 30 ದೊಡ್ಡ ದೊಡ್ಡ ಕಂಬಗಳಿರುವ ಮಹಾಮಂಟಪವಿದೆ. ಕಂಬಗಳ ಕೆಳಭಾಗವು ಚೌಕಾಕಾರವಾಗಿಯೂ ಮಧ್ಯಭಾಗವು ಅರೆಕೊಳವಿಯಾಕಾರದ ಅಲಂಕಾರದಲ್ಲಿಯೂ, ನೆತ್ತಿಯ ಮೇಲೆ ನೆಲ್ಲಿಕಾಯಿ ಆಕಾರದ ಮುಚ್ಚಿಗೆಯಾಗಿಯೂ ಇದೆ. ಮಂಟಪಕ್ಕೆ ಹೋಗಲು ಮೆಟ್ಟಿಲುಗಳನ್ನು ಕೊರೆಯಲಾಗಿದೆ. ಮಂಟಪದ ಹಿಂಭಾಗದಲ್ಲಿ ನಾಲ್ಕು ದಿಕ್ಕಿಗೂ ಬಾಗಿಲುಗಳಿರುವ ಗರ್ಭಗೃಹವಿದೆ. ಇಲ್ಲಿ ಒಂದು ಶಿವಲಿಂಗವಿದೆ.

ಎಲಿಫೆಂಟಾದ ಈ ಗುಹಾಲಯವು ಸು. 18 ಅಡಿ ಎತ್ತರವಾಗಿರುವ ಮಹೇಶಮೂರ್ತಿಯ ಶಿಲ್ಪಕ್ಕಾಗಿ ಜಗತ್ ಪ್ರಸಿದ್ಧವಾಗಿದೆ. ಈ ಬೃಹದಾಕಾರದ ಮೂರ್ತಿಯನ್ನು ದಕ್ಷಿಣದ ಗೋಡೆಯ ಮೇಲೆ ಎರಡು ಕಂಬಗಳ ಮಧ್ಯೆ ಕೆತ್ತಲಾಗಿದೆ. ಈ ಮೂರ್ತಿಯು ಶಿವನ ಮೂರು ಸ್ವರೂಪಗಳನ್ನು ಸಂಕೇತಿಸುವ ಮೂರು ಮುಖಗಳನ್ನು ಹೊಂದಿದೆ. ಅವು ಭಯಂಕರವಾದ ಭೈರವರೂಪ, ಶಾಂತವಾದ ಶಿವರೂಪ ಮತ್ತು ಅರ್ಧನಾರೀಶ್ವರ ರೂಪ.

ನಿರ್ಮಾಣ ವಾಸ್ತುಶಿಲ್ಪ

ಬಹಳ ಕಾಲದವರೆಗೆ ರಾಷ್ಟ್ರಕೂಟರು ಕೆಲವೇ ಕೆಲವು ದೇವಾಲಯಗಲನ್ನು ಕಟ್ಟಿಸಿದರು ಎಂದು ಕಲಾ ಇತಿಹಾಸಕಾರರು ಭಾವಿಸಿದ್ದರು. ಹಾಗಾಗಿ ಅವರ ಅಧ್ಯಯನ ಇಲ್ಲೋರ ಮತ್ತು ಎಲಿಫೆಂಟಾಗಳ ಗುಹಾಲಯ ವಾಸ್ತುಶಿಲ್ಪಕ್ಕೆ ಸೀಮಿತವಾಗಿತ್ತು. ಈಚೆಗಷ್ಟೇ ರಾಷ್ಟ್ರಕೂಟ ಕಾಲದ ನಿರ್ಮಾಣ ವಾಸ್ತುಶಿಲ್ಪವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನಗಳು ನಡೆದಿವೆ. ರಾಷ್ಟ್ರಕೂಟರ ಕಾಲದ ಶಾಸನಗಳನ್ನು ಪರಿಶಿಲಿಸಿದರೆ, ಪ್ರಾಚೀನ ಚಾಲುಕ್ಯರಿಗೆ ಸೇರಿದ ದೇವಾಲಯಗಳಿಗೆ ಪೋಷಣೆಯನ್ನು ಒದಗಿಸಿದುದು ಮಾತ್ರವಲ್ಲದೆ ಬಹುಸಂಖ್ಯೆಯ ದೇವಾಲಯಗಳನ್ನು ನಿರ್ಮಿಸಲಾಯಿತು ಎಂಬುದು ತಿಳಿದುಬರುತ್ತದೆ. ಮದರಿಕಲ್, ಕೆಣ್ಣೂರು, ಸವದತ್ತಿ, ಬಂದಳಿಕೆ, ನಂದವಾಡಿಗೆ, ಹುನಗುಂದ, ಆಸುಂಡಿ, ಬಂಕಾಪುರ, ನಂದಾವರ, ವೇರಗೆ, ಕವುಜಗೆರೆ, ಬೆಳವಣಿಕೆ, ಸಿರಿವಾಲ, ಕುರ್ತಕೋಟಿ, ಕುಡತಿನಿ, ಕೊಲ್ಲಲ್ಲು, ನರೇಗಲ್ಲು, ಕಟಿಂಗ ರಾಮೇಶ್ವರ, ಅಡನೂರು, ಕೊಪ್ಪಳ, ಗುಂಡೇರಿ, ಕಾಕರುಳ, ಐಹೊಳೆ ಮತ್ತು ಇನ್ನೂ ಇತರ ಅನೇಕ ಸ್ಥಳಗಳಲ್ಲಿ ಅವರು ದೇವಾಲಯಗಳನ್ನು ಕಟ್ಟಿಸಿದುದನ್ನು ಶಾಸನಗಳು ಹೇಳುತ್ತವೆ. ರಾಷ್ಟ್ರಕೂಟ ದೇವಾಲಯಗಳ ಅವಶೇಷಗಳನ್ನು ವಿಶೇಷವಾಗಿ ಉತ್ತರ ಕರ್ನಾಟಕದ ಅನೇಕ ಸ್ಥಳಗಳಲ್ಲಿ

ನೋಡಬಹುದು. ಈ ಕಾಲಾವಧಿಯ ದೇವಾಲಯಗಳನ್ನು ಐಹೊಳೆ, ಬಾದಾಮಿ, ಪಟ್ಟದಕಲ್ಲು, ನಂದವಾಡಿಗೆ, ಗೂಡೂರು, ಯಂಕಂಚಿ, ಮಹಾಕೂಟ, ಹಳ್ಳೂರು,(ಎಲ್ಲ ಬಿಜಾಪುರ ಜಿಲ್ಲೆಗೆ ಸೇರಿವೆ) ; ಗದಗ ರೋಣ, ರಾಜೂರು, ನರೆಗಲ್ಲು, ಕುಕನೂರು, ಕೊಣ್ಣೂರು, ನರಗುಂದ, ಸೂಡಿ, ಸವದಿ, ಲಕ್ಕೇಶ್ವರ (ಧಾರವಾಡ ಜಿಲ್ಲೆ) ; ಸವದತ್ತಿ, ಹೂಲಿ, ಸೊಗಲ (ಬೆಳಗಾವಂ ಜಿಲ್ಲೆ) ; ಕುಡತಿನಿ, ಕೊಲ್ಲಲ್ಲು, ಕುಮಾರಸ್ವಾಮಿಬೆಟ್ಟ, ಹಂಪಿ (ಬಳ್ಳಾಋಇ ಜಿಲ್ಲೆ) ; ಕಟಿಂಗ ರಾಮೇಶ್ವರ, ಅಡ್ನೂರು, ಈಸಮುದ್ರ, ಚಿಕ್ಕಮಧುರೆ, (ಚಿತ್ರದುರ್ಗ ಜಿಲ್ಲೆ) ; ಮಂಡ್ಯ ಜಿಲ್ಲೆಯ ಆತಕೂರು, ಗುಲ್ಬರ್ಗಾ ಜಿಲ್ಲೆಯ ಸಿರಿವಾಲ ಈ ಸ್ಥಳಗಳಲ್ಲಿ ಗುರುತಿಸಲಾಗಿದೆ. ಇವುಗಳ ಪೈಕಿ ಐಹೊಳೆ , ಸಿರಿವಾಳ, ಕುಕನೂರು, ರೋಣ, ನರೇಗಲ್, ಹಳ್ಳೂರು ಮತ್ತು ಲಕ್ಷ್ಮೇಶ್ವರಗಳಲ್ಲಿ ರಾಷ್ಟ್ರಕೂಟ ದೇವಾಲಯಗಳ ಅತ್ಯಂತ ಸುಂದರವಾದ ಮಾದರಿಗಳನ್ನು ನೋಡಬಹುದಾಗಿದೆ. ಸಿರಿವಾಲ ಮತ್ತು ಐಹೊಳೆಗಳನ್ನು ಈ ಕಾಲದ ಇಪ್ಪತ್ತಕ್ಕೂ ಹೆಚ್ಚು ದೇವಾಲಯಗಳು ಕಂಡುಬಂದಿವೆ.

ರಾಷ್ಟ್ರಕೂಟ ವಾಸ್ತುಶಿಲ್ಪಿಗಳೂ ಮತ್ತು ಕಲಾವಿದರೂ ತಮ್ಮದೇ ಆದ ವಿಶಿಷ್ಟತೆಯನ್ನು ಉಳಿಸಿಕೋಳ್ಳಲು ಪ್ರಯತ್ನಪಟ್ಟರು. ಅಂದ ಮಾತ್ರಕ್ಕೆ , ಆಗಲೇ ಸಿದ್ಧವಾಗಿದ್ದ ಪ್ರಾಚೀನ ಚಾಲುಕ್ಯ ವಾಸ್ತುಶಿಲ್ಪ ಸಂಪ್ರದಾಯವನ್ನು ತೊರೆದುಬಿಟ್ಟರು ಎಂದರ್ಥವಲ್ಲ. ಹೊಸಬಗೆಯ ಅಲಂಕಾರಗಳನ್ನೂ ಹೊಸ ಬಗೆಯ ದೇವಾಲಯ ತಳವಿನ್ಯಾಸವನ್ನೂ, ಸುಧಾರಿತ ಗೋಡೆ ಮಾದರಿಗಳನ್ನೂ, ಪ್ರಾಚೀನ ಚಾಲುಕ್ಯ ಕಾಲದವಕ್ಕಿಂತ ಭಿನ್ನವಾದ ಕಂಬಗಳನ್ನೂ ಅವರು ಅಳವಡಿಸಿಕೊಂಡರು. ಅಂತೂ ರಾಷ್ಟ್ರಕೂಟ ವಾಸ್ತುಶಿಲ್ಪವು ಪ್ರಾಚೀನ ಚಾಲುಕ್ಯ ವಾಸ್ತು ಶಿಲ್ಪದಿಂದ ಗಣನೀಯವಾಗಿ ಪ್ರಭಾವಿತವಾಯಿತು. ಬದಲಾದ ಸೌಂದರ್ಯಾಭಿರುಚಿ ಮತ್ತು ಉದ್ದೇಶಗಳಿಗೆ ತಕ್ಕಂತೆ ಅವರು ಬದಲಾವಣೆಗಳನ್ನು ಮಾಡಿಕೊಂಡರು. ಬದಲಾದ ಧಾರ್ಮಿಕ ಪರಿಗಣನೆಗಳಿಗೆ ತಕ್ಕಂತೆ ದ್ವಿಕೂಟ ಮತ್ತು ತ್ರಿಕೂಟ ವಾಸ್ತುಶಿಲ್ಪಿಗಳು ನಿರ್ಮಿಸಿದರು. ಆ ಕಾಲದಲ್ಲಿ ತ್ರೈಪುರುಷ ಪರಿಕಲ್ಪನೆಯು ಪ್ರಚುರವಾಗಿದ್ದುದರಿಂದ ತ್ರೀಮೂರ್ತಿಗಳನ್ನು ಒಂದೇ ಕೋಷ್ಠದಲ್ಲಿ ಅಥವಾ ಬೇರೆ ಬೇರೆ ಕೋಷ್ಠಗಳಲ್ಲಿ ಪ್ರತಿಷ್ಠಿಸಿದರು. ಈ ಕಾಲದಲ್ಲಿ ಮೂರು ಬಗೆಯ ಕಲ್ಲುಗಳನ್ನು ನುರ್ಮಾಣ ಕಾರ್ಯದಲ್ಲಿ ಬಳಸಿರುವಂತೆ ಕಂಡುಬರುತ್ತದೆ.

1. ಕೆಂಪು ಮರಳುಗಲ್ಲು
2. ಗ್ರಾನೈಟ್
3. ಪದರಗಲ್ಲು

ಪ್ರಾಚೀನ ಚಾಲುಕ್ಯ ರಾಜ್ಯದ ಹೃದಯಭಾಗದಲ್ಲಿ, ಅಂದರೆ ಬಿಜಾಪುರ ಪ್ರದೇಶದಲ್ಲಿ ಐಹೊಳೆ, ಪಟ್ಟದಕಲ್ಲು, ಮಹಾಕೂಟ, ಗೂಡೂರು, ನಂದವಾಡಿಗೆ ಮುಂತಾದ ಕಡೆ ಕೆಂಪುಮರಳುಗಲ್ಲನ್ನು

ಬಳಸಿ ದೇವಾಲಯಗಳನ್ನು ನಿರ್ಮಿಸಲಾಗಿದೆ. ಹಂಪಿಯಲ್ಲಿರುವ ಸಣ್ಣದೊಂದು ರಾಷ್ಟ್ರಕೂಟ ದೇವಾಲಯವೂ ಕೆಂಪುಮರಳುಗಲ್ಲಿನದು ಎಂಬುದನ್ನೂ ಗಮನಿಸಬೇಕು. ರಾಷ್ಟ್ರಕೂಟ ಆಳ್ವಿಕೆಯ ಕೊನೆಯವರ್ಷಗಲ್ಲಿ ದೇವಾಲಯ ನಿರ್ಮಾಣದ ಮಾಧ್ಯಮವಾದ ಪದರುಗಲ್ಲನ್ನು ಬಳಸಲಾಯಿತು. ಬೆಳಗಾಂ ಜಿಲ್ಲೆಯ ಸೋಗಲ ಮತ್ತು ಹೂಲಿಗಳಲ್ಲಿರುವ ದೇವಾಲಯಗಳಿಂದ ಇದು ಸ್ಪಷ್ಟಪಡಿಸುತ್ತದೆ. ಇಲ್ಲಿ ಸ್ವಾರಸ್ಯವಾದ ವಿಷಯವೆಂದರೆ, ಗ್ರಾನೈಟ್ ಮತ್ತು ಕೆಂಪುಮರಳುಗಲ್ಲು ದೇವಾಲಯಗಳಲ್ಲಿ ಶಿಲ್ಪಕಲಾ ಕೆತ್ತನೆ ಕಡಮೆ; ಆದರೆ ಪದರಗಲ್ಲು ಬಳಸಿದ ದೇವಾಲಯಗಳಲ್ಲಿ ವಿವರವಾಗಿ ಕಂಡರಿಸಿದ ಬಾಗಿಲುವಾಡಗಳನ್ನೂ ಇತರ ಉಬ್ಬುಶಿಲ್ಪಗಳನ್ನು ನೋಡುತ್ತೇವೆ. ಇದಕ್ಕೆ ಒಳ್ಳೆಯ ಮಾದರಿ ಹೂಲಿಯ ಅಂಧಕೇಶ್ವರ ದೇವಾಲಯ. ಇಲ್ಲಿಯ ಬಾಗಿಲ ಚೌಕಟ್ಟುಗಳನ್ನು ವಿವರವಾಗಿ, ನಂತರ ಚಾಲುಕ್ಯರ ಕಾಲದ ಲಕ್ಕುಂಡಿಯ ಕಾಶಿ ವಿಶ್ವೇಶ್ವರ ದೇವಾಲಯದ ಬಾಗಿಲುವಾಡಗಳಂತೆ ಕೆತ್ತಲಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಕಟ್ಟಲಾದ ಅನೇಕ ರಾಷ್ಟ್ರಕೂಟ ದೇವಾಲಯಗಳು, ಹಾಗೂ ಗುಲ್ಬರ್ಗಾ ಜಿಲ್ಲೆಯ ಕೆಲವು ಗ್ರಾನೈಟ್ ಕಲ್ಲಿನಿಂದ ನಿರ್ಮಿತವಾದವು. ಕುಡತಿನಿ, ಹಂಪಿ, ಸಿರಿವಾಲಗಳಲ್ಲಿ ಇವುಗಳನ್ನು ನೋಡಬಹುದು. ದೇವಾಲಯಗಳ ವಿನ್ಯಾಸಗಳನ್ನು ಗಮನಿಸಿದರೆ ಈ ಎಲ್ಲವೂ ನಿರಂಧರ ಮಾದರಿಯವಾಗಿರುವುದು ಕಂಡಿಬರುತ್ತದೆ. ಇದಕ್ಕೆ ಅಪರಾದವಾಗಿರುವುವು ಪಟ್ಟದಕಲ್ಲು ಮತ್ತು ಹಳ್ಳೂರುಗಳಲ್ಲಿರುವ ಎರಡು ಜೈನ ಬಸದಿಗಲು. ಪ್ರದಕ್ಷಿಣಪಥವಿಲ್ಲದೆ ದೇವಾಲಯವನ್ನು ನಿರ್ಮಿಸುವ ಅಭ್ಯಾಸವು ಆ ಮೇಲಿನ ಕಾಲದ ವಾಸ್ತುಶಿಲ್ಪದ ಮೇಲೆ ತುಂಭಾ ಪ್ರಭಾವ ಬೀರಿತು. ನಂತರ ಚಾಲುಕ್ಯ ಮತ್ತು ಹೊಯ್ಸಳ ಕಾಲದಲ್ಲಿ ಸಾಂಧರ ದೇವಾಲಯಗಳನ್ನು ನೋಡುವುದು ಅತಿವಿರಳ. 14ನೆಯ ಶತಮಾನದವರೆಗೆ ಹಾಗೆ ಎಲ್ಲಾದರೂ ಒಂದು ಕಣ್ಣಿಗೆ ಬಿದ್ದರೆ ಅದನ್ನು ಅಪವಾದವೆಂದು ಪರಿಗಣಿಸಬೇಕು.

ಜೊತೆ ಜೊತೆಗೇ ರಾಷ್ಟ್ರಕೂಟ ಕಾಲದಲ್ಲಿ ಸ್ವಾರಸ್ಯವಾದ ಬೆಳವಣಿಗೆಯೊಂದು ತಲೆದೋರುತ್ತಿತ್ತು. ಅದು ಅಂತಸ್ತುಗಳಿರುವ ಬಸದಿಗಳ ನಿರ್ಮಾಣ. ಬಾದಾಮಿಗೆ ಅನತಿದೂರದ ಪಟ್ಟದಕಲ್ಲು ಮತ್ತು ಹಳ್ಳೂರುಗಳಲ್ಲಿರುವ ಜೈನ ಬಸದಿಗಳು, ಐಹೊಳೆಯ ಸೆಟ್ಟವ್ವ ದೇವಾಲಯ ಇವೆಲ್ಲ ಅಂತಸ್ತುಗಳಿರುವ ರಚನೆಗಳು. ಹಿಂದುಗಲು ಸಾಮಾಸ್ಯವಾಗಿ ಬಹುಮಾಳಿಗೆಯ ದೇವಾಲಯಗಳನ್ನು ಇಷ್ಟ ಪಡುತ್ತಿರಲಿಲ್ಲ. ಪ್ರಾಚೀನ ಚಾಲುಕ್ಯಯುಗಕ್ಕೆ ಸೇರಿದ ಐಹೊಳೆಯ ಲಾಡ್‌ಖಾನ್‌ನಲ್ಲಿ ನಾವು ನೋಡುವುದು ಹೊಸವಿಚಾರವೇನಲ್ಲ. ಮೇಲುಮಹಡಿಯ ಗರ್ಭಗೃಹ ಆಮೇಲೆ ಕೂಡಿಸಿದ್ದು. ಅಲ್ಲೇ ಇರುವ ಮೇಗುತಿ ವಿಷಯವೂ ಅಷ್ಟೆ. ಜೈನರು ಮೊದಲು ಈ ವಿಚಾರವನ್ನು ಕೈಗೊಂಡರು, ಮೊದಲು ಮೇಗುತಿಯಲ್ಲಿ

ಕಾರ್ಯಗತಗೊಳಿಸಿದರು. ಮುಂದೆ ಸ್ವಲ್ಪ ಕಾಲವಾದ ಮೇಲೆ ಹಳ್ಳೂರು, ಪಟ್ಟದಕಲ್ಲುಗಳ ಬಸದಿಗಳಲ್ಲಿ ಮೇಲ್ಮಹಡಿಯ ಗರ್ಭಗೃಹವು ಕಟ್ಟಡದ ಮೂಲ ನಕ್ಷೆಯಲ್ಲೇ ಸೇರಿತ್ತು. ಐಹೊಳೆಯ ಸೆಟ್ಟವ್ವ ದೇವಾಲಯದ ವಿಷಯವೂ ಅದೇ. ಗಂಗರು ಮತ್ತು ನಂತರದ ಚಾಲುಕ್ಯರು ಕ್ರಮವಾಗಿ ಶ್ರವಣಬೆಳಗೊಳದಲ್ಲಿ ಚಾವುಂಡರಾಯ ಬಸದಿಯನ್ನು, ಲಕ್ಕುಂಡಿಯಲ್ಲಿ ಬ್ರಹ್ಮ ಜಿನಾಲಯವನ್ನು ಕಟ್ಟಿಸಲು ಹೊರಟಾಗ ಅವರ ಕಣ್ಣ ಮುಂದೆ ಈ ಉದಾಹರಣೆಗಳಿದ್ದವು.

ಐಹೊಳೆಯ ಸೆಟ್ಟವ್ವ ಬಸದಿಯೂ ಅಂತಸ್ತಿರುವ ಬಸದಿಯಾದರೂ ವಿನ್ಯಾಸದಲ್ಲಿ ಹಾಗೂ ನಿರ್ವಹಣೆಯಲ್ಲಿ ಇನ್ನೆರಡು ಬಸದಿಗಳಿಗಿಂತಲೂ ಹೆಚ್ಚು ವಿವರವಾಗಿದೆ. ಇದೊಂದು ತ್ರಿಕೂಟ ಬಸದಿ. ಇಲ್ಲಿ ಮೂರು ಗರ್ಭಗೃಹಗಳು, ಮೂರು ಅರ್ಧಮಂಟಪಗಳು ಮತ್ತು ಒಂದು ಸಮಾನವಾದ ನವರಂಗಗಳಿವೆ. ಮಧ್ಯದ ಗರ್ಭಗೃಹದ ಮೇಲೆ ಇರುವ ಶಿಖರದಲ್ಲಿ ಮೇಲಂತಸ್ತಿನ ಗರ್ಭಗೃಹವಿದೆ. ಅದಕ್ಕೆ ತಾಗಿಕೊಂಡ ಒಂದು ಮುಖಮಂಟಪ ಅಥವಾ ಕೈಸಾಲೆ ಇದೆ. ಮೇಲಿನ ಗರ್ಭಗೃಹದ ಅಳತೆ ಸು. 4'6" ಚದರ. ಕೈಸಾಲೆ ಅದಕ್ಕಿಂತ ಚಿಕ್ಕದು. ಈ ತ್ರಿಕೂಟ ಬಸದಿಯೇ ಮುಂದೆ ಹೊಯ್ಸಳರ ಕಾಲದ ತ್ರಿಕೂಟ ಬಸದಿಗಳಿಗೆ ಸ್ಫೂರ್ತಿ ನೀಡಿದ್ದರಲ್ಲಿ ಆಶ್ಚರ್ಯವೇನಿಲ್ಲ.

ಈ ಸಂದರ್ಭದಲ್ಲಿ ನರೇಗಲ್ಲಿನಲ್ಲಿರುವ ನಾರಾಯಣ ಮತ್ತು ಸೋಮೇಶ್ವರ ದೇವಾಲಯಗಳನ್ನು ಉಲ್ಲೇಖಿಸುವುದು ಸೂಕ್ತ. ಅವು ವಿಶಿಷ್ಟವಾದ ವಿನ್ಯಾಸವನ್ನು ಹೊಂದಿವೆ. ಮೊದಲು ಒಂದು ದೇವಾಲಯವಾಗಿದ್ದುದನ್ನು ವಿಭಾಗಿಸಿ ಎರಡು ಬೇರೆ ಬೇರೆ ಹೆಸರಿನ ದೇವಾಲಯಗಳನ್ನಾಗಿ ಮಾಡಲಾಗಿದೆ. ಮೂಲತಃ ಅದೊಂದು ಜೈನ ಬಸದಿ. ಗಂಗ 2ನೇ ಬೂತುಗನ ರಾಣಿ ಪದ್ಮಬ್ಬರಸಿಯು ಕ್ರಿ.ಶ. 950ರಲ್ಲಿ ಕಟ್ಟಿಸಿದಳು. ಇದು ಕರ್ನಾಟಕದಲ್ಲಿ ಅತ್ಯಂತ ದೊಡ್ಡವಾದ ರಾಷ್ಟ್ರಕೂಟ ದೇವಾಲಯಗಳಲ್ಲಿ ಒಂದು. ಗರ್ಭಗೃಹ, ಅರ್ಧಮಂಟಪ, ವಿಶಾಲವಾದ ಮುಖಮಂಟಪಕ್ಕೆ ತೆರೆದುಕೊಳ್ಳುವ ಒಂದು ನವರಂಗಗಳಿವೆ. ಮುಖಮಂಟಪದ ಎರಡೂ ಪಕ್ಕಗಳಲ್ಲಿ ಆಯಾಕಾರದ ಗರ್ಭಗೃಹಗಳಿವೆ. ಇದನ್ನು ತ್ರಿಕೂಟ ಬಸದಿ ಎಂದು ಒಪ್ಪುವುದೇ ಆದ ಪಕ್ಷದಲ್ಲಿ ಬಹು ಸ್ವಾರಸ್ಯವಾದ ತ್ರಿಕೂಟ ವಿನ್ಯಾಸವನ್ನು ಸಹ ಒದಗಿಸುತ್ತದೆ. ಸಾಮಾನ್ಯವಾಗಿ ತ್ರಿಕೂಟದಲ್ಲಿ ಗರ್ಭಗೃಹಗಳನ್ನು ಮೂರು ದಿಕ್ಕುಗಳಿಗೆ ಮುಖವಾಗಿರುವಂತೆಯೋ ಇಲ್ಲವೆ ಒಂದರ ಪಕ್ಕದಲ್ಲೊಂದರಂತೆಯೇ ನಿರ್ಮಿಸಲಾಗುತ್ತದೆ. ಬೇರೆಬೇರೆ ದಿಕ್ಕುಗಳಿಗೆ ಮುಖವಾಗಿರುವುದರಿಂದ ಇದಕ್ಕೆ ಸಮಾನವಾದ ಒಂದೇ ನವರಂಗವಿರುತ್ತದೆ. ರಾಷ್ಟ್ರಕೂಟಾನಂತರದ ಕಾಲಕ್ಕೆ ಸೇರಿದ ಇಂತಹ ಅನೇಕ ದೇವಾಲಯಗಳು ಮತ್ತು ಬಸದಿಗಳು ಇವೆ. ಕೊನೆಯ ಪಕ್ಷ ಒಂದು ಪ್ರಾಚೀನ ಚಾಲುಕ್ಯರ ದೇವಾಲಯವು ಈ

ವಿನ್ಯಾಸದಲ್ಲಿ ನಿರ್ಮಿತವಾಗಿತ್ತು. ಆದರೆ ಇಲ್ಲಿ ನರೇಗಲ್ಲಿನಲ್ಲಿ ಮುಖ್ಯ ಗರ್ಭಗೃಹಕ್ಕೆ ಮಾತ್ರ ನವರಂಗವಿದೆ. ಇನ್ನೆರಡು ಗರ್ಭಗೃಹಗಳನ್ನು ನವರಂಗದ ವ್ಯಾಪ್ತಿಯ ಹೊರಗೆ ಮುಖಮಂಟಪವನ್ನು ಹಂಚಿಕೊಳ್ಳುವ ರೀತಿಯಲ್ಲಿ ನಿರ್ಮಿಸಲಾಗಿದೆ.

ಈ ಬಸದಿಯ ಒಂದು ಲಕ್ಷಣವೆಂದರೆ, ಮುಖ್ಯ ಗರ್ಭಗೃಹದಲ್ಲಿ ಒಬ್ಬ ಜೀವನ ಮೂರ್ತಿಯಿರುತ್ತದೆ, ಪರಸ್ಪರ ಅಭಿಮುಖವಾಗಿ ಆಯಾಕಾರದಲ್ಲಿರುವ ಇನ್ನೆರಡು ಗರ್ಭಗೃಹಗಳಲ್ಲಿ ಚತುರ್ವಿಂಶತಿ ಜಿನರ ವಿಗ್ರಹಗಳಿರುತ್ತವೆ. ಆಯಾಕಾರದ ಪೀಠಗಳಿದ್ದು, ಅವುಗಳಲ್ಲಿ ನಡುವೆ 24 ಜಿನವಿಗ್ರಹಗಳನ್ನು ಕೂಡಿಸಲು 24 ರಂಧ್ರಗಳನ್ನು ಮಾಡಲಾಗಿದೆ. ಹೀಗೆ ಚತುರ್ವಿಂಶತಿ ಜಿನ ವಿಗ್ರಹಗಳ ಎರಡು ತಂಡವನ್ನು ಈ ಎರಡು ಗರ್ಭಗೃಹಗಳಲ್ಲಿ ಪ್ರತಿಷ್ಠಿಸಿರುವುದೀಗ ಈ ಬಸದಿಯ ವೈಶಿಷ್ಟ್ಯವಾಗಿದೆ.

ಶ್ರವಣಬೆಳಗೊಳದ ಭಂಡಾರ ಬಸದಿಯು 24 ಜಿನರ ಪ್ರತಿಷ್ಠೆ ಮಾಡಲು ಉದ್ದೇಶಿಸಿದ ಅತಿ ಪ್ರಾಚೀನ ಬಸದಿಯೆಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಇದನ್ನು ಕ್ರಿ.ಶ.1159ರಲ್ಲಿ ಕಟ್ಟಿಸಲಾಯಿತು. ಭಟ್ಕಳದ ಬಳಿ ಹಾಡುವಳ್ಳಿಯಲ್ಲಿ ಇಂಥದೇ ಇನ್ನೊಂದು ಬಸದಿಯಿದೆ. ಇಲ್ಲಿಯೂ ಸಾಲಾಗಿ 24 ಜಿನರ ವಿಗ್ರಹಗಳನ್ನು ಇರಿಸಲಾಗಿದೆ. ಇದು ಹಾಡುವಳ್ಳಿಯ ರಾಜರ ಕಾಲಕ್ಕೆ ಸೇರಿದ್ದು. ಜಿನರ 24 ವಿಗ್ರಹಗಳನ್ನು ಗರ್ಭಗುಡಿಯಲ್ಲಿ ಒಟ್ಟಿಗೆ ಪ್ರತಿಷ್ಠಿಸಿರುವುದು ಬಹು ಅಪರೂಪ. ಈ ಕಾರಣದಿಂದ ನರೇಗಲ್ ದೇವಾಲಯದ ವಿಶಿಷ್ಟತೆಯನ್ನು ಕಡೆಗಣಿಸುವ ಹಾಗಿಲ್ಲ. ಅದು ಅತ್ಯಂತ ಪ್ರಾಚೀನವಾದ ಬಸದಿ, 10ನೆಯ ಶತಮಾನದ ಮಧ್ಯಭಾಗದಲ್ಲಿ ನಿರ್ಮಿತವಾದದ್ದು. ಜಿನರ 24 ವಿಗ್ರಹಗಳ ಒಂದಲ್ಲ ಎರಡು ಗರ್ಭಗೃಹಗಳನ್ನಾಗಿ ಪರಿವರ್ತಿಸಲಾಯಿತು. ಮುಖ್ಯ ಗರ್ಭಗೃಹದಲ್ಲಿ ಸೋಮೇಶ್ವರ, ಅರ್ಧಮಂಟಪ ಮತ್ತು ನವರಂಗಗಳು; ಎರಡು ಆಯಾಕಾರದ ಗರ್ಭಗೃಹಗಳೂ ವಿಶಾಲ ಮುಖಮಂಟಪವೂ ಇರುವ ನಾರಾಯಣದೇವರ ಆಲಯವೂ ರೂಪುಗೊಂಡುವು.

ರಾಷ್ಟ್ರಕೂಟಯುಗದ ಗಮನಾರ್ಹವಾದ ಒಂದು ಅಂಶ, ಐಹೊಳೆಯಲ್ಲಿ ಬಹುಸಂಖ್ಯೆಯ ತ್ರಿಕೂಟಗಳು ನಿರ್ಮಾಣವಾದದ್ದು. ಇವೆಲ್ಲವೂ ರಾಷ್ಟ್ರಕೂಟ ಆಳ್ವಿಕೆಯ ಕೊನೆಯ ವರ್ಷಗಳಿಗೆ ಸೇರುತ್ತವೆ. ಕುಂದರಗಿ ದೇವಾಲಯ ಸಮೂಹ ಎಂದು ಸಾಮಾನ್ಯವಾಗಿ ಉಲ್ಲೇಖಿಸುವ ಈ ದೇವಾಲಯಗಳನ್ನು ಕೆಂಪುಮರಳು ಕಲ್ಲಿನಿಂದ ನಿರ್ಮಿಸಲಾಗಿದೆ. ಇವೆಲ್ಲವೂ ತ್ರಿಕೂಟ ಮಾದರಿಯವು. ಒಂದೇ ನವರಂಗವನ್ನು ಹಂಚಿಕೊಳ್ಳುವ ಮೂರು ಗರ್ಭಗೃಹಗಳನ್ನು ಹೊರಗಿನಿಂದ ಕದಂಬ ನಾಗರ ಶಿಖರಗಳಿಂದ ಗುರುತಿಸಬಹುದು. ಪ್ರಧಾನ ಗರ್ಭಗೃಹದ ಎದುರಿಗಿರುವ ಏಕೈಕ ಪ್ರವೇಶದ್ವಾರಕ್ಕೆ ಒಂದು ಸಣ್ಣ ಕೈಸಾಲೆಯಿದೆ. ಅಲ್ಲಿ ಕಕ್ಷಾಸನವಿದ್ದು, ಚಾವಣಿಗೆ ಆಶ್ರಯಕೊಟ್ಟಿರುವ ಕಂಬಗಳು ಅದರ ಮೇಲೆ ನಿಂತಿವೆ. ರಾಷ್ಟ್ರಕೂಟ

ದೇವಾಲಯಗಳ ಇನ್ನೊಂದು ಲಕ್ಷಣ ಕಂಬಗಳನ್ನು ಕುರಿತದ್ದು. ಇಲ್ಲಿ ಬಗೆಬಗೆಯ ವಿನ್ಯಾಸಗಳ ಸ್ತಂಭಗಳನ್ನು ನಾವು ನೋಡಿದರೂ ಒಂದು ಮಾದರಿಯು ನಮ್ಮ ವಿಶೇಷ ಗಮನ ಸೆಳೆಯುತ್ತದೆ. ಇದು ಬುಡದಲ್ಲೂ ತುದಿಯಲ್ಲಿಯೂ ಚೌಕಾಕಾರವಾಗಿದೆ. ಕಾಂಡಭಾಗದಲ್ಲಿ ತೆರಪು ಕೊಟ್ಟು ಅಲ್ಲಿ ಲಂಬಾಕಾರದ ಪಟ್ಟಿ ಇರುತ್ತದೆ. ಸಾಮಾನ್ಯವಾಗಿ ಕೆಳಗಿನ ಭಾಗ ಸರಳ. ಲಂಬ ಪಟ್ಟಿಕೆಯ ಮೇಲೆ ಬಳ್ಳಿಗಳ ಅಲಂಕಾರವಿದೆ. ಮೇಲಿನ ಚೌಕಭಾಗವನ್ನು ಎರಡು ಕ್ಷೇತ್ರೀಯ ವಿಭಾಗಗಳನ್ನಾಗಿ ಮಾಡಿದ್ದು, ಇವುಗಳಲ್ಲಿ ಮೇಲಿನದು ಕಿರಿದು, ಎಲೆಗಳು ಮತ್ತು ಹೂವುಗಳ ಅಲಂಕಾರವಿರುವಂಥದು. ಕೆಳಭಾಗದಲ್ಲಿ ಮಣಿಸರಪಣಿಗಳಿಂದ ರೂಪಿಸಿದ ಕುಣಿಕೆಗಳಿವೆ. ಈ ಕುಣಿಕೆಗಳೊಳಗೆ ಕಿರಿದು ಗಾತ್ರದ ಯಕ್ಷರು ಮತ್ತಿತರ ಮೂರ್ತಿಗಳ ಉಬ್ಬು ಶಿಲ್ಪಗಳಿವೆ. ಇಂತಹ ಕಂಬಗಳನ್ನು ಸಿರವಾಲ, ಕುಕ್ಕನೂರು ಮತ್ತು ಇತರ ಸ್ಥಳಗಳ ದೇವಾಲಯಗಳಲ್ಲಿ ನೋಡಬಹುದು. ಕುಕ್ಕನೂರಿನ ನವಲಿಂಗ ದೇವಾಲಯದಲ್ಲಿ ಕಂಬಗಳ ಮೇಲಿನ ಕುಣಿಕೆಗಳೊಳಗೆ ತ್ರಿಪುರಾಂತಕ ಶಿವ ಹಾಗೂ ಕಿರಾತಾರ್ಜುನೀಯ ಸಂದರ್ಭಗಳ ಉಬ್ಬುಶಿಲ್ಪವಿರುವುದನ್ನು ನೋಡಬಹುದು.

ಈ ಸಂದರ್ಭದಲ್ಲಿ ನೊಳಂಬ ಮತ್ತು ಸಾಂತರ ದೇವಾಲಯಗಳಲ್ಲಿ ಕಂಡುಬರುವ ಇದೇ ಮಾದರಿಯ ಕಂಬಗಳನ್ನು ಉಲ್ಲೇಖಿಸಬಹುದು. ಉದಾಹರಣೆಗೆ ಹುಮುಚದ ಬೋಗಾರ ಬಸದಿಯಲ್ಲಿ ಕುಣಿಕೆಗಳನ್ನು ಹೂವಿನ ಚಿತ್ರಗಳಿಂದಲೂ ಬಾಹುಬಲಿ ಮತ್ತು ಪಾರ್ಶ್ವನಾಥರ ಕಿರು ಉಬ್ಬುಶಿಲ್ಪಗಳಿಂದಲೂ ಅಲಂಕರಿಸಿದ್ದಾರೆ. ಹೇಮಾವತಿಯ ನೊಳಂಬ ದೇವಾಲಯಗಳು ಸೊಗಸಾದ ಸ್ತಂಭ ಮಾದರಿಗಳು ಹಾಗೂ ಕಲ್ಲಿನ ಜಾಲರಿಗಳಿಗೆ ಪ್ರಸಿದ್ಧವಾಗಿವೆ. ಹೇಮಾವತಿಯ ದೊಡ್ಡ ಬಸಪ್ಪ ಮತ್ತು ಇತರ ದೇವಾಲಯಗಳ ಸ್ತಂಭಗಳಲ್ಲಿರುವ ಕುಣಿಕೆಗಳಲ್ಲಿ ಬ್ರಹ್ಮ, ವಿಷ್ಣು, ದ್ವಾರಪಾಲರು ಮತ್ತಿತರ ಮತ್ತಿತರ ದೇವತಾ ಶಿಲ್ಪಗಳಿವೆ. ಸಾಂತರ ಮತ್ತು ನೊಳಂಬ ವಾಸ್ತುಶಿಲ್ಪದ ಮುಖ್ಯ ಲಕ್ಷಣಗಳನ್ನು ಪರಿಶೀಲಿಸುವಾಗ ಇಂತಹ ಕಂಬಗಳು ಅವರ ವಾಸ್ತುಶಿಲ್ಪದ ವಿಶಿಷ್ಟತೆ ಎಂದು ಹೇಳಲಾಗಿತ್ತು. ಕರ್ನಾಟಕದ ರಾಷ್ಟ್ರಕೂಟ ದೇವಾಲಯಗಳಿಗೆ ಕಲಾ ಇತಿಹಾಸಕಾರರು ಅಷ್ಟಾಗಿ ಗಮನ ಕೊಟ್ಟಿರಲಿಲ್ಲವಾದ್ದರಿಂದ, ನೊಳಂಬ ಮತ್ತು ಸಾಂತರ ಕಲಾಪಂಥಗಳ ಮೇಲೆ ರಾಷ್ಟ್ರಕೂಟ ವಾಸ್ತುಶಿಲ್ಪದ ಪ್ರಭಾವವನ್ನು ವಿವರವಾಗಿ ಅಧ್ಯಯನ ಮಾಡುವ ಪ್ರಯತ್ನಗಳಾಗಲಿಲ್ಲ. ಈ ಮಾದರಿಯ ಸ್ತಂಭಗಳು ಕರ್ನಾಟಕದ ಅನೇಕ ರಾಷ್ಟ್ರಕೂಟ ದೇವಾಲಯಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತವೆ. ರಾಷ್ಟ್ರಕೂಟ ವಾಸ್ತುಶಿಲ್ಪವು ನೊಳಂಬ ಮತ್ತು ಸಾಂತರರ ಪ್ರಾದೇಶಿಕ ಶೈಲಿಗಳ ಮೇಲೆ ಬಹಳ ಪ್ರಭಾವ ಬೀರಿದ್ದಿತು ಎನ್ನುವುದು ಇದರಿಂದ ಸೂಚಿತವಾಗುತ್ತದೆ. ಐಹೊಳೆಯ ಜಾಡರಗುಡಿಯು ರಾಷ್ಟ್ರಕೂಟ ದೇವಾಲಯಗಳ ಪ್ರಾಚೀನ ಮಾದರಿಗಳಲ್ಲಿ ಒಂದು. ಅದರಲ್ಲಿ ಒಂದು ಗರ್ಭಗೃಹ, ಒಂದು ಸಭಾಮಂಟಪ ಮತ್ತು

ಒಂದು ಕೈಸಾಲೆಗಳಿವೆ. ಗರ್ಭಗೃಹದ ಮೇಲೆ ಕದಂಬ ನಾಗರ ಶಿಖರವಿದೆ. ಐಹೊಳೆಯಲ್ಲಿ ಪ್ರಾಚೀನ ಚಾಲುಕ್ಯರು ಸ್ಥಾಪಿಸಿದ ಸಂಪ್ರದಾಯಗಳಿಗನುಗುಣವಾಗಿ ಈ ದೇವಾಲಯವನ್ನು ಕೆಂಪುಮರಳುಗಲ್ಲಿನಿಂದ ನಿರ್ಮಿಸಲಾಗಿದೆ. ಅಧಿಷ್ಠಾನವು ಪ್ರಾಚೀನ ಚಾಲುಕ್ಯ ಅಧಿಷ್ಠಾನಕ್ಕಿಂತ ಬೇರೆಯಾಗಿಲ್ಲ. ಅದರಲ್ಲಿ ಉಪಾನ, ಜಗತಿ, ಗಳ, ಕುಡುಗಳಿಂದ ಅಲಂಕೃತವಾದ ಕಪೋತಗಳು ಇವೆ. ಸಾಮಾನ್ಯವಾಗಿ ರಾಷ್ಟ್ರಕೂಟ ದೇವಾಲಯಗಳಲ್ಲಿ ಸಾಮಾನ್ಯವಾಗಿ ಕಂಡುಬಾರದ ಗಳವು ಜಾಡರ ಗುಡಿಯಲ್ಲಿ ಅತ್ಯಂತ ಸ್ಪಷ್ಟವಾಗಿದೆ.

ದೇವಾಲಯದ ಇನ್ನೊಂದು ಸ್ವಾರಸ್ಯವಾದ ಲಕ್ಷಣ ಗರ್ಭಗೃಹದ ಎರಡೂ ಪಕ್ಕಗಳಲ್ಲಿ ಬೃಹತ್ ಗಾತ್ರದ ದ್ವಾರಪಾಲ ವಿಗ್ರಹಗಳಿರುವುದು. ಮತ್ತೆ ಇದೂ ಪ್ರಾಚೀನ ಚಾಲುಕ್ಯ ದೇವಾಲಯಗಳ ಲಕ್ಷಣ. ಗರ್ಭಗೃಹದ ಎರಡೂ ಪಕ್ಕಗಳಲ್ಲಿರುವ ಗೋಡೆಗಂಬಗಳಲ್ಲಿ ತರಂಗ ಚಾಚುಪೀಠಗಳಿವೆ. ಸಭಾಮಂಟಪದ ಕಂಬಗಳೂ ವಿನ್ಯಾಸದಲ್ಲಿ ಪ್ರಾಚೀನ ಚಾಲುಕ್ಯ ಮಾದರಿಯವು. ಅವು ಕುಳ್ಳಾಗಿವೆ, ಭಾರವಾಗಿವೆ, ದಂಡದ ಕೆಳಭಾಗದಲ್ಲಿ ಪಾದಕದ ಅಲಂಕಾರವಿದೆ. ಮೇಲುಭಾಗದಲ್ಲಿ ಪಟ್ಟ ಹಾಗೂ ಪಾದಕಗಳ ಅಲಂಕಾರವಿದೆ. ದೇವಾಲಯವು ಸೂರ್ಯನಿಗೆ ಅರ್ಪಿತವಾಗಿದೆ; ಸಂಧಿಕಾಲಕ್ಕೆ ಸೇರಿದ್ದು, ಪ್ರಾಚೀನ ಚಾಲುಕ್ಯ ಲಕ್ಷಣಗಳನ್ನೂ ಕೆಲವು ರಾಷ್ಟ್ರಕೂಟ ಲಕ್ಷಣಗಳನ್ನೂ ಅಭಿವ್ಯಕ್ತಿಸುತ್ತವೆ. ಎಲೆಗಳ ಮಾದರಿಯ ಎರಕಗಳು, ತೆರಪುಗಳು, 45 ಬಿಂದುವಿರುವ ಚಾಚುಪೀಠಗಳು, ವಿವರವಾಗಿ ವಿನ್ಯಾಸಗೊಳಿಸಿರುವ ಕದಂಬ-ನಾಗರ ಶಿಖರ ಇತ್ಯಾದಿ. ದೇವಾಲಯವನ್ನು ಕ್ರಿ.ಶ. 8ನೆಯ ಶತಮಾನದ ಉತ್ತರಾರ್ಧಕ್ಕೆ ಸೇರಿದುದೆಂದು ಹೇಳಬಹುದು.

ಕ್ರಿ.ಶ. 902ರಲ್ಲಿ ನಿರ್ಮಿಸಿದ, ನಂದವಾಡಿಗೆಯ ಮೂಕ ಬಸವಣ್ಣನ ದೇವಾಲಯವು ರಾಷ್ಟ್ರಕೂಟ ಕಾಲದ ಕೆಲವೇ ಕಾಲನಿಗದಿಯಾದ ದೇವಾಲಯಗಳಲ್ಲಿ ಒಂದು. ಇದೊಂದು ಸಣ್ಣದೇವಸ್ಥಾನ. ಒಂದು ಗರ್ಭಗೃಹ, ಒಂದು ಅರ್ಧಮಂಟಪ ಮತ್ತು ಒಂದು ನವರಂಗಗಳಿವೆ. ಸಮೀಪದಲ್ಲೇ ಸುಲಭವಾಗಿ ದೊರಕುತ್ತಿದ್ದ ಕೆಂಪುಮರಳುಗಲ್ಲಿನಿಂದ ನಿರ್ಮಿಸಲಾಗಿದೆ. ಐಹೊಳೆ, ಬಾದಾಮಿ ಮತ್ತು ಪಟ್ಟದಕಲ್ಲು ಮೊದಲಾದ ಪ್ರಾಚೀನ ಚಾಲುಕ್ಯ ಕೇಂದ್ರಗಳ ಬಳಿ ಇದ್ದುದರಿಂದ ಸಹಜವಾಗಿಯೇ ಈ ದೇವಾಲಯವು ಆ ಲಕ್ಷಣಗಳನ್ನು ಒಳಗೊಂಡಿದೆ. ಗುಲಾಬಿ ಅಲಂಕಾರದಿಂದ ಕೂಡಿದ ಗರ್ಭಗೃಹದ್ವಾರ, ಗೋಡೆಕಂಬಗಳು, ಲತಾ ಚಿತ್ರಗಳು, ಸೆಜ್ಜದಲ್ಲಿ ಗರುಡನು ಸರ್ಪದ ಬಾಲವನ್ನು ಹಿಡಿದಿರುವ ಆಕೃತಿ ಇವು ಕಂಡುಬರುತ್ತವೆ. ಈ ದ್ವಾರದ ಇನ್ನೊಂದು ವಿಶೇಷವೆಂದರೆ, ಪ್ರಾಚೀನ ಚಾಲುಕ್ಯ ಮಾದರಿಯಲ್ಲಿ ಗರುಡನು ಹಾವನ್ನು ಹಿಡಿದಿರುವ ಶಿಲ್ಪವಿದ್ದರೂ ಗರುಡನ ಮೇಲೆ ಒಂದು ಗಜಲಕ್ಷ್ಮಿಯ ಮೂರ್ತಿ ಇಲ್ಲಿದೆ. ದ್ವಾರದ ಪಾರ್ಶ್ವಗಳಲ್ಲಿ ಎತ್ತರವಾದ ದ್ವಾರಪಾಲರ ವಿಗ್ರಹಗಳಿವೆ. ಇದು ಸಾಮಾನ್ಯವಾಗಿ ರಾಷ್ಟ್ರಕೂಟರ

ದೇವಾಲಯಗಳಲ್ಲಿ ಕಾಣಬರದ ಲಕ್ಷಣ, ಪ್ರಾಚೀನ ಚಾಲುಕ್ಯರ ಕಾಲದಲ್ಲಿ ಪ್ರಚುರವಾಗಿದ್ದ ಪದ್ಧತಿ. ನವರಂಗದ ಕಂಬಗಳು ಭಾರವಾದ, ಚೌಕನಾದ, ಅನೇಕ ಅರೆಗೋಳವಿ ಆಕಾರದ ದಂಡವನ್ನು ಅದೇ ಬಗೆಯ ಮೇಲ್ಭಾಗವನ್ನು ಮುಚ್ಚಿಗೆಯನ್ನು ಹೊಂದಿವೆ. ಇವು ನಮಗೆ ಬಾದಾಮಿಯ ಗುಹೆಗಳಲ್ಲಿರುವ ಕಂಬಗಳನ್ನು ನೆನಪು ಮಾಡುತ್ತವೆ. ಈ ದೇವಾಲಯದ ಒಂದು ಸ್ವಾರಸ್ಯವಾದ ಅಂಶವನ್ನು ಅಧಿಷ್ಠಾನದಲ್ಲಿ ನೋಡಬಹುದು. ಅದಕ್ಕೆ ಹಲ್ಲಿನಂತಹ ತುದಿಗಳಿವೆ. ಕೆಲವು ಶಿಲುಬೆಯಂತೆ ಕಾಣುತ್ತವೆ. ಈ ಮಾದರಿಯು ನಂತರದ ಚಾಲುಕ್ಯರ ಅಧಿಷ್ಠಾನಗಳಲ್ಲಿ ಕಂಡುಬಂದ ಹಲ್ಲಿನ ತುದಿಗಳಿಗೆ ಪ್ರೇರಣೆಯಾಗಿರಬಹುದು.

ಬೆಳ್ವಲನಾಡಿನ ಕೊಳನೂರು ಅಂದರೆ, ಈಗಿನ ಕೊಣ್ಣೂರು (ಧಾರವಾಡ ಜಿಲ್ಲೆ) ರಾಷ್ಟ್ರಕೂಟರ ಕಾಲದಲ್ಲಿ ಒಂದು ಆಡಳಿತ ಕೇಂದ್ರವಾಗಿತ್ತು. ಕ್ರಿ.ಶ. 860ರಲ್ಲಿ ರಾಷ್ಟ್ರಕೂಟ ದೊರೆ 1ನೇ ಅಮೋಘವರ್ಷನ ಆಳ್ವಿಕೆಯಲ್ಲಿ ಕೊಳನೂರಿನ ಅಧಿಕಾರಿ ಬಂಕೆಯರಸನು ಇಲ್ಲಿ ಜೈನ ಬಸದಿಯೊಂದನ್ನು ಕಟ್ಟಿಸಿದನು. ಬಂಕೆಯರಸನ ವಿನಂತಿಯ ಮೇರೆಗೆ ಅಮೋಘವರ್ಷನು ಈ ಬಸದಿಗೆ ಒಂದು ಹಳ್ಳಿಯನ್ನು ದತ್ತಿಯಾಗಿ ನೀಡಿದನು. ಈ ಬಸದಿಯನ್ನು ಈಗ ಪರಮೇಶ್ವರ ದೇವಾಲಯವೆಂದು ಕರೆಯುತ್ತಾರೆ. ಇದು ರಾಷ್ಟ್ರಕೂಟರ ಆರಂಭಕಾಲದ ದೇವಾಲಯಗಳಲ್ಲಿ ಒಂದು. ಆ ಮೇಲಿನ ಕಾಲಗಳಲ್ಲಿ ಈ ಬಸದಿಯ ಕೆಲವು ಭಾಗಗಳು ಜೀರ್ಣೋದ್ಧಾರಗೊಂಡಿದ್ದರೂ ವಾಸ್ತುಶೈಲಿಯ ದೃಷ್ಟಿಯಿಂದ ಇದರ ಮಹತ್ವ ಕಡಿಮೆಯಾಗಿಲ್ಲ. ಸವದಿಯಲ್ಲಿರುವ ಬ್ರಹ್ಮೇಶ್ವರ ದೇವಾಲಯದಂತೆ, ಈ ಬಸದಿಯ ತಲವಿನ್ಯಾಸವು ಉಲ್ಲೇಖಾರ್ಹವಾಗಿದೆ. ಗರ್ಭಗೃಹ, ಅರ್ಧಮಂಟಪ, ನವರಂಗ, ಮತ್ತು ಮುಖಮಂಟಪಗಳು ಇಲ್ಲಿವೆ. ಗರ್ಭಗೃಹದ ಅದಿಷ್ಠಾನ ಮತ್ತು ಹೊರಗೋಡೆಗಳ ವಿನ್ಯಾಸ ಆಕರ್ಷಣೀಯವಾಗಿವೆ. ವಿನ್ಯಾಸವು ನಕ್ಷತ್ರಾಕಾರದಲ್ಲಿದೆ. ಅದಿಷ್ಠಾನ ಮತ್ತು ಗೋಡೆಗಳಲ್ಲಿ ಹದಿಮೂರು ಮೂಲೆಗಳನ್ನು ಅಳವಡಿಸಲಾಗಿದ್ದು, ಅದು ನಕ್ಷತ್ರಾಕಾರದ ತಲವಿನ್ಯಾಸಕ್ಕೆ ಮೂಲವಾಗಿದೆ. ಈ ರೀತಿಯ ನಕ್ಷತ್ರಾಕಾರದ ತಲವಿನ್ಯಾಸವು ಕಲ್ಯಾಣ ಚಾಲುಕ್ಯರ ಮತ್ತು ಹೊಯ್ಸಳರ ದೇವಾಲಯಗಳ ವಿಶಿಷ್ಟ ಲಕ್ಷಣವೆಂದು ಹೇಳಲಾಗಿದೆ. ಆದರೆ ಕೊಣ್ಣೂರಿನ ದೇವಾಲಯದಲ್ಲಿ ಕಲ್ಯಾಣ ಚಾಲುಕ್ಯರಿಗಿಂತ ಸುಮಾರು 120 ವರ್ಷಗಳ ಮುಂಚೆಯೇ ಈ ತಲವಿನ್ಯಾಸವನ್ನು ಅಳವಡಿಸಿರುವುದು ಗಮನೀಯವಾಗಿದೆ. ಈ ತಲವಿನ್ಯಾಸವೇ ಕಲ್ಯಾಣ ಚಾಲುಕ್ಯ ಸ್ಥಪತಿಗಳಿಗೆ ಪ್ರೇರಣೆ ನೀಡಿದುದರಲ್ಲಿ ಸಂದೇಹವಿಲ್ಲ.

ಇದೇ ರೀತಿಯಾಗಿ ನಕ್ಷತ್ರಾಕಾರದ ತಲವಿನ್ಯಾಸವಿರುವ ಇನ್ನೊಂದು ದೇವಾಲಯ ನರಗುಂದದ ದಂಡೇಶ್ವರ ದೇವಾಲಯ. ಇದೊಂದು ನಿರಂಧರ ದೇವಾಲಯ. ಗರ್ಭಗೃಹ, ಸುಕನಾಸಿ, ನವರಂಗಗಳಿರುವ ಈ ಚಿಕ್ಕ ದೇವಾಲಯದಲ್ಲಿ ನವರಂಗಕ್ಕೆ ಹೋಗಲು ಒಂದೇ

ಬಾಗಿಲಿದ್ದು ಅದನ್ನು ಬಲಗೋಡೆಯಯಲ್ಲಿ ಅಳವಡಿಸಲಾಗಿದೆ. ದೇವಾಲಯದ ಅಧಿಷ್ಠಾನವು ಉಪಾನ, ಜಗತಿ, ಕಂಪ, ಪಟ್ಟ, ಚೌಕಾಕಾರದ ಹಾಗೂ ದೀರ್ಘಚತುರಸ್ರಾಕಾರದ ಭಾಗಗಳು ಇರುವ ಇನ್ನೊಂದು ಪಟ್ಟಿಕೆ ಇವುಗಳನ್ನು ಒಳಗೊಂಡಿದೆ. ಗೋಡೆಗಳ ಮುಂಭಾಗದಲ್ಲಿ ಅರೆಗಂಬಗಳು ಮತ್ತು ಅವುಗಳ ನಡುವೆ ಪಂಜರಗಳು ಇವೆ. ಪಂಜರಗಳ ಮೇಲುಭಾಗದಲ್ಲಿ ಚಾಲುಕ್ಯ ಮಾದರಿಯ ಶಿಖರಗಳ ಅಲಂಕಾರವಿದೆ. ಗೋಡೆಗಳ ಹಿಂಬದಿಯಲ್ಲಿ ಅರೆಕಂಬಗಳನ್ನು ಕೊರೆದಿದ್ದು ಅವುಗಳ ಮೇಲೆ ಚಾಲುಕ್ಯ ಮಾದರಿಯ ಇಲ್ಲವೆ, ರೇಖಾನಾಗರ ಮಾದರಿಯ ಶಿಖರಗಳ ಅಲಂಕಾರವಿದೆ. ಹೊರಗೋಡೆಯಲ್ಲಿ ಮೂರ್ತಿಶಿಲ್ಪಗಳು ಇಲ್ಲದುದು ಗಮನಾರ್ಹವಾಗಿದೆ. ನವರಂಗ ದ್ವಾರವು ಆಸಕ್ತಿಯನ್ನು ಕೆರಳಿಸುತ್ತದೆ. ದ್ವಾರಶಾಖೆಗಳಲ್ಲಿ ಕಬ್ಬಿನಜಲ್ಲೆಯಾಕಾರದ ಅರೆಗಂಬಗಳನ್ನು ಕೊರೆಯಲಾಗಿದೆ. ಅವುಗಳ ಕೆಳಭಾಗದಲ್ಲಿ ಪೂರ್ಣಕುಂಭಗಳನ್ನು ಕೆತ್ತಿದ್ದಾರೆ. ಹೀಗೆ ದ್ವಾರಗಳನ್ನು ಅಲಂಕರಿಸಲು ಕುಂಭಗಳನ್ನು ಅಳವಡಿಸುವ ಸಂಪ್ರದಾಯವು ರಾಷ್ಟ್ರಕೂಟ ದೇವಾಲಯಗಳ ಒಂದು ವಿಶಿಷ್ಟ ಲಕ್ಷಣ. ಈ ರೀತಿಯಾಗಿ ಕುಂಭದ ಅಲಂಕಾರವಿರುವ ದ್ವಾರಗಳನ್ನು ಐಹೊಳೆಯ ಅನೇಕ ದೇವಾಲಯಗಳಲ್ಲಿ ನೋಡಬಹುದು.

ಪಟ್ಟದಕಲ್ಲಿನ ಜೈನ ಬಸದಿಯು ಹಳ್ಳಿಯ ಪಶ್ಚಿಮಕ್ಕಿದ್ದು ರಾಷ್ಟ್ರಕೂಟ ಬಸದಿಗಳಲ್ಲಿ, ಹಳ್ಳೂರಿನದರಂತೆಯೇ ಅತಿ ಪ್ರಾಚೀನವಾದುದೊಂದಾಗಿದೆ. ಇದು ಸಾಂಧರ ಮಾದರಿಯ ಬಸದಿ. ಇದರಲ್ಲಿ ಒಂದು ಗರ್ಭಗೃಹ, ಪ್ರದಕ್ಷಿಣಪಥ, ಅರ್ಧಮಂಟಪ, ನವರಂಗ ಮತ್ತು ಒಂದು ಮುಖಮಂಟಪಗಳಿವೆ. ಮುಖಮಂಟಪದಲ್ಲಿ ಕಕ್ಷಾಸನಗಳಿವೆ. ಅಂತಸ್ತುಗಳಿರುವ ಈ ಬಸದಿಯಲ್ಲಿ ಮೇಲಿನ ಗರ್ಭಗೃಹವೂ ಇದೆ. ಇದು ದ್ರಾವಿಡ ಶೈಲಿಯ ಶಿಖರದಲ್ಲಿ ಸೇರಿಕೊಂಡಿದೆ. ಈ ಬಸದಿಯ ವಿಶಿಷ್ಟ ಲಕ್ಷಣವೆಂದರೆ, ಮುಖಮಂಟಪದಲ್ಲಿ ನವರಂಗ ದ್ವಾರದ ಎರಡೂ ಪಕ್ಕಗಳಲ್ಲಿ ದೊಡ್ಡ ಗಾತ್ರದ ಆನೆಗಳು ಗೋಡೆಯಿಂದ ಹೊರಬಂದಿರುವಂತೆ ಕೆತ್ತಿರುವುದು. ಇವು ಎಲ್ಲೋರದ ಇಂದ್ರಸಭೆಯ ಇದೇ ಬಗೆಯ ಆನೆಗಳನ್ನು ನೆನಪಿಗೆ ತರುತ್ತವೆ. ನವರಂಗ ದ್ವಾರದಲ್ಲಿ ಕಂಬತೋಳಿನ ಕೆಳಭಾಗದಲ್ಲಿ, ರಾಷ್ಟ್ರಕೂಟ ದ್ವಾರಗಳ ಸಾಮಾನ್ಯ ಲಕ್ಷಣವಾದ ಕುಂಭಗಳ ಜೊತೆಗೆ ಪದ್ಮ ಹಾಗೂ ಶಂಖನಿಧಿ ಯಕ್ಷರನ್ನು ಕೆತ್ತಲಾಗಿದೆ. ದ್ವಾರದ ಮೇಲ್ಭಾಗದ ಪಕ್ಕಗಳಲ್ಲಿ ದೊಡ್ಡ ಮಕರಗಳಿವೆ. ಇದು ರಾಷ್ಟ್ರಕೂಟ ದ್ವಾರಗಳಲ್ಲಿ ಸಾಮಾನ್ಯ. ಇದಕ್ಕೆ ಅತ್ಯುತ್ತಮ ಉದಾಹರಣೆಯನ್ನು ಐಹೊಳೆಯಲ್ಲಿ ಬಸಪ್ಪ ದೇವಾಲಯದಲ್ಲಿ ನೋಡಬಹುದು. ಹಳ್ಳೂರಿನ ಬಸದಿಯನ್ನು ಮೇಲ್ಗುಡಿ ಎಂದೂ ಕರೆಯಲಾಗುತ್ತದೆ. ಇದು ಸಾಂಧರ ಮಾದರಿಯಾಗಿದ್ದು ಗರ್ಭಗೃಹ, ಪ್ರದಕ್ಷಿಣ ಪಥ ಮತ್ತು ಸಭಾಮಂಟಪಗಳಿವೆ. ಪಟ್ಟದಕಲ್ಲಿನ ಬಸದಿಯಲ್ಲಿರುವಂತೆ ಇಲ್ಲೂ ಮೇಲಂತಸ್ತಿನ ಗರ್ಭಗುಡಿಯಿದೆ. ಸರಳವಾದ ಕಲ್ಲಿನ

ಜಾಲರಿಗಳಿಗೆ ಈ ಬಸದಿ ಗಮನಾರ್ಹವಾಗಿದೆ. ಮತ್ತು ಹೊರಗೋಡೆಗಳಲ್ಲಿ ಎಂಟು ಭಾರೀ ಗಾತ್ರದ ಶಿಲ್ಪಗಳಿವೆ. ಇವುಗಳಲ್ಲಿ ನಾಲ್ಕು ಬಾಹುಬಲಿ ಮೂರ್ತಿಗಳು, ಉಳಿದ ನಾಲ್ಕು ಪಾರ್ಶ್ವನಾಥನವು. ಇಲ್ಲಿ ಗಮನಿಸಬೇಕಾದುದೇನೆಂದರೆ, ಎರಡು ಬಾಹುಬಲಿ ಮೂರ್ತಿಗಳಲ್ಲಿ ಉದ್ದವಾದ ತಲೆಗೂದಲಿದ್ದರೆ, ಇನ್ನೆರಡರಲ್ಲಿ ಸುರುಳಿಗೂದಲರಾಶಿಯಿರುವುದು. ಬಾಹುಬಲಿ ಶಿಲ್ಪಗಳಿಗೆ ಸಂಬಂಧಿಸಿದಂತೆ ಈ ನಾಲ್ಕು ಮೂರ್ತಿಗಳೂ ಒಂದು ಸಂಧಿಕಾಲವನ್ನು ಪ್ರತಿನಿಧಿಸುತ್ತವೆ. ಅದು ಬಾಹುಬಲಿಯ ನೀಳಕೇಶರಾಶಿಯು ಗುಂಗುರು ಕೇಶರಾಶಿಗೆ ಪರಿವರ್ತನೆಯಾದ ಕಾಲ.

ಕುಕನೂರಿನ ನವಲಿಂಗ, ಶ್ರವಣಬೆಳ್ಗೊಳದ ಚಂದ್ರಗಿರಿ ಬೆಟ್ಟದ ಮೇಲಿನ ಕೆಲವು ಬಸದಿಗಳು, ಲಕ್ಷ್ಮೇಶ್ವರದ ಬಾಳೇಶ್ವರ, ಐಹೊಳೆಯ ಅಂಬಿರಗುಡಿ, ಅಳ್ಳಿಬಸಪ್ಪ, ಕೊಂತಗುಡಿ ಸಂಕೀರ್ಣದಲ್ಲಿಯ ಒಂದೆರಡು ದೇವಾಲಯಗಳು, ಗಳಗನಾಥ ಗುಂಪಿನಲ್ಲಿರುವ ಹಲವು ದೇವಾಲಯಗಳು, ಬೇಲೂರಿನ ಪರಮೇಶ್ವರ ಗುಡಿ, ಹಳ್ಳೂರಿನ ಕಾಶಿವಿಶ್ವೇಶ್ವರ, ಪಟ್ಟದ ಕಲ್ಲಿನ ಜೈನನಾರಾಯಣ ಬಸದಿ, ಮಳಖೇಡದ ಚಿಕ್ಕಬಸದಿ, ಹೊಸಮಹಾಕೂಟದ ಅಡಕೇಶ್ವರ, ಇಂಡಿಯ ಜೋಡುಕಲಶ ದೇವಾಲಯ, ಮಲ್ಲಿಕಾರ್ಜುನ, ಸೊಗಲದ ಸೋಮೇಶ್ವರ, ಸಿರಿವಾಳದ ಸಿದ್ದೇಶ್ವರ, ನನ್ನಯ್ಯ, ಕದಂಬೇಶ್ವರ, ಮಲ್ಲಿಕಾರ್ಜುನ, ಸುಜ್ಞಾನೇಶ್ವರ, ಅರ್ಧಮದ್ನೂರಿನ ರಾಮಲಿಂಗೇಶ್ವರ, ಸಿದ್ಧಲಿಂಗೇಶ್ವರ, ಉಡಗಿಯ ಲೋಕೇಶ್ವರ (ಸೇಡಂತಾಲ್ಲೂಕು), ಕೊಡ್ಲದ ಶಂಭುಲಿಂಗ, ಬೆಟಗೇರಿಯ ಪಂಚಲಿಂಗೇಶ್ವರ, ಸೇಡಂನ ತ್ರಿಲಿಂಗೇಶ್ವರ, ಹಂದರಗಿಯ ಆನೇಶ್ವರ, ಲೋಕೇಶ್ವರ, ಜ್ಯೋತಿರ್ಲಿಂಗ, ಮುಧೋಳದ ರಾಮಲಿಂಗೇಶ್ವರ, ಮೊರಘೆಯ ಆದಿತ್ಯ, ಸನ್ನತಿಯ ಚಂದ್ರಲಾಂಬಾ, ದಿಗ್ಗಾಂವಿಯ ಅನಂತೇಶ್ವರ ಮತ್ತು ಶಾಂತೇಶ್ವರ ದೇವಾಲಯಗಳು ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಿತವಾದ ಪ್ರಮುಖದೇವಾಲಯಗಳಾಗಿವೆ.

ರಾಷ್ಟ್ರಕೂಟರ ಕಾಲದ ದೇವಾಲಯಗಳು ಹೆಚ್ಚಾಗಿ ಏಕಕೂಟದವು. ಪಟ್ಟದಕಲ್ಲಿನ ಜೈನ ನಾರಾಯಣ ಗುಡಿ ಮೂಲತಃ ಜೈನಬಸದಿಯಾಗಿದ್ದು ಏಕಕೂಟ ದೇವಾಲಯವಾಗಿದ್ದು ಗರ್ಭಗುಡಿ ಪ್ರದಕ್ಷಿಣಾಪಥ, ಅಂತರಾಳ ಸಭಾಮಂಟಪ, ಮುಖಮಂಟಪ ಹಾಗೂ ಗರ್ಭಗೃಹದ ಮೇಲಿನ ಶಿಖರದಲ್ಲಿ ಇನ್ನೊಂದು ಚಿಕ್ಕ ಗರ್ಭಗೃಹವನ್ನು ಹೊಂದಿದೆ. ಮಹಾಕೂಟದ ಅಡಕೇಶ್ವರ ಗದಗಿನ ತ್ರಿಕೂಟೇಶ್ವರ ಮತ್ತು ಲಕ್ಷ್ಮೇಶ್ವರದ ಬಾಳೇಶ್ವರ ದೇವಾಲಯಗಳ ತಳ ವಿನ್ಯಾಸದಲ್ಲಿ ಗರ್ಭಗೃಹ, ಸುಕನಾಸಿ, ನವರಂಗ ಮತ್ತು ಚಿಕ್ಕ ಮುಖಮಂಟಪಗಳನ್ನು ಕಾಣಬಹುದಾಗಿದೆ ಬಾದಾಮಿಯ ಬಳಿಯ ಜಾಲಿಹಾಳ ಮತ್ತು ಬೇಲೂರಿನ ತ್ರಿಮೂರ್ತಿ ದೇವಾಲಯದಲ್ಲಿ ದೀರ್ಘ ಆಯತಾಕಾರದ ಗರ್ಭಗೃಹ, ಸುಖನಾಸಿ,

ಸಭಾಮಂಟಪ ಮತ್ತು ಮುಖಮಂಟಪಗಳುಳ್ಳ ತಳವಿನ್ಯಾಸವಿದೆ. ಪಟ್ಟದಕಲ್ಲಿನ ಚಂದ್ರಶೇಖರ ಮತ್ತು ಐಹೊಳೆಯ ಅಳ್ಳಿ ಬಸಪ್ಪ ಗುಡಿಗಳು ಕೇವಲ ಗರ್ಭಗೃಹ ಮತ್ತು ಸುಕನಾಸಿಗಳನ್ನು ಮಾತ್ರ ಹೊಂದಿವೆ. ಕೊಣ್ಣೂರಿನ ಪರಮೇಶ್ವರ ಮತ್ತು ಸವಡಿಯ ತ್ರೈ ಪುರುಷ ದೇವಾಲಯಗಳು ನಕ್ಷತ್ರಾಕಾರದ ಗರ್ಭಗೃಹವುಳ್ಳ ಏಕಕೂಟ ದೇವಾಲಯಗಳಿಗೆ ಉದಾಹರಣೆಯಾಗಿವೆ.

ಸೂಡಿಯ ಮಲ್ಲಿಕಾರ್ಜುನ, ಲಕ್ಕುಂಡಿಯ ಬೋಳ ಬಸವಣ್ಣ ಮತ್ತು ಕಳಸಾಪುರದ ಈಶ್ವರ ದೇವಾಲಯಗಳು ಗರ್ಭಗೃಹ, ಮೂರು ಸುಕನಾಸಿ, ಒಂದು ನವರಂಗ ಮತ್ತು ಮುಖಮಂಟಪ ಹೊದಿರುವ ತ್ರಿಕೂಟ ದೇವಾಲಯಗಳಾಗಿವೆ. ಬಾದಾಮಿ ಚಾಲುಕ್ಯರ ಕಾಲದ ಮಂಟಪಾಕಾರದ ದೇವಾಲಯಗಳು ಒಂದೇ ಮಂಟಪವನ್ನು ಹೊಂದಿದ್ದು ಅದರ ಹಿಂಭಾಗದ ಗೋಡೆಗೆ ಅಂಟಿಕೊಂಡಂತೆ ಒಂದು ಚಿಕ್ಕ ಗರ್ಭಗೃಹವನ್ನು ಒಳಗೊಂಡಿರುತ್ತವೆ. ಇಂತಹ ಮಂಟಪಾಕಾರದ ದೇವಾಲಯಗಳು ರಾಷ್ಟ್ರಕೂಟರ ಕಾಲದಲ್ಲಿ ಐಹೊಳೆಯಲ್ಲಿಯೇ ಕೊಂತಗುಡಿ ಸಂಕೀರ್ಣದಲ್ಲಿದೆ. ಇದೊಂದನ್ನು ಬಿಟ್ಟು ಬೇರೆಲ್ಲಿಯೂ ಇಂತಹ ಮಂಟಪಾಕಾರದ ದೇವಾಲಯ ಇದ್ದಂತೆ ಕಂಡುಬಂದಿಲ್ಲ. ಹೀಗೆ ರಾಷ್ಟ್ರಕೂಟರ ಕಾಲದ ದೇವಾಲಯಗಳ ತಳವಿನ್ಯಾಸವು ವೈವಿಧ್ಯಪೂರ್ಣವಾಗಿವೆ.

ರಾಷ್ಟ್ರಕೂಟರ ಕಾಲದ ಬಹುತೇಕ ಎಲ್ಲ ದೇವಾಲಯಗಳ ಅಧಿಷ್ಠಾನ ಮತ್ತು ಎತ್ತರವಾಗಿರುವುದಿಲ್ಲ. ಬಾದಾಮಿ ಚಾಲುಕ್ಯರ ಕಾಲದ ದೇವಾಲಯಗಳ ಅಧಿಷ್ಠಾನದಲ್ಲಿ ಕಂಡು ಬರದ ಕಂಠ ಮತ್ತು ಕಂಪ ಭಾಗಗಳು ರಾಷ್ಟ್ರಕೂಟರ ಕಾಲದ ದೇವಾಲಯಗಳ ಅಧಿಷ್ಠಾನದಲ್ಲಿ ಕಾಣಸಿಗುತ್ತದೆ. ಬಾದಮಿ ಚಾಲುಕ್ಯರ ಕಾಲದ ಕಪೋತ ಮತ್ತು ಭಾಗಗಳು ಬಿಟ್ಟುಹೋಗುತ್ತವೆ. ಆದರೆ ಕುಮುದ ಭಾಗ ಮತ್ತು ಚೌಕಗಳುಳ್ಳ ಪಟ್ಟಿಕಾ ಭಾಗಗಳು ಮಾತ್ರ ಈ ಕಾಲದಲ್ಲಿಯೂ ಮುಂದುವರೆದಿವೆ. ಹಳ್ಳೂರಿನ ಮೇಲ್ಗುಡಿಯನ್ನು ಉದಾಹರಣೆಯಾಗಿ ಪರಿಗಣಿಸಬಹುದು, ಕೆಲವೆಡೆ ಅಧಿಷ್ಠಾನದ ಚೌಕ ಭಾಗಗಳು ಉಬ್ಬು ಶಿಲ್ಪಗಳಿಂದ ಅಲಂಕೃತಗೊಂಡಿವೆ. ಗಣಶಿಲ್ಪಗಳು ಕಂಡು ಬರುವುದಿಲ್ಲ. ಕೋಷ್ಠಗಳ ಸಂಖ್ಯೆ ಹೆಚ್ಚಾಗುತ್ತದೆ. ಕೋಷ್ಠಗಳು ಹೆಚ್ಚು ಆಳವಾಗಿದ್ದು ದೇವತಾ ಮೂರ್ತಿಗಳನ್ನು ಹೊಂದಿವೆ. ಕೋಷ್ಠಗಳ ಅಕ್ಕಪಕ್ಕದಲ್ಲಿಯೂ ಕೆಲವೊಮ್ಮೆ ಮೂರ್ತಿಗಳನ್ನು ಕೆತ್ತಲಾಗಿದೆ. ಕೋಷ್ಠಗಳ ಪಕ್ಕದಲ್ಲಿ ನ ಅರ್ಧಗಂಬಗಳು ಕೀರ್ತಿಮುಖು, ಮುತ್ತಿನ ಸರ, ಲತಾಸುರುಳಿಗಳಿಂದ ಅಲಂಕೃತಗೊಂಡಿವೆ. ಕೋಷ್ಠಗಳ ಮೇಲ್ಭಾಗ ಶಿಖರ ಅಥವಾ ಮಕರತೋರಣಗಳಿಂದ ಕೂಡಿವೆ. ಕೆಲವೊಮ್ಮೆ ಎತ್ತರವಾದ ಅರ್ಧಗಂಬಗಳ ಮಧ್ಯ ರಸಿಕದಂಪತಿಗಳ, ರತಿ–ಮನ್ಮಥರ ಶಿಲ್ಪಗಳನ್ನು ಬಿಡಿಸಲಾಗಿದೆ. ಕುಕ್ಕನೂರಿನ ನವಲಿಂಗ ದೇವಾಲಯದ ಹೊರ ಭಿತ್ತಿಯು ಉತ್ತಮ ಉದಾಹರಣೆಯಾಗಿದೆ. ಮಕರತೋರಣಗಳನ್ನು

ದೇವಾಲಯದ ಮುಂಭಾಗದಲ್ಲಿ ನಿಲ್ಲಿಸುವ ಸಂಪ್ರದಾಯವು ರಾಷ್ಟ್ರಕೂಟರ ಕಾಲದಲ್ಲಿ ಪ್ರಾರಂಭವಾಯಿತು. ಐಹೊಳೆಯ ಮಲ್ಲಿಕಾರ್ಜುನ ದೇವಾಲಯದ ಮುಂದೆ ಎರಡು ಸ್ತಂಭಗಳ ಮೇಲೆ ಮಕರತೋರಣವಿದೆ. ಸೊಗಲದ ಸೋಮೇಶ್ವರ ದೇವಾಲಯದ ಗರ್ಭಗುಡಿಯ ಮುಂದಿನ ಅರ್ಧಮಂಟಪ ಮುಂಭಾಗದಲ್ಲಿ ಇಂತಹ ಮಕರತೋರಣವಿದೆ. ಕಂಬಗಳ ಮೇಲೆ ಬೈರವ, ತ್ರಿಪುರಾಂತಕ, ಮಹಿಷಮರ್ಧಿನಿ, ಅಪ್ಸರೆಯರ ಉಬ್ಬುಶಿಲ್ಪಗಳಿವೆ. ಎರಡೂ ಮಕರಗಳ ನಡುವೆ ಗಂಧರ್ವ, ಬ್ರಹ್ಮ, ನಟರಾಜ ಹಾಗೂ ವಿಷ್ಣುವಿನ ಚಿಕ್ಕ ಮೂರ್ತಿಗಳನ್ನು ಕೆತ್ತಿದೆ ರಾಷ್ಟ್ರಕೂಟರ ಆಳ್ವಿಕೆಯ ಅರಂಭದ ದೇವಾಲಯಗಳಲ್ಲಿ ಮಂಚೂರಿನ ಕೆಳಗೆ ಗೋಡೆಯ ಮೇಲ್ಭಾಗಕ್ಕೆ ಹತ್ತಿಕೊಂಡತೆ ಹಂಸಪಕ್ಷಿಗಳ ಸಾಲಿನ ಕೆತ್ತನೆ ಕಾಣಬಹುದಾಗಿದೆ. ದೇವಾಲಯದ ಗೋಡೆಗಳಲ್ಲಿ ಜಾಲಂಧ್ರಗಳನ್ನಳವಡಿಸುವ ಸಂಪ್ರದಾಯ ಮುಂದುವರೆಯಿತು. ಸಭಾಮಂಟಪದ ಇಕ್ಕೆಲಗಳಲ್ಲಿ ಮೇಲೆ ಇಳಿಜಾರದ ಮಾಳಿಗೆಯ ಬದಲು ಸಮಪಾತಳಿಯ ಮಾಳಿಗೆ ಇರುವುದು ಸರ್ವೇಸಾಮಾನ್ಯ. ಇದರಿಂದಾಗಿ ಮಾಳಿಗೆಯ ಮೇಲೆ, ಗೋಡೆಗಲಿಗೆ ಅನುಗುಣವಾಗಿ, ಎರಡಡಿ ಎತ್ತರದ ಗೋಡೆ ರಚಿಸಲಾಗಿದೆ. ಇದರಲ್ಲಿ ಶಾಲ, ಕೂಟ ಮತ್ತು ಕರ್ಣಕೂಟಗಳನ್ನು ಕೆತ್ತಿರುವುದು ಕಂಡುಬರುತ್ತದೆ. ಈ ಶಾಲ ಕೂಟಗಳನ್ನು ಚೈನ್ನಯ ಮತ್ತು ಕೀರ್ತಿಮುಖಗಳಿಂದ ಅಲಂಕರಿಸಲಾಗಿದೆ.

ಈ ಕಾಲದ ಕಂಬಗಳೂ ಇರಡು ರೀತಿಯಲ್ಲಿವೆ. ಚೌಕಾರವಾಗಿದ್ದು ಕಾಂಡಭಾಗದಲ್ಲಿ ಅಡ್ಡಪಟ್ಟಿಕೆಗಳಿಂದ ಕೂಡಿರುತ್ತದೆ. ಈ ಅಡ್ಡಪಟ್ಟಿಕೆಗಳಲ್ಲಿ ಪತ್ರಲತೆ, ಲತಾಸುರುಳಿ, ಮಣಿಸರ, ಪ್ರಾಣಿ, ಮನುಷ್ಯ, ದೇವತೆಗಳ ಶಲ್ಪಗಳನ್ನು ಕಂಡರಿಸಲಾಗಿದೆ ಮೇಲಿನ ಅಡ್ಡಪಟ್ಟಿಕೆಗೆ ಹೊಂದಿಕೊಂಡತೆ ಮೇಲ್ಭಾಗದಲ್ಲಿ ತ್ರಿಕೋಣಾಕಾರದ ಅಲಂಕಾರವಿದೆ ಮೇಲಿನ ಮತ್ತು ಕೆಳಗಿನ ಅಡ್ಡಪಟ್ಟಿಕೆಗಳನ್ನು ಉದ್ದ ಪಟ್ಟಿಕೆಯಿಂದ ಕೂಡಿಸಿರುವುದೊಂದು ವಿಶೇಷ. ಕಂಬಗಳ ಮೇಲ್ಭಾಗವು ಕಲಶದಿಂದ ಅಲಂಕೃತಗೊಂಡಿದೆ. ಕಂಬಗಳ ಮೇಲೆ ದೊಡ್ಡಗಾತ್ರದ ದೇವತಾಮೂರ್ತಿಗಳನ್ನು ಕೆತ್ತಿರುವುದು ಇನ್ನೊಂದು ವಿಶೇಷ. ರಾಷ್ಟ್ರಕೂಟರ ದೇವಾಲಯಗಳಲ್ಲಿರುವ ಎರಡನೆಯ ತರಹದ ಕಂಬಗಳು ಚೌಕಾಕಾರ ಮತ್ತು ದುಂಡಾಕಾರ ಭಾಗಗಳನ್ನು ಹೊಂದಿವೆ. ಚೌಕಪೀಠದ ಮೇಲೆ ನಿಲ್ಲಿಸಿದ ಕಂಭದ ಕೆಳಭಾಗವೂ ಚೌಕಾಕಾರವಾಗಿದ್ದು ಮೇಲ್ಭಾಗ ದುಂಡಾಗಿರುತ್ತದೆ. ಈ ಕಂಭಗಳೇ ಮುಂದೆ ಕಲ್ಯಾಣ ಚಾಲುಕ್ಯ ಮತ್ತು ಹೊಯ್ಸಳ ದೇವಾಲಯಗಳಲ್ಲಿನ ಕಂಭಗಳಿಗೆ ಮಾದರಿಯಾದವು. ಪಟ್ಟದಕಲ್ಲಿನ ಜೈನಬಸದಿ, ಕುಬಟೂರಿನ ರಾಮೇಶ್ವರ ದೇವಾಲಯಗಳಲ್ಲಿ ಇಂತಹ ಕಂಬಗಳಿವೆ. ಸೊಗಲದ ಸೋಮೇಶ್ವರ ದೇವಾಲಯದಲ್ಲಿ ಅರ್ಧಮಂಟಪದ ಮುಂದಿರುವ ಕಂಭಗಳು ಕೆಳಭಾಗದಲ್ಲಿ ಚೌಕಾಕಾರವಾಗಿದ್ದು ಮಧ್ಯಭಾಗ ಕಬ್ಬಿನ ಜಲ್ಲೆಯಾಕಾರದಂತಿದೆ ಮೇಲ್ಭಾಗ ದುಂಡಗಿದ್ದು ಚೌಕಾಕಾರದ ಹಲಗೆಗಳನ್ನೊಳಗೊಂಡಿದೆ.

ಕಂಬದ ಮಧ್ಯಭಾಗದ ದುಂಡಗಿನ ಪಟ್ಟಿಗಳಲ್ಲಿ ಮಣಿಸರ, ಪತ್ರಲತೆಗಳ ಕೆತ್ತನೆಯಿದ್ದರೆ, ಚೌಕಾಕಾರದ ಕೆಳಭಾಗದಲ್ಲಿ ಭೈರವಿ, ತ್ರಿಪುರಾಂತಕ, ಗಜಾಸುರಸಂಹಾರಮತ್ತು ಮಹಿಷಮರ್ಧಿನಿಯ ಶಿಲ್ಪಗಳಿವೆ. ಕಡೂರಿನ ಆಂಜನೇಯ ದೇವಾಲಯದ ಚೌಕಾಕಾರದ ಕಂಭಗಳ ನಾಲ್ಕು ಮುಖಗಳ ಮೇಲೆ ಮಧ್ಯಭಾಗದಲ್ಲಿ ಅಲಂಕಾರಿಕ ಪಟ್ಟಿಕೆ ಇದ್ದು ಅದರ ಮೇಲ್ಭಾಗ ಮತ್ತು ಕೆಳಭಾಗಗಳಲ್ಲಿ ಸುಂಧರವಾದ ಚೈತನ್ಯ ಕೆತ್ತನೆ ಇದೆ. ಕಂಬದ ಪಟ್ಟಿಕೆಗಳಲ್ಲಿ ಭೀಮನು ಭಗದತ್ತನ ಆನೆಯನ್ನು ಕೊಲ್ಲುತ್ತಿರುವುದು, ಬಕಸುರ ವಧೆ, ಯಮಳಾರ್ಜುನೀಯ, ಕಿರಾತಾರ್ಜುನೀಯ, ವಸುದೇವನು ಯಮುನೆಯನ್ನು ದಾಟುತ್ತಿರುವುದು, ರಾವಣ ಕೈಲಾಸ ಪರ್ವತವನ್ನು ಎತ್ತುತ್ತಿರುವುದು, ವಿಧ್ಯಾಧರ, ಗಣೇಶ, ಜನಾರ್ಧನ, ವಾಮನ–ಬಲಿ–ತ್ರಿವಿಕ್ರಮ, ಗಜಾಸುರಸಂಹಾರ ಮತ್ತು ತಾಂಡವಶಿವನ ಮೂರ್ತಿಗಳನ್ನು ಕೆತ್ತಲಾಗಿದೆ. ಗರ್ಭಗೃಹದ ದ್ವಾರದ ಚೌಕಟ್ಟು ಸಾಮಾನ್ಯವಾಗಿ ಅಲಂಕಾರರಹಿತವಾಗಿದೆ. ದ್ವಾರಶಾಖೆಗಳಲ್ಲಿ ಅರ್ಧಗಂಭಗಳು, ಕೆಲವು ಅರ್ಧಗಂಭಗಳು ಕಬ್ಬಿನಜಲ್ಲೆಯಾಕಾರದ ಕಾಂಡವನ್ನು ಹೊಂದಿವೆ. ದ್ವಾರದ ಕೆಳಭಾಗದಲ್ಲಿ ಪೂರ್ಣಕುಂಭಗಳನ್ನು ಕೆತ್ತಲಾಗಿದೆ. ಗರ್ಭಗೃಹದ ದ್ವಾರಲಲಾಟ ಬಿಂಬದಲ್ಲಿ ಗರುಡನ ಮೂರ್ತಿಯನ್ನು, ಮೇಲ್ಭಾಗದಲ್ಲಿ ಎರಡೂ ಕಡೆ ಮಕರಗಳನ್ನುಕೆತ್ತಲಾಗಿದೆ ಗರ್ಭಗುಡಿಯ ದ್ವಾರಲಲಾಟದಲ್ಲಿ ಮಕರಗಳ ತೋರಣ ನಿರ್ಮಿಸುವುದು ರಾಷ್ಟ್ರಕೂಟರ ಕಾಲದಲ್ಲಿ ಜನಪ್ರಿಯಗೊಂಡಿತು.

ರಾಷ್ಟ್ರಕೂಟರ ಕಾಲದ ಅನೇಕ ದೇವಾಲಯಗಳು, ಸ್ಮಾರಕಗಳು ಗುಲ್ಬರ್ಗಾಜಿಲ್ಲೆಯ ದಿಗ್ಗಾಂವಿ, ನಿಡಗುಂದಿ, ಸನ್ನತಿ, ಇಂಗಳಗಿ, ಕಾಳಗಿ, ಸೇಡರಿ, ಮಳಖೇಡ, ತಡಕಲ್ಲು, ದೋರನಹಳ್ಳಿ, ಮೂಗಣಗೇರಿ, ಸಿರಿವಾಳ ಮುಂತಾದೆಡೆ ಕಾಣಸಿಗುತ್ತವೆ. ಚಿತ್ತಾಪುರ ತಾಲ್ಲೂಕಿಗೆ ಸೇರಿದ ದಿಗ್ಗಾಂವೆಯಲ್ಲಿ ಶಾಂತೇಶ್ವರ ಮತ್ತು ಅನಂತೇಶ್ವರ ದೇವಾಲಯಗಳು ಈ ಕಾಲಕ್ಕೆ ಸೇರಿವೆ. ಶಾಂತೇಶ್ವರ ದೇವಾಲಯವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ತೆರೆದ ಅಂತರಾಳ ಮತ್ತು ನವರಂಗಗಳನ್ನು ಹೊಂದಿವೆ. ಗರ್ಭಗುಡಿಯ ದ್ವಾರವು ಪಂಚಶಾಖೆಗಳನ್ನು, ಕಪೋತದ ಕೆಳಗಡೆ ಹಂಸಗಳ ಸಾಲುಗಳನ್ನು. ಬಾಗಿಲ ಚೌಕಟ್ಟಿನಲ್ಲಿ ಆರು ಜನ ನಿಂತ ಬಾಲಕರ ಉಬ್ಬು ಚಿತ್ರಗಳನ್ನು ಹೊಂದಿದೆ. ಅನಂತೇಶ್ವರ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ, ನವರಂಗ, ಎತ್ತರದ ಅಧಿಷ್ಠಾನ, ಗರ್ಭಗುಡಿಯಲ್ಲಿ ಅನಂತಶಯನ ಮೂರ್ತಿ, ವೈಷ್ಣವ ದ್ವಾರಪಾಲಕರು, ನಾಲ್ಕೂ ದ್ವಾರಶಾಖೆಗಳಿಂದ ಕೂಡಿದೆ. ರಾಷ್ಟಕೂಟರ ಆಡಳಿತ ಕೇಂದ್ರವಾಗಿದ್ದ ಸೇಡಂ ಅಥವಾ ಶಾಸನಗಳಲ್ಲಿಉಕ್ತವಾದ ಸೇಡಿಂಬಪುರ ಅನೇಕ ಪ್ರಮುಖ ಜೈನ ಮತ್ತು ಹಿಂದೂ ದೇವಾಲಯಗಳನ್ನು ಹೊಂದಿದೆ ಉಲ್ಲೇಖಾರ್ಹ ದೇವಾಲಯಗಳೆಂದರೆ, ಪಂಚಲಿಂಗ ಗುಡಿ, ಮಾಧವಗುಡಿ, ಈಶ್ವರ, ತ್ರೀಲಿಂಗೇಶ್ವರ ಗುಡಿಗಳಾಗಿವೆ. ತ್ರೀಲಿಂಗೇಶ್ವರ

ದೇವಾಲಯ ಎದುರುಬದರಾಗಿ ಎರಡು ಗರ್ಭಗೃಹಗಳುಳ್ಳ ದ್ವಿಕೂಟ ದೇವಾಲಯವಾಗಿದೆ. ಅರ್ಧಮಂಟಪದ ಕಂಬಗಳು ದುಂಡಾಗಿ ನೀಳವಗಿವೆ. ದ್ವಾರದಲ್ಲಿ ದ್ವಾರಪಾ;ಕರಿದ್ದಾರೆ. ಸೇಡಂ ತಾಲೂಕಿನ ಮುಧೋಳದಲ್ಲಿರುವ ರಾಮಲಿಂಗೇಶ್ವರ ದೇವಾಲಯ ರಾಷ್ಟ್ರಕೂಟರ. ಕನ್ನರನ ಶಾಸನದಲ್ಲಿ ತಳಿದಿರುವ ಪ್ರಕಾರ ಗೂಳಿಗಾವುಂಡನೆಂಬುವವನು ಮಹಾದೇವ ದೇವಾಲಯವನ್ನು ನಿರ್ಮಿಸಿದನು. ಅದೇ ಇಂದಿನ ರಾಮಲಿಂಗೇಶ್ವರ ದೇವಾಲಯ. ಬೀದರ ಜಿಲ್ಲೆಯ ಬಸವಕಲ್ಯಾಣದ ಉಮಾಮಹೇಶ್ವರ ದೇವಾಲಯ ಸರಳವಾದ ಭೂಮಿಜ ಶಿಖರವನ್ನು ಹೊಂದಿದೆ. ಭಿತ್ತಿಯ ಮೇಲ್ಭಾಗದ ಕಪೋತದ ಕೆಳಗಡೆಯಲ್ಲಿ ಹಂಸಗಳ ಸಾಲು ಶಿಲ್ಪಗಳಿವೆ.

ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಮೋಘದಲ್ಲಿರುವ ಕ್ರಿ.ಶ. 918 ರ ಶಾಸನದ ಪ್ರಕಾರ ಚಂಡಿಗನೆಂಬುವನು ಮೊರಘೆಯಲ್ಲಿ ಆದಿತ್ಯದೇವರನ್ನು ಪ್ರತಿಷ್ಠಾಪಿಸಿ ಅದರ ಪೂಜೆಗಾಗಿ ಬಾಲಚಂದ್ರದೇವರಿಗೆ ದತ್ತಿ ನೀಡಿದ್ದಾನೆ. ಮೋಘದ ರಾಮಲಿಂಗೇಶ್ವರ ದೇವಾಲಯವು ಎತ್ತರವಾದ ಅಧಿಷ್ಠಾನವನ್ನು ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳನ್ನೂ, ಮೂರು ಕಡೆಗಳಲ್ಲಿ ಪ್ರವೇಶದ್ವಾರಗಳನ್ನು ಭೂಮಿಜ ಶೈಲಿಯ ಶಿಖರವನ್ನೂ ಹೊಂದಿದೆ. ಅಂತರಾಳದಲ್ಲಿನ ಎರಡು ದೇವಕೋಷ್ಠಗಳಲಿ ಗಣೇಶ ಹಾಗೂ ನವರಂಗದಲ್ಲಿರುವ ನಾಲ್ಕು ದೇವಕೋಷ್ಠಗಳಲ್ಲಿ ಮಹಿಷಾಸುರಮರ್ಧಿನಿ ಮತ್ತು ಸಪ್ತಮಾತೃಕೆಯರ ಶಿಲ್ಪಗಳಿವೆ. ಕಾಳಗಿ (ಚಿತ್ರಾಪುರ ತಾಲ್ಲೂಕು)ಯ ಕಾರಂಜುನದಿಯ ದಡದಲ್ಲಿರುವ ದೇವಾಲಯ ನಾಲ್ಕು ದ್ವಾರಗಳನ್ನು ಹೊಂದಿದೆ. ಸರ್ವತೋಭದ್ರ ಶೈಲಿಯಲ್ಲಿದೆ. ದೇವಾಲಯದ ತಳಪಾಯ ಭಿತ್ತಿ ಅಷ್ಟಮುಖಗಳನ್ನು ಹೊಂದಿದೆ. ಅಧಿಷ್ಠಾನ ನಕ್ಷತ್ರಾಕಜಾರವಾಗಿದೆ. ಗರ್ಭಗೃಹದಲ್ಲಿ ಒಂದು ಆಯತಾಕರದ ಪೀಠವಿದ್ದು ಅದರಲ್ಲಿ ಎರಡು ರಂಧ್ರಗಳನ್ನು ವಿಗ್ರಹಗಳನ್ನು ಕೂಡಿಸಿವುದಕ್ಕಾಗಿ ಮಾಡಿರುವುದು ಕಂಡುಬರುತ್ತದೆ.

ಮಿರ್ಯಾಣ (ಚಿಂಚೋಳಿ ತಾಲ್ಲೂಕು) ದಲ್ಲಿ ತಾಂಡೂರು ರಸ್ತೆಯ ಬದಿಗೆ ಪಾಪನಾಥ ದೇವಾಲಯವಿದೆ. ಗರ್ಭಗೃಹ, ತೆರೆದ ಅಂತರಾಳ, ನವರಂಗ, ಪೂರ್ವದಿಕ್ಕಿನಲ್ಲಿ ಪ್ರವೇಶದ್ವಾರ, ಗರ್ಭಗೃಹದಲ್ಲಿ ಶಿವಲಿಂಗ, ಬಾಗಿಲ ಚೌಕಟ್ಟಿನಲ್ಲಿ ನಾಲ್ಕು ದ್ವಾರಶಾಖೇಗಳು ನವರಂಗದಲ್ಲಿನ ಕಿರುಗಂಬಗಳ ಮೇಲೆ ಕೀರ್ತಿಮುಖ, ಹೂಬಳ್ಳಿ, ಮುತ್ತಿನ ಮಾಲೆ, ಪದ್ಮಾಸನದಲ್ಲಿ ಆಸೀಮಯುತಿಗಳ ಉಬ್ಬುಶಿಲ್ಪಗಳಿವೆ, ನಮರಂಗದ ಗೂಡುಗಳಲ್ಲಿ ಗಣಪತಿ ಮತ್ತು ಮಹಿಷಮರ್ದಿನಿಯ ಶಿಲ್ಪಗಳಿವೆ. ಕದಂಬನಾಗರ ಶೈಲಿಯ ಗೋಪುರವನ್ನು ಹೊಂದಿದೆ. ಗುಂಡಗರ್ತಿ (ಚಿತ್ತಾಪೂರ ತಾಲ್ಲೂಕು)ಯ ಈಶ್ವರ ದೇವಾಲಯ ತಳವಿನ್ಯಾಸದಲ್ಲಿ ಗರ್ಭಗೃಹ, ನವರಂಗಗಳನ್ನು ಹೊಂದಿದೆ. ದ್ವಾರದ ಚೌಕಟ್ಟಿನಲ್ಲಿ ಮೂರುದ್ವಾರ ಶಾಖೆಗಳಲ್ಲಿ ರತ್ನಗಳು, ಅರ್ಧಗರ್ಭ ಮತ್ತು ಜಾಲಂಧ್ರದಲ್ಲಿ ರತ್ನಗಳ ಅಲಂಕರಣವಿದೆ ದ್ವಾರಲಲಾಟದಲ್ಲಿ

ಗಜೇಂದ್ರಮೋಕ್ಷದ ಅತಿರೂಪವಾದ ಶಿಲ್ಪಕೆತ್ತನೆಯಿದೆ. ಕೆಳಗಡೆ ಮಕರತೋರಣದಲ್ಲಿ ನಂದಿ, ಗಣೇಶ ಮತ್ತು ವಾದ್ಯಮೇಳದವರಿದ್ದಾರೆ. ನವರಂಗದ ಭುವನೇಶ್ವರಿಯಲ್ಲಿ ಪದ್ಮಪುಷ್ಪಾಲಂಕರಣವಿದೆ. ಚಿಂಚೋಳಿ ತಾಲ್ಲೂಕಿನ ಸುಲೇಪೇಟೆಯ ಒಕ್ಕಲಿಗರ ಓಣಿಯಲ್ಲಿರುವ ಶಂಭುಲಿಂಗೇಶ್ವರ ತ್ರಿಕೂಟ ಮಾದರಿಯಲ್ಲಿದ್ದು ತಳವಿನ್ಯಾಸದಲ್ಲಿ ಮೂರು ಗರ್ಭಗೃಹಗಳು, ತೆರೆದ ಅಂತರಾಳಗಳು ಮತ್ತು ಒಂದು ನವರಂಗವನ್ನು ಹೊಂದಿದೆ. ಉತ್ತರಾಭಿಮುಖವಾಗಿರುವ ಮೂಲ ಗರ್ಭಗೃಹದಲ್ಲಿ ಜಿನಪೀಠದಲ್ಲಿ ಶಿವಲಿಂಗವಿದೆ. ಬಾಗಿಲ ಚೌಕಟ್ಟಿನ ಲಲಾಟದಲ್ಲಿಯೂ ಜಿನಬಿಂಬಗಳಿವೆ. ನವರಂಗದ ಬಾಗಿಲ ಚೌಕಟ್ಟಿನಲ್ಲಿ ಪಂಚದ್ವಾರಶಾಖೆಗಳವೆ.ಶಿಖರ ಹಾಳಾಗಿದೆ. ಇದು ಮೊದಲು ಜೈನ ಬಸದಿಯಾಗಿದ್ದು ಈಗ ಶಂಭುಲಿಂಗೇಶ್ವರ ದೇವಾಲಯವೆನಿಸಿದೆ.

ಹಂದರಕಿಯ ಲೋಕೇಶ್ವರ ದೇವಾಲಯದ ತಳಪಾಯದಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗ, ಮುಖಮಂಟಪ ಮತ್ತು ಎದುರಿಗೆ ನಂದಿಮಂಟಪಗಳಿವೆ. ದ್ವಾರ ಚೌಕಟ್ಟಿನ ಹೊಸ್ತಿಲ ಬದಿಗಳಲ್ಲಿ ಆನೆಗಳಿವೆ. ಕಪೋತದಲ್ಲಿ ಚೈತ್ಯದ ನಮೂನೆಗಳಿವೆ. ಭುವನೇಶ್ವರಿಗಳಲ್ಲಿ ಅರಳಿದ ಕಮಲ ಪುಷ್ಪಗಳಿವೆ. ದ್ವಾರದ ಬದಿಗಳಲ್ಲಿ ಆಳೆತ್ತರದ ಶೈವದ್ವಾರಪಾಲಕರಿದ್ದಾರೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ತ್ರಿಪಟ್ಟಕುಮುದ, ಕಪೋತವಿದ್ದು ಒಂದು ಮೀಟರ್ ಎತ್ತರವಿದೆ. ಗೋಡೆಯು ಸರಳವಾಗಿದ್ದು ತ್ರಿರಥ ಮಾದರಿಯಲ್ಲಿದೆ. ಹಂದರಕಿಯ ಆನೇಶ್ವರ ದೇವಾಲಯ ತ್ರಿರಥ ಮಾದರಿಯಲ್ಲಿದೆ. ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗಗಳನ್ನು ತಳವಿನ್ಯಾಸದಲ್ಲಿ ಹೊಂದಿದೆ. ಇದಕ್ಕೆ ಸೇರಿದಂತೆ ಇನ್ನೆರಡು ಗರ್ಭಗೃಹಗಳಿವೆ. ದೇವಾಲಯದ ಸುತ್ತಲೂ ಪ್ರದಕ್ಷಿಣಾಪಥವಿದೆ. ರಾಷ್ಟ್ರಕೂಟ ದೇವಾಲಯದ ಲಕ್ಷಣಗಳಾದ ಹಂಸಪಕ್ಷಿಗಳ ಸಾಲು, ಅರ್ಧಮಂಟಪದ ಕಂಬಗಳು ಕಂಡುಬರುತ್ತವೆ. ಕಂಬಗಳಲ್ಲಿ ಉಂಗುರ ಪಟ್ಟಿಗಳಿವೆ ಚೌಕ ಮುಖಗಳಲ್ಲಿ ನೃತ್ಯಗಣಪತಿ ವಾದ್ಯಮೇಳ, ಶಿವ ಪಾರ್ವತಿ, ನಟರಾಜ, ಕಿರಾತಾರ್ಜುನರ ದೃಶ್ಯ, ಹಂದಿ ಬೇಟೆ, ಜಾಲಂಧ್ರಗಳಿವೆ. ಸ್ತಂಭ ಮಕರತೋರಣದಲ್ಲಿ ಭಕ್ತರ ಮಧ್ಯೆ ನಟರಾಜ ಶಿಲ್ಪವಿದೆ. ಮಕರಗಳ ಬದಿಯಲ್ಲಿ ಮಯೂರಗಳಿವೆ. ತೆರೆದ ನವರಂಗಕ್ಕೆ ಕಕ್ಷಾಸನವಿದೆ. ಕಪೋತದಲ್ಲಿ ಐದು ರೇಖಾನಾಗರಶೈಲಿಯ ಶಿಖರಗಳಿವೆ.

ಹಂದರಕಿಯಲ್ಲಿರುವ 10ನೇ ಶತಮಾನಕ್ಕೆ ಸೇರುವ ಇನ್ನೊಂದು ದೇವಾಲಯ ಜ್ಯೋತಿರ್ಲಿಂಗ ದೇವಾಲಯ ಇದು ಅತ್ಯಂತ ಪಾಳುಬಿದ್ದಿದೆ. ಕೇವಲ ಗರ್ಭಗೃಹ ಮತ್ತು ದ್ವಾರ ಮಾತ್ರ ಉಳಿದು ಬಂದಿದೆ. ಚಿಂಚೋಳಿ ತಾಲ್ಲೂಕಿನ ನಿಡಗುಂದಿಯ ನವಕೋಟಿ ನಾರಾಯಣ ದೇವಾಲಯ ಮತ್ತು ಕಾಳಿಕಾದೇವಿ ದೇವಾಲಯಗಳು ರಾಷ್ಟ್ರಕೂಟರ ಕಾಲದ್ದಾಗಿವೆ. ನವಕೋಟಿ ನಾರಾಯಣ ದೇವಾಲಯದ ಕಂಬದ ಮೇಲೆ ಅಕಾಲವರ್ಷ ಮೂರನೇ ಕೃಷ್ಣನ ಕ್ರಿ.ಶ. 939ರ

ಕಾಲದ ಉಲ್ಲೇಖವಿರುವ ಶಾಸನವಿದೆ. ಈ ದೇವಾಲಯದ ತಳಪಾಯದಲ್ಲಿ ಎರಡು ಗರ್ಭಗೃಹಗಳು ಮತ್ತು ಅಂತರಾಳಗಳಿದ್ದು ದ್ವಿಕೂಟ ದೇವಾಲಯವಾಗಿದೆ. ಪೂರ್ವಕ್ಕೆ ಮುಖಮಾಡಿದ ಗರ್ಭಗೃಹದಲ್ಲಿ ಎತ್ತರವಾದ ಪೀಠದ ಮೇಲೆ ಸೂರ್ಯನಾರಾಯಣ ವಿಗ್ರಹವಿದೆ. ದ್ವಾರ ಶಾಖೆಯಲ್ಲಿ ಜೋಡಿ ಹಂಸಗಳ ಪಟ್ಟಿಕೆಯು ಇದೆ. ಅಂತರಾಳದಲ್ಲಿರುವ ಎರಡು ಸ್ತಂಭಗಳ ಮೇಲಿನ ಮಕರ ತೋರಣ ವಿಶಿಷ್ಟವಾಗಿದೆ. ಇದರ ಅಲಂಕರಣದ ನಡುವೆ ಸೂರ್ಯನನ್ನು, ಬದಿಗಳಲ್ಲಿ ನಿಧಿಗಳನ್ನು (ಶಂಖನಿಧಿ, ಪದ್ಮನಿಧಿ), ದೇವತೆಗಳನ್ನು ಮಕರ ಸವಾರರನ್ನು ಕೆತ್ತಲಾಗಿದೆ. ಈ ದೇವಾಲಯದ ಎದುರುಗಡೆ ಈಶ್ವರ ದೇವಾಲಯವಿದೆ. ಅದಕ್ಕೆ ದ್ರಾವಿಡ ಶೈಲಿಯ ಶಿಖರವಿದೆ. ಶೈವ ದ್ವಾರಪಾಲಕ ವಿಗ್ರಹಗಳು ನೋಟಕರ ಗಮನ ಸೆಳೆಯುತ್ತವೆ.

ನಿಡಗುಂದಿಯ ಕಾಳಿಕಾ ದೇವಾಲಯವು ವಿಶಿಷ್ಟವಾದ ಶಾಲಾ ಶಿಖರವನ್ನು ಹೊಂದಿದೆ. ಈ ದೇವಾಲಯದ ತಳಪಾಯದಲ್ಲಿ ಒಂದೇ ಸಾಲಿನಲ್ಲಿ ಎರಡು ಗರ್ಭಗೃಹಗಳು ಮತ್ತು ಆಯತಾಕಾರದ ನವರಂಗಗಳಿವೆ. ಎರಡು ಪ್ರವೇಶ ದ್ವಾರಗಳಿವೆ. ಈ ಎರಡು ಗರ್ಭಗೃಹಗಳಲ್ಲಿ ಶಿವಲಿಂಗ ಮತ್ತು ಕಾಳಿಕಾ ವಿಗ್ರಹಗಳಿವೆ. ದ್ವಾರಶಾಖೆಗಳಲ್ಲಿ ಲತಾಸುರಳಿ, ರತ್ನಪಟ್ಟಿ, ಅರೆಗಂಬ ಮತ್ತು ಪತ್ರಗಳಿವೆ. ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ದ್ವಾರಶಾಖೆಗಳ ಕೆಳಗಡೆ ಇಕ್ಕೆಡೆಯಲ್ಲಿರುವ ದ್ವಾರಪಾಲಕರು ಕೈಗಳಲ್ಲಿ ಗದೆ ಮತ್ತು ಪುಷ್ಪವನ್ನು ಹಿಡಿದಿದ್ದಾರೆ. ಬದಿಗಳಲ್ಲಿ ಪೂರ್ಣಕುಂಭಗಳಿವೆ. ನವರಂಗದಲ್ಲಿರುವ ಎಂಟು ಕಂಬಗಳು ಎರಡು ಸಾಲುಗಳಲ್ಲಿದ್ದು ಕಂಬಗಳ ಮೇಲಿನ ಚೌಕಗಳಲ್ಲಿ ಪಂಚತಂತ್ರ, ರಾಮಾಯಣಕ್ಕೆ ಸಂಬಂಧಿಸಿದ ಕಥಾನಕ ದೃಶ್ಯಗಳ ಕೆತ್ತನೆಯಿದೆ. ಚಿತ್ತಾಪುರ ತಾಲ್ಲೂಕಿನ ಸನ್ನತಿಯ ಚಂದ್ರಲಾ ಪರಮೇಶ್ವರಿ ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ, ಸಭಾಮಂಟಪ ಮತ್ತು ಮಹಾಮಂಟಪಗಳಿವೆ. ಗರ್ಭಗೃಹದಲ್ಲಿ ದೇವಿಯ ವಿಗ್ರಹವಿಲ್ಲ. ಪಾದುಕೆಗಳಿವೆ. ದ್ವಾರಶಾಖೆಗಳಲ್ಲಿ ಲತಾಸುರಳಿ, ರತ್ನಗಳು, ಅರ್ಧಗಂಭ ಮತ್ತು ಪತ್ರಶಾಖೆಗಳಿವೆ. ಕೆಳಗಡೆ ಮೂವರು ಸ್ತ್ರೀಪುರುಷ ದ್ವಾರಪಾಲಕರಿದ್ದಾರೆ. ದೇವಾಲಯದ ಸುತ್ತಲೂ ವಿಶಾಲವಾದ ಪ್ರಾಕಾರವಿದೆ. ದೇವಾಲಯದ ಹೊರಗಡೆ ಮಾರ್ಕಂಡೇಯ ಗುಡಿ, ಮಾರ್ತಂಡ ಭೈರವಕೊಂಡ, ವಿಶ್ವಂಭರ ದೀಕ್ಷಿತನ ಸಮಾಧಿಗಳಿವೆ. ಪ್ರಾಕಾರ ಮಂಟಪದಲ್ಲಿ ದ್ವಾದಶಲಿಂಗಗಳು, ಮಹಾಕಾಳಿ, ಮಹಾಸರಸ್ವತಿ ಗುಡಿಗಳಿವೆ.

ಚಂದ್ರಲಾಂಬಾ ದೇವಾಲಯದ ಎಡಬದಿಗೆ ಭೈರವಿ ಅಥವಾ ಕಾಳಿಕಾ ದೇವಾಲಯವಿದೆ. ಈ ದೇವಾಲಯದಲ್ಲಿದ್ದ ಮೂಲ ವಿಗ್ರಹ ಎರಡು ತುಂಡುಗಳಾಗಿದ್ದು ದೇವಾಲಯದ ಪಕ್ಕದಲ್ಲಿಡಲಾಗಿದೆ. ವಸ್ತ್ರಾಭರಣಗಳಿಂದ ಈಕೆಯನ್ನು ಚಾಮುಂಡಿ ಎಂದು ಗುರುತಿಸಲಾಗಿದ್ದು ದುಂಡು ಶಿಲ್ಪವಾಗಿರುವ ಇದನ್ನ ಶೈಲಿಯ ದೃಷ್ಟಿಯಿಂದ ಕ್ರಿ.ಶ. 9ನೇ

ಶತಮಾನಕ್ಕೆ ಸೇರಿದ್ದೆಂದು ಹೇಳಲಾಗಿದೆ. ಈ ಕಾಲದ ಶಾಸನೋಕ್ತ ದೇವಾಲಯಗಳಲ್ಲಿ ಪ್ರಮುಖವಾದವುಗಳೆಂದರೆ ಕ್ರಿ.ಶ. 958ರ ರಾಷ್ಟ್ರಕೂಟ ಕನ್ನರ (ಮೂರನೇ ಕೃಷ್ಣ)ನ ಆಂದೋಲದ (ಜೇವರ್ಗಿ ತಾಲ್ಲೂಕು) ಗುಂಡನೇಶ್ವರ ಅಥವಾ ಇಂದಿನ ಅಷ್ಟಲಿಂಗೇಶ್ವರ ದೇವಾಲಯ, ದಿಂಡೇಶ್ವರ ದೇವಾಲಯ, ಮೇವುಂಡಿಯ ಕೊಯಗೇಶ್ವರ ದೇವಾಲಯ ಕಾಲಪ್ರಿಯ (ಕಲ್ಪಿಯ) ಸೂರ್ಯ ದೇವಸ್ಥಾನ (ಅಂದೂರ ತಾಪ) ಸಿಂದವಾಡಿ 1000ದ ದೊಡ್ಡಮಾಕಳ ಶಾಸನೋಕ್ತರ ಕಾಮೇಶ್ವರ ದೇವಾಲಯ, ಕುರಿತಕುಂಟೆ (ಕುರ್ತಕೋಟಿ)ಯ ಮೂಲಸ್ಥಾನ ದೇವ ಮತ್ತು ಅದಿತ್ಯದೇವ ದೇವಾಲಯಗಳು, ಕುಡತಿನಿ (ಬಳ್ಳಾರಿ ಜಿಲ್ಲೆ)ಯ ದೇಕಮ್ಮನ ದೇವಾಲಯ, ಚೋಳರಾಜ್ಯದಲ್ಲಿ ಮೂರನೇ ಕೃಷ್ಣ ನಿರ್ಮಿಸಿದ ಕಾಲಪ್ರಿಯ, ವೀರನಾರಾಯಣ, ಕೃಷ್ಣೇಶ್ವರ, ಗೊಗ್ಗಿನ ಸೋಮನಾಥ, ತುಡಿಗೇಶ್ವರ, ಬಂಕೇಶ್ವರ, ಚಲ್ಲೇಶ್ವರ ದೇವಾಲಯಗಳು, ಅಗ್ರಹಾರ ಪಾವಿಟ್ಟಿಗೆಯ ತ್ರೈಪುರುಷ ದೇವಾಲಯ, ಬಷಾರಿ (?) ದೇವತೆಯ ದೇವಾಲಯ (ಧಾರವಾಡ ಜಿಲ್ಲೆ) ನಾಗೇಶ್ವರ ದೇವಾಲಯ, ಪುಷ್ಪಗಿರಿಯ ಸರ್ಪೇಶ್ವರ ದೇವಾಲಯ (ಕಡಪ ಜಿಲ್ಲೆ ಆಂಧ್ರಪ್ರದೇಶ), ಪ್ರೊದಟೂರಿನ ರಾಮೇಶ್ವರ ದೇವಾಲಯ, ಪನ್ನಪ್ಪೇಶ್ವರ (ಸುಡಡುಪರ್ರೈ) ಬೆಟ್ಟದ ಮೇಲೆ ಪಡವೂರು (ತಮಿಳುನಾಡು) ತಿರುಕ್ಕಲುಕುನ್ರಂನ ದೇವಾಲಯ, ತಿರುಮಲೈನ ಯಕ್ಷ ಭಟಾರ, ಪುಲಿಗೆರೆಯ ಪತ್ತು ಪೆರ್ಬಾಳದ ಭುಜಬ್ಬೇಶ್ವರ ದೇವಾಲಯ, ಕೊಳಗಲ್ಲಿನ ಕಾರ್ತಿಕೇಯ, ನಾಗಾವಿಯ ರಾಮೇಶ್ವರ ದೇವಾಲಯ, ಸಬ್ಬಿ 20ರಲ್ಲಿನ (ಹುಬ್ಬಳ್ಳಿಯ ಅಡರಗುಂಚಿ ಬಳಿ) ಮಲ್ಲಿಗೇಶ್ವರ ದೇವಾಲಯ, ಹುಲಗೂರಿನ ಪುಲ್ಲುಂಗೂರಬ್ಬೆ ದೇವಾಲಯ, ಶಿಕಾರಿಪುರದ ಗೌಜ ಅಗ್ರಹಾರದ ಗೌತಮೇಶ್ವರ ದೇವಾಲಯ ಮುಂತಾದವು. ಈ ಶಾಸನೋಕ್ತ ದೇವಾಲಯಗಳು ಬಹುಮಟ್ಟಿಗೆ ಇಂದಿಗೂ ಗುರುತಿಸಲು ಸಾಧ್ಯವಾಗಿವೆ.

ರಾಷ್ಟ್ರಕೂಟರ ಜೊತೆಜೊತೆಗೆ ಅವರ ಸಾಮಂತರಾಗಿದ್ದ ತಲಕಾಡಿನ ಗಂಗರೂ ಪೊಂಬುಚ್ಚದ ಸಾಂತರರೂ ಜೈನ ಬಸದಿಗಳ ನಿರ್ಮಾಣ ಮತ್ತು ಬಾಹುಬಲಿ ವಿಗ್ರಹಗಳನ್ನು ಕೆತ್ತಿಸಿ ನಿಲ್ಲಿಸುವುದರಲ್ಲಿ ಹೆಚ್ಚು ಪ್ರೋತ್ಸಾಹ ನೀಡಿದ್ದಾರೆ. ರಾಷ್ಟ್ರಕೂಟ ಮೂರನೇ ಕೃಷ್ಣನ ಆಳ್ವಿಕೆಯಲ್ಲಿ ತಲಕಾಡಿನ ಗಂಗರೊಡನೆ ಸಂಬಂಧಗಳು ಗಾಢವಾಗಿ ಬೆಳೆಯಿತು. ಕೃಷ್ಣನು ತನ್ನ ಸೋದರಿ ರೇವಕನಿರ್ಮಡಿಯನ್ನು ಗಂಗ ರಾಜಕುಮಾರ ಎರಡನೇ ಬೂತುಗನಿಗೆ ಕೊಟ್ಟು ವಿವಾಹ ನಡೆಸಿದನು. ಬೂತುಗನಿಗೆ ಕೃಷ್ಣನು ಬೆಳ್ವೊಲ 300, ಪುಲಿಗೆರೆ 300, ಬಾಗೆ 50, ಕಿಸುಕಾಡು 70ರ ಅಧಿಕಾರವನ್ನು ವಹಿಸಿಕೊಟ್ಟನು. ಬೂತುಗನು ಪತ್ನಿ ಪದುಮಬ್ಬೆಯು ಪುಲಿಗೆರೆ 300ಕ್ಕೆ ಸೇರಿದ್ದ ನರೇಗಲ್‌ನಲ್ಲಿ ತ್ರಿಕೂಟ ಬಸದಿಯನ್ನು ನಿರ್ಮಿಸಿದಳು. ಇದು ರಾಷ್ಟ್ರಕೂಟರ ಕಾಲದ ಬಸದಿಗಳಲ್ಲಿ ಅತ್ಯಂತ ದೊಡ್ಡದೆನಿಸಿದೆ. ಈ ಬಸದಿಯು ಉತ್ತರಾಭಿಮುಖವಾಗಿದ್ದು

ಗರ್ಭಗುಡಿಯಲ್ಲಿ ಚೌಕಪೀಠದ ಮೇಲೆ ಏಕಜಿನಜಂಜಿರಿಸಲಾಗಿದ್ದು ಪೂರ್ವ ಮತ್ತು ಪಶ್ಚಿಮದಲ್ಲಿರುವ ಗರ್ಭಗುಡಿಗಳು ಆಯತಾಕಾರದಲ್ಲಿವೆ. ಈ ಗರ್ಭಗುಡಿಗಳಲ್ಲಿನ ಪೀಠದ ಮೇಲೆ 24 ರಂಧ್ರಗಳನ್ನು ಅವುಗಳ ಮೇಲೆ 24 ಜನ ತೀರ್ಥಂಕರರ ಬಿಂಬಗಳನ್ನು ನಿಲ್ಲಿಸಲಾಗಿದ್ದಿತೆಂದು ತಿಳಿಯಬಹುದಾಗಿದೆ. ನವರಂಗದಲ್ಲಿ ನಕ್ಷತ್ರಾಕಾರದ ತರಂಗ ಬೋದಿಗೆಗಳುಳ್ಳ ಪೀಠದಲ್ಲಿ ವಿವಿಧ ವಿನ್ಯಾಸಗಳ ಚೌಕಗಳನ್ನುಳ್ಳ ಹನ್ನೆರಡು ಸ್ತಂಭಗಳಿವೆ. ಈಗ ಈ ತ್ರಿಕೂಟ ಬಸದಿಯು ಎರಡು ಗುಡಿಗಳಾಗಿ ಪರಿವರ್ತನೆಗೊಂಡು ಸೋಮೇಶ್ವರ ಮತ್ತು ನಾರಾಯಣ ದೇವರ ಹೆಸರಿನಿಂದ ಕರೆಯಲ್ಪಡುತ್ತಿವೆ.

ಪಟ್ಟದಕಲ್ಲಿನಲ್ಲಿರುವ ಮೂರು ಅಂತಸ್ತಿನ ಸಾಂಧಾರ ಬಸದಿಯನ್ನು ರಾಷ್ಟ್ರಕೂಟ ಎರಡನೇ ಕೃಷ್ಣನ ಕಾಲದಲ್ಲಿ ನಿರ್ಮಿಸಲಾಯಿತು. ಇದು ರಾಷ್ಟ್ರಕೂಟರ ನಿರ್ಮಿಸಿದ ಬಸದಿಗಳಲ್ಲೆಲ್ಲಾ ಅತ್ಯಂತ ಸುಂದರವಾದುದೆಂದು ಪರಿಗಣಿಸಲ್ಪಟ್ಟಿದೆ. ಪ್ರದಕ್ಷಿಣಾಪಥವುಳ್ಳ ಗರ್ಭಗುಡಿ, ದ್ರಾವಿಡ ವಿಮಾನ, ಸ್ತಂಭಗಳುಳ್ಳ ಮಹಾಮಂಟಪ ಮತ್ತು ಕಕ್ಷಾಸನಗಳಿಂದ ಕೂಡಿದ ಮುಖಮಂಟಪಗಳನ್ನು ಈ ಬಸದಿ ಹೊಂದಿದೆ. ಮುಳಗುಂದದಲ್ಲಿ ಎರಡನೇ ಕೃಷ್ಣನ ಆಳ್ವಿಕೆಯಲ್ಲಿ ತ್ರಿಕೂಟ ಬಸದಿಯು ನಿರ್ಮಿತವಾಯಿತು. ವಿಮಾನದ ಮೂರೂ ಬದಿಗಳಲ್ಲಿ ಕೆತ್ತಲಾಗಿರುವ ಅಲಂಕೃತ ಆನೆಗಳು ಅವುಗಳ ಮೇಲೇರಿ ಕುಳಿತ ಮಾವಟಿಗರ ಶಿಲ್ಪಗಳು ನೋಟಕರ ಗಮನ ಸೆಳೆಯುತ್ತವೆ. ಪಟ್ಟದಕಲ್ಲಿನ ಬಸದಿಯಲ್ಲೂ ಇಂಥ ಆನೆಗಳ ಶಿಲ್ಪವಿದ್ದು ಮಾದರಿಯೆನಿಸಿದೆ.

ರಾಷ್ಟ್ರಕೂಟ ಸಾಮಂತರಾಗಿದ್ದ ಹೊಂಬುಜದ ಸಾಂತರರು ರಾಷ್ಟ್ರಕೂಟ ವಾಸ್ತು ಕಲಾಶೈಲಿಯಲ್ಲಿ ಪಾರ್ಶ್ವನಾಥ ಬಸದಿ, ಸೂಳೆ ಬಸದಿ, ಮಕ್ಕಳ ಬಸದಿ ಮತ್ತು ಬೋಗಾರ ಬಸದಿಗಳನ್ನು ನಿರ್ಮಿಸಿದರು. ವಿಕ್ರಮ ಸಾಂತರನು ಹೊಂಬುಜದಲ್ಲಿ ಗುಡ್ಡದ ಮೇಲೆ ಕ್ರಿ.ಶ.897-98ರಲ್ಲಿ ಕಾಮಜಿನಾಲಯ ಅಥವಾ ಗುಡ್ಡ ಬಸದಿಯನ್ನು ನಿರ್ಮಿಸಿದನು. ಈ ದೇವಾಲಯದ ಕಪೋತ ಬಂಧ ಪ್ರತಿಷ್ಠಾನ ದ್ರಾವಿಡ ಶೈಲಿಯ ವೈಶಿಷ್ಟಪೂರ್ಣ ಅಂಶವೆನಿಸಿದೆ. ಇತ್ತೀಚೆಗೆ ಈ ಬಸದಿಯು ಪೂರ್ಣ ಶಿಥಿಲಗೊಂಡಿರುವುದರಿಂದ ಇಲ್ಲಿದ್ದ ಬಾಹುಬಲಿ ಮೂರ್ತಿಯನ್ನು ಹೊಸದಾಗಿ ನಿರ್ಮಿತವಾದ ಬಸದಿಯಲ್ಲಿ ನಿಲ್ಲಿಸಲಾಗಿದೆ. ಬೋಗಾರ ಬಸದಿ ಮತ್ತು ಪಾರ್ಶ್ವನಾಥ ಬಸದಿಯ ಕಂಬಗಳು ಎಲ್ಲೋರಾದ ಜೈನ ಗುಹಾಮಂದಿರಗಳಲ್ಲಿರುವ ಕಂಬಗಳನ್ನೇ ಹೋಲುತ್ತವೆ. ಪಾರ್ಶ್ವನಾಥ ಬಸದಿಯು ಪಂಚಕೂಟ ಬಸದಿಯಾಗಿದೆ. ಇದು ಅಧಿಷ್ಠಾನದಲ್ಲಿ ಪಾದಬಂಧವನ್ನು, ದ್ರಾವಿಡ ವಿಮಾನವನ್ನು, ತರಂಗ ಬೋದಿಗೆಯುಳ್ಳ ಸ್ತಂಭಗಳನ್ನೂ ಅಷ್ಟದಿಕ್ಪಾಲಕರನ್ನೂ ಛತ್ತಿನ ಮೂಲೆಗಳಲ್ಲಿ, ಚತುರ್ಭುಜ ಯಕ್ಷನನ್ನು ಭುವನೇಶ್ವರಿಯ ಮಧ್ಯಭಾಗದಲ್ಲೂ ಹೊಂದಿದೆ. ಅಲಂಕೃತವಾದ ದ್ವಾರಶಾಖೆಗಳನ್ನೂ

ಹೊಂದಿದೆ. ಸೂಳೆಬಸದಿಯನ್ನು ಕ್ರಿ.ಶ.೮೯೮ರಲ್ಲಿ ಪಾಳಿಯಕ್ಕ ದೋನಾ ಎಂಬ ವಿಕ್ರಮ ಸಾಂತರನ ವೇಶ್ಯೆಯು ಕಟ್ಟಿಸಿದಳು. ಗರ್ಭಗೃಹದಲ್ಲಿ ಸಿಂಹಪೀಠದ ಮೇಲೆ ಪದ್ಮಾಸನದಲ್ಲಿ ಕುಳಿತ ಪಾರ್ಶ್ವನಾಥ ತೀರ್ಥಂಕರನ ಮೂರ್ತಿಯಿದೆ. ಸರ್ಪದ ಏಳು ಹೆಡೆಗಳು ಮುರಿದಿವೆ, ಆದರೆ ಉಳಿದು ಬಂದಿರುವ ಮುಕ್ಕೊರೆ, ಪ್ರಭಾವಲಯ, ಚಾಮರ ಧಾರಿಗಳ ಶಿಲ್ಪ ಅತ್ಯಂತ ಸುಂದರವಾಗಿವೆ. ಇಂದು ಮಕ್ಕಳಿಗೆ ವಿದ್ಯಾರ್ಥಿನಿಲಯವಾಗಿ ಮಾರ್ಪಾಡು ಆಗಿರುವ ಬಸದಿಯೇ ಮಕ್ಕಳ ಬಸದಿ ಎನಿಸಿದೆ. ಇದು ದ್ವಿತಳ ಬಸದಿಯಾಗಿದ್ದು ಪಾರ್ಶ್ವನಾಥನಿಗೆ ಸಮರ್ಪಿಸಲಾಗಿದೆ. ಬಸದಿಯ ವಿಮಾನ ಮತ್ತು ಪಾದಬಂಧವುಳ್ಳ ಅಧಿಷ್ಠಾನ ಮತ್ತು ಗರ್ಭಗೃಹ ಮಾತ್ರ ಉಳಿದು ಬಂದಿವೆ. ಭೋಗಾರ ಬಸದಿಯನ್ನು ಜೈನ ವ್ಯಾಪಾರಿಗಳು ನಾಲ್ಕನೇ ಗೋವಿಂದ (ರಾಷ್ಟ್ರಕೂಟ)ನ ಆಳ್ವಿಕೆಯ ಕಾಲದಲ್ಲಿ ಕಟ್ಟಿಸಿದರು. ಇದನ್ನು ಅಶೋಕ ವನ ಬಸದಿಯೆಂದೂ ಕರೆಯಲಾಗುತ್ತಿದೆ. ಇದು ಶಂಖನಿಧಿ, ಪದ್ಮನಿಧಿ ದ್ವಾರಪಾಲಕರನ್ನು ಅಂಬಿಕಾ ಮತ್ತು ಮಾತಂಗ ಯಕ್ಷಿಯರ ಶಿಲ್ಪಗಳನ್ನೂ, ಬಸದಿಯ ಮುಂದೆ ಮಾನಸ್ತಂಭದ ಬದಲಾಗಿ ಬಲಿಪೀಠವನ್ನೂ, ನವರಂಗದಲ್ಲಿ ನಾಲ್ಕು ಬ್ರಹ್ಮಕಾಂತ ಸ್ತಂಭಗಳನ್ನೂ ಅಲಂಕಾರಿಕ ಕೆತ್ತನೆಯನ್ನೂ ಹೊಂದಿದ್ದು ಸಾಂತರರ ಬಸದಿ ಕಲಾ ಶೈಲಿಗೆ ಅತ್ಯುತ್ತಮ ಉದಾಹರಣೆಯೆಂದು ಪರಿಗಣಿಸಲ್ಪಟ್ಟಿದೆ.

ಅಮೋಘವರ್ಷನ ನೃಪತುಂಗನ ಆಪ್ತ ಸೇನಾನಿ ಮತ್ತು ಬನವಾಸಿ 12000 ಪ್ರಾಂತ್ಯದ ಅಧಿಕಾರಿಯಾಗಿದ್ದ ವೀರಬಂಕೆಯನು ಮಲಪ್ರಭಾನದಿಯ ದಂಡೆ ಮೇಲಿನ ಕೊಣ್ಣೂರು (ಕೊಳಗನೂರು–ಗದಗ ಜಿಲ್ಲೆ) ಬಸದಿಯನ್ನು ಕ್ರಿ.ಶ. 890ರಲ್ಲಿ ನಿರ್ಮಿಸಿದನು. ಈ ವೀರ ಬಂಕೆಯ ಬಸದಿಯ ನಕ್ಷತ್ರಾಕಾರದ ತಳವಿನ್ಯಾಸವನ್ನೂ, ಗರ್ಭಗೃಹ, ಅಂತರಾಳ, ಸಬಾಮಂಟಪ, ಮುಖಮಂಟಪ, ಹಸ್ತಿಕರಗಳುಳ್ಳ ದ್ವಾರಮೆಟ್ಟಿಲುಗಳು, ಭಿತ್ತಿಗಳಲ್ಲಿ ಎತ್ತರವಾದ ನೀಳದೇವಕೋಷ್ಠಗಳು, ಪ್ರಾಯಶಃ ಶಿಖರ ಭಾಗಗಳನ್ನು ಹೊಂದಿದ್ದಿತು. ಕ್ರಿ.ಶ. 14ನೇ ಶತಮಾನದಲ್ಲಿ ಈ ಬಸದಿಯನ್ನು ಪರಮೇಶ್ವರ ದೇವಾಲಯವಾಗಿ ಪರಿವರ್ತಿಸಲಾಯಿತು. ಈ ವೀರ ಬಂಕೆಯ ಬಸದಿಯು ರಾಷ್ಟ್ರಕೂಟರ ಕಾಲದ ಅತ್ಯಂತ ಪ್ರತಿಷ್ಠಿತ ಬಸದಿ ಎನಿಸಿದ್ದು ಇದಕ್ಕೆ ಅಮೋಘವರ್ಷನು 1 ಶಾಸನವನ್ನು ಹಾಕಿಸಿ ತಲೆಯೂರು ಗ್ರಾಮವನ್ನು ಈ ಬಸದಿಯ ಆಚಾರ್ಯ ದೇವೇಂದ್ರನಿಗೆ ದಾನ ನೀಡಿದನು.

ರಾಷ್ಟ್ರಕೂಟ ರಾಜಧಾನಿ ಮಳಖೇಡದಲ್ಲಿ ನೇಮಿನಾಥನ ಬಸದಿಯಿದ್ದು ಅನೇಕ ಬಾರಿ ಇದು ಪುನರ್ನಿರ್ಮಿತಗೊಂಡಿದೆ. ಅದರ ಆವರಣದಲ್ಲಿ ಹತ್ತನೇ ಶತಮಾನದ ಅನೇಕ ಜೈನ ಶಿಲ್ಪಗಳು ಇಡಲ್ಪಟ್ಟಿವೆ. ಇವುಗಳಲ್ಲಿ ಹಲವು ರಾಷ್ಟ್ರಕೂಟರ ಕಾಲದ ಈ ಬಸದಿಗೆ ಸೇರಿದ್ದಿರಬಹುದೆಂದು ಹೇಳಲಾಗುತ್ತಿದೆ. ಗುಲ್ಬರ್ಗಾ ಜಿಲ್ಲೆಯ ಹರಸೂರಿನ ತ್ರಿಕೂಟ ಬಸದಿ

ಶೈಲಿಯ ದೃಷ್ಟಿಯಿಂದ ರಾಷ್ಟ್ರಕೂಟ ಕಾಲಕ್ಕೆ ಸೇರುತ್ತದೆ. ಈ ಬಸದಿಯ ಜೈನ ವಿಗ್ರಹ, ದ್ವಿಬಾಹು ಯಕ್ಷ-ಯಕ್ಷಿ ಶಿಲ್ಪಗಳು ಈಗ ಗುಲ್ಬರ್ಗಾ ವಸ್ತುಸಂಗ್ರಹಾಲಯದಲ್ಲಿದೆ. ಸರ್ವಾಹ್ಣ ಮತ್ತು ಕೂಷ್ಮಾಂಡಿನಿ ಶಿಲ್ಪಗಳ ಅರ್ಧಪದ್ಮಾಸನ ಭಂಗಿ, ಧಮ್ಮಿಲ್ಲ ತುರುಬು, ಕಂಠಾಭರಣಗಳು ಎಲ್ಲೋರಾ ಗುಹಾಮಂದಿರಗಳಲ್ಲಿನ ರಾಷ್ಟ್ರಕೂಟ ಜೈನ ಶಿಲ್ಪಗಳ ಮಾದರಿಯಲ್ಲಿದ್ದು ಕ್ರಿ.ಶ. 10ನೇ ಶತಮಾನದ ಪೂರ್ವಾರ್ಧಕ್ಕೆ ಸೇರುತ್ತವೆಂದು ಹೇಳಬಹುದಾಗಿದೆ.

ಹಳ್ಳೂರಿನ ಮೇಗುಡಿ ಬಸದಿಯು ಐಹೊಳೆಯ ಮೇಗುಡಿ ಬಸದಿಯಂತೆ ದ್ವಿತಳ (ಎರಡಂತಸ್ತಿನ) ರಚನೆಯಾಗಿದೆ. ಬಸದಿಯ ಸಮತಟ್ಟಾದ ಛಾವಣಿ, ತೆರೆದ ಅಂತರಾಳ ಕಪೋತಬಂಧದ ಅಧಿಷ್ಠಾನ ಮತ್ತು ಕರ್ಣಕೂಟಗಳಲ್ಲಿ ಪಾರ್ಶ್ವನಾಥ ಮತ್ತು ಬಾಹುಬಲಿ ಶಿಲ್ಪಗಳು, ಪಂಚದ್ವಾರಶಾಖೆಗಳು ರಾಷ್ಟ್ರಕೂಟ ಬಸದಿ ಲಕ್ಷಣಗಳಾಗಿದ್ದ ಅಮೋಘವರ್ಷ ನೃಪತುಂಗನ ಆಳ್ವಿಕೆಯ ಮೊದಲ ಭಾಗಕ್ಕೆ ಸೇರುತ್ತದೆ ಎಂದು ಹೇಳಲಾಗುತ್ತಿದೆ.

ಬಂಕೂರಿನ (ಗುಲ್ಬರ್ಗಾ ಜಿಲ್ಲೆಯ ಚಿತ್ತಾಪೂರ ತಾಲ್ಲೂಕು) ಬಸದಿ ಮೂಲತಃ ತ್ರೈಕೂಟ ಬಸದಿಯಾಗಿದ್ದು ಈಗ ಪಂಚಕೂಟ ಬಸದಿಯಾಗಿದೆ. ಮಕರತೋರಣ, ಅಲಂಕೃತ ವಾದ್ಯಗಾರರು, ಸೇವಕ ದ್ವಾರಪಾಲಕ ಶಿಲ್ಪಗಳು, ಗರ್ಭಗುಡಿಯಲ್ಲಿ ಖಡ್ಗಾಸನದಲ್ಲಿರುವ ಶಾಂತಿನಾಥ, ಗಜಲಕ್ಷ್ಮಿ, ಆಸೀನ ಜಿನ ಮತ್ತು ಪಾರ್ಶ್ವನಾಥ ಲಲಾಟ ಬಿಂಬಗಳು ಕ್ರಮವಾಗಿ ಬಲ, ಮಧ್ಯ ಮತ್ತು ಎಡ ಗರ್ಭಗೃಹದ್ವಾರದ ಮೇಲೆ ಹೊಂದಿರುವುದು ಈ ಬಸದಿಯ ವಿಶೇಷ ಲಕ್ಷಣಗಳಾಗಿವೆ. ಪ್ರಮುಖ ಜೈನ ಕೇಂದ್ರವಾಗಿದ್ದ ಮುಳುಗುಂದದಲ್ಲಿ ವ್ಯಾಪಾರಿ ಚಂದ್ರಾರ್ಯನ ಮಗ ಚಿಕ್ಕಾರ್ಯನು ಕಟ್ಟಿಸಿದ ತ್ರಿಕೂಟ ಜಿನಾಲಯ ಮತ್ತು ತೀರ್ಥದ ಬಸದಿ ಪ್ರಸಿದ್ಧವಾದ ರಾಷ್ಟ್ರಕೂಟರ ಕಾಲದ ಬಸದಿಗಳಾಗಿವೆ. ತ್ರಿಕೂಟ ಜಿನಾಲಯವು ತೀರ್ಥದ ಬಸದಿಗಿಂತ ಮೊದಲಿನ ನಿರ್ಮಾಣವಾಗಿದ್ದು ಹಸ್ತಿ ಹಸ್ತದ್ವಾರ ಕೈಪಿಡಿ, ತೆರೆದ ಮುಖಮಂಟಪ, ಜಿನ ಲಲಾಟ ಬಿಂಬ, ಅಲಂಕೃತ ಪಂಚದ್ವಾರ ಶಾಖೆಗಳಿಂದ ಕೂಡಿದೆ. ತ್ರಿಕೂಟ ಜಿನಾಲಯದ ಎಡಮೂಲೆಯ ಬದಿಗೆ ಒಂದು ಗುಹೆ ಇದೆ.

ಗುಲ್ಬರ್ಗಾ ಜಿಲ್ಲೆಯ ಗಡಿಕೇಶ್ವಾರದಲ್ಲಿ ರಾಷ್ಟ್ರಕೂಟರ ಕಾಲದ ಮೂರು ಜೈನ ಬಸದಿಗಳಿವೆ. ಇಲ್ಲಿರುವ ಪಾರ್ಶ್ವನಾಥ ಬಸದಿಯು ಶಾಸನದ ಉಲ್ಲೇಖದ ಪ್ರಕಾರ ಕಂಚುಗಾರನಾಗಿದ್ದ ಮಸಣಯ್ಯನಿಂದ ನಿರ್ಮಾಣಗೊಂಡಿದ್ದು ಕಂಚುಗಾರರ ಓಣಿಯಲ್ಲೇ ಇದೆ. ಪಾರ್ಶ್ವನಾಥನ ಮೂರ್ತಿಯು ಐದು ಅಡಿ ಎತ್ತರದ ಕಾರ್ಯೋತ್ಸರ್ಗಭಂಗಿಯಲ್ಲಿರುವ ಕಂದು ಕಪ್ಪು ವರ್ಣಶಿಲಾ ಮೂರ್ತಿಯಾಗಿದೆ. ಜಿನಾಲಯಗಳೇ ಅಲ್ಲದೆ ಜೈನಕಲೆಯಲ್ಲಿ ರಾಷ್ಟ್ರಕೂಟರು ಪ್ರಸಿದ್ಧಗೊಳಿಸಿದ ಶಿಲ್ಪವೆಂದರೆ ಗೊಮ್ಮಟ ಅಥವಾ ಬಾಹುಬಲಿ ಮೂರ್ತಿಗಳು. ಗೊಮ್ಮಟ ಎಂದರೆ ಸುಂದರ ಎಂದರ್ಥ. ಜೈನ ಧರ್ಮದಲ್ಲಿ ಮಹಾಪುರುಷ ಅಥವಾ ಶಲಾಕಾ

ಪುರುಷರನ್ನು ಶ್ರೇಷ್ಠ ಹಾಗೂ ಪೂಜ್ಯರೆಂದು ಹೇಳಿದೆ. ಪ್ರಥಮ ತೀರ್ಥಂಕರ ಋಷಭದೇವನ ಕಿರಿಯ ಮಗ ಬಾಹುಬಲಿ ಪ್ರಥಮ ಕಾಮದೇವನೆಂದೂ 63 ಶಲಾಕಾ ಪುರುಷರಲ್ಲಿ ಒಬ್ಬನೆಂದು ಪರಿಗಣಿಸಲ್ಪಟ್ಟಿದ್ದಾನೆ. ಕರ್ನಾಟಕದಲ್ಲಿ ಜೈನಧರ್ಮ ಮತ್ತು ಬಾಹುಬಲಿ ಗೊಮ್ಮಟ ಶಿಲ್ಪ ಇವೆರಡರ ನಡುವೆ ಅತ್ಯಂತ ಗಾಢವಾದ ಸಂಬಂಧವಿದೆ. ಮೊಟ್ಟಮೊದಲ ಬಾಹುಬಲಿ ಅಥವಾ ಕಾಮದೇವನಿಗಾಗಿ ಜಿನಾಲಯವನ್ನು ಕದಂಬ ದೊರೆ ರವಿವರ್ಮನು ಬನವಾಸಿ ಬಳಿಯ ಗುಡ್ನಾಪುರದಲ್ಲಿ ನಿರ್ಮಿಸಿದನು. ಈ ಪರಂಪರೆಯನ್ನು ಮುಂದುವರೆಸಿದ ಬಾದಾಮಿ ಚಾಲುಕ್ಯರು ಬಾದಾಮಿ, ಐಹೊಳೆಯಲ್ಲಿ ನಿರ್ಮಿಸಿದ ಗುಹಾಲಯಗಳಲ್ಲಿ ಬಾಹುಬಲಿ ಶಿಲ್ಪವನ್ನು ಕಡೆದಿದ್ದಾರೆ. ರಾಷ್ಟ್ರಕೂಟ ಅಮೋಘವರ್ಷ ನೃಪತುಂಗನ ಕಾಲದ ಬಾಹುಬಲಿಯ ಲೋಹಮೂರ್ತಿಯು ಶ್ರವಣಬೆಳಗೊಳದಲ್ಲಿದ್ದು ಈಗ ಮುಂಬೈನ ಪ್ರಿನ್ಸ್ ಆಫ್ ವೇಲ್ಸ್ ವಸ್ತುಸಂಗ್ರಹಾಲಯದಲ್ಲಿದೆ.

ಇದಲ್ಲದೆ 9ನೇ ಶತಮಾನದ ಬಾಹುಬಲಿ ಮೂರ್ತಿಯು 10 ಅಡಿ ಎತ್ತರವಿದ್ದು ಮಂಡ್ಯ ಜಿಲ್ಲೆಯ ಅರೆತಿಪ್ಪೂರು ಗ್ರಾಮದ ಗುಡ್ಡದ ಮೇಲೆ ನಿಲ್ಲಿಸಲಾಗಿದೆ. ಕರ್ನಾಟಕದಲ್ಲಿ ಗುಡ್ಡದ ಮೇಲೆ ನಿಲ್ಲಿಸಲಾಗಿರುವ ಗೊಮ್ಮಟ ಮೂರ್ತಿಗಳಲ್ಲಿ ಇದೇ ಮೊದಲನೆಯದು. ಶಿವಮೊಗ್ಗ ಜಿಲ್ಲೆಯ ಹೊಂಬುಜದಲ್ಲಿ ಗುಡ್ಡದ ಮೇಲಿರುವ ಗುಡ್ಡದ ಬಸದಿಯಲ್ಲಿ 54 ಅಂಗುಲ ಎತ್ತರದ ಗೊಮ್ಮಟ ಮೂರ್ತಿಯನ್ನು ಕ್ರಿ.ಶ. 898ರಲ್ಲಿ ರಾಷ್ಟ್ರಕೂಟ ಎರಡನೇ ಕೃಷ್ಣನ ಸಾಮಂತನಾಗಿದ್ದ ವಿಕ್ರಮ ಸಾಂತರನು ನಿಲ್ಲಿಸಿದನು. ಕ್ರಿ.ಶ. 982–83ರಲ್ಲಿ ರಾಷ್ಟ್ರಕೂಟ ಮೂರನೇ ಕೃಷ್ಣ, ಖೊಟ್ಟಿಗ ಮತ್ತು ಕರ್ಕನ ಸಾಮಂತನಾಗಿದ್ದ ಗಂಗ ಮಾರಸಿಂಹನ ಮಂತ್ರಿ ಹಾಗೂ ಸೇನಾಧಿಪತಿಯಾಗಿದ್ದ ಚಾಮುಂಡರಾಯನು 58 ಅಡಿ ಎತ್ತರದ ಬೃಹತ್ ಹಾಗೂ ಸುಂದರವಾದ ಮೂರ್ತಿಯನ್ನು ಕೆತ್ತಿಸಿ ಪ್ರತಿಷ್ಠಾಪಿಸಿದನು. ಶ್ರವಣಬೆಳಗೊಳದ ವಿಂಧ್ಯಗಿರಿ ಅಥವಾ ದೊಡ್ಡ ಬೆಟ್ಟ ಇಂದ್ರಗಿರಿಯ ಮೇಲೆ ಇರುವ ಈ ಗೊಮ್ಮಟ ಶಿಲ್ಪವು ಇಂದು ಜಗತ್ಪ್ರಸಿದ್ಧವಾಗಿದೆ ಹಾಗೂ ಕಲಾತಜ್ಞರ, ನೋಟಕರ ಮೆಚ್ಚುಗೆಗೆ ಪಾತ್ರವಾಗಿದೆ. ಮುಂದೆ, ಕಾರ್ಕಳ, ವೇಣೂರು, ಧರ್ಮಸ್ಥಳ ಮುಂತಾದೆಡೆ ಗೊಮ್ಮಟನ ಮೂರ್ತಿಗಳನ್ನು ಪ್ರತಿಷ್ಠಾಪಿಸಲು ಪ್ರೇರಣೆ ನೀಡಿತು.

ಜೈನಕಲೆಯ ಇನ್ನೊಂದು ಪ್ರಕಾರವೆಂದರೆ ಸಲ್ಲೇಖನ ವ್ರತವನ್ನಾಚರಿಸಿ ಧಾರ್ಮಿಕ ಮರಣ ಹೊಂದಿದವರ ಹೆಸರಿನಲ್ಲಿ ನಿಲ್ಲಿಸಿರುವ ಸ್ಮಾರಕ ಶಿಲೆಗಳಾದ ನಿಸದಿಗಳು. ಅತ್ಯಂತ ಸುಂದರವಾದ ಅಂತಹ ನಿಸದಿಗಲ್ಲು ಉದಾಹರಣೆಗಳೆಂದರೆ ಮೈಸೂರು ಜಿಲ್ಲೆಯ ತಿರುಮಕೂಡಲು ನರಸೀಪುರ ತಾಲ್ಲೂಕಿನ ದೊಡ್ಡ ಹುಂಡಿಯಲ್ಲಿನ ಗಂಗ ನೀತಿಮಾರ್ಗ ಪೆರ್ಮಾನಡಿ 1ನೆಯ ನಿಸದಿ – ಅಗರಯ್ಯನು ನೀತಿಮಾರ್ಗನಿಗೆ ಕೀಲ್ಗುಂಟೆಯಾದ ಶಾಸನ.

ಈಗ ಬಸದಿಗಲ್ಲು ಬೆಂಗಳೂರಿನ ಪ್ರಾಚ್ಯ ವಸ್ತುಸಂಗ್ರಹಾಲಯದಲ್ಲಿದೆ. ಶ್ರವಣಬೆಳಗೊಳದಲ್ಲಿರುವ ಗಂಗ ಮಾರಸಿಂಹನ ನಿಸದಿ, ರಾಷ್ಟ್ರಕೂಟರ ಕೊನೆಯ ರಾಜಕುಮಾರ ನಾಲ್ಕನೇ ಇಂದ್ರನ ನಿಸದಿ. ಶ್ರವಣಬೆಳಗೊಳ ಮತ್ತು ಕೊಪ್ಪಳ, ಮುಳಗುಂದ ತೀರ್ಥಗಳು ಜೈನ ಸಮಾಧಿ ಮರಣದ ಕೇಂದ್ರಗಳಾಗಿದ್ದವು. ರಾಷ್ಟ್ರಕೂಟರ ಕಾಲದಲ್ಲಿ ಈ ರೀತಿಯಾಗಿ ರಾಷ್ಟ್ರಕೂಟರು ಶೈವ, ವೈಷ್ಣವ, ಶಾಕ್ತ, ಸೌರ, ಸ್ಕಂದ ಹಾಗೂ ಜೈನಧರ್ಮ ಮತ್ತು ಕಲಾವಿಕಸನಕ್ಕೆ ವಿಶೇಷ ಪ್ರೋತ್ಸಾಹ ಪೋಷಣೆ ನೀಡಿ ಕರ್ನಾಟಕದಲ್ಲಿನ ಕಲಾವಿಕಾಸಕ್ಕೆ ಗಮನಾರ್ಹ ಕೊಡುಗೆ ನೀಡಿದ್ದಾರೆ.

ಅಧ್ಯಾಯ – 9

ಸಮಾರೋಪ

ಅಧ್ಯಾಯ – 9

ಸಮಾರೋಪ

ಮಾನವ ತನ್ನ ಹೆಚ್ಚು ಏಳಿಗೆ ಹಾಗೂ ಭೂಮಿಯ ಮೇಲೆ ತನ್ನ ಅಸ್ತಿತ್ವವಿರುವ ಎಲ್ಲ ದಾಖಲೆಗಳನ್ನು ಅವರ ಮೂಲಭಿವ್ಯಕ್ತಿ ಮಾಧ್ಯಮವಾದ ಕಲೆಯಿಂದಲೇ ದಾಖಲಿಸಿರುವುದು ಅವನು ಗುಹೆಗಳಲ್ಲಿ ವಾಸ ಮಾಡುತ್ತಿದ್ದ ಅವನಿಗೆ ಅವನ ಮೂಲಭೂತ ಅವಶ್ಯಕತೆಗಳ ಪೂರೈಕೆ ಹಸಿವು, ನೀರಡಿಕೆ ಮುಂತಾದ ತೃಷೆಗಳನ್ನು ತೃಪ್ತಿಪಡಿಸಿಕೊಳ್ಳುವುದಕ್ಕಾಗಿ ಬೇಟೆ ಬೇಟೆಗಾಗಿ ಬೇಟೆಯ ಸಲಕರಣೆಗಳ ತಯಾರಿಕೆ ಬೇಟೆಯ ಕಲಿಕೆ ಮುಂತಾದ ಅವನ ದಿನನಿತ್ಯದ ಕ್ರಿಯೆಗಳಿಂದಲೇ ಅವನಲ್ಲಿ ಕಲೆಯು ಅವನ ಅರಿವಿಲ್ಲದೇ ದಾಖಲಿಸಲ್ಪಟ್ಟ ಬಗ್ಗೆ ನಿಖರವಾದ ಮಾಹಿತಿಗಳು ದೊರೆಯುತ್ತವೆ.

ಮನುಷ್ಯನಿಗೆ ಸೌಂದರ್ಯ ಪ್ರಜ್ಞೆ ಉಂಟಾದಾಗಿನಿಂದಲೂ ಅವನ ಅನ್ವೇಷಣೆ ಮುಂದುವರೆದಿದೆ. ಅಂದಿನಿಂದ ಇಂದಿನವರೆಗೂ ಆ ಕ್ರಿಯೆ ನಡೆದು ಬಂದಿದೆ. ಹಾಗೆ ಗುಹೆಗಳಲ್ಲಿ ವಾಸ ಮಾಡುತ್ತಿದ್ದ ಜನ ತಮಗೆ ಅರಿವಿಲ್ಲದಂತೆ ರಚಿಸಿದ ಕಲಾಕೃತಿಗಳು. ಗುಹಾಂತರ ಚಿತ್ರಗಳು. ಕಲ್ಲಿನಿಂದ ಕೊರೆದ ಚಿತ್ರಗಳು 40–50 ಸಾವಿರ ವರ್ಷಗಳ ನಂತರ ಮೆಚ್ಚುಗೆಯನ್ನು ಪಡೆದಿವೆ. ಈ ರೀತಿಯಲ್ಲಿ ಮೊದಲುಗೊಂಡ ಮಾನವನ ಕಲಾಪ್ರಕ್ರಿಯೆಯೂ ನಂತರ ಕೆಲವು ಆಶ್ರಯದಾತರ ಕೈಯಾಳಾಗಿ ದುಡಿದು ನಂತರದ ಸೃಜನಶೀಲ

ಆಲೋಚನೆಗಳಿಂದ ತನ್ನ ವಿಶಾಲ ಮನೋಧರ್ಮದಿಂದ ಎಲ್ಲರ ಮನೆ-ಮನಗಳಲ್ಲಿ ಕೇಂದ್ರಿತವಾಯಿತು. ಕಲೆಯು ಸೌಂದರ್ಯವನ್ನು ಸೃಷ್ಟಿಸುತ್ತದೆ. ವಿರೂಪವನ್ನು ಸುಂದರಗೊಳಿಸುತ್ತದೆ. ಅವ್ಯಕ್ತವನ್ನು ವ್ಯಕ್ತಗೊಳಿಸುತ್ತದೆ. ಕಲೆಯು ಮನಸ್ಸಿಗೆ ಆನಂದವನ್ನು ಕೊಡುವ ವೈಶಿಷ್ಟ್ಯ ಪ್ರೇರಣೆಯಾಗಿದೆ. ಇದು ಮನುಷ್ಯನ ಭಾವಗಳಿಗೆ ಹಾಗೂ ಭಾವನೆಗಳೊಂದಿಗೆ ಮಾತ್ರ ಸಂವಹಿಸುವ ಒಂದು ಕ್ರಿಯೆಯಾಗಿದೆ. ಕಲೆಯು ಸತ್ಯದ ಪ್ರತಿಕೃತಿಯಾಗಿದ್ದು, ಮನಸ್ಸಿನ ಭಾವದಲ್ಲಿರುವುದು ನಿಜ ಅಥವಾ ಸತ್ಯವಾದದು. ಅದರಿಂದ ಪ್ರಕಟಗೊಂಡ ಕೃತಿಯು ಕೇವಲ ನೆಪಮಾತ್ರವಷ್ಟೇ.

ಪ್ರಕೃತಿಯೆಂಬುದು ಒಂದು ಮಹಾನ್ ಕಲಾಕೃತಿ. ಅದನ್ನು ಪುನಃ ಕೃತಿಸುವುದಕ್ಕಿಂತಲೂ ಅದನ್ನು ಬದಲಿಸುವುದು ಹೊಸ ಸೃಷ್ಟಿಗೆ ಕಾರಣ. ಅಂತಹ ಪ್ರಕೃತಿಯು ತನ್ನನ್ನು ತಾನು ಕಾಲಗತಿಯಲ್ಲಿ ಬದಲಿಸಿಕೊಳ್ಳುತ್ತದೆ.

ರಾಷ್ಟ್ರಕೂಟರ ಕಾಲದ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳ ಸಂಖ್ಯೆಯೂ ತುಂಬಾ ಕಡಿಮೆ ಎಂಬ ಅಭಿಪ್ರಾಯವಿತ್ತು. ಆದರೆ ಈಗ ಆ ಅಭಿಪ್ರಾಯ ಬದಲಾಗಿದೆ. ಏಕೆಂದರೆ ಮಹಾರಾಷ್ಟ್ರದ ಎಲ್ಲೋರದ ಕೈಲಾಸನಾಥ ದೇವಾಲಯ ಮಾತ್ರವಲ್ಲದೆ, ಗುಲಬರ್ಗಾ, ಧಾರವಾಡ ಮತ್ತು ಕೆಲವು ಪ್ರದೇಶಗಳಲ್ಲಿ ರಾಷ್ಟ್ರಕೂಟರ ಕಾಲದ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ ಶಿಲಾ ಶಾಸನಗಳು ದೊರೆಯುತ್ತಿವೆ ಮತ್ತು ದೊರಕುತ್ತಿವೆ. ಈ ನಿಟ್ಟಿನಲ್ಲಿ ಸಂಶೋಧನೆಯು ಈ ಭಾಗದಲ್ಲಿ ಅಂದರೆ ಉತ್ತರ ಕರ್ನಾಟಕದಲ್ಲಿ ಮುಂದುವರಿದು ರಾಷ್ಟ್ರಕೂಟರ ಶಿಲ್ಪಕಲೆಯನ್ನು ಈಗಿನ ಕರ್ನಾಟಕದ ನೆಲೆಯಲ್ಲೆ ಅಭ್ಯಸಿಸುವ ದಿನಗಳು ಬರಲಿ ಎಂಬುದು ನನ್ನಾಸೆ. ಸಂಶೋಧನೆಯ ಸಾಹಿತ್ಯವು ನಿಂತ ನೀರಾಗಬಾರದು. ಅದು ಸಮಾಜದ ಏಳಿಗೆಗಾಗಿ ಹಾಗೂ ಕಲೆಯೂ ಕಲೆಗಾಗಿ ಅದಕ್ಕಿಂತಲೂ ಸಮಾಜದ ಉದ್ಧಾರಕ್ಕಾಗಿ ಆಗಬೇಕು. ಇದೇ ನಿಟ್ಟಿನಲ್ಲಿ ಅಲ್ಲಲ್ಲಿ ನಡೆಯುತ್ತಿರುವ ವಿಚಾರ ಸಂಕೀರ್ಣಗಳು ಮತ್ತು ಕಲಾ ಚಟುವಟಿಕೆಗಳಿಂದ ಇತಿಹಾಸದ ಮೆಲಕು ಹಾಕಿದಂತಾಗುತ್ತದೆ.

ಗ್ರಂಥ ಋಣ

1. ಕಲಾಪ್ರಪಂಚ – ಶಿವರಾಮಕಾರಂತ
2. ಚಿತ್ರಕಲಾ ಪ್ರಪಂಚ – ಪಿ.ಆರ್. ತಿಪ್ಪೇಸ್ವಾಮಿ, ಆ.ಲ. ನರಸಿಂಹನ್, ಎನ್. ಮರಿಶಾಮಾಚಾರ್.
3. ಕಲಾಚರಿತ್ರೆ – ಎನ್. ಮರಿಶಾಮಾಚಾರ್.
4. ಆಧುನಿಕ ಕಲೆ (ಪಾಲ್‌ಕ್ಲೀ) – ಕೆ. ಶ್ರೀನಿವಾಸ್ ಮೂರ್ತಿ.
5. ಸೌಂದರ್ಯ ಶಾಸ್ತ್ರ– ಡಾ॥ ಮಮತಾ ಚತುರ್ವೇದಿ, ಡಾ॥ ಕಾಶೀನಾಥ್ ಅಂಬಲಗಿ.
6. ಚಿತ್ರಕಲಾದರ್ಪಣ – ವಿ.ಟಿ. ಕಾಳೆ.
7. ಇತಿಹಾಸ – 1 – ಸಿ.ಎಸ್. ಗೀತಾದೇವಿ 2004
8. ಸೇಡಮ್ ಒಂದು ಸಾಂಸ್ಕೃತಿಕ ಅವಲೋಕನ – ಡಾ॥ ಶ್ರೀಶೈಲ ಬಿರಾದಾರ.
9. ಮಾನ್ಯಖೇಟದೆಡೆಗೆ ಐತಿಹಾಸಿಕ ನಡಿಗೆ – ಡಾ॥ ಶ್ರೀಶೈಲ ಬಿರಾದಾರ.
10. ಸಮಗ್ರ ಭಾರತದ ಇತಿಹಾಸ – ಡಾ॥ ಕೆ. ಸದಾಶಿವ
11. ಸಂಶೋಧನ ಸ್ವರೂಪ – ಡಾ॥ ಬಿ.ವಿ. ಶಿರೂರ, 2008
12. ಶೃಂಗಾರ ಲಹರಿ – ಪ್ರೋ. ಎಂ.ಎಚ್. ಕೃಷ್ಣಯ್ಯ 1989
13. ರಾಷ್ಟ್ರಕೂಟರ ಶಿಲ್ಪಕಲೆ – ಸಂಪಾದಕರು – ಲೇಖಕರು – ಎಚ್.ಎಸ್. ಗೋಪಾಲರಾವ್.
14. Masterpieces of Rashrtakuta Art the Kailas : M.K. Dhavalikar, Bombay, 1983.
15. SIRIVAL :HS mounuments, sculptures and luscriptions; Channabasappa patil, Balasubramanya, Mysore, 2001.
16. Gauravam : Recent Researches in indolgs, Ed : K.V. Ramesh etc, New Delhi : 1996
17. Aurangabad, Davlatabad, Ellora & Ajanth illustrated guide. Umendra Verma, Delhi.
18. Rastrakutas and their times : A.S. Altekar, Poona, 1967.
19. Rastrakutas art in Karnataka : S. Rajashekara, Dharwad, 1991.
20. ಕರ್ನಾಟಕದ ವೀರಗಲ್ಲುಗಳು : ಡಾ॥ ಆರ್. ಶೇಷಶಾಸ್ತ್ರಿ, ಬೆಂಗಳೂರು, 1982.
21. ಕರ್ನಾಟಕದ ವಾಸ್ತು ಶಿಲ್ಪ ಮತ್ತು ಚಿತ್ರಕಲೆ: ಡಾ.ಸಿಂದಿಗಿ.ರಾಜಶೇಖರ, ಧಾರವಾಡ–19
22. ಗುಲ್ಬರ್ಗಾಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ– ಸಂಪಾದಕರು– ಡಾ.ಆರ್.ಗೋಪಾಲ
23. ಕರ್ನಾಟಕದ ಕಲೆಗಳು – ವಾಸ್ತು (ಮೂರನೇ ಆವೃತ್ತಿ) ಬೆಂಗಳೂರು,2010
24. ಬೆಳಗಾವಿ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಬೆಂಗಳೂರು, 2010
25. South Indian Temple Complex, Dhrwad : ಡಾ.ಟಿ.ವಿ.ಮಹಾಲ
26. ಜೈನ ವಿಗ್ರಹಗಳು– ವಿ,ಎನ್,ಅಲ್ಲಿ, 2000. ಮೇ.

27. ಮರೆತುಹೋದ ಸುರಪುರ ಇತಿಹಾಸ – ಮುಡಬೂಳ, ಭಾಸ್ಕರಾವ್–2001
28. ಕರ್ನಾಟಕ ಜಿಲ್ಲೆ ಚಿತ್ರ ಪರಂಪರೆ – ಅ,ಲ,ನರಸಿಂಹನ್ – 1998.
29. ಮರೆಯಲಾಗದ ಸುರಪುರ ರಾಜರ ಚರಿತ್ರೆ – ಬಿ,ಕೃಷ್ಣಮಾಚಾರ್ಯ, 2003.
30. ಸಗರನಾಡ ದರ್ಶನ – ಎ,ಕೃಷ್ಣ. 1985.
31. ಕಲೆ ಮತ್ತು ರಸಾಸ್ವಾದನೆ – ಎಂ.ಎಸ್.ಕೃಷ್ಣಯ್ಯ, 1989.
32. ಬಾನಯ್ಯ ಗರುಡಾದ್ರಿ – ಉಪ್ಪಿನ ಬಸವರಾಜ– 1995.
33. ಸುರಪುರ ಚಿತ್ರಕಲೆ – ಡಾ, ಮಲ್ಲಿಕರ್ಜುನ ಸಿ, ಬಾಗೋಡಿ – 2009.
34. ಚಿತ್ರಲೇಖ – ಡಾ, ಮಲ್ಲಿಕಾರ್ಜುನ ಸಿ, ಬಾಗೋಡಿ.
35. ಗುಲ್ಬರ್ಗಾಜಿಲ್ಲೆ ಗ್ಯಾಸಿಯೇಟರ್ – ಸಂಪಾದಕರು. ಎಂ, ಬಿ, ಪಾಟೀಲ.
36. ಇತಿಹಾಸ ದರ್ಶನ : ಸಂ, 9
ಸಂಪಾದಕರು: ಡಾ ಸೂರ್ಯನಾಥ ರಾಮತ್, ಡಾ. ದೇವರಕೊಂಡಾರೆಡ್ಡಿ,
ಲೇಖಕರು: ಡಾ. ರು. ಮ.ಷಡಕ್ಷರಯ್ಯ, ಬೆಂಗಳೂರು. 1994

